ಮಾನವಿಕ ಕರ್ಣಾಟಕ

ಸಂಪುಟ ೧೭ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೭

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿ ಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೭ ; ಸಂಚಿಕೆ ೪

೬೮

ಅಕ್ಟೋಬರ್ ೧೯೮೭ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೭

MANAVIKA KARNATAKA, Kannada quarterly of the University of Mysore, Volume 17, Number 4, October 1987, Edited by Dr. M. V. Srinivas and M. N. Nanjunda Raje Urs.

೬—೧೮೬

ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ಡಾ. ಎಂ. ವಿ. ಶ್ರೀನಿವಾಸ್

ಎಂ. ಎನ್. ನಂಜುಂಡರಾಜೇ ಅರಸ್

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು—೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು—೬

ವಿಷಯ ಸೂಚಿ

ಅಶೋಕ ದೇ ಸಾತ್ವುತೆ

ಅರಣ್ಯ ಸಂವರ್ಧನೆ*

ಪ್ರಕೃತಿ ಮತ್ತು ಸಂಸ್ಕೃತಿ ಎರಡು ವಿಶಿಷ್ಟ ಶಬ್ದಗಳು. ಅವುಗಳ ನಡುವಿನ ಬಾಂಧವ್ಯ ಮಾನವತೆಗಿಂತ ಹಳೆಯದು. ಬಹುಶಃ ನಮಗೆ ಆಶ್ಚರ್ಯವಾದೀತು. ಸ್ವಲ್ಪ ಸಮಾನ ಭಾವವನ್ನು ಹೊಂದಿರುವ ಶಬ್ದಗಳೇ ಆಂಗ್ಲ ಭಾಷೆಯಲ್ಲೂ ಇವೆ ನೇಚರ್ (Nature) ಮತ್ತು ಕಲ್ಚರ್ (Culture) ಎಂದು. ಈ ಅವಿನಾಭಾವ ಸಂಬಂಧ ಮಿಲಿಯಗಟ್ಟಲೆ ವರ್ಷಗಳ ಹಿಂದಿನಿಂದಲೂ ಬಂದ ಗಾಢ ಸಂಬಂಧ. ಮನುಷ್ಯನ ಮೊದಲ ಮನೆ ಊರಿನಲ್ಲಲ್ಲ, ಕಾಡಿನಲ್ಲಿ. ಅವನಿಗೆ ಉಣಿಸಿ, ತಿನಿಸಿ ಅವನನ್ನು ಬೆಳೆಸಿದ್ದು ಕಾಡು. ಅವನ ಎಲ್ಲ ಬೇಕು ಬೇಡಗಳನ್ನು ಪೂರೈಸಿ ಅವನ ಹುಟ್ಟಿನಿಂದ ಕೊನೆಯವರೆಗೂ ಕೈಗೂಸಾಗಿ, ಮಗುವಾಗಿ, ಹುಡುಗನಾಗಿ, ತರುಣನಾಗಿ, ಕೊನೆಗೆ ಮುದುಕನಾಗಿ ಕೊನೆಯುಸಿರೆಳೆಯುವವರೆಗೂ ಅವನನ್ನು ಎತ್ತಿ ಹಿಡಿದ ತಾಯಿ ಕಾಡು. ಅವನಿಗಿಂತ ಸುಮಾರು ನಾಲ್ಕು ಮಿಲಿಯನ್ ವರ್ಷಗಳ ಹಿಂದೆಯೇ ಭೂಮಿಯ ಮೇಲೆ ಜೀವ ತಳೆದು ಬಂದು, ಬೆಳೆದು, ಹರಡಿ ಮಾನವನ ಬರವಿಗೆಂಬಂತೆ ಕಾಯ್ದಿದ್ದಳು ಪ್ರಕೃತಿ ಮಾತೆ. ಅವಳೆಷ್ಟು ವರ್ಷಗಳು ಕಾಯ್ದಿದ್ದು, 300 ದಶಲಕ್ಷ ವರ್ಷಗಳವರೆಗೆ! ಸುಮಾರು ನೂರು ದಶಲಕ್ಷ ವರ್ಷಗಳ ಹಿಂದೆಯೇ ಮಾನವ ಈ ಭೂಮಿಯ ಮೇಲೆ ಹುಟ್ಟಿದ ಪ್ರಕೃತಿಮಾತೆಯ ಮಡಿಲಲ್ಲಿ; ಅಲ್ಲಿಯೇ ಬೆಳೆದ; ವಂಶವನ್ನು ಬೆಳೆಸಿದ, ಮಾನವ ಜನಾಂಗವನ್ನೇ ಭೂಮಿಯ ಮೇಲೆಲ್ಲ ಹರಡಿದ. ಹೊತ್ತು, ಸಲಹಿದ ಆ ಪ್ರಕೃತಿ ಮಾತೆಯ ಉಪಕಾರಕ್ಕೆ ಮನುಷ್ಯ ಪ್ರತಿಯಾಗಿ ನೀಡಿದ್ದೇನು? ಕೊಡಲಿಯನ್ನು ಕೈಗೆತ್ತಿಕೊಂಡು ಅವಳ ನಾಶಕ್ಕೇ ಹೊರಟಿದ್ದಾನೆ. ಅವಳ ಮೊಲೆ ಹಾಲನ್ನು ಹೀರಿ ಹೀರಿ ಹಿಂಡಿ ಹಿಪ್ಪೆ ಮಾಡುತ್ತಿದ್ದಾನೆ, ಅವಳ ಅಂಗಾಂಗಗಳನ್ನು ತರಿದು ತರಿದು ಉರಿಸಿ ಸುಖಪಡುತ್ತಿದ್ದಾನೆ; ಅವಳನ್ನು ನಿಧಾನವಾಗಿ ಸಾಯಿಸುತ್ತ, ಅವಳ ಗೋರಿಯ ಮೇಲೆ ಮನೆಕಟ್ಟಿ ಜೀವನ ನಡೆಸಲು ಹವಣಿಸುತ್ತಿದ್ದಾನೆ. ಇದೆಯೇ ಮಾನವತೆ? ಇದೆಯೇ ನಮ್ಮ ಕೃತಜ್ಞತೆಯ ಸಂಕೇತ?

---

* ದಿವಂಗತ ಪಂಜೆ ಮಂಗೇಶರಾಯರ ಸ್ಮಾರಕ ನಗದು ಬಹುಮಾನ ಪ್ರಬಂಧ ಸ್ಪರ್ಧೆಯಲ್ಲಿ 1986–87ನೇ ಸಾಲಿನ ಬಹುಮಾನಿತ ಪ್ರಬಂಧ.

ಕಾಡನ್ನು ಉಳಿಸಲು, ಬೆಳೆಸಲು ಇಂದು ಎಲ್ಲೆಡೆಗಳಿಂದ ಕೂಗುಗಳು ಕೇಳಿ ಬರುತ್ತಿವೆ, ಅನೇಕ ಚಳವಳಿಗಳು ನಡೆಯುತ್ತಿವೆ, ಕೋಟಿಗಟ್ಟಲೆ ಹಣ ಖರ್ಚಾಗುತ್ತಿದೆ; ಆದರೆ ನಾವು ಮಾಡಿದ ಹತ್ಯಾಕಾಂಡಕ್ಕೆ ಈ ಪ್ರಾಯಶ್ಚಿತ್ತ ಯಾವ ಮೂಲೆಗೆ?

ಈ ಹತ್ಯಾಕಾಂಡಕ್ಕೆ ಏನು ಕಾರಣ? ಮಾನವ ವಿನಾಶದ ಹಾದಿಗೆ ಏಕೆ ಹಿಡಿದ? ಬಹುಶಃ ಅವನಿಗೆ ಈ ಹತ್ಯಾಕಾಂಡದಿಂದಾಗುವ ದುರಂತದ ಅರಿವಿರಲಿಲ್ಲ. ನಾಗರಿಕತೆಯ ಬೆಳವಣಿಗೆಯ ಭರದಲ್ಲಿ ಅವನು ಕಾಡನ್ನು ಬಲಿಕೊಟ್ಟ. ಜನಸಂಖ್ಯೆ ಹೆಚ್ಚಿದಂತೆಲ್ಲ ಅವನ ಬೇಕುಗಳ ಸಂಖ್ಯೆಯೂ ಅಪಾರವಾಗಿ ಬೆಳೆಯಹತ್ತಿತು.

ಮೊದಮೊದಲು ಕಾಡಿನಲ್ಲಿ ಬೆಳೆಯುವ ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳನ್ನು ತಿನ್ನುವದಕ್ಕಾಗಿ ಮಾತ್ರ ಕಾಡನ್ನು ಬಳಸುತ್ತಿದ್ದ ಅವನು ಬೆಂಕಿಯ ಉಪಯೋಗ ಅರಿವಾದಂತೆ ಮರಗಳನ್ನು ಕಡಿದು ಉರಿಸುವುದಕ್ಕಾಗಿ ಉಪಯೋಗಿಸಲಾರಂಭಿಸಿದ. ಆ ಕಾಲದಲ್ಲಿ ಜಗತ್ತಿನಾದ್ಯಂತ ಸಮೃದ್ಧವಾದ ಅರಣ್ಯ ಸಂಪತ್ತು ತುಂಬಿ ತುಳುಕುತ್ತಿದ್ದ ಸುಭಿಕ್ಷ-ಕಾಲದಲ್ಲಿ ಮಾನವನ ಈ ಚಟುವಟಿಕೆಗಳಿಂದ ಹೆಚ್ಚೇನೂ ಬಾಧಕವಾಗಲಿಲ್ಲ. ಆದರೆ ಸುಮಾರು 10,000 ವರ್ಷಗಳ ಹಿಂದೆ ಯಾವುದೋ ಒಂದು ಕ್ಷಣದಲ್ಲಿ ಅವನಿಗೊಂದು ರಹಸ್ಯ ದೊರೆಯಿತು—ಒಂದು ಜಾತಿಯ ಹುಲ್ಲುಬೀಜ ಆಹಾರವಾಗಿ ಗೆಡ್ಡೆಗೆಣಸುಗಳಿಗಿಂತ ಹೆಚ್ಚು ರುಚಿಯಾಗಿರುತ್ತದೆ ಎಂದು. ಬಹುಶಃ ಈ ಹುಲ್ಲುಬೀಜವೇ ಒಂದು ಮಹಾ ದುರಂತವನ್ನು ಹುಟ್ಟುಹಾಕಿದ ಬೀಜವಾಗಿ ಪರಿಣಮಿಸೀತೆಂದು ಯಾರು ಎಣಿಸಿದ್ದರು? ಈ ಹುಲ್ಲು ಬೀಜವನ್ನು ಹೆಚ್ಚುಹೆಚ್ಚಾಗಿ ಪಡೆಯಲು ವ್ಯವಸಾಯ ಮಾಡಬೇಕಾಯಿತು, ಹೆಚ್ಚು ವಿಶಾಲವಾದ ಭೂಮಿ ಬೇಕಾಯಿತು. ಆದರೆ ಸುತ್ತಲೂ ಕಾಡಿರುವಾಗ ಅದು ಸಾಧ್ಯವಿರಲಿಲ್ಲ. ಸರಿ, ಕಾಡನ್ನೇ ತರಿದು ಭೂಮಿಯನ್ನು ಸಿದ್ಧಗೊಳಿಸಿದ. ಆದರೆ ಗಿಡ-ಮರಗಳನ್ನು ಕಡಿದು, ಮುರಿದು, ಕಿತ್ತು ಉತ್ತುವ ಭೂಮಿ ತಯಾರಿಸುವ ಕೆಲಸ ಸುಲಭವಾಗಿರಲಿಲ್ಲ. ಇನ್ನೂ ಸುಲಭದ ಉಪಾಯವನ್ನು ಕಂಡುಹಿಡಿದ–ಬೆಂಕಿಯಿಟ್ಟು ಕಾಡನ್ನೇ ಸುಟ್ಟುಹಾಕಿದ! ಉರಿದ ಭಾಗವನ್ನೆಲ್ಲ ಹಸನುಗೊಳಿಸಿ ಬೀಜ ಬಿತ್ತಿ ಬೆಳೆ ಬೆಳೆದ. ಕಾಡು ಉರಿದು ಬೂದಿಯಾಗಿ ಬಿದ್ದ ಭೂಮಿ ಇನ್ನಷ್ಟು ಫಲವತ್ತಾಯಿತು, ಸಮೃದ್ಧವಾದ ಬೆಳೆ ಬಂತು. ಮತ್ತಷ್ಟು ಬೆಳೆ ತೆಗೆದ, ವಂಶವನ್ನು ಬೆಳೆಸಿದ, ಎಲ್ಲರಿಗೂ ತಿನ್ನಿಸಿದ. ಆದರೆ ಭೂಮಿಯ ಆ ಫಲವತ್ತತೆ ಎಷ್ಟು ಕಾಲ ಉಳಿದೀತು? ಕ್ರಮೇಣ ಭೂಮಿ ಸಾರಹೀನವಾಯಿತು, ಬೆಳೆ ಕುಗ್ಗಿತು. ಸರಿ, ಸಂಸಾರ ಕಟ್ಟಿಕೊಂಡು ಅಲ್ಲಿಂದ ಗುಳೆ ಹೊರಟ–ಬೇರೆ ಕಾಡಿಗೆ, ಅಲ್ಲಿಯೂ ಬೆಂಕಿ ಇಟ್ಟ. ಕಾಡನ್ನು ಸುಟ್ಟು ಹಾಕಿ ಭೂಮಿ ಉತ್ತಿ ಬೀಜ ಬಿತ್ತಿ ಬೆಳೆದು ತಿಂದ. ಅಲ್ಲಿಯೂ ಹಲ ವರ್ಷಗಳ ನಂತರ ಭೂಮಿ ಬರಡಾಯಿತು. ಮತ್ತೇ ಬೇರೆ ಕಾಡನ್ನು ನೆಲಸಮ ಮಾಡಲು ಹೊರಟ. ಈ ಸಂಚಾರ ಕ್ರಮ (ದಹ್ಯ ಪದ್ಧತಿ)ವೇ ಕಾಡಿನ ನಾಶಕ್ಕೆ ಮೂಲವಾಯಿತು. ಮಾನವನ ಪೂರ್ವಕಾಲದ ಈ ಸಂಚಾರಿ ನಾಗರಿಕತೆ

ಯಿಂದಾಗಿ ಕ್ರಮೇಣ ಕಾಡು ಉರಿದು ವಿನಾಶಕ್ಕೆ ದಾರಿ ಮಾಡಿಕೊಟ್ಟಿತು. ಕಾಡು ಉರಿಸಿ ಸಿದ್ಧಮಾಡಿದ ಭೂಮಿ ಫಲವತ್ತಾಗುವುದೆಂಬ ಗುಟ್ಟು ಅವನನ್ನು ಪಕ್ಕದ ಕಾಡಿನಿಂದ ಗಿಡ–ಮರಗಳನ್ನು ಕಡಿದು ತಂದು ಭೂಮಿಯ ಮೇಲೆ ಸುಡುವ ಕ್ರಮಕ್ಕೂ ಎಳೆಯಿತು. ಕಾಡಿನ ಈ ವಿನಾಶದಿಂದ ನಾಗರಿಕತೆಯ ಮೂಲಕ್ಕೇ ಅವನು ಕೊಡಲಿ ಹಾಕುತ್ತಿದ್ದಾನೆಂದು ಅವನಿಗೆ ಗೊತ್ತಾಗಲಿಲ್ಲ.

ಕಾಡು ಪುರಾಣೇತಿಹಾಸಗಳಲ್ಲಿ

ಇಷ್ಟೆಲ್ಲ ಆದರೂ, ಮಾನವ ಕಾಡಿನ ಕೂಸೇ. ಸಾವಿರಾರು ವರ್ಷಗಳ ಹಿಂದೆ ಭೂಮಿಯುದ್ದಕ್ಕೂ ಸಮೃದ್ಧವಾಗಿ ಬೆಳೆದು ನಿಂತ ಕಾಡು ನಮ್ಮ ಪೂರ್ವಿಕರಿಗೆ ಅದರಲ್ಲೂ ಭಾರತೀಯರಿಗೆ ಒಂದು ಪೂಜ್ಯ ದೇವತೆಯಾಗಿತ್ತು. ಆರ್ಯರು ಭಾರತಕ್ಕೆ ಕಾಲಿಡುವ ಮೊದಲೇ ದ್ರಾವಿಡರು ಇಲ್ಲಿಯ ಕಾಡುಮೇಡುಗಳಲ್ಲಿ ಜೀವಿಸುತ್ತಾ ಸಾಕಷ್ಟು ಮುಂದುವರೆದಿದ್ದರು. ದಕ್ಷಿಣ ಭಾರತದುದ್ದಕ್ಕೂ ಹರಡಿದ ಕಾಡುಗಳೇ ಅವರ ತವರು ಮನೆಗಳು. ಉತ್ತರದಿಂದ ನಂತರ ಬಂದ ಆರ್ಯರೂ ಅರಣ್ಯಗಳನ್ನು ಬಹುವಾಗಿ ಮನ್ನಿಸುತ್ತಿದ್ದ ಉದಾಹರಣೆಗಳು ನಮ್ಮ ವೇದ, ಉಪನಿಷತ್ತು, ಪುರಾಣ-ಪುಣ್ಯಕಥೆಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಭವ್ಯ ಅರಣ್ಯಗಳ ಶಾಂತ ವಾತಾವರಣದಲ್ಲಿ ಆಶ್ರಮಗಳನ್ನು ಕಟ್ಟಿಕೊಂಡ ಋಷಿ–ಪುಂಗವರು ವನಸಿರಿಯ ಗಾಂಭೀರ್ಯತೆಯ ಮಧ್ಯದಲ್ಲಿ ಕುಳಿತು ವೇದಗಳನ್ನು ರಚಿಸಿದರು, ಸಾಮಗಾನಗಳನ್ನು ಹಾಡಿದರು, ಉಪನಿಷತ್ತು–ಧರ್ಮಗ್ರಂಥಗಳನ್ನು ಬರೆದರು. ಅರಣ್ಯ ತಮ್ಮನ್ನೆಲ್ಲ ಪೋಷಿಸುವ ದೇವತೆ ಎಂದು ಅವರು ತಿಳಿದುಕೊಂಡಿದ್ದರು. “ಹೇ ದೇವತೆಗಳೇ, ಜಲವೇ, ತರುಲತೆಗಳೇ, ಅರಣ್ಯ ವೃಕ್ಷಗಳೇ, ಇದೋ ನಿಮ್ಮಗಳಿಗೆಲ್ಲ ನಮ್ಮ ನಮನಗಳು. ನಿಮ್ಮ ಕರುಣೆ ನಮ್ಮ ಮೇಲೆ ಸದಾ ಇರಲಿ. ನೀವೇ ನಮ್ಮನ್ನು ಕಾಪಾಡುತ್ತಿರಬೇಕು”, ಎಂಬರ್ಥದ ಉದ್ಗಾರಗಳು ಪ್ರಾಚೀನ ಗ್ರಂಥಗಳಲ್ಲಿ ನಮಗೆ ಅಲ್ಲಲ್ಲಿ ದೊರೆಯುತ್ತವೆ.

ರಾಮಾಯಣ, ಮಹಾಭಾರತಗಳಲ್ಲಿ ಬರುವ ನೈಮಿಷಾರಣ್ಯ, ಚಿತ್ರಕೂಟ, ದಂಡಕಾರಣ್ಯ ಮುಂತಾದವು ಅಂದಿನ ಅರಣ್ಯ ಸಮೃದ್ಧಿಗೆ ಕುರುಹುಗಳಾಗಿವೆ. ಬಹುಶಃ ಮಹಾಭಾರತದಲ್ಲಿ ಉಲ್ಲೇಖಿತವಾಗಿರುವ ಖಾಂಡವ ದಹನವು ಆಗಿನ ಅರಣ್ಯನಾಶಕ್ಕೆ ಉದಾಹರಣೆಯೂ ಆಗಿರಬಹುದೇನೋ. ಹೀಗಾಗಿ ಧರ್ಮ ಶಾಸ್ತ್ರಗಳೇ ಅರಣ್ಯ ನಾಶಕ್ಕೆ ತಡೆ ಒಡ್ಡಲು ಪ್ರಾಯಶಃ ವೃಕ್ಷಪೂಜೆಯನ್ನು ವಿಧಿಸಿರಬಹುದೆಂದು ತೋರುತ್ತದೆ. ಈ ರೀತಿ ಅಶ್ವತ್ಥ, ಬಿಲ್ವ, ಆಲ ಮುಂತಾದ ವೃಕ್ಷಗಳನ್ನು ಬೆಳೆಸುವುದು ಪುಣ್ಯಕಾಲವೆಂದೂ ಈಗಲೂ ತಿಳಿಯಲಾಗಿದೆ. ಇತಿಹಾಸ ಕಾಲದಲ್ಲಿ ಅಶೋಕ ಸಾಮ್ರಾಟನು ಸಾಲು ಮರಗಳನ್ನು ನೆಡೆಸುವ ಶಾಸನ, ಕೌಟಿಲ್ಯನ ಕಾಲದಲ್ಲಿ ಅರಣ್ಯದ ಗಿಡಮರಗಳನ್ನು ರಕ್ಷಿಸಲು ವೃಕ್ಷಾಧ್ಯಕ್ಷನ ನೇಮಕ, ವೃಕ್ಷಗಳನ್ನು ಬೆಳೆಸಿ, ಸಂರಕ್ಷಿಸುವ ವಿಧಿ–ವಿಧಾನಗಳನ್ನು ಬೋಧಿಸುವ ವೃಕ್ಷಾಯುರ್ವೇದ ಮುಂತಾದವು

ಅಂದಿನ ಕಾಲದ ಪ್ರಯತ್ನಗಳಿಗೆ ಗಂಭೀರ ಸಾಕ್ಷಿಗಳಾಗಿವೆ. ಒಂದು ಮಾತನ್ನು ನಾವು ಗಮನದಲ್ಲಿಡಬೇಕು—ಅಂದಿನ ದಿನಗಳಲ್ಲಿ ಕಾಡು ತಾನೇ ತಾನಾಗಿತ್ತು, ವನಸಿರಿ ತುಂಬಿತುಳುಕುತ್ತಿತ್ತು. ಅದನ್ನು ಉಪಯೋಗಿಸುವ ಕೈ-ಬಾಯಿಗಳ ಸಂಖ್ಯೆ ತುಂಬ ಕಡಿಮೆ. ಅಂದರೆ ಕಾಡು ಸಮೃದ್ಧ, ಜನಸಂಖ್ಯೆ ಅಲ್ಪ. ಇದರಿಂದಾಗಿ ಅರಣ್ಯ ನಾಶದ ಗತಿ ತುಂಬಾ ನಿಧಾನವಾಗಿತ್ತು. ಆದ್ದರಿಂದಲೇ ಅರಣ್ಯ ವೃದ್ಧಿ-ಸಂರಕ್ಷಣೆ ಅಂಥ ದೊಡ್ಡ ಕಾರ್ಯವಾಗಿರಲಿಲ್ಲ. ಮುಂದೆ ನಾಗರಿಕತೆ ಬೆಳೆದಂತೆಲ್ಲ ಅರಣ್ಯದ ಬಳಕೆ ಹೆಚ್ಚುತ್ತಾ ಬಂದು ನಾವಿಂದು ವಿನಾಶದ ಅಂಚಿನಲ್ಲಿ ನಿಲ್ಲಬೇಕಾಗಿ ಬಂದಿರುವುದು ದುರ್ದೈವವೇ ಸರಿ. ಇದಕ್ಕೆ ಜನಸಂಖ್ಯಾ ಸ್ಫೋಟವೇ ಪ್ರಮುಖ ಕಾರಣ ಎಂಬುದು ಹಗಲಿನ ಸೂರ್ಯನಷ್ಟೇ ಸತ್ಯಸಂಗತಿ.

ಮಾನವನ ಜೊತೆಗಿನ ಈ ಅರಣ್ಯದ ಸಂಬಂಧ ಅಷ್ಟೊಂದು ಪುರಾತನವಾದ ಆ ಸಂಬಂಧ ಈಗ ವಿಷಮಯವಾಗುತ್ತಿದೆ. ಅವರಿಬ್ಬರ ನಡುವೆ ಕಂದರ ಉಂಟಾಗುತ್ತಿದೆ. ಅರಣ್ಯನಾಶದಿಂದ ಪರಿಸರದಲ್ಲಿ ಭಯಂಕರ ಬದಲಾವಣೆಯಾಗುತ್ತಾ ಮಾನವ ಜನಾಂಗಕ್ಕೆ ಈ ವಿನಾಶ ಒಂದು ಕುತ್ತಾಗಿ ಪರಿಣಮಿಸುತ್ತಿದೆ. ಈ ಸ್ಥಿತಿ ಹೀಗೆಯೇ ಮುಂದುವರೆಯಲು ಬಿಡಲಾಗದು. ಅರಣ್ಯನಾಶಕ್ಕೆ ತಡೆಯೊಡ್ಡಬೇಕು, ಅರಣ್ಯಗಳ ಸಂರಕ್ಷಣೆ, ಸಂವರ್ಧನೆಗೆ ಎಲ್ಲ ವಿಧದ ಪ್ರಯತ್ನಗಳು ನಡೆಯಬೇಕು.

ಅರಣ್ಯ-ವ್ಯಾಖ್ಯೆ

ಅರಣ್ಯವೆಂದರೆ ಚಿಕ್ಕ-ದೊಡ್ಡ ಗಿಡ-ಮರಗಳು, ತರುಲತೆಗಳು ನಿಬಿಡವಾಗಿ ಬೆಳೆದುಕೊಂಡು ವಿಸ್ತಾರವಾಗಿ ಹಬ್ಬಿಕೊಂಡಿರುವ ಪ್ರದೇಶವೆಂದು ಸಾಮಾನ್ಯವಾಗಿ ಹೇಳಬಹುದು. ಇದನ್ನೇ ನಾವು ಕಾಡು, ಕಾನನ, ಅಡವಿ ಎಂದು ಮುಂತಾಗಿ ಕರೆಯುತ್ತೇವೆ. ನಡುಹಗಲಿನಲ್ಲೂ ಸೂರ್ಯನ ಕಿರಣ ಪ್ರವೇಶಿಸದ ಕಾಡುಗಳ ಪ್ರಸ್ತಾಪವು ನಮ್ಮ ಗ್ರಂಥಗಳಲ್ಲಿದೆ. ಆದ್ದರಿಂದ ಅರಣ್ಯದಲ್ಲಿ ಗಿಡಮರಗಳೇ ಪ್ರಧಾನ ಅಂಗಗಳು. ಕಾಡು ಪ್ರಾಣಿಗಳು, ಹೊಳೆ-ಹಳ್ಳಗಳು, ಪಕ್ಷಿ ಸಂಕುಲಗಳು, ಹಳ್ಳ-ದಿನ್ನೆಗಳು ಇನ್ನುಳಿದ ಅಂಶಗಳು. ಆದರೆ ಕಾನೂನಿನ ವ್ಯಾಖ್ಯೆಯಂತೆ ಯಾವುದು ಅರಣ್ಯಶಾಖೆಯ ಆಡಳಿತಕ್ಕೊಳಪಟ್ಟು ಶಾಸನಬದ್ಧವಾಗಿ ನಿರ್ದಿಷ್ಟಪಡಿಸಿದ ಪ್ರದೇಶವಾಗಿರುವುದೋ ಅದಕ್ಕೆ ಅರಣ್ಯವೆಂದು ಕರೆಯಲಾಗಿದೆ. ಈ ಪ್ರದೇಶ ಗಿಡಮರಗಳಿಂದ ಕೂಡಿರಬಹುದು, ಬರಡಾಗಿರಬಹುದು, ಖಾಸಗಿ ಹಕ್ಕಿಗೆ ಸೇರಿರಬಹುದು, ಇಳಿತಪ್ಪಲಾಗಿರಬಹುದು ಅಥವಾ ಬೋಳುಗುಡ್ಡವೇ ಆಗಿರಬಹುದು-ಅದೆಲ್ಲ ನಿಯಮದ ಪ್ರಕಾರ ಅರಣ್ಯವೇ.

ಅರಣ್ಯ-ಭೇದ

ಅರಣ್ಯಗಳನ್ನು ಸುರಕ್ಷಿತ ಅರಣ್ಯಗಳು ಮತ್ತು ಉತ್ಪಾದಕ ಅರಣ್ಯಗಳೆಂದು ವಿಶಾಲವಾಗಿ ಎರಡು ವಿಧವಾಗಿ ವಿಭಜಿಸಬಹುದು. ಅವು ಕ್ರಮವಾಗಿ Protective forests ಮತ್ತು Productive forestsನ ಬದಲುಗಳು.

ಸಾಮಾನ್ಯವಾಗಿ ತಮ್ಮಷ್ಟಕ್ಕೆ ತಾವೇ ಬೆಳೆದುನಿಂತ ಕಾಡುಮರಗಳು, ಹಳ್ಳ ಕೊಳ್ಳಗಳು, ಕಾಡುಪ್ರಾಣಿ–ಪಶು–ಪಕ್ಷಿ–ಕೀಟಗಳನ್ನು ಹೊಂದಿರುವ ಅರಣ್ಯಗಳನ್ನು ಸುರಕ್ಷಿತ ಅರಣ್ಯಗಳೆಂದು ಹೇಳಬಹುದು. ಈ ಅರಣ್ಯಗಳಿಂದ ಸಾಮಾನ್ಯವಾಗಿ ಯಾವುದೇ ಉತ್ಪಾದನೆ ಪಡೆಯಲಾಗದು. ನೈಸರ್ಗಿಕವಾದ ಈ ಅರಣ್ಯಗಳಿಂದ ಪರಿಸರದ ಸಂರಕ್ಷಣೆ, ಮರಗಳ ಪೋಷಣೆ, ಮಣ್ಣಿನ ರಕ್ಷಣೆ, ನೀರಿನ ಕೊರತೆಯ ಪೂರೈಕೆ ಮುಂತಾದ ವಿಶಿಷ್ಟಕಾರ್ಯಗಳು ನಿಸರ್ಗದತ್ತವಾಗಿಯೇ ನಡೆಯುತ್ತವೆ. ನಿಸರ್ಗದ ಸಮತೋಲನ ಕಾಪಾಡುವುದರಲ್ಲಿ ಇಂಥ ಅರಣ್ಯಗಳ ಪಾತ್ರ ಹಿರಿದು. ಬನಸಿರಿಯ ಸೊಗಸಿನಿಂದ ದೊರೆಯುವ ಮನಃಸಂತೋಷ, ಕುಗ್ಗಿದ ಮನಕ್ಕೆ ದೊರಕುವ ಹಿಗ್ಗು ಈ ಅರಣ್ಯಗಳಿಂದಲೇ ಸಾಧ್ಯ. ಇಂಥ ನೈಸರ್ಗಿಕ ಅರಣ್ಯಗಳಲ್ಲಿ ಸ್ವೇಚ್ಛೆಯಾಗಿ, ಸ್ವತಂತ್ರವಾಗಿ ತಿರುಗಾಡಿಕೊಂಡು ಜೀವನ ನಡೆಸುವ ಸಾವಿರಾರು ವಿಧದ ಪಶು, ಪಕ್ಷಿ, ಕೀಟಗಳನ್ನು ನೋಡಿ ಆನಂದಿಸಲು ಇಂಥ ಕಾಡುಗಳೇ ತಾಣಗಳು.

ಉತ್ಪಾದಕ ಅರಣ್ಯಗಳು ಮುಖ್ಯವಾಗಿ ಮನುಷ್ಯನ ಅವಶ್ಯಕತೆಗಳನ್ನು ಪೂರೈಸುವ ಚಿಕ್ಕ–ದೊಡ್ಡ ಕಾಡುಗಳು, ಕಾಯ್ದಿಟ್ಟ ಅರಣ್ಯ ಶ್ರೇಣಿಗಳು. ಅರಣ್ಯ ಮನುಷ್ಯನ ಅಗತ್ಯಗಳನ್ನು ನಿರಂತರವಾಗಿ ಪೂರೈಸಬಲ್ಲ ಕಾಮಧೇನು, ಕಲ್ಪವೃಕ್ಷ. ನಾವು ಓದಲು–ಬರೆಯಲು ಉಪಯೋಗಿಸುವ ಕಾಗದದಿಂದಾರಂಭಿಸಿ ಪೆನ್ಸಿಲ್ಲು, ಕುರ್ಚಿ, ಮೇಜು, ತೊಲೆ ಬಾಗಿಲುಗಳವರೆಗೆ ಕಾಡಿನ ವರದಾನವೇ ಮರ, ಮನುಷ್ಯನ ದೊಡ್ಡ ಸಂಗಾತಿ. ಕಟ್ಟಿಗೆ ಇಲ್ಲದಿದ್ದರೆ ಅವನ ಜೀವನ ಬರಡು (ಸತ್ತಾಗ ಸುಡಲೂ ಅದೇ ಬೇಕು !). ಹೀಗಾಗಿ ಅವನ ಪೂರೈಕೆಗಳನ್ನು ಒದಗಿಸಿಕೊಡಲು ಕಾಡನ್ನು ಸರಿಯಾಗಿ ಉಪಯೋಗಿಸಿ ಮತ್ತೆ ಅದನ್ನು ಬೆಳೆಸಿಕೊಂಡು ಹೋಗುವುದೇ ಈ ಉತ್ಪಾದಕ ಅರಣ್ಯಗಳ ಮೂಲಮಂತ್ರ.

ಅರಣ್ಯ–ಭಾರತದಲ್ಲಿ ಹರಹು

ಭಾರತದೇಶ ವಿಶಾಲವಾದ, ಅನೇಕಾನೇಕ ವೈವಿಧ್ಯಗಳನ್ನು ಹೊಂದಿರುವ ನಾಡು. ಅದರ ಭೌಗೋಳಿಕ ಭಿನ್ನತೆಯಷ್ಟೇ ಅದರ ಸಾಮಾಜಿಕ, ಸಾಂಸ್ಕೃತಿಕ ಭಿನ್ನತೆಗಳು ವಿಶಿಷ್ಟವೇ. ಬಹುಶಃ ಈ ಭೌಗೋಳಿಕ ವೈವಿಧ್ಯವೇ ನಮ್ಮ ದೇಶದ ಸಾಮಾಜಿಕ, ಸಾಂಸ್ಕೃತಿಕ ವಿವಿಧತೆಗೆ ಕಾರಣ ಪೂರಕ ಎಂದು ಹೇಳಬಹುದು.

ಉತ್ತರ ಗೋಳಾರ್ಧದಲ್ಲಿ ಉತ್ತರ ದಕ್ಷಿಣಾಭಿಮುಖವಾಗಿ ಸುಮಾರು 3200 ಕಿ.ಮೀ. ಉದ್ದಕ್ಕೂ ಮತ್ತು ಪೂರ್ವ–ಪಶ್ಚಿಮವಾಗಿ ಸುಮಾರು 3000 ಕಿ.ಮೀ. ಅಗಲಕ್ಕೂ ಹರಡಿಕೊಂಡಿರುವ ನಮ್ಮ ಭಾರತ ಸುಮಾರು 5700 ಕಿ.ಮೀ. ಕರಾವಳಿಯನ್ನು ಹೊಂದಿದೆ. ಉತ್ತರಕ್ಕೆ ಹಿಮಾಲಯ ಶ್ರೇಣಿ ಇದೆ. ಇಷ್ಟು ದೊಡ್ಡ ಪ್ರದೇಶದಲ್ಲಿ ಭೌಗೋಳಿಕ ರಚನೆ, ಮಣ್ಣಿನ ಗುಣ, ಹವಾಮಾನ, ಪರಿಸರಗಳಲ್ಲಿ ಅಗಾಧ ವ್ಯತ್ಯಾಸ ಕಂಡುಬರುವುದು ಸಹಜ. ಅದಕ್ಕೆ ತಕ್ಕಂತೆ ಮಳೆ–ಬೆಳೆ,

ಋತುಕಾಲ, ಉಷ್ಣತೆ, ಗಾಳಿ-ಬೆಳಕುಗಳಲ್ಲೂ ಮತ್ತು ಸಂಸ್ಕೃತಿ, ಭಾಷೆ, ಆಚಾರ-ವಿಚಾರ, ಕಾನೂನು-ಕಟ್ಟಳೆಗಳಲ್ಲೂ ಸಾಕಷ್ಟು ವಿಭಿನ್ನತೆ ಕಂಡು ಬರುವುದು ಸ್ವಾಭಾವಿಕವೇ. ಈ ಭೌಗೋಳಿಕ ವ್ಯತ್ಯಾಸದಿಂದಾಗಿ ಒಂದೆಡೆ ಭಯಂಕರ ಬರಗಾಲವಾದರೆ, ಇನ್ನೊಂದೆಡೆ ತೀವ್ರ ಮಹಾಪೂರ ಕಾಣಬರುವದು ದುರಂತವಾದರೂ ಸತ್ಯ.

ಈ ಭೌಗೋಳಿಕ ರಚನೆಗನುಗುಣವಾಗಿ ಭಾರತದ ಭೂರಚನೆಯಲ್ಲಿ ನಾಲ್ಕು ಮುಖ್ಯ ವಿಭಾಗಗಳನ್ನು ಮಾಡಬಹುದು—ಹಿಮಾಲಯ, ವಿಂಧ್ಯ ಪರ್ವತಗಳ ಪ್ರದೇಶ, ಗಂಗಾ-ಯಮುನಾ ಮುಂತಾದ ನದಿಗಳ ಪಾತ್ರ ಪ್ರದೇಶ, ದಕ್ಷಿಣ ಭೂಶಿರ ಪ್ರದೇಶ ಮತ್ತು ಕರಾವಳಿ ಪ್ರದೇಶ ಎಂದು. ಈ ವಿವಿಧ ಪ್ರದೇಶಗಳಲ್ಲಿಯ ವಾತಾವರಣಕ್ಕನುಗುಣವಾಗಿ ಆಯಾ ಪ್ರದೇಶಗಳ ಕಾಡುಗಳ ರಚನೆ, ಅಂತರ್ಯ, ಗಿಡಮರಗಳ ಜಾತಿ ವಿವಿಧವಾಗಿರುವುದು ಸ್ವಾಭಾವಿಕ. ಇದರಿಂದಾಗಿ ನಮ್ಮ ದೇಶದಲ್ಲಿಯೇ ಅನೇಕ ವಿವಿಧ ರೀತಿಯ ಅರಣ್ಯಗಳನ್ನು ಕಾಣುತ್ತೇವೆ. ಬಹುಶಃ ಇದೊಂದು ರೀತಿಯ ವರದಾನವೇ ಸರಿ. ಯಾಕೆಂದರೆ ಈ ವಿಭಿನ್ನತೆಯಿಂದಾಗಿ ಎಲ್ಲ ವಿಧದ ಗಿಡ-ಮರಗಳನ್ನು ಬೆಳೆಯುವ ಸಾಧ್ಯತೆಯ ಅನುಕೂಲ ನಮಗಿದೆ.

ವಿವಿಧ ಹವಾಮಾನ, ಮಳೆ-ಗಾಳಿಗೆ ತಕ್ಕಂತೆ ಅರಣ್ಯಗಳ ರಚನೆಯಲ್ಲಿಯ ವ್ಯತ್ಯಾಸಕ್ಕೆ ಸರಿಯಾಗಿ ಅರಣ್ಯಗಳನ್ನು ಸಾಮಾನ್ಯವಾಗಿ ಉಷ್ಣವಲಯದ ಸದಾ ಹಸಿರು ಅರಣ್ಯ, ಉಷ್ಣವಲಯದ ಎಲೆಯುದುರುವ ಅರಣ್ಯ, ತೀರಪ್ರದೇಶದ ಜವುಗಿನ ಕಾಡು, ಉಷ್ಣವಲಯದ ಕುರುಚಲು ಕಾಡು, ಹಿಮಾಲಯ ಪ್ರದೇಶದ ತೇವವುಳ್ಳ ಕಾಡು, ಸಮಶೀತೋಷ್ಣವಲಯದ ಕಾಡು ಎಂದು ಮುಂತಾಗಿ ವಿಂಗಡಿಸಲಾಗಿದೆ. ಒಂದೊಂದು ವಿಧದ ಅರಣ್ಯಗಳಲ್ಲಿ ವಿಶಿಷ್ಟ ಜಾತಿಯ ಮರಗಿಡಗಳು, ಕುರುಚಲು, ಪೊದೆ ಮೂಲಿಕೆಗಳು ಬೆಳೆಯುತ್ತವೆ.

ನಮ್ಮ ದೇಶದ ಒಟ್ಟು ಭೂಪ್ರದೇಶದಲ್ಲಿ ಸುಮಾರು 22% ಕಾಡು ಹರಡಿದೆ. ಆದರೆ ನಮ್ಮ ದೇಶದ ಸ್ಥಿತಿಗತಿಗೆ ಇಷ್ಟು ಕಡಿಮೆ ಪ್ರಮಾಣದ ಕಾಡು ಸಾಲದು. ಕನಿಷ್ಠ ಪಕ್ಷಕ್ಕೆ 33% ಕಾಡಾದರೂ ಇರಬೇಕಾದುದು ಅವಶ್ಯಕ. 22% ಕಾಡಿರುವುದು ಒಂದು ಸತ್ಯದೂರಸಂಗತಿಯೆಂದು ತಜ್ಞರು ಹೇಳುತ್ತಾರೆ. ಇತ್ತೀಚಿಗೆ ನಡೆಸಿದ ಸ್ಯಾಟೆಲೈಟ್ ಅವಲೋಕನದಲ್ಲಿ ಭಾರತದ ಒಟ್ಟು ಅರಣ್ಯಪ್ರದೇಶ 40 ದಶಲಕ್ಷ ಹೆಕ್ಟೇರುಗಳಿಗಿಂತ ಹೆಚ್ಚಾಗಿಲ್ಲ (ಅಂದರೆ ಶೇಕಡಾ 12ರಷ್ಟು ಮಾತ್ರ) ಎಂದು ವರದಿಯಾಗಿದೆ.

ಅರಣ್ಯ ಮತ್ತು ಸಸ್ಯವರ್ಗ

ಸಸ್ಯವರ್ಗ ಮಾನವನಿಗಿಂತ 300 ದಶಲಕ್ಷದಷ್ಟು ಹಳೆಯದಾದ ವರ್ಗ. ಸಸ್ಯದ ಹುಟ್ಟು, ಬೆಳವಣಿಗೆ, ಸ್ಥಿತ್ಯಂತರಗಳ ಬಗೆಗೆ ವಿಜ್ಞಾನಿಗಳು ಸಾಕಷ್ಟು ಅಧ್ಯಯನ ನಡೆಸಿದ್ದಾರೆ. ಮೂಲತಃ ಪ್ರಾಣಿ ಮತ್ತು ಸಸ್ಯಗಳಲ್ಲಿ ಅಂತರವಿಷ್ಟೇ—

ಪ್ರಾಣಿ ಚಲಿಸಬಲ್ಲುದು ಸಸ್ಯ ಮಾತ್ರ ಸ್ಥಿರವಸ್ತು. ಆದರೆ ಅದಕ್ಕೂ ಜೀವವಿದೆ, ನೋವುನಲಿವುಗಳಿವೆ, ಸಂತಾನಾಭಿವೃದ್ಧಿಯ ಶಕ್ತಿ ಇದೆ ಎಂದು ಸಿದ್ಧಪಡಿಸಿದ ಡಾ. ಬೋಸರ ಅಧ್ಯಯನ ಸಸ್ಯಜೀವನದ ಬಗೆಗೆ ಮಾನವನ ದೃಷ್ಟಿಕೋನವನ್ನು ಆ ಮಟ್ಟಿಗೆ ಬದಲಿಸಿದೆ ಎಂದು ಹೇಳಬಹುದು. ಪ್ರಾಣಿಯಲ್ಲಿರುವಂತೆಯೇ ಸಸ್ಯದಲ್ಲಿ ಆಹಾರಸಂಗ್ರಹಣ, ಜೀವನ, ಜೀರ್ಣಕ್ರಿಯೆ, ಅಭಿವೃದ್ಧಿ, ಪುನರ್ನಿರ್ಮಾಣದ ವ್ಯವಸ್ಥೆಗಳು ವಿಶಿಷ್ಟವಾಗಿವೆ. ಮರ ಸಸ್ಯದ ಪರಮಸ್ಥಿತಿ. ಅದರ ಸ್ಥೂಲ ಜ್ಞಾನ ವಿಲ್ಲದೆ ಅರಣ್ಯದ ಸರಿಯಾದ ಪರಿಚಯವಾಗದು.

ಸಸ್ಯಗಳನ್ನು ಸ್ಥೂಲವಾಗಿ ಮೂಲಿಕೆಗಳು (Herbs), ಕುರುಚಲು (Shrubs) ಮತ್ತು ಗಿಡಮರಗಳು (Trees) ಎಂದು ವಿಂಗಡನೆ ಮಾಡಬಹುದು. 3–4 ಅಡಿಗಳಿ ಗಿಂತ ಹೆಚ್ಚು ಎತ್ತರ ಬೆಳೆಯದ, ಮೃದುಕಾಂಡ ಹೊಂದಿರುವ ಭತ್ತ, ರಾಗಿ, ಔಷಧಿಯ ಮೂಲಿಕೆಗಳನ್ನು ಮೂಲಿಕೆಯ ವಿಭಾಗದಲ್ಲಿ ಸೇರಿಸಬಹುದು. ಕುರುಚಲು ಸಸ್ಯಗಳು ಮೂಲಿಕೆಗಳಿಗಿಂತ ಗಡುಸಾದ ಗಿಡಗಂಟಿಗಳು, ಪೊದೆಗಳು, ಮೆಳೆಗಳು. ಉದಾ–ಗುಲಾಬಿ, ತುಳಸಿ, ಕ್ರೋಟಿನ್ ಮುಂತಾದವು. 20–30 ಅಡಿ ಎತ್ತರ ಬೆಳೆಯುವ ಬಿದಿರು ಕೂಡ ಇದರಲ್ಲೇ ಸೇರುತ್ತದೆ. ಅತಿ ಎತ್ತರವಾಗಿ (ಗರಿಷ್ಟ 200–300 ಅಡಿ) ನೇರವಾಗಿ, ಗಡಸಾದ ದಪ್ಪಕಾಂಡ, ಬೇರುಗಳನ್ನು ಹೊಂದಿ ಅನೇಕ ವರ್ಷ (ಕೆಲವೊಮ್ಮೆ 300–400 ವರ್ಷ) ಜೀವಿಸುವ ಸಸ್ಯವರ್ಗಕ್ಕೆ ಮರ ಗಳೆಂದು ಹೆಸರು.

ಮರದ ಪ್ರತಿಯೊಂದು ಅಂಗವೂ ಮರದ ಪೋಷಣೆಗೆ, ಬೆಳವಣಿಗೆಗೆ ಸಹಕಾರಿ. ಎಲೆ, ರೆಂಬೆ, ಬೊಡ್ಡೆ, ಬೇರು, ಹೂ, ಹಣ್ಣುಕಾಯಿ ಮುಂತಾದ ಎಲ್ಲ ಅಂಗಗಳು ಸೇರಿಯೇ ಮರ. ಬೇರು ಆಹಾರ ವಿಂಗಡನೆ, ಸ್ವೀಕರಣೆ, ಸಾಗಾಣಿಕೆಗೆ ಮುಖ್ಯವಾಗಿ ಬೇಕಾದ ಅಂಗ. ಎಲೆಗಳು ಆಹಾರ ಸಂಗ್ರಹಣೆಯ ಉಗ್ರಾಣಗಳು, ಪರಿವರ್ತಿಸುವ ಕಾರ್ಖಾನೆಗಳು. ದ್ಯುತಿಸಂಶ್ಲೇಷಣೆ ಉಸಿರಾಟ ಈ ಎಲೆಗಳ ಮುಖಾಂತರವೇ. ಕಾಂಡಗಳ ಸುತ್ತಲೂ ಹರಡಿ ಬೇಕಾದ ಉಷ್ಣತೆ, ಗಾಳಿ, ಬೆಳಕುಗಳನ್ನು ಪಡೆಯಲು ಸಹಕರಿಸುವ ಅಂಗಗಳು. ಎಲೆಗಳು ತಯಾರಿಸಿದ ಆಹಾರವನ್ನು ಎಲ್ಲ ಭಾಗಗಳಿಗೂ ಪೂರೈಸುವ ನಳಿಕೆಗಳಿವು. ಕಾಯಿ, ಹಣ್ಣು, ಬೀಜಗಳು ಮರದ ಮುಖ್ಯ ಉತ್ಪತ್ತಿ ಗಳು, ಸಂತಾನಾಭಿವೃದ್ಧಿಯ ಫಲಗಳು, ಮೂಲಗಳು. ವಿವಿಧ ಹವಾಮಾನಕ್ಕೆ ತಕ್ಕಂತೆ ಎಲ್ಲ ಅಂಗಗಳು ತಮ್ಮ ರಚನೆಯನ್ನು ಬದಲಾಯಿಸಿಕೊಂಡು ಬೆಳೆಯುವ ಶಕ್ತಿ ಹೊಂದಿವೆ. ಅಂತೆಯೇ ಸಸ್ಯಗಳಲ್ಲಿ ಸಾವಿರಾರು ವಿಧ, ನೂರಾರು ಆಕಾರ ಅಳತೆಗಳು, ಬಣ್ಣ–ವಾಸನೆ–ರುಚಿಗಳು, ವೈವಿಧ್ಯಗಳು, ಜಾತಿಗಳು.

ಅರಣ್ಯ ಮತ್ತು ಮರ

ಮೊದಲೇ ಹೇಳಿದಂತೆ ಅರಣ್ಯದ ಮುಖ್ಯ ಅಂಗ ಮರ. ಅರಣ್ಯದ ಎಲ್ಲ

ಹುಟ್ಟುವಳಿಗಳಲ್ಲಿ ಕಟ್ಟಿಗೆ ಬಹು ಪ್ರಮುಖವಾದ, ಬೆಲೆಯುಳ್ಳ ಉತ್ಪಾದಕ ಅಂಶ. ಔದ್ಯೋಗಿಕ ಪ್ರಗತಿಯಲ್ಲಿ ಇದರ ಪಾತ್ರ ಮಹತ್ತರ. ಮರಮಟ್ಟಾಗಿ, ನಾರುಭಾಗವಾಗಿ, ಉರುವಲಾಗಿ, ಇದ್ದಿಲಾಗಿ, ಉದ್ದಿಮೆಗಳನ್ನು ನಡೆಸುವ ಮರ ಎಷ್ಟಿದ್ದರೂ ಸಾಲದು. ದಿನದ ಅನ್ನ ಬೇಯಬೇಕಾದರೆ ಉರುವಲು ಸೇವೆಯಾಗಿ ಮರ ಬೇಕೇ ಬೇಕು. ಇದು ಮಾನವನ ನಿತ್ಯಜೀವನದ ಅತ್ಯಗತ್ಯವಸ್ತು.

ಮರದ ಉಪಯುಕ್ತತೆ ಅಪಾರ, ಅಗಾಧ. ಮಾನವ ಒಂದಲ್ಲೊಂದು ರೀತಿಯಲ್ಲಿ ಮರದ ಅವಲಂಬಿ. ಸಿಮೆಂಟ್, ಕಬ್ಬಿಣ, ವಿದ್ಯುಚ್ಛಕ್ತಿ, ಗ್ಯಾಸ್ ಮುಂತಾದವುಗಳ ಆವಿಷ್ಕಾರದಿಂದ ಮರದ ಉಪಯೋಗ ಕುಗ್ಗಿದ್ದೇನೂ ಇಲ್ಲ. ದಿನದಿನಕ್ಕೆ ಅದರ ಬೇಡಿಕೆ ಹೆಚ್ಚುತ್ತಲೇ ಇದೆ. ಮರದ ಮುಖ್ಯವಾದ ಹೆಚ್ಚು ಶಾಶ್ವತ ಉಪಯೋಗ ಎಂದರೆ ಮರಮಟ್ಟು (Timber). ಮನೆ-ಕಟ್ಟಡಗಳಿಗೆ ಬೇಕಾಗುವ ಕಿಟಕಿ, ಬಾಗಿಲುಗಳು, ತೊಲೆ, ಕಂಬ, ಪಟ್ಟಿಗಳು, ರಾಫ್ಟರುಗಳು: ರೈಲು ಹಳಿಯಪಟ್ಟಿ, ಬೋಗಿಗಳ ಒಳ ಆವರಣ, ಆಸನಗಳು, ದೋಣಿಗಳ ಕಟ್ಟಡ-ಇವಕ್ಕೆಲ್ಲ ಮರ ಬೇಕು. ವಿದ್ಯುತ್ ಮತ್ತು ಟೆಲಿಗ್ರಾಫ್ ಕಂಬಗಳು, ಸೇತುವೆ ನಿರ್ಮಾಣ ಸಾಮಗ್ರಿ, ರಕ್ಷಣಾ ಸಲಕರಣೆ, ವಿಮಾನ ರಚನಾ ಸಾಮಗ್ರಿಗಳಲ್ಲಿ ಮರವಿಲ್ಲದೆ ನಡೆಯದು. ಚಕ್ಕಡಿ, ವ್ಯವಸಾಯ ಸಲಕರಣೆ, ಪ್ಯಾಕಿಂಗ್ ಸಾಮಗ್ರಿ, ಕಾಗದ, ಪೆನ್ಸಿಲ್, ಕುರ್ಚಿ–ಮೇಜು ಮುಂತಾದ ಪೀಠೋಪಕರಣಗಳು, ಅಲಂಕಾರಿಕ ಕೆತ್ತನೆ ವಸ್ತುಗಳು ಕ್ರೀಡಾಸಾಮಗ್ರಿಗಳು—ಹಾಗೆ ನೋಡಿದರೆ ದಿನನಿತ್ಯದ ನಮ್ಮ ಎಲ್ಲ ವಸ್ತುಗಳಿಗೆ ಮರ ಒಂದಲ್ಲ ಒಂದು ರೀತಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೇಕೇ ಬೇಕು. ಮರಮಟ್ಟುಗಳ ಈ ಅಗಾಧ ಉಪಯುಕ್ತತೆಯಿಂದಾಗಿ ಅರಣ್ಯಗಳಿದ್ದಷ್ಟೆ, ಕಡಿಮೆ ಎನ್ನಿಸುವುದು ಸಹಜ.

ಸಾಮಾನ್ಯವಾಗಿ ಮರಮಟ್ಟಿಗೆ ನಾವು ಸಾಗವಾನಿ, ರೋಜವುಡ್, ಸಾಲ, ದೇವದಾರು, ಮತ್ತಿ, ಸಿಸುವು, ರೆಂಡಲ್, ಜಾಲಿ, ಮಾವು, ಹಲಸು, ಬೇವು ಮುಂತಾದ ಜಾತಿಯ ಮರಗಳನ್ನು ಬಳಸುತ್ತೇವೆ. ಒಟ್ಟು ಉಪಯೋಗಿಸುವ ಮರಮಟ್ಟುಗಳ ಪೈಕಿ ಮನೆ–ವಸತಿಗೃಹಗಳ ನಿರ್ಮಾಣಕ್ಕೇ ಒಟ್ಟು ಉಪಯೋಗದ ನಾಲ್ಕರಲ್ಲೊಂದು ಪಾಲು ಕಟ್ಟಿಗೆ ಅವಶ್ಯಕ. ನೂರಾರು ವಿಧದ ಉದ್ದಿಮೆಗಳು ಮರವನ್ನು ರಾಕ್ಷಸನಂತೆ ಕಬಳಿಸುತ್ತವೆ. ಹೀಗಾಗಿ ಮರದ ಬೆಲೆ ವರ್ಷವರ್ಷವೂ, ದಿನದಿನವೂ ಗಗನಕ್ಕೇರುತ್ತಿದೆ. ಉಳಿದೆಲ್ಲ ಸಾಮಾನ್ಯ ಬಳಕೆಯ ವಸ್ತುಗಳ ಬೆಲೆಯಲ್ಲಿ 1970 ರಿಂದ 3 ಪಟ್ಟು ಹೆಚ್ಚಳ ಕಂಡು ಬಂದಿದ್ದರೆ ಮರದ ಬೆಲೆ ಮಾತ್ರ 15 ಪಟ್ಟು ಹೆಚ್ಚಾಗಿದೆ! 1970ರಲ್ಲಿ ಸಾಗವಾನಿಯ (Teak) ಪ್ರತಿ ಚದರ ಮೀಟರಿನ ದುಂಡು ದಿಮ್ಮಿಗೆ 550 ರೂಪಾಯಿ ಇತ್ತು. ಅದೇ 1985 ರಷ್ಟೊತ್ತಿಗೆ 5500 ರೂಪಾಯಿಗಳಿಗೇರಿತು. ಅದೇ ಅಳತೆಯ ಮತ್ತಿಮರಕ್ಕೆ ಆಗ 135 ರೂಪಾಯಿ ಇದ್ದರೆ 1985ರಲ್ಲಿ ಸುಮಾರು 3000 ರೂಪಾಯಿಗಳು! ಇದಕ್ಕೆಲ್ಲ ಕಾರಣ ಸ್ಪಷ್ಟವಾಗಿದೆ. ಈಕಡೆ ಬೇಡಿಕೆ ತೀವ್ರವಾಗಿ ಹೆಚ್ಚಾಗಿದ್ದರೆ ಆಕಡೆ

ಪೂರೈಸಲು ಮಾಲೇ ಇಲ್ಲ. ಹೀಗಾಗಿ ಬೆಲೆ ಏರಿಕೆ ಅನಿವಾರ್ಯ. ಪರಿಹಾರ ಒಂದೇ–ಅರಣ್ಯಗಳ ಅಭಿವೃದ್ಧಿ.

ಭಾರತದಲ್ಲಿ ಇಂಧನವಾಗಿ ಮರವನ್ನು ಬಳಸುವಷ್ಟು ಬೇರಾವ ವಸ್ತುವನ್ನು ಬಳಸುವುದಿಲ್ಲ. ದಿನವೂ ಭಾರತದಲ್ಲಿ ವಿಶೇಷವಾಗಿ ಹಳ್ಳಿಗಳಲ್ಲಿ (ನಗರಗಳ ಬಡ ಕುಟುಂಬಗಳಲ್ಲೂ) ಲಕ್ಷಾನುಗಟ್ಟಲೆ ಟನ್ ಉರುವಲು ಉರಿಯುತ್ತದೆ. 1965ರಲ್ಲಿ ನಮಗೆ 110 ಮಿ. ಟನ್‌ಗಳಷ್ಟು ಉರುವಲು ಸೌದೆ ಬೇಕಾಗಿದ್ದು 1985ರಷ್ಟೊತ್ತಿಗೆ ಬೇಡಿಕೆ 130 ದಶಲಕ್ಷ ಟನ್ನಿಗೂ ಮೀರಿತ್ತು. ಈ ಬಳಕೆಯ ಅಂದಾಜು ಕೇವಲ ಮನೆ ಬಳಕೆಯ ಉರುವಲಿಗಾಗಿ ಮಾತ್ರ. ಅನೇಕ ಉದ್ದಿಮೆಗಳೂ ಇಂಧನಕ್ಕಾಗಿ ಮರವನ್ನೇ (ಉರುವಲು ಕಟ್ಟಿಗೆ ಮತ್ತು ಇದ್ದಿಲು) ಉಪಯೋಗಿಸುತ್ತವೆ. ಹೀಗಾಗಿ ಸುಮಾರು 70–80 ಮಿಲಿಯನ್ ಟನ್‌ಗಳಷ್ಟು ಮರ ಉರುವಲಾಗಿ ಉದ್ದಿಮೆಗಳಿಗೇ ಬೇಕು. ಹಾಗೆ ನೋಡಿದರೆ ನಮ್ಮಲ್ಲಿ ದೊರೆಯುವ ಮರಗಳ ಪೈಕಿ ಶೇಕಡಾ 85ರಷ್ಟು ಕೇವಲ ಉರುವಲಿಗಾಗಿ ಮಾತ್ರ ಉಪಯುಕ್ತ. ಬೇರೆ ವಿಧದ ಕಾರ್ಯಗಳಿಗೆ ಕೇವಲ 15% ಮರ ಮಾತ್ರ ದೊರಕುತ್ತದೆ. ಅದರಂತೆಯೇ ಎಲ್ಲ ವಿಧದ ಮರಗಳು ಸೌದೆಗಾಗಿ ಲಾಭದಾಯಕವಾಗಲಾರವು. ಹೆಚ್ಚುಹೊತ್ತು ಉರಿದು ಹೆಚ್ಚೆಚ್ಚು ಉಷ್ಣತೆಯನ್ನು ನೀಡಬಲ್ಲ ಮರಗಳನ್ನು ಮಾತ್ರ ಉರುವಲಿಗಾಗಿ ಬಳಸಬೇಕಾಗುತ್ತದೆ. ಉದಾ: ಸಾಲ (5264 ಕ್ಯಾಲರಿ), ಕ್ಯಾಸುರಿನಾ (4950 ಕ್ಯಾಲರಿ), ನೀರಲ (4934 ಕ್ಯಾಲರಿ), ಜಾಲಿ (4870 ಕ್ಯಾಲರಿ).

ಮರವನ್ನು ವಿಶಿಷ್ಟ ಉದ್ದಿಮೆಗಳಲ್ಲಿ ಅಪಾರವಾಗಿ ಬಳಸಲಾಗುತ್ತದೆ. ಮೃದು ಮರಗಳಿಂದ ಕಾಗದ, ರೇಯಾನ್, ಬೆಂಕಿ ಪೊಟ್ಟಣ ಮುಂತಾದ ವಸ್ತುಗಳು ತಯಾರಾಗುತ್ತವೆ. ಇದಕ್ಕಾಗಿ ಉದ್ದ ನಾರನ್ನು ಹೊಂದಿರುವ ಮರಗಳೇ ಬೇಕು. ನೀಲಗಿರಿ, ಕೊನಿಫರ್, ಸ್ಪ್ರೂಸ್, ಬಿದಿರು ಮುಂತಾದ ಮರಗಳು ಮತ್ತು ಅವುಗಳಿಂದ ದೊರೆಯುವ ರಾಸಾಯನಿಕಗಳನ್ನು ಅವಲಂಬಿಸಿ ಸುಮಾರು 3–4 ಸಾವಿರ ಉದ್ದಿಮೆಗಳು ನಡೆಯುತ್ತಿವೆ. ಮರದ ಸೆಲ್ಯುಲೋಸ್, ಲಿನ್ನಿನ್‌ನಾರು, ಹೆಮಿಸೆಲ್ಯುಲೋಸ್ ಇತ್ಯಾದಿ ಭಾಗಗಳಿಂದುಂಟಾದ ಮರ ರಾಷ್ಟ್ರದ ಔದ್ಯೋಗಿಕ ಪ್ರಗತಿಯ ಮೂಲ ವಸ್ತುಗಳಲ್ಲೊಂದು. ಮರದ ರಚನೆ, ಬಲ, ಕಾಠಿಣ್ಯ, ಗಡಸುತನ, ತಾಳಿಕೆ–ಬಾಳಿಕೆ, ಬಣ್ಣ, ವಾಸನೆ, ಹದ, ನಾರಿನ ಪ್ರಮಾಣ ಮುಂತಾದ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಮರ ವಿವಿಧ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆ. ಈ ಎಲ್ಲ ಕಾರ್ಯಗಳಿಗೆ ತಕ್ಕಂತೆ ಮರಗಳನ್ನು ಬೆಳೆಸಿ, ಒಣಗಿಸಿ, ನೀರಲ್ಲಿ ನೆನೆಸಿ, ಉಗಿಯಿಂದ ಬೇಯಿಸಿ, ಇದೇ ರೀತಿಯ ಇನ್ನು ಅನೇಕ ಪ್ರಕ್ರಿಯೆಗಳಿಗೆ ಒಳಪಡಿಸಿ, ಸಂಗ್ರಹಿಸಿ ಉಪಯೋಗಕ್ಕೆ ತರಬೇಕು, ಇದೊಂದು ರಾಕ್ಷಸ ಉದ್ದಿಮೆ. ಲಕ್ಷಗಟ್ಟಲೆ ಹಣ ಸುರಿದರೆ ಕೋಟಿಗಟ್ಟಲೆ ಬರಬಹುದಾದ ವ್ಯವಹಾರ. ಅದಕ್ಕಾಗಿಯೇ ಶಾಸ್ತ್ರೀಯವಾಗಿ ಮರಗಳನ್ನು ಕಡಿಯುವ ಮತ್ತು ಹದಗೊಳಿಸುವ ಪ್ರಕ್ರಿಯೆಗಳನ್ನು ರೂಪಿಸಲಾಗಿದೆ. ಕಡಿದ ಮರಗಳನ್ನು

ಹಾಳಾಗದಂತೆ ಸಂಗ್ರಹಿಸುವಿಕೆ, ದೂರದೂರಕ್ಕೆ ಸಾಗಣಿಕೆ, ಉಪಯುಕ್ತ ತುಂಡುಗಳಾಗಿ ಕೊರೆಯುವಿಕೆ, ಹದಮಾಡುವಿಕೆ ಮುಂತಾದ ಕ್ರಿಯೆಗಳನ್ನು ವೈಜ್ಞಾನಿಕವಾಗಿ ಮಾಡಿದರೆ ಮಾತ್ರ ಆರ್ಥಿಕವಾಗಿ ಲಾಭದಾಯಕವಾದೀತು. ಸರಿಯಾದ ಸಂಪನ್ಮೂಲಗಳ ಬಳಕೆಯೇ ರಾಷ್ಟ್ರದ ಪ್ರಗತಿಯ ಮೂಲ ಮಂತ್ರವಲ್ಲವೇ?

ಮರಮುಟ್ಟು, ಉರುವಲು ಮತ್ತು ಉದ್ದಿಮೆಗಳಿಗೆ ಅರಣ್ಯದ ಬಹುಪಾಲು ಮೀಸಲು. ಆದರೆ ಇನ್ನೂ ಅನೇಕ ಉಪಯುಕ್ತ ವಸ್ತುಗಳನ್ನು ನಾವು ಅರಣ್ಯದಿಂದ ಪಡೆಯಬಹುದು. ಈ ಅರಣ್ಯೋತ್ಪಾದಕಗಳು ಬಹು ಉಪಯೋಗಿಯಲ್ಲದೆ ಆರ್ಥಿಕ ಮೌಲ್ಯಗಳನ್ನು ಹೊಂದಿರುವಂತಹವು.

ಕೆಲವು ಮರಗಳ ಮೇಲೆ ಗಾಯ ಮಾಡಿ ಒಂದು ವಿಧ ಅಂಟು ದ್ರವ (Resin) ಅನ್ನು ಪಡೆಯಲಾಗುತ್ತದೆ. ರಬ್ಬರ್ ಮರ ಇದಕ್ಕೆ ಒಳ್ಳೆಯ ಉದಾಹರಣೆ. ಇದೇ ರೀತಿ ತೆಗೆದ ಬೇರೆ ಬೇರೆ ಅಂಟು ದ್ರವ್ಯಗಳು ಕಾಗದ, ಬಣ್ಣ, ಸಾಬೂನು ಉದ್ದಿಮೆಗಳಲ್ಲಿ ಉಪಯುಕ್ತವಾಗಿವೆ. ಕೆಲ ಜಾತಿಯ ಮರಗಳಿಂದ (ಚಿರ್‌ಪೈನ್) ಶೇಕಡಾ 75ರಷ್ಟು ಅಂಟು ದ್ರವ್ಯ ದೊರೆಯುವುದು. ಟರ್ಪಂಟೈನ್ ಕೂಡ ಇದೇ ರೀತಿ ದೊರೆಯುವ ಇನ್ನೊಂದು ವಸ್ತು. ಕಾಂಚು ಅಂಟು, ರಾಳ ಮುಂತಾದವು ಮರದ ಹಲ ಉತ್ಪಾದನೆಗಳಲ್ಲಿ ಕೆಲವು. ಮರಗಳ ಮೇಲೆ ಅವಲಂಬಿತವಾಗಿರುವ ಕೆಲ ಕೀಟಗಳು ಒಸರುವ ರಾಳಕ್ಕೆ ರಫ್ತು ಬೆಲೆ ಇದೆ. ಭಾರತವು ಜಗತ್ತಿನ ರಾಳದ 75% ಬೇಡಿಕೆಯನ್ನು ಪೂರೈಸುತ್ತದೆ.

ಶ್ರೀಗಂಧ ಕರ್ನಾಟಕದ ಹೆಮ್ಮೆ. ಶ್ರೀಗಂಧದ ಅಲಂಕಾರಿಕ ಕೆತ್ತನೆ ವಸ್ತುಗಳು, ಗಂಧದೆಣ್ಣೆ, ಸಾಬೂನು, ಊದುಬತ್ತಿ ಮುಂತಾದ ಸುಗಂಧಿತ ದ್ರವ್ಯಗಳು ಪ್ರಪಂಚದಾದ್ಯಂತ ಪ್ರಸಿದ್ಧವಾಗಿವೆ. ದಕ್ಷಿಣ ಭಾರತದಲ್ಲಿ ಹುಟ್ಟಿ ಬೆಳೆಯುವ ಈ ಶ್ರೀಗಂಧ ಬಹು ಬೆಲೆ ಬಾಳುವ ಶ್ರೀಮಂತ ಮರ. ಅದು ಎಲ್ಲಿ ಬೆಳೆದರೂ ಸರಕಾರದ ಸೊತ್ತು. ಜಗತ್ತಿಗೆ ಶ್ರೀಗಂಧದ ಪೂರೈಕೆ ಬಹುಶಃ ಭಾರತದಿಂದ ಮಾತ್ರ. ಅದರಲ್ಲೆಲ್ಲ ಕರ್ನಾಟಕದ್ದೇ ಸಿಂಹಪಾಲು.

ಅರಣ್ಯ ಔಷಧಿಗಳ ಬೀಡು. ಗಿಡಮೂಲಿಕೆಗಳ ಔಷಧಿ ಪ್ರಭಾವಗಳನ್ನು ನಮ್ಮ ಪೂರ್ವಿಕರು ಸಾವಿರಾರು ವರ್ಷಗಳ ಹಿಂದೆಯೇ ಅರಿತು ಆಯುರ್ವೇದ ವೈದ್ಯ ಶಾಸ್ತ್ರದಲ್ಲಿ ಅಳವಡಿಸಿಕೊಂಡು ಮಾರಕ ಕಾಯಿಲೆಗಳನ್ನು ಗುಣಪಡಿಸುತ್ತಿದ್ದರು. ಇಂದಿಗೂ ಅರಣ್ಯಗಳೇ ಆಯುರ್ವೇದ ವೈದ್ಯರ ಕಾಯಕದ ಕಾಮಧೇನು. ಅರಣ್ಯದಲ್ಲಿ ನೈಸರ್ಗಿಕವಾಗಿ ಬೆಳೆದಿರುವ ನೂರಾರು ಔಷಧೀಯ ಸಸ್ಯಗಳು ಇಂದಿಗೂ ಮನುಷ್ಯನ ರೋಗ ರುಜಿನಗಳನ್ನು ಕಳೆಯುವದರಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಅಂಥ ಸಂಜೀವಿನಿಗಳನ್ನು ಹೊಂದಿದ ಅರಣ್ಯ ರಕ್ಷಣೆಯ ಭಾರ ನಮ್ಮ ಮೇಲಿದೆ. ಹಲವಾರು ಅಪರೂಪದ ಔಷಧಿ ಗಿಡಮೂಲಿಕೆಗಳು ಇದೀಗ ನಾಶವಾಗಿವೆ. ಇನ್ನೂ ಹಲವು ವಿನಾಶದ ಅಂಚಿನಲ್ಲಿವೆ. ಅವನ್ನುಳಿಸುವುದೇ ಇಂದಿನ ಅಗತ್ಯಗಳಲ್ಲೊಂದಾಗಿದೆ.

ಮರಮುಟ್ಟುಗಳು, ಉರುವಲು ಸೌದೆ, ಅಲಂಕಾರಿಕ ಕೆತ್ತನೆ ಮರ, ಉದ್ದಿಮೆಗಳ ಮೂಲ ವಸ್ತುಗಳು, ಹಲವಾರು ರಾಸಾಯನಿಕ ಸುಗಂಧಿತ ದ್ರವ್ಯಗಳು ಮತ್ತು ಔಷಧಿಗಳಿಗೆ ಈ ಅರಣ್ಯ ತವರುಮನೆ ಎಂಬುದಕ್ಕೆ ಬೇರೆ ಉದಾಹರಣೆಗಳು ಬೇಕಿಲ್ಲ. ಅರಣ್ಯ ಉತ್ಪಾದನೆಗಳಿಂದ ಮಾನವ ತನ್ನ ಜೀವನವನ್ನು ಸುಖಮಯಗೊಳಿಸು ತ್ತಿದ್ದಾನೆ. ಇವಿಷ್ಟೇ ಸಾಲದೆಂಬಂತೆ ಅರಣ್ಯಗಳು ತಮ್ಮ ಉಪಕಾರ ಭಾವವನ್ನು ಇನ್ನೂ ಮುಂದುವರೆಸಿಕೊಂಡು ಹೋಗಿರುವುದು ಕಂಡುಬರುತ್ತದೆ. ತನಗೆ ಉಪಯೋಗ ವಾಗದಿದ್ದರೂ ಸರಿ, ಬೇರೆಯವರಿಗೆ ಉಪಕಾರವಾದರೆ ಸಾಕೆಂಬ ತೃಪ್ತ ಮನೋಭಾವ ಅರಣ್ಯದಿಂದ ಇನ್ನೂ ಅನೇಕ ಉಪಕೃತ ಕಾರ್ಯಗಳು ನಡೆಯುತ್ತವೆ. ಅವುಗಳಲ್ಲಿ ಮುಖ್ಯವಾಗಿ ಭೂ ಸವಕಳಿಯ ತಡೆತ, ಪರಿಸರದ ಸಂರಕ್ಷಣೆ ಮತ್ತು ಸಮತೋಲನ, ನದಿಗಳಲ್ಲಿಯ ಹೂಳು ತುಂಬುವಿಕೆಯ ತಡೆತ, ಮಹಾಪೂರಗಳ ನಿಯಂತ್ರಣ, ವನ್ಯ ಪ್ರಾಣಿ ಪಕ್ಷಿಗಳಿಗೆ ಆವಾಸ, ಮನೋಹ್ಲಾದಕ ವನರಾಜಿಯಿಂದ ಮನಃಸಂತೋಷ ಮುಂತಾದವು.

ಅರಣ್ಯ ಮತ್ತು ಭೂಸವಕಳಿ

ಮಣ್ಣು ನಿಸರ್ಗದ ಮಹತ್ತರ ಕೊಡುಗೆಗಳಲ್ಲಿ ಒಂದು. ಮಣ್ಣಿಲ್ಲದೆ ಮಾನವನಿಲ್ಲ, ಜಲವಿಲ್ಲ, ಸಸ್ಯವಿಲ್ಲ, ಪ್ರಾಣಿಗಳಿಲ್ಲ. ಬದುಕಲು ಹಾಗೂ ಕೊನೆಗೆ ಸತ್ತಾಗ ಒಂದಾಗಲು ಮಣ್ಣೇ ಬೇಕು. ಈ ಭೂಮಿಯ ಸತ್ವಯುತ ಅಂಶಗಳಲ್ಲಿ ಮಣ್ಣು ಒಂದು ಮಹೋಪಕಾರಿ ಅಮೃತ. ಮಣ್ಣಿಲ್ಲದ ಒಂದು ಸ್ಥಿತಿಯನ್ನು ಕಲ್ಪಿಸುವದೇ ಒಂದು ಭಯಂಕರ ಯೋಚನೆ. ಮಣ್ಣಿಲ್ಲದಿದ್ದರೆ ಸಸ್ಯ, ಬೆಳೆ, ಅರಣ್ಯಗಳ ಅಸ್ತಿತ್ವವೇ ಇಲ್ಲ. ಇವೆಲ್ಲ ಇಲ್ಲದಿದ್ದರೆ, ನೀರೆಲ್ಲಿ; ವಿದ್ಯುಚ್ಛಕ್ತಿ, ಸಮತೋಲನದ ಪರಿಸರ ಎಲ್ಲಿ; ಮಾನವನ ಬದುಕೆಲ್ಲಿ! ಮಣ್ಣು ಮನುಷ್ಯನ ಜೀವನದ ಮೂಲಶಕ್ತಿ. ಇಂಥ ಮಣ್ಣಿನ ಅಸ್ತಿತ್ವ ಈ ಭೂಮಿಯ ಮೇಲೆ ಕೋಟ್ಯಾಂತರ ವರ್ಷಗಳಿಂದಲೂ ಇದೆ. ಅದರ ಫಲವತ್ತತೆಗೆ ಕೋಟಿ ಕೋಟಿ ವರ್ಷಗಳವರೆಗೆ ಭೂ ಪದರಗಳಲ್ಲಿ ನಡೆದಿರುವ ನಿರಂತರ ಬದಲಾವಣೆಯೇ ಕಾರಣ. ಮಾನವ ಹುಟ್ಟುವ 300 ದಶಲಕ್ಷ ವರ್ಷಗಳ ಹಿಂದೆಯೇ ಹುಟ್ಟಿ, ಬೆಳೆದು, ಹರಡಿ ಕೊನೆಗೆ ಸಾರಯುಕ್ತ ಮಣ್ಣಿನೊಂದಿಗೆ ಬೆರೆತು, ಕೊಳೆತು ಮಣ್ಣಿನ ಸಾರವನ್ನು ಹೆಚ್ಚಿಸುವ ಕಾರ್ಯ ಮಾಡುತ್ತಿವೆ ಸಸ್ಯಗಳು. ಅವುಗಳೊಂದಿಗೆ ಜೀವರಾಶಿಗಳ ಅನೇಕ ಜೈವಿಕ ವಸ್ತುಗಳೂ, ಗಾಳಿ, ಬೆಳಕು, ಶಾಖ, ನೀರು ಎಲ್ಲವೂ ಸೇರಿ ಒಂದು ಅತ್ಯಂತ ಜಟಿಲವಾದ ರಾಸಾಯನಿಕ ಜೈವಿಕ ಕ್ರಿಯೆಯನ್ನು ನಡೆಸುತ್ತ ಕಲ್ಲಿನ ಪುಡಿ, ಮರಳು ಮತ್ತಿತರ ಭೌತಿಕ ರೂಪಕ್ಕೆ ಇಂದಿನ ಮಣ್ಣಿನ ರೂಪ ಕೊಡುತ್ತ ಬಂದಿರುವುದು ನಿಸರ್ಗದ ಒಂದು ರಹಸ್ಯಮಯ ಆಟ. ಆದರೆ ಅದೆಷ್ಟು ಉಪಕಾರಕವಾದ ಕ್ರಿಯೆ!

ಈ ಅಮೃತಮಯ ಮಣ್ಣಿನ ಮೇಲ್ಪದರ ಯಾವಾಗಲೂ ಫಲವತ್ತಾದ

ಪ್ರದೇಶ. ಈ ಫಲವತ್ತತೆಗೆ ಸಸ್ಯವರ್ಗ ಪ್ರಾಣಿವರ್ಗಗಳೇ ಕಾರಣ. ಅಂತೆಯೇ ಕಾಮಧೇನುವಾದ ಇಂಥ ಮಣ್ಣು ಜೀವರಕ್ತ ಹೊಂದಿದ ಒಂದು ದ್ರವ್ಯ ಎಂದರೆ ತಪ್ಪಿಲ್ಲ. ಇಂಥ ಚೇತನದ ಮೂಲವಾದ ಮಣ್ಣನ್ನು ಕಾಪಾಡದಿದ್ದರೆ ಮಾನವಕುಲ ನಾಶವಾಗುವುದರಲ್ಲಿ ಸಂದೇಹವಿಲ್ಲ. ಮಣ್ಣಿನ ನಾಶಕ್ಕೆ ರಭಸವಾದ ಮಳೆ, ತೀವ್ರ ವೇಗದ ಬಿರುಗಾಳಿ ಮುಖ್ಯ ಕಾರಣಗಳು. ರಭಸವಾಗಿ ಬೀಳುವ ಮಳೆಯಿಂದಾಗಿ ಭೂಮಿಯ ಮೇಲ್ಪದರದಲ್ಲಿಯ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗುತ್ತದೆ. ಬಿರುಗಾಳಿಯಿಂದಲೂ ಮಣ್ಣಿನ ಸೂಕ್ಷ್ಮ ಕಣಗಳು ಹಾರಿ ಹೋಗಿ ಅಲ್ಲಿ ಅನುಪಯುಕ್ತ ಭೂಪದರ ಉಳಿಯುತ್ತದೆ. ಆ ಬರಡು ಭೂಮಿಯಲ್ಲಿ ಬೆಳೆ ಬೆಳೆಯಲಾರದು.

ಮಳೆ, ಗಾಳಿ, ಬಿಸಿಲು ಮುಂತಾದವುಗಳಿಂದಾಗಿ ನಡೆಯುವ ಮಣ್ಣಿನ ಈ ನಾಶಕ್ಕೆ 'ಭೂಮಿಯ ಸವಕಳಿ' ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ಮೇಲ್ಪದರದ ತಿಳಿಮಣ್ಣು ಮಳೆಯ ರಭಸದಿಂದಾಗಿ ತಿಳಿಯಾಗಿ ಹರಡಿಕೊಂಡು, ಇಳಿಜಾರಿನ ಕಡೆಗೆ ಕೊಚ್ಚಿಕೊಂಡು ಹೋಗುವ ಭೂ ಸವೆತಕ್ಕೆ ' ಹಾಳೆ ಸವೆತ ' (Sheet Erosion) ಎನ್ನುವರು. ಇನ್ನು ಹೆಚ್ಚಿದ ರಭಸದಿಂದ ಹೆಚ್ಚು ಇಳಿಜಾರು ಪ್ರದೇಶದಲ್ಲಿ ಭೂಮಿಯೇ ಕೊರೆಯಲ್ಪಟ್ಟು ಕೊರಕಲು (Rill Erosion) ಉಂಟಾಗುತ್ತವೆ. ಈ ಕೊರಕಲುಗಳು ದೊಡ್ಡವಾಗುತ್ತ ಇನ್ನೂ ಆಳವಾದ (3–4 ಮೀಟರು) ಕಮರಿ (Gully) ಗಳುಂಟಾಗುತ್ತವೆ. ನೀರಿನ ರಭಸ, ಗಾಳಿ, ಮಳೆಗಳ ನಿರಂತರ ಹೊಡೆತದಿಂದಾಗಿ ಈ ಕಮರಿಗಳು ಮುಂದೆ ಕೊಳ್ಳ ಕಂದರ (Revine) ಗಳಾಗಿ ಪರಿವರ್ತಿತವಾಗುತ್ತವೆ. ಇದರಿಂದಾಗಿ ಆ ಪ್ರದೇಶ ನಿರುಪಯುಕ್ತವಾಗಿ ಪರಿಣಮಿಸುತ್ತದೆ. ಈ ಸ್ಥಿತಿಯಿಂದ ಭೂಮಿಯನ್ನು ಮೊದಲ ಸ್ಥಿತಿಗೆ ತರುವುದು ದುಃಸಾಧ್ಯವೇ.

ಇಂಥ ನಿರಂತರ ಭಯಂಕರ ಭೂ ಸವೆತದಿಂದಾಗಿಯೇ ಫಲವತ್ತಾದ ಭೂಮಿ ನಾಶವಾಗಿ ತೀವ್ರ ಗಾಳಿಯಿಂದ ಮರಳು ಕಣಗಳು ಹಾರಿ ಹಾರಿ ಸಹಾರಾದಂತ ಮರುಭೂಮಿಗಳುಂಟಾಗಿರುವದು. ಇಂಥ ಅನೇಕ ಮರುಭೂಮಿಗಳು ಕೊರಕಲು–ಕೊಳ್ಳಗಳನ್ನು ಹೊಂದಿ ಬೆಂಗಾಡಾಗಿ, ಬರಡಾಗಿ ಹರಡಿಕೊಂಡಿರುವ ಭೂ ಪ್ರದೇಶಗಳನ್ನು ನಾವು ಈಗಲೂ ಕಣ್ಣಾರೆ ಕಾಣುತ್ತೇವೆ. ಅರಣ್ಯ ನಾಶದಿಂದಾಗಿ ' ಚಂಬಲ್ 'ನಂತಹ ಕೊಳ್ಳಗಳು ಉಂಟಾಗಿರುವುದು ಅದೇ ರೀತಿ. ಅರಣ್ಯ ನಾಶದಿಂದ ಹೇಗೆ ಫಲವತ್ತಾದ ಭೂಮಿ ಬೆಂಗಾಡಾಗಿ ಪರಿವರ್ತಿತವಾಯಿತು, ಹೇಗೆ ನಿರಂತರವಾಗಿ ಹರಿಯುತ್ತಿದ್ದ ನದಿ ಬತ್ತಿ ಹೋಯಿತು ಎಂಬುದಕ್ಕೆ ಇತ್ತೀಚಿನ ಒಂದು ವೈಜ್ಞಾನಿಕ ವರದಿಯನ್ನು ಇಲ್ಲಿ ಉದಾಹರಣೆಯಾಗಿ ನೀಡಬಹುದು. ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯಲ್ಲಿ ಹರಿಯುವ ವರಾಲಾ ನಿರಂತರವಾಗಿ ಹರಿಯುವ ನದಿ. ನೂರಾರು ವರ್ಷಗಳಿಂದ ಈ ನದಿ ನೀರು ಬತ್ತದೆ ಸುತ್ತಲಿನ ಪ್ರದೇಶಕ್ಕೆ ಕೃಷಿಯೋಗ್ಯ ನೀರನ್ನು ಪೂರೈಸುತ್ತಿದ್ದ ದಾಖಲೆಗಳಿವೆ. ಅಂದು ರೈತರು ಅಲ್ಲಿ ತಮ್ಮದೇ ಆದ ಸಾಂಪ್ರದಾಯಿಕ ಪದ್ಧತಿಗಳಿಂದ ಕಬ್ಬು ಬೆಳೆಯುತ್ತಿದ್ದರು. ಆದರೆ 1970ರ ಹಸಿರು ಕ್ರಾಂತಿಯ ತಂತ್ರಜ್ಞಾನದ ಆಸ್ಫೋಟನೆಯಿಂದಾಗಿ

ಆ ಪ್ರದೇಶದ ಸಾವಿರಾರು ಎಕರೆ ಪ್ರದೇಶಗಳಲ್ಲಿ ಕಬ್ಬನ್ನು ಬೆಳೆಯಲಿಕ್ಕಾರಂಭಿಸಲಾಯಿತು. ಕಬ್ಬಿನ ಬೆಳೆ ಸಮೃದ್ಧವಾಗಿ ಬಂತು. ಕಬ್ಬು ಅರೆಯುವ ಕಾರ್ಖಾನೆಗಳಿಗೆ ನೀಗಲಾರದಷ್ಟು ಕಬ್ಬು ಬೆಳೆದು ಮಾಲೀಕರು ಇನ್ನು ಕಬ್ಬು ಸಾಕು ಎಂದು ಹೇಳಬೇಕಾಯಿತು. (ಇದರಿಂದ ರೈತರು ಸತ್ಯಾಗ್ರಹ ಕೂಡ ಹೂಡಬೇಕಾಯಿತು). ಆದರೆ 10-15 ವರ್ಷಗಳ ಹಿಂದೆ ಅಷ್ಟೊಂದು ಸಮೃದ್ಧ ಕಬ್ಬು ಬೆಳೆದ ರೈತರು ಇಂದು ಕೇವಲ ಹೈಬ್ರಿಡ್ ಜೋಳವನ್ನು ಬೆಳೆಸುವುದಕ್ಕೆ ಸಾಧ್ಯವಾಗದೆ ಪರಿತಪಿಸುತ್ತಿದ್ದಾರೆ. ವರಾಲಾ, ನಿರಂತರವಾಗಿ ಹರಿಯುವ ಆ ನದಿ ಇಂದು ವರ್ಷದಲ್ಲಿ ನಾಲ್ಕಾರು ತಿಂಗಳು ಹರಿದರೆ ಹೆಚ್ಚು. ವರಾಲಾ ನದಿಕೊಳ್ಳ ಇಂದು ಬರಡಾಗಿದೆ, ಇದಕ್ಕೆ ಕಾರಣವೇನು? ಅರಣ್ಯ ನಾಶ. ಅರಣ್ಯ ನಾಶದಿಂದ ಭೂಮಿಯಲ್ಲಿ ಇಂಗದ ನೀರು ಹರಿದು ಹೋಗಿ, ನೀರಿನ ಒರತೆಗಳ ಖೋತಾ ಉಂಟಾಯಿತು. ಅಲ್ಲದೆ ಗುಡ್ಡ ಚಪ್ಪರದಲ್ಲಿ ಉಂಟಾಗುವ ಸದಿ ಗಿಡ-ಮರಗಳ ತಡೆಯಿಲ್ಲದೆ ಮಣ್ಣನ್ನು ಕೊಚ್ಚಿಕೊಂಡು ಹೋಗಿ ವರಾಲಾ ನದಿ ಪಾತ್ರದಲ್ಲಿ ಹೂಳು ತುಂಬಲಾರಂಭಿಸಿತು. 1960ರಲ್ಲಿ ನಳನಳಿಸುವ ಕಾಡು ಬೆಟ್ಟವಾಗಿದ್ದ ಆ ಮಾಸೋಬನ ಗುಡ್ಡ ಇಂದು ಬೋಳುಗುಡ್ಡ. ವರಾಲಾ ನದಿಯಲ್ಲಿ ನೀರಿಲ್ಲ, ಬೆಳೆಗಳಿಗೆ ನೀರಿಲ್ಲ, ಕುಡಿಯಲು ನೀರಿಲ್ಲ, ಮನುಷ್ಯರಿಗಿಲ್ಲ, ದನಕರುಗಳಿಗಿಲ್ಲ.

ಈ ಭೂ ಸವೆತ ಇದೇ ರೀತಿ ಮುಂದುವರೆದರೆ ಫಲವತ್ತಾದ ಮಣ್ಣೇ ನಾಶವಾದೀತು, ಮಾನವ ಕುಲ ಆಗ ಆಹಾರವಿಲ್ಲದೆ ನಶಿಸಬೇಕಾದೀತು. ಭಾರತದಲ್ಲಂತೂ ಈ ಕರಾಳ ಸ್ಥಿತಿ ಭಯಂಕರವಾಗಿದೆ. ನಮ್ಮ ದೇಶದಲ್ಲಿ ಪ್ರತಿ ವರ್ಷವೂ ಸುಮಾರು 600 ಕೋಟಿ ಟನ್ನುಗಳಿಗಿಂತ ಹೆಚ್ಚು ಫಲವತ್ತಾದ ಮಣ್ಣು ಕೊಚ್ಚಿಕೊಂಡು ಸಮುದ್ರ ಸೇರಿ ಹೋಗುವುದೆಂದು ಅಂದಾಜು ಮಾಡಲಾಗಿದೆ. ಅದೇ ರೀತಿ ಇಂಥ ಮಣ್ಣು ಹೊಳೆ-ಹಳ್ಳಗಳು, ಕೆರೆ–ಜಲಾಶಯಗಳಲ್ಲಿ ಸೇರಿ ವ್ಯರ್ಥವಾಗುವುದಲ್ಲದೆ ನೀರಿನ ಬರವನ್ನುಂಟುಮಾಡುತ್ತದೆ. ಈ ಮಣ್ಣಿನ ಜೊತೆಗೆ ಸುಮಾರು 25 ಲಕ್ಷ ಟನ್ನು ಸಾರಜನಕ, 35 ಲಕ್ಷ ಟನ್ನಿನಷ್ಟು ರಂಜಕ ಮತ್ತು 25 ಟನ್ನಿನಷ್ಟು ಪೊಟ್ಯಾಶ್‌ಗಳು ನಾಶವಾಗುತ್ತದೆಂದು ಅಂದಾಜು ಮಾಡಲಾಗಿದೆ.

ಈ ಎಲ್ಲ ಅನಾಹುತಗಳು ಆಗದಿರಲು, ಆಗುವ ಅನಾಹುತಗಳನ್ನು ತಡೆಗಟ್ಟಲು ಇರುವ ಒಂದೇ ಉಪಾಯವೆಂದರೆ ಗಿಡಮರಗಳನ್ನು ಬೆಳೆಸಿ ಅರಣ್ಯಗಳನ್ನು ಪೋಷಿಸುವುದು. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಭೂಸವೆತ ಹೆಚ್ಚಾಗಿ ನಡೆಯುವುದು ರಭಸದ ಮಳೆಯಿಂದಾಗಿ ನೇರವಾಗಿ ಮಳೆಯು ಭೂಮಿಯ ಮೇಲೆ ಬೀಳುವುದರಿಂದ ಭೂಸವೆತಕ್ಕೆ ಹೆಚ್ಚು ಅವಕಾಶವಾಗುವುದು. ದಟ್ಟವಾದ ಅರಣ್ಯದ ಗಿಡಮರಗಳು ಮಳೆಯ ಈ ರಭಸವನ್ನು ಎಲೆ, ಕಾಂಡಗಳಿಂದ ತಡೆದು ನೀರು ಬಸಿದು, ನಿಧಾನವಾಗಿ ಕೆಳಗಿಳಿಯುವಂತೆ ಮಾಡುವುವು. ಇದರಿಂದ ಮಣ್ಣಿಗೆ ಧಕ್ಕೆಯಾಗದೆ ನೀರು ನೆಲದಲ್ಲಿ ಇಂಗುತ್ತದೆ. ಅಧಿಕವಾದ ನೀರು ನಿಧಾನವಾಗಿ ಹರಿದು ಹೋಗುತ್ತದೆ. ಎತ್ತರ ಪ್ರದೇಶದಲ್ಲಿ ಹಿಂಗಿದ ನೀರು ಒರತೆಯಾಗಿ ಕೆಳಪ್ರದೇಶಗಳಲ್ಲಿಯ ಕೆರೆ, ಹೊಳೆ, ಹಳ್ಳ

ಗಳಲ್ಲಿ ಸೆರೆಯಾಗಿ ಹೊರಸೂಸುವುದು. ಇದರಿಂದಾಗಿ ಅವುಗಳಲ್ಲಿ ಸತತವಾಗಿ ನೀರು ಇರುವಂತಾಗುವುದು. ಅಂತರ್ಜಲದ ಸೆಲೆಗಳಿಗಾಗಿ ಇದೇ ಒರತೆ ನೀರಿನ ಪೂರೈಕೆ ಮಾಡುವುದು. ಒಂದು ವೇಳೆ ಎತ್ತರ ಪ್ರದೇಶದಲ್ಲಿಯ ನೀರು ಇಂಗದೆ ಇರುವ ಮಣ್ಣನ್ನು ಕೊಚ್ಚಿಕೊಂಡು ಸಮುದ್ರ ಸೇರಿಬಿಟ್ಟರೆ ಮುಂದೆ ನೀರಿನ ಒರತೆ ಇಲ್ಲದೆ ಕೆರೆ, ಕೊಳ್ಳ, ಹೊಳೆ, ಹಳ್ಳಗಳು ಬತ್ತಿಹೋದರೆ ಆಶ್ಚರ್ಯವಿಲ್ಲ. ಆದ್ದರಿಂದ ಅರಣ್ಯಗಳನ್ನು ಪೋಶಿಸುತ್ತ, ವರ್ಧಿಸುತ್ತ ಹೋಗುವದರಿಂದ ಫಲವತ್ತಾದ ಮಣ್ಣಿನ ರಕ್ಷಣೆಯೂ ಆಗುವುದಲ್ಲದೆ ನೀರಿನ ಸಂವರ್ಧನೆಯೂ ಆಗುವುದು.

ಮೇಲಿನ ಉಪಾಯವಲ್ಲದೆ ಇನ್ನೂ ಕೆಲವು ಕ್ರಮಗಳನ್ನು ಮಣ್ಣಿನ ರಕ್ಷಣೆ ಗೋಸ್ಕರ ಯೋಜಿಸಲಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಕಾಂಟೂರ್ ಟ್ರೆಂಚಿಂಗ್ (Contour trenching), ಬಂಡಿಂಗ್ (bunding), ಟೆರೇಸಿಂಗ್ (terracing)· ಗಲ್ಲೀ ಪ್ಲಗ್ಗಿಂಗ್ (gully plugging), ಚೆಕ್‌ಡ್ಯಾಮಿಂಗ್ (check damning), ಸ್ಟ್ರೀಮ್ ಟ್ರೈನಿಂಗ್ (stream training), ಲೆಜಿಸ್ಲೇಷನ್ ಮತ್ತು ಟ್ರೈನಿಂಗ್ (legislation and training) ಮುಂತಾದವು. ಸ್ಥಳೀಯ ಸ್ಥಿತಿಗತಿಗಳಿಗನುಸಾರ ವಾಗಿ ಮತ್ತು ಅವಶ್ಯಕತೆಗನುಸಾರವಾಗಿ ಈ ವಿವಿಧ ಕ್ರಮಗಳನ್ನು ಕೈಗೊಳ್ಳ ಬೇಕಾಗುವುದು.

ಎತ್ತರ ಪ್ರದೇಶಗಳಲ್ಲಿ ದಪ್ಪ ಮರಗಳುಳ್ಳ ಅರಣ್ಯಗಳಿದ್ದರೆ ಅವು ಭೂಮಿ ಯಲ್ಲಿ ನೀರನ್ನು ಹಿಂಗಿಸಿ ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಹಾಯವಾಗುವುದು. ಇಲ್ಲದಿದ್ದರೆ ಕೆಳಪ್ರದೇಶದಲ್ಲಿ ಹರಿಯುವ ನದಿಗಳಲ್ಲಿ ಮಹಾಪೂರ ಬರುವುದು ಸ್ವಾಭಾವಿಕವಾಗಿದೆ. ಆದ್ದರಿಂದ ಮಹಾಪೂರಗಳ ತಡೆಗೂ ಈ ಅರಣ್ಯಗಳು ಸಹಕಾರಿ ಯಾಗಬಲ್ಲವು.

ಅರಣ್ಯ ಮತ್ತು ಪರಿಸರ

ಪ್ರಪಂಚದ ಪರಿಸರ ವ್ಯವಸ್ಥೆ ಒಂದು ಅತ್ಯಂತ ವಿಶಿಷ್ಟವಾದ, ಪ್ರಮುಖವಾದ ನೈಸರ್ಗಿಕ ಸಮತೋಲನದ ವ್ಯವಸ್ಥೆ. ಸಸ್ಯಜೀವನ ಮತ್ತು ಪ್ರಾಣಿಜೀವನಗಳೆರಡೂ ಬೇರೆ ಬೇರೆಯಾಗಿ ನಡೆದುಕೊಂಡು ಹೋಗುತ್ತಿದ್ದರೂ ಅವೆರಡರ ನಡುವೆ ಗಾಢವಾದ ಸಂಬಂಧವಿದೆ. ಅವೆರಡನ್ನೂ ಬೇರೆ ಬೇರೆಯಾಗಿ ಪರಿಗಣಿಸುವಹಾಗಿಲ್ಲ. ಒಬ್ಬರ ಮೇಲೊಬ್ಬರ ಅವಲಂಬನೆಯೇ ಪರಿಸರ ವ್ಯವಸ್ಥೆಯ ಗುಟ್ಟು. ಇದೀಗ ಈ ಪರಿಸರ ವ್ಯವಸ್ಥೆಯ ಭಯಂಕರ ಒತ್ತಡ ಉಂಟಾಗಿರುವ ಚಿಹ್ನೆಗಳು ಕಂಡುಬರುತ್ತವೆ. ಮನುಷ್ಯ ತನ್ನ ಅಭಿವೃದ್ಧಿಯ ಹೆಸರಿನಲ್ಲಿ, ಸುಖದ ಗುಂಗಿನಲ್ಲಿ ಸಸ್ಯಜೀವನದ ಮೂಲವನ್ನೇ ಅಳಿದುಹಾಕಲು ಮುಂದಾಗಿದ್ದಾನೆ. ಔದ್ಯೋಗೀಕರಣ ಆಹಾರ, ವಸತಿ ಮತ್ತು ಅನೇಕ ಕಾರಣಗಳಿಗಾಗಿ ಈ ಪರಿಸರದ ಸಮತೋಲನವನ್ನೇ ಹಾಳು ಮಾಡುವ ದಿಕ್ಕಿನಲ್ಲಿ ರಾಕ್ಷಸ ಹೆಜ್ಜೆಗಳನ್ನು ಇಡುತ್ತಿದ್ದಾನೆ. ನಿಧಾನವಾಗಿ ಕರಗು

ತ್ತಿರುವ ಅರಣ್ಯಗಳಿಂದಾಗಿ, ವನ್ಯ ಪ್ರಾಣಿಗಳ ಅಳಿಯುವಿಕೆಯಿಂದಾಗಿ ನೀರಾವರಿ, ವಿದ್ಯುತ್ ಉತ್ಪಾದನೆಗಳಿಗಾಗಿ ನದೀನೀರಿನ ಅಸಮರ್ಪಕ ಬಳಕೆಯಿಂದಾಗಿ, ಔದ್ಯೋಗೀಕರಣದಿಂದಾಗಿ, ತೀವ್ರ ವೇಗದಲ್ಲಿ ಹೆಚ್ಚಾಗುತ್ತಿರುವ ಸಂಚಾರ ವ್ಯವಸ್ಥೆಯಿಂದಾಗಿ (ಇವೆಲ್ಲ ಅಭಿವೃದ್ಧಿಯ ಸಂಕೇತಗಳಾದರೂ) ಪರಿಸರದಲ್ಲಿ ಅನೇಕ ದುಷ್ಪರಿಣಾಮಗಳು ಕಂಡುಬರುತ್ತಿವೆ. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ ಮುಂತಾದವುಗಳು ದಿನೇದಿನೇ ಹೆಚ್ಚುತ್ತಿವೆ.

ನಾವು ಉಸಿರಾಡುತ್ತಿರುವ ಗಾಳಿ ಇದೀಗ ಅನೇಕ ವಿಷಯುಕ್ತ ಘಟಕಗಳಿಂದ ತುಂಬಿಕೊಂಡಿದೆ. ಒಂದೆಡೆ ಅಭಿವೃದ್ಧಿಯ ಹೆಸರಿನಲ್ಲಿ ಹೆಚ್ಚುತ್ತಿರುವ ಕಾರ್ಖಾನೆಗಳ ಹೊಗೆಯೂ ಹಾಗೂ ಮೋಟಾರು ವಾಹನಗಳ ಹೊಗೆಯೂ ಗಾಳಿಯನ್ನು ದೂಷಿಸುತ್ತ ನಡೆದಿದ್ದರೆ, ಇನ್ನೊಂದೆಡೆ ಅರಣ್ಯಗಳ ನಾಶ. ಇದರಿಂದಾಗಿ ದಿನೇದಿನೇ ವಾಯುಮಾಲಿನ್ಯ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ವಾಯು ಪರಿಸರದ ಶುದ್ಧಿಗೆ ಅರಣ್ಯಗಳ ಅವಶ್ಯಕತೆ ಹೇಳಲಾರದಷ್ಟಿದೆ. ವಾಯುವನ್ನು ನಮಗಾಗಿ ಶುದ್ಧಿಗೊಳಿಸಿ ನಮ್ಮ ಜೀವನವನ್ನು ಆರೋಗ್ಯಕರವನ್ನಾಗಿ ಮಾಡಿ ಪರಿಸರ ಸಮತೋಲನವನ್ನುಂಟುಮಾಡುವ ಸಸ್ಯಗಳ ನಾಶ ನಮ್ಮ ನಾಶಕ್ಕೇ ನಾಂದಿಯಲ್ಲದೆ ಮತ್ತೇನು ?

ಇದೀಗ ನಾವು ಕುಡಿಯುತ್ತಿರುವ ನೀರು ದೂಷಿತವಾಗಿರುವುದಕ್ಕೆ ಅರಣ್ಯ ವಿನಾಶವೂ ಒಂದು ಅಪ್ರತ್ಯಕ್ಷ ಕಾರಣ. ಅನೇಕ ವಿಜ್ಞಾನಿಗಳು ನಡೆಸಿದ ಪ್ರಯೋಗಗಳಿಂದ ಅರಣ್ಯನಾಶದ ದುಷ್ಪರಿಣಾಮಗಳು ಹೇಗೆ ಅರಣ್ಯದಿಂದ ಹರಿಯುವ ಝರಿ ನೀರಿನ ಮೇಲೆ ಉಂಟಾಗುತ್ತಿದೆ ಎಂಬುದು ಸಿದ್ಧವಾಗಿದೆ. ಎತ್ತರದ ಸ್ಥಳದಲ್ಲಿರುವ ಅರಣ್ಯವು ನಾಶವಾದರೆ ಮಳೆನೀರಿನಿಂದಾಗಿ ಅಲ್ಲಿ ಹುಟ್ಟಿಕೊಂಡ ನೀರಿನ ಒರತೆಯ ಗುಣಮಟ್ಟದಲ್ಲಿ ವ್ಯತ್ಯಾಸವಾಗುವುದನ್ನು ಕಂಡು ಹಿಡಿಯಲಾಗಿದೆ. ಸಸ್ಯರಾಶಿಯ ನಾಶದಿಂದ ಆ ಪ್ರದೇಶದಲ್ಲಿ ಉಂಟಾಗುವ ಒಟ್ಟು ಭಾಷ್ಪ ವಿಸರ್ಜನೆ ಕಡಿಮೆಯಾಗಿ ರಾಸಾಯನಿಕ ದ್ರವ್ಯಗಳು ಹೆಚ್ಚು ಹೆಚ್ಚಾಗಿ ನೀರಿಗೆ ನೀರು ಸೇರಿ ಅಂಥ ನೀರು ನದಿಗಳನ್ನು ಕೂಡುತ್ತದೆ. ಈ ರಾಸಾಯನಿಕ ಸಾರಭಾಗವನ್ನು ಹೀರುವ ಬೇರುಗಳೇ ಇಲ್ಲವಾದಾಗ ನೀರಿನ ಒರತೆಗೆ ತಡೆಇಲ್ಲದಂತಾಗಿ ಅಂಥ ರಾಸಾಯನಿಕ ದ್ರವ್ಯಗಳು ನೀರಿಗೆ ಸೇರಿ ಕೆಳಗಿನ ನದಿಗಳಿಗೆ ಕೂಡುತ್ತವೆ. ಕಾಡನ್ನು ನಾಶಮಾಡುವುದರಿಂದ ಸೂರ್ಯನ ಕಿರಣಗಳು ನೇರವಾಗಿ ಭೂಮಿಯ ಮೇಲೆ ಬಿದ್ದು ಕೊಳೆಯುವ ಕ್ರಿಯೆ (litter decomposition), ಲವಣಾಂಶಗಳ ವಿಸರ್ಜನಾ ಕ್ರಿಯೆ (mineralisation), ಸಾರಜನಕೀಕರಣ (nitrification)ಗಳು ತೀವ್ರಗತಿಯಲ್ಲಿ ನಡೆದು ಆ ಸಾರವೆಲ್ಲ ನೀರಿನಲ್ಲಿ ಸೇರಿ ಇಳಿಜಾರಿನಲ್ಲಿ ಹರಿದುಹೋಗುತ್ತದೆ.

ಈ ಕಾರಣಗಳಿಂದಾಗಿ ನಾವು ಕುಡಿಯುವ ನೀರಿನಲ್ಲಿ ಅನವಶ್ಯಕವಾದ ಲವಣಾಂಶಗಳು, ಸಾರಜನಕ ಸಂಯುಕ್ತಗಳು, ಫಾಸ್ಫೇಟಗಳು ಹೆಚ್ಚಾಗಿ ಅನೇಕ

ದುಷ್ಪರಿಣಾಮಗಳನ್ನುಂಟು ಮಾಡಬಹುದಾಗಿದೆ. ಅದೇ ರೀತಿ ನೀರಿನಲ್ಲಿ ವಾಸಿಸುವ ಜಲಚರ ಪ್ರಾಣಿಗಳ ವಿನಾಶಕ್ಕೂ ಕಾರಣವಾಗಬಹುದು. ಭೂಸವಕಳಿಯಿಂದಾಗಿ ನದಿಗಳಲ್ಲಿ ಹೂಳು ತುಂಬುವುದರಿಂದ ಅಂಥ ನೀರು ಕಲಕಾಗಿ ಸೂರ್ಯಕಿರಣ ಪ್ರವೇಶ ಕಷ್ಟವಾಗುವುದರಿಂದ ನಡೆಯಬೇಕಾದ ರಾಸಾಯನಿಕ, ಜೈವಿಕ ಕ್ರಿಯೆಗಳಿಗೆ ತಡೆಯುಂಟಾಗುವುದು. ಇದರಿಂದ ಆಹಾರೋತ್ಪಾದನೆಯ ಮೇಲೆ ಪರಿಣಾಮ ಉಂಟಾಗಿ ಅಲ್ಲಿಯ ಕ್ರಿಮಿಕೀಟಗಳ ನಾಶ, ಹಾಗೂ ಅವುಗಳನ್ನವಲಂಬಿಸಿದ ಮೀನು ಮುಂತಾದ ಜೀವಿಗಳ ನಾಶಕ್ಕೂ ಕಾರಣವಾಗುತ್ತದೆ. ಅರಣ್ಯಭಾಗಗಳಲ್ಲಿ ಹರಿಯುವ ನೀರಿನ ಉಷ್ಣಾಂಶ ಸಾಮಾನ್ಯವಾಗಿ 19°C ಇರುತ್ತದೆ ಎಂದು ಅಂದಾಜು. ಆದರೆ ಅರಣ್ಯಗಳ ನಾಶದಿಂದ ಈ ಉಷ್ಣಾಂಶ ಗಣನೀಯವಾಗಿ (23°C—28°C) ಹೆಚ್ಚಾಗುವುದರಿಂದ ಲವಣಾಂಶಗಳ ಬಿಡುಗಡೆಗೆ ಹೆಚ್ಚು ಆಸ್ಪದವಾಗುವುದಲ್ಲದೆ ನೀರಿನಲ್ಲಿಯ ಆಮ್ಲಜನಕದ ಪ್ರಮಾಣವು ಕಡಿಮೆಯಾಗುತ್ತದೆ. ಇದರಿಂದಾಗಿ ಸ್ವಾಭಾವಿಕವಾಗಿಯೇ ಜಲಚರ ಪ್ರಾಣಿಗಳ ಸಂಖ್ಯೆಯೂ ಕುಗ್ಗುವುದರಲ್ಲಿ ಸಂದೇಹವಿಲ್ಲ. ಕಾಡಿನ ನಾಶದಿಂದ ಈ ವಿಧವಾದ ಪರಿಸರ ವ್ಯತ್ಯಾಸ ಉಂಟಾಗುವುದು ಇದರಿಂದ ತೀರ ಸ್ಪಷ್ಟ. ಪರಿಸರದ ಈ ಅಸಮತೋಲನ ನಿಧಾನವಾಗಿ ಪ್ರಪಂಚದ ಜೀವಜಂತುಗಳ ಮೇಲೆ, ಸಸ್ಯವರ್ಗದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದರಲ್ಲಿ ಸಂದೇಹವಿಲ್ಲ. ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಇನ್ನು ನಾವು ಎಚ್ಚತ್ತುಕೊಳ್ಳದಿದ್ದಲ್ಲಿ ಸನ್ನಿವೇಶ ತೀವ್ರ ವಿಷಮಯವಾಗುವ ದಿನಗಳು ದೂರವಿಲ್ಲ. ಗಿಡಮರಗಳ ಬೆಳವಣಿಗೆ ಅರಣ್ಯ ವಿನಾಶಕ್ಕೆ ತಡೆ, ಅವುಗಳ ಸಂವರ್ಧನೆಯೇ ಈಗ ಮಾಡಬೇಕಾಗಿರುವ ತುರ್ತು ಕಾರ್ಯ.

ವನ್ಯಪ್ರಾಣಿಗಳು ನಿಸರ್ಗದ ಇನ್ನೊಂದು ಮಹತ್ವದ ಅಂಗ. ನಿಸರ್ಗದ ಪರಿಸರ ಸಮತೋಲನವನ್ನು ಕಾಪಾಡುವುದರಲ್ಲಿ ಅವುಗಳ ಪಾತ್ರವೂ ಇದೆ. ನಮ್ಮ ನಿಸರ್ಗ ಅನೇಕ ಕೊಂಡಿಗಳ ಜೋಡಣೆಯಿಂದಾದ ಒಂದು ಸರಪಳಿ. ಇದರ ಪ್ರತಿಯೊಂದು ಸಜೀವ, ನಿರ್ಜೀವ ವಸ್ತುಗಳು ಈ ಸರಪಳಿಯ ಕೊಂಡಿಗಳಾಗಿವೆ. ಈ ವಸ್ತುಗಳ ಪರಸ್ಪರ ಸಹಕಾರದಿಂದ ಮಾತ್ರ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬರಬಲ್ಲವು. ಒಂದು ಕೊಂಡಿ ಕಳಚಿಕೊಂಡರೆ ಸಾಕು ನಿಸರ್ಗದ ಈ ಸರಪಳಿಯಲ್ಲಿ ಕುಂದು ಬರುತ್ತದೆ, ಪರಿಸರದ ಸಂತುಲತೆ ಇಲ್ಲವಾಗುತ್ತದೆ. ಆದ್ದರಿಂದ ಪ್ರಪಂಚದ ಯಾವ ಜೀವಿಯೂ, ಕೀಟವೂ ಕ್ಷುಲ್ಲಕವಲ್ಲ, ನಿರುಪಯುಕ್ತವಲ್ಲ. ಈ ಜಗತ್ತಿನ ಕೋಟ್ಯಾನುಕೋಟಿ ಜೀವಿಗಳು ಚಿಕ್ಕದಿರಲಿ–ದೊಡ್ಡದಿರಲಿ, ತಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದರೆ ನಿಸರ್ಗದ ಬಾಳ್ವೆಗೆ ಕುತ್ತು ಬಂದಂತೆ. ಅದಕ್ಕೆ ಎಲ್ಲಕ್ಕೂ ಅವವುಗಳ ಸ್ಥಾನವಿದ್ದೇ ಇದೆ. ಒಬ್ಬ ಆಂಗ್ಲ ಕವಿ ಹೇಳಿದ್ದಾನೆ.

God in his wisdom made the fly
But forgot to tell us why.

ಸಸ್ಯವರ್ಗ, ಪ್ರಾಣಿವರ್ಗ, ಪಕ್ಷಿವರ್ಗ ಮತ್ತು ಕೀಟವರ್ಗಗಳ ಪರಸ್ಪರ ಅವಲಂಬನೆ, ಸಹಕಾರ, ಸ್ನೇಹಸಂಬಂಧ ಮಾತ್ರ ಮಾನವನ ಏಳ್ಗೆಗೆ ತಾರಕ. ಪ್ರಸಿದ್ಧ ಪಕ್ಷಿತಜ್ಞ ಡಾ|| ಸಲೀಂ ಅಲಿ ಹೇಳುತ್ತಾರೆ—

> But for the trees the insect would
> Perish ; but for the insects the birds
> Would perish : but for the birds the trees
> Would perish ; and but for the trees
> World would perish.

ಸಸ್ಯಗಳಿರುವುದರಿಂದ ಕ್ರಿಮಿಕೀಟಗಳು ಬದುಕಿವೆ. ಕ್ರಿಮಿಕೀಟಗಳ ಮೇಲೆಯೇ ಪಕ್ಷಿಗಳ ಜೀವನ ; ಪಕ್ಷಿಗಳಿಂದ ಸಸ್ಯಗಳ ಅಭಿವೃದ್ಧಿ ; ಸಸ್ಯವರ್ಗದಿಂದಲೇ ಪ್ರಪಂಚದ ಉಳಿವು, ಇಲ್ಲದಿದ್ದರೆ ಅಳಿವು.

ಪ್ರಪಂಚದಲ್ಲಿಯ ಮೂಲದ್ರವ್ಯವನ್ನುಪಯೋಗಿಸಿ ಹಸಿರು ಸಸ್ಯಗಳು ಆಹಾರ ತಯಾರಿಸುತ್ತವೆ. ಈ ಆಹಾರಯುತ ಸಸ್ಯಗಳನ್ನು ತಿಂದೇ ಸಸ್ಯಾಹಾರಿ ಪ್ರಾಣಿಗಳ ಬದುಕು. ಈ ಪ್ರಾಣಿಗಳ ಮಾಂಸ ಭಕ್ಷಣೆಯಿಂದ ಮಾಂಸಾಹಾರಿ ಪ್ರಾಣಿಗಳ ಜೀವನ. ಇವೆರಡೂ ಸತ್ತಾಗ ಅವನ್ನು ಕೊಳೆಸಿ, ತಿಂದು ಮಣ್ಣಲ್ಲಿ ಸೇರಿಸಿ ಮತ್ತೆ ಸಸ್ಯಗಳಿಗೆ ಆಹಾರ ಒದಗಿಸುವುದರಲ್ಲಿ ಸಹಾಯ ಮಾಡುವುವು ಕ್ರಿಮಿಕೀಟಗಳು. ಈ ರೀತಿಯ ಒಂದು ನೈಸರ್ಗಿಕ ಚಕ್ರವೇ ನಿಸರ್ಗದ ಬದುಕು.

ಹುಲಿಸಿಂಹಗಳಂತಹ ಮಾಂಸಾಹಾರಿ ಪ್ರಾಣಿಗಳನ್ನು ಬೇಟೆಯಲ್ಲಿ ಹೆಚ್ಚು ಹೆಚ್ಚಾಗಿ ಕೊಲ್ಲುವುದರಿಂದ ಸಸ್ಯಾಹಾರಿ ಪ್ರಾಣಿಗಳಾದ ಚಿಗರಿ, ಕಡವೆ, ಹಂದಿ ಮುಂತಾದವು ಹೊಲ–ಗದ್ದೆಗಳಲ್ಲಿ ನುಗ್ಗಿ ಹಾಳು ಮಾಡುವುವು. ಇಂಥ ಸಸ್ಯಾಹಾರಿ ಪ್ರಾಣಿಗಳ ಸಂಖ್ಯೆ ಕಡಮೆಯಾದರೆ ಮಾಂಸಾಹಾರಿ ಕ್ರೂರ ಪ್ರಾಣಿಗಳು ಊರಿನ ದನಕರು, ಕೋಳಿ ಮುಂತಾದವನ್ನು ಹಿಡಿದು ಜೀವಿಸಬೇಕಾಗುತ್ತದೆ. ಇಂದಿಗೂ ಈ ಸ್ಥಿತಿ ವಾಸ್ತವವೇ. ಇದಕ್ಕೆ ಮೂಲಕಾರಣ ಮನುಷ್ಯನೇ ಹೊರತು ಮತ್ತಾರೂ ಅಲ್ಲ.

ನಮ್ಮ ದೇಶದಲ್ಲಿ ಆಹಾರ ಉತ್ಪಾದನೆಗೆ ಕೊರತೆ ಇಲ್ಲ. ಆದರೆ ಬೆಳೆದಿದ್ದರಲ್ಲಿ ಹಲವಂಶ ಇಲಿ ಹೆಗ್ಗಣಗಳ ಹೊಟ್ಟೆಗೆ ಹೋಗುತ್ತಿದೆ. 1967ರ ಒಂದು ವರದಿಯಂತೆ ಪ್ರತಿವರ್ಷ ನಮ್ಮ ದೇಶದಲ್ಲಿ ಸುಮಾರು 33 ದಶಲಕ್ಷ ಟನ್‌ಗಳಷ್ಟು ದವಸಧಾನ್ಯಗಳನ್ನು ಈ ಇಲಿ ಹೆಗ್ಗಣಗಳು ತಿಂದುಹಾಕುತ್ತವೆ! ಇವುಗಳ ಸಂಖ್ಯೆ ಸುಮಾರು 8000 ದಶಲಕ್ಷ ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ಕಾರಣ ಮೂಲತಃ ಹಾವುಗಳ ಕಗ್ಗೊಲೆ. ನಮ್ಮ ದೇಶದ ನೂರಾರು ವಿಧದ ಹಾವುಗಳಲ್ಲಿ ಕೇವಲ 4–5 ಜಾತಿಯ ಹಾವುಗಳು ಮಾತ್ರ ವಿಷಯುಕ್ತ–ಜೀವಕ್ಕೆ ಅಪಾಯಕರ. ಆದರೆ ಹಾವು ಕಂಡಲ್ಲಿ ನಾವು ಕೊಲ್ಲುತ್ತೇವೆ. ಹಾವಿನ ಚರ್ಮಕ್ಕಾಗಿಯೂ ಅವುಗಳ ಕೊಲೆ ನಡೆಯುತ್ತದೆ. ಹಾವುಗಳಿದ್ದರೆ ಇಲಿ ಹೆಗ್ಗಣಗಳ ನಿಯಂತ್ರಣ. ಅವುಗಳ ನಿಯಂತ್ರಣದಿಂದ

ಆಹಾರ ಧಾನ್ಯಗಳ ರಕ್ಷಣೆ. ಆಹಾರ ಧಾನ್ಯಗಳನ್ನು ನಾಶಮಾಡುವ ಹಲವಾರು ವಿಧದ ಕೀಟಗಳನ್ನು ಪಕ್ಷಿಗಳು ಆಹಾರವಾಗಿ ಕಬಳಿಸುತ್ತವೆ. ಅಂಥ ಪಕ್ಷಿಗಳ ಬೇಟೆಯಾಡು ತ್ತೇವೆ. ಸೊಳ್ಳೆಗಳ ವಿಪರೀತ ವೃದ್ಧಿಗೆ ಕಪ್ಪೆಗಳ (ಅವುಗಳ ಕಾಲಿಗಾಗಿ) ನಾಶವೇ ಕಾರಣ ಈ ರೀತಿ ನೈಸರ್ಗಿಕವಾಗಿ ನಡೆಯುತ್ತಿರುವ ಪ್ರಕ್ರಿಯೆಯಲ್ಲಿ ಭಂಗವನ್ನುಂಟು ಮಾಡಿದರೆ ಮಾನವ ತನ್ನ ಮುಳುವಿಗೆ ತಾನೇ ಕಾರಣನಾಗುತ್ತಿದ್ದಾನೆ ಎಂಬುದರಲ್ಲಿ ಬೇರೆ ಉದಾಹರಣೆಗಳೇಕೆ?

ಅರಣ್ಯ ಮತ್ತು ವನ್ಯಜೀವಿಗಳು

ವನ್ಯಪ್ರಾಣಿಗಳು ನಿಸರ್ಗದ ಮತ್ತೊಂದು ವಿಶಿಷ್ಟ ಅಂಗ. ಅವುಗಳ ಅಂದ ಚಂದ, ಬೆಡಗು–ಬಿನ್ನಾಣ ಅಷ್ಟೇ ಮನೋಲ್ಲಾಸಕರ. ಹುಲಿ ಸಿಂಹಗಳ ಗರ್ಜನೆ, ಕೋಗಿಲೆಯ ನಿನಾದ, ನವಿಲಿನ ಲಾಸ್ಯ, ಚಿಗರೆಯ ಜಿಗಿತ, ಆನೆಯ ಗಾಂಭೀರ್ಯ ಗಳಿಂದ ಮನಸ್ಸು ಮುಗ್ಧವಾಗುವುದಿಲ್ಲವೇ, ಅರಳುವುದಿಲ್ಲವೇ? ವನ್ಯಪ್ರಾಣಿ ಸಂಕುಲ ವನ್ನು ನೋಡಲೆಂದೇ ವಿದೇಶೀ ಪ್ರವಾಸಿಗರು ಬರುತ್ತಾರೆ, ವಿದೇಶೀ ವಿನಿಮಯವನ್ನು ತರುತ್ತಾರೆ. ಸತ್ತ ಪ್ರಾಣಿಗಳ ಚರ್ಮ, ಕೊಂಬು, ತುಪ್ಪಟಗಳೂ ಆರ್ಥಿಕವಾಗಿ ಸಾಕಷ್ಟು ಆದಾಯವನ್ನು ತರಬಲ್ಲವು. ಜೀವಶಾಸ್ತ್ರ ಹಾಗೂ ಇನ್ನಿತರ ವೈಜ್ಞಾನಿಕ ಸಂಶೋಧನೆಯಲ್ಲಿ ಈ ವನ್ಯಪ್ರಾಣಿಗಳು ಉಪಯುಕ್ತ.

ವನ್ಯಪ್ರಾಣಿಗಳಿಗೆ ಹಿಂದೆ ಪೂಜನೀಯ ಸ್ಥಾನವಿತ್ತು. ವೇದ ಪುರಾಣಗಳಲ್ಲಿ ಪ್ರಾಣಿಗಳಿಗೆ ದೈವೀ ರೂಪ ಕೊಟ್ಟಿರುವುದು ಕಂಡುಬರುತ್ತದೆ. ಸಿಂಹ, ಹುಲಿಗಳನ್ನು ದೇವತೆಗಳ ವಾಹನವನ್ನಾಗಿ ಮಾಡಿದ್ದಾರೆ. ಶಿವನನ್ನು ಪಶುಪತಿ ಎಂದು ಕರೆದಿದ್ದಾರೆ. ಲಕ್ಷ್ಮಿ, ಇಂದ್ರರಿಗೆ ಆನೆ, ಸರಸ್ವತಿಗೆ ನವಿಲು, ವಿಷ್ಣುವಿಗೆ ಗರುಡ ವಾಹನವಾಗಿದ್ದಾರೆ. ವಾನರನಿಗೆ ಆಂಜನೇಯನ ರೂಪ ಕೊಟ್ಟು ಪೂಜಿಸಲಾಗಿದೆ ಐತಿಹಾಸಿಕವಾಗಿಯೂ ವನ್ಯ ಜೀವಿಗಳಿಗೆ ಸಾಕಷ್ಟು ಮಹತ್ವ ಕೊಟ್ಟಿರುವ ಸನ್ನಿವೇಶಗಳಿಲ್ಲದಿಲ್ಲ. ಹೀಗಿರುವಾಗ ವನ್ಯ ಪ್ರಾಣಿಗಳಿಗೆ ಯುಕ್ತಸ್ಥಾನ ಕಲ್ಪಿಸುವುದು, ಅವನ್ನು ಉಳಿಸಿ, ಬೆಳೆಸುವುದು ನಮ್ಮ ಕರ್ತವ್ಯವಲ್ಲವೆ? ವನಗಳಿದ್ದರೆ ವನ್ಯ ಪ್ರಾಣಿಗಳು. ಈ ಪ್ರಾಣಿಗಳ ರಕ್ಷಣೆಗೆ, ಬೆಳವಣಿಗೆಗೆ ಸರಕಾರ ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿದೆ, ಯೋಜನೆಗಳನ್ನು ಹಮ್ಮಿಕೊಂಡಿದೆ.

ನಮ್ಮ ದೇಶದಲ್ಲಿ ಸುಮಾರು 350 ವಿಧ ಸಸ್ತನಿ ಪ್ರಾಣಿಗಳು, 1250 ವಿಧ ಪಕ್ಷಿಗಳು, ಸುಮಾರು 20,000 ಜಾತಿಯ ಕ್ರಿಮಿ–ಕೀಟಗಳಿವೆಯೆಂದು ಹೇಳಲಾಗಿದೆ. ನಮ್ಮಲ್ಲೀಗ 59 ರಾಷ್ಟ್ರೀಯ ಉದ್ಯಾನಗಳು, 254 ವನ್ಯಧಾಮಗಳು, 15 ಹುಲಿ ಮೀಸಲುಗಳು ಇದೆ. ದೇಶದ ಒಟ್ಟು ಕಾಡಿನ ಶೇಕಡಾ 15ರಷ್ಟು ಕಾಡನ್ನು ಈ ಉದ್ದೇಶಗಳಿಗಾಗಿಯೇ ಮೀಸಲಾಗಿಡಲಾಗಿದೆ. ವಿಶಿಷ್ಟ ಯೋಜನೆಗಳಿಂದಾಗಿ ಹುಲಿ ಮುಂತಾದ ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ಹಲವಾರು ವಿಧದ ಪ್ರಾಣಿ-ಪಕ್ಷಿಗಳ

ಸಂಖ್ಯೆ ತೀವ್ರವಾಗಿ ಇಳಿಯುತ್ತಿದೆ. ಕೆಲವು ಜಾತಿಯ ಪಶು-ಪಕ್ಷಿಗಳ ವಂಶವೇ ನಿರ್ಮೂಲನವಾಗಿದೆ. ನಿಸರ್ಗದ ಮೇಲಿನ ಈ ವ್ಯಭಿಚಾರ ನಿಲ್ಲಬೇಕು. ನಿಸರ್ಗದ ಒಂದು ಮುಖ್ಯವಾದ ಕೊಂಡಿಯಾಗಿರುವ ಈ ಪ್ರಾಣಿ-ಪಕ್ಷಿ ಸಂಕುಲದ ಅಭಿವೃದ್ಧಿಗಾಗಿ ವನ ಶ್ರೇಣಿಗಳನ್ನು ಪೋಷಿಸುವುದು ಅಗತ್ಯ.

ಅರಣ್ಯ ಮತ್ತು ಸೌಂದರ್ಯ ಪ್ರಜ್ಞೆ

ಇಂದಿನ ಅಣುಯುಗದಲ್ಲಿ ಮನುಷ್ಯ ಯಂತ್ರಗಳ ಸಂತೆಯಲ್ಲಿ ಮುಳುಗಿ ಹೋಗಿದ್ದಾನೆ. ಅವನ ಪರಿಸರ ಒಂದು ಜಂಜಾಟವಾಗಿದೆ. ಜೀವನ ಯಾಂತ್ರಿಕವಾಗಿ ಬಿಟ್ಟಿದೆ. ನಗರ ಜೀವನ ಬೇಸರವನ್ನುಂಟುಮಾಡುತ್ತಿದೆ. ಮಾನಸಿಕ ಒತ್ತಡದಿಂದ ಅವನು ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾನೆ. ನಗರದ ಈ ಜಂಜಾಟದಿಂದ, ಯಂತ್ರಗಳ ಕರ್ಕಶ ಶಬ್ದದಿಂದ, ಕಾರ್ಖಾನೆ–ವಾಹನಗಳ ಹೊಗೆಯಿಂದ ಅವನು ಕೆಲ ಹೊತ್ತಾದರೂ ದೂರವಿರಲು ಬಯಸುವುದು ಸ್ವಾಭಾವಿಕ. ಅಂಥ ಸಮಯದಲ್ಲಿ ಕಾಡು ಅವನನ್ನು ಕೈಮಾಡಿ ಕರೆಯುವ, ಮುದಕೊಟ್ಟು ಮಾನಸಿಕ ಕೋಟಲೆಯನ್ನು ಕಳೆಯುವ ಸಂಜೀವಿನಿಯಾಗಬಲ್ಲದು. ವನಸಿರಿಯ ಸೊಬಗು ಹೊಸ ಚೇತನ ನೀಡಬಲ್ಲದು.

ನಿಸರ್ಗದ ಚೆಲುವಿಗೆ ಮಾರು ಹೋಗದವರಾರು? ನಿಸರ್ಗ ಅನೇಕ ಕಾವ್ಯ, ಕತೆ, ಕಾದಂಬರಿಗಳ ಸೃಜನ ಶಕ್ತಿಯ ಮೂಲ. ಮನುಷ್ಯನ ಸಹೃದಯತೆಯನ್ನು ಬೆಳೆಸುವ ಓತಪ್ರೋತಧಾರೆ. ಆಕಾಶದೆತ್ತರಕ್ಕೆ ಹರಡಿದ ಚಾಮರಗಳನ್ನು ಹೊತ್ತುನಿಂತ ಗಗನ ಚುಂಬಿ ಮರಗಳು, ಅವುಗಳ ತುಂಬ ಆವರಿಸಿಕೊಂಡಿರುವ ಹೂ ಹಣ್ಣು; ನಳನಳಿಸುವ ಹಸಿರೆಲೆಗಳ ಮಧ್ಯದಿಂದ ನುಸುಳಿ ಆಟವಾಡುತ್ತಿರುವ ಸೂರ್ಯ ಕಿರಣಗಳು, ಹಕ್ಕಿ–ಪಕ್ಷಿಗಳ ಸುಮಧುರ ಕಲರವ, ಜುಳು ಜುಳುನೆ ಹರಿಯುವ ಹಳ್ಳ–ತೊರೆಗಳು, ವಿಧ ವಿಧ ವಿಚಿತ್ರ, ಆಹ್ಲಾದಕರ ವಾಸನೆ ಬೀರುವ ತರುಲತೆಗಳು–ಹೃದಯ ಕೊಲೆಗಾರನದಾಗಿರಲಿ, ಕ್ರೂರಿಯದಾಗಿರಲಿ ಆ ಕ್ಷಣದಲ್ಲಿ ಅದು ಕವಿ ಹೃದಯವಾಗಲಾರದೆ? ಜಗತ್ತೆಲ್ಲ ಸುಂದರವಾಗಿ ಅಮಾಯಕವಾಗಲಾರದೆ? ನಮ್ಮ ವನಸಿರಿಗೆ ಮಾತ್ರ ಸಾಧ್ಯ ಈ ಮಾಂತ್ರಿಕತೆಯ ಮೋಡಿ. ಅಂಥ ಅರಣ್ಯರಾಜಿ ನಮಗೆ ಬೇಡವೆ?

ಅರಣ್ಯನಾಶ ಮತ್ತು ಕೃಷಿ

ಕೃಷಿ ಮಾನವನ ಮೂಲ ಉದ್ಯೋಗ. ತನ್ನ ಹೊಟ್ಟೆ ಹೊರೆದುಕೊಳ್ಳಲು ನೆಲ ಹಸನುಗೊಳಿಸಿ ಉತ್ತಿ, ಬಿತ್ತಿ ಬೆಳೆ ತೆಗೆಯುವ ಪದ್ಧತಿ ಅತಿ ಪುರಾತನವಾದುದು. ಸುಮಾರು 10 ಸಾವಿರ ವರ್ಷಗಳ ಹಿಂದಿನ ನಮ್ಮ ಪುರಾತನ ಮಾನವ ಈ ಗುಟ್ಟನ್ನು ಕಂಡುಹಿಡಿದು ತಾನಿದ್ದ ಕಾಡಿನ ಭಾಗದಲ್ಲೇ ಸದರಿ ಕೃಷಿಗೆ ಆರಂಭಿಸಿದ. ಹೀಗೆ ನಮ್ಮ ಆದಿಮಾನವರಿಂದಲೇ ಕೃಷಿಗಾಗಿ ಅರಣ್ಯನಾಶ ಆರಂಭವಾಗಿ ಇಂದಿನವರೆಗೂ

ಅವ್ಯಾಹತವಾಗಿ ನಡೆದು ಬರುತ್ತಿದೆ. ಒಂದು ಕಾಡಿನ ಭಾಗ ಬಂಜರಾದಾಗ ಇನ್ನೊಂದು ಕಾಡಿಗೆ ಗುಳೆ ಹೋಗುವ ಪರಿಪಾಠದಿಂದಾಗಿ ಕಾಡು ಸವೆಯುತ್ತ ಬಂತು. ಆದರೆ ಆಗ ನಾಡೆಲ್ಲ ಕಾಡೇ ಇಗಿದ್ದ ದಿನಗಳು, ತಿನ್ನುವ ಬಾಯಿಗಳೂ ಕಡಿಮೆ. ಆದರಿಂದಾಗಿ ಅರಣ್ಯನಾಶದ ಪರಿಣಾಮ ತೀವ್ರವಾಗಿ ಕಾಣಲಿಲ್ಲ. ಆದರೆ ಜನಸಂಖ್ಯೆ ಅಳತೆ ಮೀರಿ ಬೆಳೆಯುತ್ತಿದ್ದಾಗ ಕೋಟಿಗಟ್ಟಲೆ ಬಾಯಿಗಳು ಆಹಾರಕ್ಕಾಗಿ ಒರಲುವಾಗ ಹೆಚ್ಚು ಹೆಚ್ಚು ಆಹಾರ ಬೇಕಾಗುತ್ತಿತ್ತು. ಅದಕ್ಕಾಗಿ ಹೆಚ್ಚು ಹೆಚ್ಚು ಭೂಮಿ ಸಾಗುವಳಿಗೆ ಒಳಪಡಬೇಕಾಯಿತು. ಸಾವಿರಾರು ಎಕರೆ ಕಾಡುಪ್ರದೇಶ ಸರಕಾರದ ಆದೇಶದಿಂದಾಗಿ, ಅನೇಕ ಬಾರಿ ಅಕ್ರಮವಾಗಿ ಕಡಿಯಲ್ಪಟ್ಟು ಕೃಷಿಯೋಗ್ಯವಾಗಬೇಕಾಯಿತು. ಒಂದು ಅಂದಾಜಿನ ಪ್ರಕಾರ ಕಳೆದ 30 ವರ್ಷಗಳಲ್ಲಿ ಸುಮಾರು 4 ದಶಲಕ್ಷ ಹೆಕ್ಟೇರುಗಳಷ್ಟು ಕಾಡನ್ನು ನೆಲಸಮಗೊಳಿಸಿ ಬೇರೆ ಬೇರೆ ಕಾರ್ಯಗಳಿಗೆ ಮುಖ್ಯವಾಗಿ ಕೃಷಿಗೆ ಉಪಯೋಗಿಸಲಾಗಿದೆ. ಇದರಿಂದ ಕೃಷಿಗೆ ಭೂಮಿಯೇನೋ ದೊರೆಯಿತು; ಆದರೆ ಕಾಡಿನ ವಿನಾಶದಿಂದ ಅಂಥ ಭೂಮಿಯೂ ಬಂಜರಾಗಹತ್ತಿತ್ತು. ಇದೀಗ ಕಾಡನ್ನು ಕಡಿದು ಕೃಷಿ ಮಾಡುವುದಕ್ಕೆ ಸರಕಾರ ತೀವ್ರ ನಿರ್ಬಂಧಗಳನ್ನು ಒಡ್ಡಿದೆ.

ಅರಣ್ಯನಾಶ ಮತ್ತು ಅಕ್ರಮ ವ್ಯವಹಾರ

ಕಾಡು ಕಾಮಧೇನು ಅದರ ಉತ್ಪನ್ನಗಳನ್ನು ಹಿತಮಿತವಾಗಿ ಬಳಸಿದರೆ ಅದು ಕಲ್ಪವೃಕ್ಷವಾಗಬಲ್ಲದು ಮರಮುಟ್ಟುಗಳಿಗೆ, ಇಂಧನಕ್ಕಾಗಿ ಮತ್ತು ಇನ್ನು ಹಲವಾರು ರೀತಿಯ ಉಪಯೋಗಕ್ಕಾಗಿ ಕಾಡುಗಳನ್ನು ಕಡಿಯಲೇ ಬೇಕು. ಅದು ನಮಗಾಗಿಯೇ ಇರುವ ಸಂಪನ್ಮೂಲ. ಆದರೆ ಮರ ಕಡಿಯುವುದರಲ್ಲೂ ಒಂದು ವ್ಯವಸ್ಥೆ, ಕ್ರಮ ಇದೆ. ಕಾಡಿನ ಸಮತೋಲನ ನಾಶವಾಗದಂತೆ ಅದರ ಉಪಯೋಗ ಮಾಡಿಕೊಳ್ಳಬೇಕು. ಆದರೆ ದುಡ್ಡಿನಾಸೆಯಿಂದ ಅಕ್ರಮವಾಗಿ ಬೇಕುಬೇಕಾದ ಹಾಗೆ ಕಾಡನ್ನು ಕಡಿಯುವ ಒಂದು ದಂಧೆಯೇ ನಮ್ಮ ದೇಶದಲ್ಲಿ ಬೆಳೆದು ನಿಂತಿದೆ. ಬೆಲೆಬಾಳುವ ಸಾಗವಾನಿ, ಶ್ರೀಗಂಧ, ರೋಜವುಡ್ ಮುಂತಾದ ಮರಮುಟ್ಟುಗಳಿಂದ ಆರಂಭಿಸಿ ಉರುವಲು ಸೌದೆ, ದನಗಳ ಮೇವು (ಎಲೆ–ಎಳೆಕಾಂಡ), ಹಣ್ಣುಹಂಪಲು, ಬೀಜ, ಸಸ್ಯೌಷಧಿಗಳು ಮುಂತಾಗಿ ಎಲ್ಲ ವಿಧದ ಅರಣ್ಯೋತ್ಪಾದನೆಗಳು ಈ ಅರಣ್ಯಗಳ್ಳರ ಕೈಸೇರುವುವು. ಈ ಅಕ್ರಮ ಅರಣ್ಯನಾಶದಿಂದ ನಿಧಾನವಾಗಿ ಕಾಡು ಸವೆಯುತ್ತ ಹೋಗುತ್ತದೆ. ಇದನ್ನು ತಡೆಯುವುದಂತೂ ಬಹಳ ಕಷ್ಟ. ಎಷ್ಟೇ ಕಾವಲುಗಾರರಿರಲಿ, ಅರಣ್ಯ ರಕ್ಷಕರಿರಲಿ ಈ ಅಕ್ರಮ ವ್ಯವಹಾರ ನಡದೇ ನಡೆಯುತ್ತದೆ ಕೇವಲ ಈ ರೀತಿಯ ಅರಣ್ಯನಾಶದ ದುಷ್ಪರಿಣಾಮಗಳನ್ನು ಮನಕ್ಕೆ ತಿಳಿಯುವಂತೆ ಮನವೊಲಿಸುವುದೊಂದೇ ಬಹುಶಃ ಒಳ್ಳೆಯ ದಾರಿ ಎಂದು ತೋರುತ್ತದೆ.

ಅರಣ್ಯನಾಶ ಮತ್ತು ಮೇವು

ನಮ್ಮ ದೇಶದಲ್ಲಿ ದನಕರು, ಕುರಿ ಕೋಣಗಳ ಸಂಖ್ಯೆ ಅಪಾರ. ಅವುಗಳ

ಹೊಟ್ಟೆ ತುಂಬಿದರೆ ಅವು ಹಾಲು ಕರೆದಾವು, ಉಣ್ಣಲು ಮಾಂಸ ನೀಡಿಯಾವು, ರೆಂಟೆ-ಕುಂಟೆ ಎಳೆದಾವು. ಆದರೆ ಮನುಷ್ಯನಿಗೆ ಉಣ್ಣಲು ಸರಿಯಾದ ಆಹಾರ ವಿಲ್ಲದಿರುವಾಗ ಅದಕ್ಕೇನು ಹಾಕುವುದು? ಹೀಗಾಗಿ ಲಕ್ಷಗಟ್ಟಲೆ ದನಕರುಗಳು ಬಡಕಲಾಗಿ ಒಣಗಿಕೊಂಡಿರುವ ದೃಶ್ಯ ಸರ್ವೇಸಾಮಾನ್ಯ. ಅವುಗಳಿಗಾಗಿಯೇ ಹಸಿರು ಹುಲ್ಲು-ಮೇವು ಬೆಳೆಯಲು ಅಶಕ್ಯವಾದಾಗ ಅಂಥ ದನಕರುಗಳನ್ನು ಕಾಡಿಗೆ ಅಟ್ಟ ಲಾಗುತ್ತದೆ. ಇಂಥ ದನಕರುಗಳು ನಿಧಾನವಾಗಿ ಕಾಡನ್ನು-ಎಲೆಕಾಂಡಗಳನ್ನು ತಿಂದು ತಿಂದು ಕಾಡು ತರಿದು ಹೋಗಿ ಬೋಳು ಬೋಳಾಗಿ ಪರಿವರ್ತಿತವಾಗುವುದು. ಭಾರತ ದೇಶದಲ್ಲಿ 'ಕಾಡಿನಲ್ಲಿ ಮೇಯುವ ಕ್ರಮ'ದಿಂದಾಗಿ ಕಾಡಿನ ವಿಶಾಲವಾದ ಪ್ರದೇಶವು ನಾಶವಾಗುತ್ತದೆ. ಒಂದು ಅಂದಾಜಿನ ಪ್ರಕಾರ ನಮ್ಮ ದೇಶದಲ್ಲಿರುವ ಎಲ್ಲ ಸಾಕು ದನಕರುಗಳ ಹತ್ತರಲ್ಲೊಂದು ಭಾಗ ಪಶುಗಳು, ಕಾಡಿನಲ್ಲೇ ಮೇಯು ತ್ತವೆ. ನಿಜ ಹೇಳಬೇಕೆಂದರೆ ಗೋಶಾಲೆಯಲ್ಲಿ ಕ್ರಮಬದ್ಧವಾಗಿ ದೊರೆಯುವ ಮೇವಿಗಿಂತ ಕಾಡಿನಮೇವು ಕಡಿಮೆ ಪುಷ್ಟಿದಾಯಕವಿರುವುದರಿಂದ ಕಾಡಿನಲ್ಲಿ ಮೇಯುವ ಕ್ರಮವು ಉಪಯುಕ್ತವೂ ಅಲ್ಲ, ಲಾಭದಾಯಕವೂ ಅಲ್ಲ

ಕಾಡಿನಲ್ಲಿ ಮೇಯುವ ಪದ್ಧತಿ ಪೂರ್ತಿ ತಪ್ಪಿಲ್ಲ ಆದರೆ ಯಾವಾಗ ಕಾಡಿನ ನಾಶಕ್ಕೆ ಕಾರಣವಾಗುವುದೋ ಆಗ ಮಾತ್ರ ಈ ಕ್ರಮದ ಕಟ್ಟುನಿಟ್ಟಾದ ನಿಯಂತ್ರಣ ಅವಶ್ಯಕ. ಮೊದಲಿನಂತೆ ಅನಿಯಂತ್ರಿತ, ನಿರಂತರ ಕಾಡು ಮೇಯಲು ಬಿಡುವುದಕ್ಕಿಂತ ನಿಯಂತ್ರಿತ, ನಿರ್ದಿಷ್ಟಪಡಿಸಿದ ಸ್ಥಳ-ವೇಳೆಯಲ್ಲಿ ದನಕರುಗಳನ್ನು ಮೇಯಲು ಬಿಡುವ ಕ್ರಮವನ್ನು ಅನುಸರಿಸಬೇಕು. ಇದರಿಂದ ಸ್ವಲ್ಪಮಟ್ಟಿಗೆ ದನಕರುಗಳಿಗೆ ಮೇವನ್ನು ಒದಗಿಸಿದಂತಾಗುವುದಲ್ಲದೆ ಕಾಡಿನ ನಾಶವನ್ನು ತಡೆಗಟ್ಟಿದಂತಾಗುತ್ತದೆ. ಕೆಲವು ಸಾರಿ ಕಾಡಿನ ಭೂಪದರದ ಮೇಲೆ ಬೆಳೆದ ಹುಲ್ಲು ಕಾಡಿನ ಬೆಳವಣಿಗೆಗೆ ಅಡ್ಡಿಯಾಗುವುದರಿಂದ ಅಂಥ ಹುಲ್ಲು ಮೇಯಲು ಬಿಡುವುದರಲ್ಲಿ ತಪ್ಪಿಲ್ಲ. ನಮ್ಮ ದೇಶದ ಆರ್ಥಿಕ ಸ್ಥಿತಿ ಸಮಾಧಾನಕರವಾಗಿಲ್ಲವಾದ್ದರಿಂದ ಎಲ್ಲ ದನಕರುಗಳಿಗೆ ಗೋಶಾಲೆಗಳಲ್ಲಿಯೇ ಮೇವು ಹಾಕುವುದು ಅಸಾಧ್ಯ. ಹೀಗೆಂದು ಅವನ್ನು ಆಹಾರವಿಲ್ಲದೆ ಸಾಯಿಸುವ ಹಾಗೂ ಇಲ್ಲ. ಹೀಗಿರುವಾಗ ಮೇವಿಗೆಂದೇ ಕೆಲ ಅರಣ್ಯಗಳನ್ನು ಪೋಷಿಸದೇ ವಿಧಿಯಿಲ್ಲ. ಇದರಿಂದ ದೊಡ್ಡ ಗಿಡ-ಮರಗಳಿರುವ ಕಾಡಿನ ನಾಶವನ್ನು ತಡೆದಂತಾಗುವುದಲ್ಲದೆ ದನಕರುಗಳಿಗೂ ಕೆಲಮಟ್ಟಿಗೆ ಆಹಾರ ದೊರಕಿಸಿದಂತಾಗುವುದು. ಕಾಡುಮೇವಿನ ಕ್ರಮದಲ್ಲಿ ಪಶುಗಳ ಮಾಲೀಕರ ಮೇಲೆ ಅಲ್ಪಪ್ರಮಾಣದ ತೆರಿಗೆಯನ್ನು ವಿಧಿಸುವ ಪದ್ಧತಿಯೂ ಉಂಟು. ಹೀಗೆ ಸಂಗ್ರಹಿಸಿದ ಹಣವೂ ಅಂಥ ಕಾಡುಗಳ ಪೋಷಣೆಗೆ ಉಪಯುಕ್ತವಾಗಬಲ್ಲದು.

ಅರಣ್ಯನಾಶ ಮತ್ತು ಕಾಡುಪ್ರಾಣಿಗಳು

ಕಾಡನ್ನೇ ಮನೆಯನ್ನಾಗಿ ಮಾಡಿಕೊಂಡ ವನ್ಯ ಜೀವಿಗಳೇ ಕೆಲವು ಸಲ ಗಿಡಮರಗಳ ನಾಶಕ್ಕೆ ಕಾರಣವಾಗಬಲ್ಲವು. ಬೆಳವಣಿಗೆಗೆ ಅಡ್ಡಿಯಾಗಬಲ್ಲವು.

ಕಾಡಾನೆಗಳ ಹಾವಳಿಗೆ ಸಿಕ್ಕು ಎಳಸಾದ ಗಿಡಗಳು ಸತ್ತುಹೋಗುತ್ತವೆ. ಆನೆಗಳಿಗೆ ಬೊಂಬಿನ ಮೇಲಂತೂ ಪ್ರಾಣ. ಕಾಡೆಮ್ಮೆಗಳೂ ಈ ಎಳೆ ಬೊಂಬು ಮತ್ತು ಸಾಗವಾನಿ ಸಸಿಗಳನ್ನು ತಿನ್ನುವುವು. ಜಿಗರೆ ಮುಂತಾದವು ಮರಗಳ ಸಸಿಗಳನ್ನು ತಿಂದು ನಾಶ ಮಾಡುವುವು. ಹಂದಿಗಳು ಬೇರು-ಗೆಡ್ಡೆಗಳನ್ನು ಕಿತ್ತು ಹಾಕುವವು. ಇಲಿ-ಹೆಗ್ಗಣ ಗಳಿಂದ ಬೀಜ-ಕಾಯಿಗಳ ವಿನಾಶ ನಡೆಯುವುದು ಕೋತಿಗಳೂ ಈ ಕಾರ್ಯದಲ್ಲಿ ಸಹಕಾರಿ. ಆದರೆ ಇಂಥ ವನ್ಯಪ್ರಾಣಿಗಳ ಚಟುವಟಿಕೆಯನ್ನು ತಡೆಯುವುದು ಕಷ್ಟ. ಏನಾದರೂ ನೈಸರ್ಗಿಕವಾಗಿಯೇ ನಿಯಂತ್ರಣ ನಡೆಯಬೇಕು. ಹಲವು ಸಲ ಕೆಲವು ಜಾತಿಯ ಕೀಟಗಳು ಗಿಡ-ಮರಗಳ ನಾಶಕ್ಕೆ ಕಾರಣವಾಗುವುವು. ಉದಾ: ಮಿಡತೆಗಳು. ದೊಡ್ಡ ಪ್ರಮಾಣದಲ್ಲಿ ರಾಸಾಯನಿಕಗಳ ಉಪಯೋಗ, ಕೀಟ ಭಕ್ಷಕಗಳ ಪೋಷಣೆ ಮುಂತಾದ ವಿವಿಧ ಕ್ರಮಗಳಿಂದ ಇವನ್ನು ನಿಯಂತ್ರಿಸಬಹುದು.

ಕೆಲವು ಜಾತಿಯ ಗಿಡ-ಮರಗಳ ಮೇಲೆ ಪರಾವಲಂಬಿ ಸಸ್ಯಗಳು ಬೆಳೆದು ಅಂಥ ಗಿಡ-ಮರಗಳ ಆಹಾರವನ್ನು ಕಬಳಿಸಿ ಅವನ್ನು ಸೊರಗಿಸಿಬಿಡುತ್ತವೆ. ಕ್ರಮೇಣ ಆ ಗಿಡ-ಮರಗಳು ಸಾಯಲೂಬಹುದು. ಅಂಥ ಪರಾವಲಂಬಿ ಸಸ್ಯಗಳ ನಾಶ ಅವಶ್ಯಕ.

ರೋಗರುಜಿನ ಯಾರನ್ನೂ ಬಿಟ್ಟಿದ್ದಿಲ್ಲ, ಸಸ್ಯಗಳನ್ನು ಸಹ. ಅನೇಕ ವಿಧದ ರೋಗ ಗಳಿಂದಾಗಿ ಸಸ್ಯಗಳು ಕೊಳೆತು ಕ್ರಮೇಣ ಸೊರಗಿ ಸಾಯುತ್ತವೆ. ಇಂಥ ರೋಗಗಳನ್ನು ಬಲಿಯುವ ಮೊದಲೇ ಗುರುತಿಸಿ ಅವನ್ನು ನಿವಾರಿಸಲು ಕ್ರಮಕೈಕೊಳ್ಳಬೇಕು. ಈ ರೋಗದಿಂದ ಮರಗಳು ಸಾಯದೇ ಉಳಿದರೂ ಅವು ಮುಂದೆ ನಿರುಪಯುಕ್ತ ವಾಗಬಹುದು ಅಥವಾ ಪೂರ್ಣ ಲಾಭದಾಯಕವಾಗದಿರಬಹುದು. ಸರಿಯಾದ ಚಿಕಿತ್ಸೆ, ಪೋಷಣೆ, ಆಸರೆಗಳು ಇಂಥ ಮರಗಳನ್ನು ಉಳಿಸಬಲ್ಲವು. ಅನೇಕ ವೈಜ್ಞಾನಿಕ ಸಂಶೋಧನೆಗಳು, ಆರೋಗ್ಯಕರ ತಳಿ ಅಭಿವೃದ್ಧಿ, ರೋಗ ನಿಯಂತ್ರಣ ಕ್ರಮ ಮತ್ತು ಚಿಕಿತ್ಸಾ ಕ್ರಮಗಳು ಈ ದಿಶೆಯಲ್ಲಿ ಹೆಚ್ಚಿನ ಯಶಸ್ಸಿಗೆ ಕಾರಣವಾಗಬಹುದು.

ಅರಣ್ಯನಾಶ ಮತ್ತು ಕಾಳ್ಗಿಚ್ಚು

ಕಾಳ್ಗಿಚ್ಚು ಕಾಡಿನ ಒಂದು ಪರಮ ವೈರಿ. ನೈಸರ್ಗಿಕವಾಗಿ ಸಿಡಿಲಿನಿಂದಾಗಿ ಅಥವಾ ಬೊಂಬುಗಳು ಒಂದನ್ನೊಂದು ಮಸೆಯುವುದರಿಂದ ಈ ಕಾಳ್ಗಿಚ್ಚು ಉಂಟಾಗ ಬಹುದು. ಕೆಲವು ಸಲ ಕಾಡಿನ ಪಕ್ಕದಲ್ಲಿ ಸಾಗುವ ರೈಲು ಇಂಜಿನ್ನಿನ ಬೆಂಕಿ ಕಿಡಿಯಿಂದಲೂ ಕಾಡಿಗೇ ಬೆಂಕಿ ತಾಗಬಹುದು. ಕೆಲವೊಮ್ಮೆ ಈ ಬೆಂಕಿಯಲ್ಲಿ ಮಾನ ವನ ಕೈವಾಡವೂ ಇರುತ್ತದೆ. ಕಾಡುಪ್ರಾಣಿಗಳ ಕಾಟದಿಂದ ದೂರವಾಗಲು, ಬೆಳೆ ಗಳನ್ನು ತಿನ್ನುವ ಹಂದಿ, ಕಡವೆಗಳನ್ನು ಓಡಿಸಲು ಜನರೇ ಕಾಡಿಗೆ ಬೆಂಕಿ ಇಕ್ಕುವುದೂ ಉಂಟು. ಕಾಳ್ಗಿಚ್ಚು ಸಾಮಾನ್ಯವಾಗಿ ಉಂಟಾಗುವುದು ಬೇಸಿಗೆಯಲ್ಲಿ. ನಮ್ಮ ದೇಶದ ತೀವ್ರ ಉಷ್ಣತೆ ಮತ್ತು ರಭಸದ ಗಾಳಿಗಳು ಈ ಕಾಳ್ಗಿಚ್ಚಿಗೆ ಒಳ್ಳೆಯ ಸ್ನೇಹಿತರು. ಒಣಗಿದ ಭೂಮಿಯ ಮೇಲೆ ಹರಡಿದ ಎಲೆಗಳುಳ್ಳ ಕಾಡು ಅಥವಾ

ಒಣ ಮುಳ್ಳುಗಳನ್ನು ಹೊಂದಿದ ಪೈನ್ ಕಾಡುಗಳು ಈ ಕಿಚ್ಚಿಗೆ ಹೆಚ್ಚಿನ ಗುರಿ. ಕೆಲವೇ ಕೆಲ ಸಂದರ್ಭದಲ್ಲಿ ಈ ಕಾಳ್ಗಿಚ್ಚು ಉಪಕಾರಿಯೂ ಆಗುವುದೆಂದರೆ ಆಶ್ಚರ್ಯವಾದೀತು. ಕಾಡಿನ ತುಂಬ ಹರಡಿದ ಅನೇಕ ವರ್ಷಗಳ ಹಸಿರೆಲೆ ಮತ್ತಿತರ ಕೊಳೆಯು ಹಾಸಿಗೆ ಇರುವಾಗ ಕಾಳ್ಗಿಚ್ಚು ಉಂಟಾದರೆ ಅದು ಹೊಸ ಸಸ್ಯಗಳ ಉತ್ಪತ್ತಿಗೆ ಸಹಾಯವಾಗಬಲ್ಲದು. ಏನಿದ್ದರೂ ಕಾಳ್ಗಿಚ್ಚಿನಿಂದ ಕಾಡು ಉರಿದು ನಾಶವಾಗುವುದರಿಂದ ಇಂಥ ಕಾಳ್ಗಿಚ್ಚು ಉಂಟಾಗದಂತೆ ಮುಂಜಾಗ್ರತೆಗಳು, ಉಂಟಾದರೆ ಶೀಘ್ರ ನಂದಿಸುವ ಉಪಾಯಗಳು, ಉರಿದು ಹೋದ ಕಾಡಿನಲ್ಲಿ ನಡೆಸಬೇಕಾದ ಕ್ರಮಗಳ ಬಗೆಗೆ ಯೋಚನೆ ಅಗತ್ಯ.

ಭಾರತದಲ್ಲಿ ಒಂದು ವರ್ಷದಲ್ಲಿ ಸುಮಾರು 2000 ಕಾಳ್ಗಿಚ್ಚುಗಳು ಅರಣ್ಯ ನಾಶಕ್ಕೆ ಕಾರಣವಾಗುತ್ತವೆಂದು ಅಂದಾಜು ಮಾಡಲಾಗಿದೆ. ಮುಂಜಾಗ್ರತೆಯ ಕ್ರಮವಾಗಿ ಹಸಿರುಪಟ್ಟಿ ಬೆಳವಣಿಗೆ, ಉರಿಯುವ ವಸ್ತುಗಳನ್ನು ದೂರಗೊಳಿಸುವಿಕೆ ಸೇರುತ್ತವೆ. ಕಾಳ್ಗಿಚ್ಚು ಉಂಟಾದಾಗ ತಕ್ಷಣ ವರದಿ ಮಾಡುವ ವ್ಯವಸ್ಥೆ, ಕಾಡಿನ ಮಧ್ಯೆ ಸಾಗಾಟ, ಎತ್ತರದ ಕಾವಲು ಗೋಪುರಗಳು, ವಿಮಾನ, ಹೆಲಿಕ್ಯಾಪ್ಟರುಗಳ ವ್ಯವಸ್ಥೆ, ಸಂಪರ್ಕ ವ್ಯವಸ್ಥೆ, ನಂದಿಸುವ ಸಿಬ್ಬಂದಿ, ಸರಿಯಾದ ಉಪಕರಣಗಳು ಮತ್ತು ರಾಸಾಯನಿಕ ಮುಂತಾದವುಗಳು ಈ ದಿಶೆಯಲ್ಲಿ ಹೆಚ್ಚು ಫಲಪ್ರದವಾಗುತ್ತವೆ.

ಅರಣ್ಯಸಂವರ್ಧನೆ–ಅರಣ್ಯಶಾಸ್ತ್ರ

ಯಾವುದೇ ವಿಧವಾದ ಅರಣ್ಯನಾಶ ಪರಿಸರ ಅಸಮತೋಲನಕ್ಕೆ ಕಾರಣವಾಗುವುದರಿಂದ ಅಂಥ ಕಾರಣಗಳನ್ನು ಅಧ್ಯಯನ ಮಾಡಿ ಈ ಅರಣ್ಯನಾಶವನ್ನು ಪ್ರತಿಬಂಧಿಸುವ ಉಪಾಯಗಳನ್ನು ಕೈಕೊಳ್ಳಬೇಕಾದುದು ಅರಣ್ಯ ಸಂವರ್ಧನೆಯ ಮೊದಲ ಹಂತ. ಒಂದು ವೇಳೆ ಅರಣ್ಯನಾಶವಾಗಿ ಕಾಡು ಬೆಂಗಾಡಾಗಿದ್ದರೆ ಅಂತಹ ಬೆಂಗಾಡು ಪ್ರದೇಶದಲ್ಲಿ ಗಿಡಮರಗಳನ್ನು ಬೆಳೆಸುವ ಕಾರ್ಯ ನಡೆಸುವುದು ಅರಣ್ಯ ಸಂವರ್ಧನೆಯ ಎರಡನೆಯ ಹಂತ.

ಅರಣ್ಯನಾಶ ಯಾವ ಯಾವ ಕಾರಣಗಳಿಂದ ನಡೆಯಬಹುದು ಎಂಬುದನ್ನು ಈ ಮೊದಲು ಚರ್ಚಿಸಲಾಗಿದೆ. ಇಂತಹ ಅರಣ್ಯನಾಶವನ್ನು ತಡೆದು ಅರಣ್ಯಾಭಿವೃದ್ಧಿ ಮಾಡಲು ಒಂದು ಶಾಸ್ತ್ರವೇ ಬೆಳೆದು ಬಂದಿದೆ. ಅದಕ್ಕೆ ಅರಣ್ಯಶಾಸ್ತ್ರ (Forestry) ಎಂದು ಹೆಸರು. ಅರಣ್ಯಶಾಸ್ತ್ರ ಈಗ ಅಗಾಧವಾಗಿ ಬೆಳೆದಿರುವ ಒಂದು ವೈಜ್ಞಾನಿಕ ಶಾಸ್ತ್ರವಾಗಿದೆ. ವೈಜ್ಞಾನಿಕ ಅರಣ್ಯಗಳ ನಿರ್ವಹಣೆಯ ಸಿದ್ಧಾಂತ (theory) ಮತ್ತು ಪ್ರಾಯೋಗಿಕ (practical) ಅಧ್ಯಯನಕ್ಕೆ ಅರಣ್ಯಶಾಸ್ತ್ರ ಎಂದು ಕರೆಯಬಹುದು. ಇದರಲ್ಲಿ ಸಸಿಗಳ ಬೆಳವಣಿಗೆ, ಅರಣ್ಯೋತ್ಪಾದನೆಗಳ ನಿರಂತರ ಪ್ರಾಪ್ತಿ ಮತ್ತು ಇನ್ನಿತರ ಸಂಬಂಧಿಸಿದ ಸೇವೆಗಳು ಒಳಗೊಳ್ಳುತ್ತವೆ.

ಅರಣ್ಯನಿರ್ವಹಣೆ ಒಂದು ಶಾಸ್ತ್ರವಿದ್ದಂತೆ ಕಲೆಯೂ ಹೌದು. ನಿಸರ್ಗದ

ಸೇವಕನಾಗಿ, ಸ್ನೇಹಿತನಾಗಿ, ಒಡೆಯನಾಗಿ ಅರಣ್ಯನಿರ್ವಾಹಕರು ಕಾರ್ಯನಿರ್ವಹಿಸಬೇಕಾಗುವುದು. ಅರಣ್ಯಶಾಸ್ತ್ರದ ಸಿದ್ಧಾಂತಗಳನ್ನು ಪ್ರತ್ಯಕ್ಷವಾಗಿ ಕಾರ್ಯರೂಪದಲ್ಲಿ ತರುವುದೇ ಅರಣ್ಯನಿರ್ವಹಣೆ. ಇದರಲ್ಲಿ ಮುಖ್ಯವಾಗಿ ಹೆಚ್ಚುಹೆಚ್ಚು ಅರಣ್ಯೋತ್ಪಾದನೆಗಳನ್ನು ಪಡೆದು ಆರ್ಥಿಕವಾಗಿ ಲಾಭದಾಯಕವಾಗಿ ಮಾಡುವುದು, ಅರಣ್ಯದ ರಚನಾತ್ಮಕ ಘಟಕಗಳನ್ನು ಕಾಯ್ದಿರಿಸಿಕೊಂಡು ಮಣ್ಣಿನ ಸಂರಕ್ಷಣೆ ಮತ್ತು ನೀರಿನ ಒಸರತೆಯ ನಿರಂತರತೆಯನ್ನು ಕಾಪಾಡುವುದು ಮುಂತಾದವು ಸೇರುತ್ತವೆ. ಅರಣ್ಯದ ಕಲಾತ್ಮಕತೆ ಮತ್ತು ದೃಶ್ಯಮನೋಜ್ಞತೆಯನ್ನು ಉಳಿಸಿಕೊಳ್ಳುವುದು, ಬೆಳೆಸುವುದು, ಅರಣ್ಯದ ಅಂಗಗಳಾದ ಸಸ್ಯ ಮತ್ತು ಪ್ರಾಣಿವರ್ಗಗಳ ರಕ್ಷಣೆ, ಪೋಷಣೆ ಇವೇ ಮುಂತಾದ ಅಂಶಗಳೂ ಒಳಗೊಳ್ಳುತ್ತವೆ.

ಕೃಷಿಕಾರ್ಯಕ್ಕೂ ಅರಣ್ಯನಿರ್ವಹಣೆಗೂ ವ್ಯತ್ಯಾಸವಿದೆ. ಕೃಷಿಯಲ್ಲಿ ಬೆಳೆ ಹಾಳಾದರೆ ಅದು ಆ ಋತುವಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ಒಂದು ಸಲ ಅರಣ್ಯದ ಗಿಡಮರಗಳು ನಾಶವಾದರೆ ಹೊಸ ಸಸ್ಯವರ್ಗವನ್ನು ಬೆಳೆಸುವುದಕ್ಕೆ ವರ್ಷಗಳೇ ಬೇಕು. ಈ ನಾಶದಿಂದ ಭವಿಷ್ಯತ್ತಿನ ಮೇಲೆ ಆಗುವ ಪರಿಣಾಮಗಳೂ ಘೋರವೇ. ಖನಿಜಗಳನ್ನು ಭೂಮಿಯಿಂದ ತೋಡಿತೆಗೆದರೆ ಒಂದು ನಿರ್ದಿಷ್ಟ ಸಮಯದ ನಂತರ ಅವುಗಳ ದಾಸ್ತಾನು ಮುಗಿದಂತೆಯೇ, ಆದರೆ ಅರಣ್ಯ ಎಂದೂ ಬರಿದಾಗದ ಅಕ್ಷಯ ಪಾತ್ರೆ. ಅದೇ ಅರಣ್ಯನಿರ್ವಹಣೆಯ ಮೂಲತತ್ತ್ವ.

ನೈಸರ್ಗಿಕವಾಗಿ ಬೆಳೆದ ಅರಣ್ಯವನ್ನು ಒಂದು ಕಟ್ಟು–ನಿಟ್ಟಿಗೆ ತಂದು ಸಂರಕ್ಷಣೆ ಮಾಡುತ್ತ ಅದರಿಂದ ಹೆಚ್ಚು ಹೆಚ್ಚು ಉತ್ಪನ್ನಗಳು ನಿರಂತರವಾಗಿ ದೊರೆಯುವಂತೆ ಮಾಡುವುದು ಅರಣ್ಯನಿರ್ವಹಣಾಧಿಕಾರಿಗಳ ಕರ್ತವ್ಯ. ಅವಶ್ಯಕತೆ ಇದ್ದಾಗ ಕಾಡು ಕಡಿದು ಮತ್ತೆ ಬೆಳವಣಿಗೆಗೆ ಅನುಕೂಲ ಮಾಡಿಕೊಡಬೇಕು. ಅರಣ್ಯಶಾಸ್ತ್ರದ ಸಿದ್ಧಾಂತಕ್ಕನುಗುಣವಾಗಿ ಅರಣ್ಯದ ಯಾವ ಯಾವ ವಿಭಾಗದಲ್ಲಿ ಎಷ್ಟೆಷ್ಟು ಮರಗಳು, ಎಷ್ಟೆಷ್ಟು ಪರಿಮಾಣದಲ್ಲಿರಬೇಕು, ಅವುಗಳ ಬೆಳವಣಿಗೆ ಸಹಜಸ್ಥಿತಿಯಲ್ಲಿದೆಯೇ, ಉತ್ಪನ್ನ ಹೆಚ್ಚಿದೆಯೇ ಕಡಿಮೆಯಾಗಿದೆಯೇ ಮುಂತಾದ ಅಂಶಗಳನ್ನು ಗಮನಿಸುತ್ತಿರಬೇಕು. ಮರಗಳ ಬೆಳವಣಿಗೆಗೂ, ಪರಿಸರದ ಪ್ರಾಣಿ–ಪಕ್ಷಿ ಸಂಕುಲಕ್ಕೂ, ಸೌಂದರ್ಯವರ್ಧನೆಗೂ ಇರುವ ಸಂಬಂಧವನ್ನು ಗಮನದಲ್ಲಿರಿಸಿಕೊಂಡು ಆರ್ಥಿಕ ಆದಾಯವನ್ನು ಗಣಿಸುತ್ತ ಮುಂದುವರಿಯಬೇಕಾಗುವುದು.

ಅರಣ್ಯಸಂವರ್ಧನೆ–ಅರಣ್ಯಕೃಷಿ

ಅರಣ್ಯ ಬೆಳವಣಿಗೆ ಒಂದು ಶಾಸ್ತ್ರವೆಂದು ಮೊದಲೇ ಹೇಳಲಾಗಿದೆ. ಶಾಸ್ತ್ರೀಯ, ವೈಜ್ಞಾನಿಕ ಮರಗಳ ಬೆಳವಣಿಗೆಯ ಶಾಸ್ತ್ರಕ್ಕೆ ಅರಣ್ಯಕೃಷಿ (Silviculture) ಎಂದು ಕರೆಯಲಾಗುತ್ತದೆ. ಮರಗಳನ್ನು ಹುಟ್ಟಿಸಿ, ಯಾವ ರೀತಿ ಅವನ್ನು ಬೆಳೆಸಿ ಸಂರಕ್ಷಿಸಬೇಕೆಂಬುದೇ ಈ ಅರಣ್ಯಕೃಷಿಯ ಮೂಲ ಉದ್ದೇಶ.

ಪರಿಸರದ ಅಧ್ಯಯನ ಮಾಡಿ ನೈಸರ್ಗಿಕವಾಗಿ ಬೆಳೆದ ಅರಣ್ಯದಲ್ಲಿಯ ಮರಗಳ ಸಂಖ್ಯೆ ಪ್ರಮಾಣ, ಒತ್ತು, ಜಾತಿ ಮುಂತಾದವನ್ನು ಗುರುತಿಸಿ ಅದಕ್ಕೆ ತಕ್ಕಂತೆ ಅವುಗಳನ್ನು ವೃದ್ಧಿಗೊಳಿಸುವ (ಇಲ್ಲವೆ ಕಡಿಯುವ) ಕಾರ್ಯ ಕೈಕೊಳ್ಳಬೇಕಾಗುವುದು. ಇಂಥ ನೈಸರ್ಗಿಕ ಅಭಿವೃದ್ಧಿಯಲ್ಲಿ ಮುಖ್ಯವಾಗಿ ಸಾಗವಾನಿ, ಸಾಲ, ದೇವದಾರು ಮುಂತಾದ ಮರಗಳು ಸೇರುತ್ತವೆ.

ಅರಣ್ಯದ ಕೃತಕ ಬೆಳವಣಿಗೆಯೂ ನೈಸರ್ಗಿಕ ಅಭಿವೃದ್ಧಿಯಷ್ಟೇ ಮಹತ್ವವನ್ನು ಪಡೆದಿದೆ. ಅರಣ್ಯದಲ್ಲಿ ಗಿಡಮರಗಳ ಸಂಖ್ಯೆ ಕಡಮೆಯಿದ್ದರೆ, ಬೆಳೆದ ಮರಗಳು ಪುಷ್ಟವಾಗಿಲ್ಲದಿದ್ದರೆ, ಬೆಳವಣಿಗೆ ತುಂಬಾ ನಿಧಾನವಾಗಿದ್ದರೆ ಮರಗಳನ್ನು ಕಡಿದಾದಮೇಲೆ ಮರಗಳನ್ನು ಹೊಸದಾಗಿ ಹುಟ್ಟು ಹಾಕಿ ಬೆಳೆಸುವ ಕ್ರಮಕೈಕೊಳ್ಳಬೇಕಾಗುವದು, ಅದೇ ಅರಣ್ಯಕೃಷಿ. ಯಾವುದೇ ಸಸ್ಯವನ್ನು ಬೆಳೆಸಬೇಕಾದರೆ ಬೀಜ ಅತ್ಯಂತ ಮಹತ್ವದ ಅಂಶ. ಆಯಾ ಜಾತಿಯ ಮರಗಳ ಉತ್ತಮ ಬೀಜಗಳನ್ನು ಆಯ್ದು ಸಂಗ್ರಹಿಸಬೇಕಾಗುವುದು. ಸರಿಯಾದ ಸಮಯದಲ್ಲಿ ಅವನ್ನು ನರ್ಸರಿಯಲ್ಲಿ ಬೆಳೆಸುವುದು, ನೀರುಣ್ಣಿಸುವುದು, ಬಿಸಿಲು-ಗಾಳಿಯಿಂದ ರಕ್ಷಿಸುವುದು, ಗೊಬ್ಬರ ಹಾಕುವುದು. ಔಷಧಿ ಸಿಂಪಡಿಸುವುದು, ಕಳೆ ಕೀಳುವುದು ಇವೇ ಮುಂತಾದ ಪ್ರಕ್ರಿಯೆಗಳು ಅರಣ್ಯಕೃಷಿಯಲ್ಲಿಯೇ ಅಡಕವಾಗುವವು. ನಂತರ ಬೆಳೆದ ಸಸಿಗಳನ್ನು ಪಾಲಿಥೀನ್ ಚೀಲಗಳಲ್ಲಿ ಅಥವಾ ಅವಶ್ಯಕವಾದ ಬೇರೆ ಜಾಗಗಳಲ್ಲಿ ನೆಡಬೇಕು. ಇಂತಹ ಸಸಿಗಳನ್ನು ಮತ್ತೆ ಸರಿಯಾದ ಋತುವನ್ನು ಆಯ್ಕೆ ಮಾಡಿ ಅರಣ್ಯದಲ್ಲಿ ನೆಡಬೇಕು. ಇದಕ್ಕಾಗಿ ಅರಣ್ಯಭಾಗವನ್ನು ಸ್ವಚ್ಛಗೊಳಿಸಿ, ಗುಂಡಿ ತೋಡಿ ಸರಿಯಾದ ಕ್ರಮವನ್ನು ಅನುಸರಿಸುವುದು ಅವಶ್ಯಕ. ಬೀಜಹಾಕಿ ಸಸಿಬೆಳೆಸುವ ನರ್ಸರಿ ಘಟ್ಟದಲ್ಲಿಯೇ ಸಸಿಗಳು ಆರೋಗ್ಯಕರವಾಗಿದ್ದರೆ ಮುಂದೆ ಮರಗಳೂ ಪುಷ್ಟಿಯಾಗಿ ಬೆಳೆಯುತ್ತವೆ. ಅನೇಕ ಸಾರಿ ಪುಷ್ಟಿಯಾದ ಟೊಂಗೆಯನ್ನೇ ನೆಡಬಹುದು. ಮರಗಳ ಜಾತಿ, ಅವುಗಳ ಎತ್ತರ, ಅಗಲ, ಹಸಿರು ಛಾವಣಿ (conopy), ಶಿಖರಗಳನ್ನು ಅನುಸರಿಸಿ ಅವುಗಳ ಮಧ್ಯೆ ಬಿಡಬೇಕಾದ ಅಂತರ, ನೀರಿನ ಪ್ರಮಾಣ, ಗೊಬ್ಬರಗಳ ಪ್ರಕಾರ ಪ್ರಮಾಣ ಮುಂತಾದ ಅಂಶಗಳನ್ನು ನಿರ್ಧರಿಸಬೇಕಾಗುವುದು.

ನೆಟ್ಟ ಸಸಿಗಳ ಸುತ್ತ ಹುಲ್ಲು ಮತ್ತಿತರ ಕಳೆ ಬೆಳೆಯಲು ಅವಕಾಶ ಕೊಡಬಾರದು. ಒಂದು ವೇಳೆ ಬೆಳೆದಿದ್ದರೆ ಆಗಾಗ ಕಿತ್ತು ಸ್ವಚ್ಛಗೊಳಿಸುವುದು ಅವಶ್ಯಕ. ಆಗಾಗ ಮಣ್ಣನ್ನು ಸಡಿಲಿಸಿ, ಸೂರ್ಯನ ಬೆಳಕು, ಗಾಳಿ ಸರಿಯಾಗಿ ದೊರಕುವಂತೆ ನೋಡಿಕೊಳ್ಳುತ್ತಿರಬೇಕು. ಅನೇಕ ಬಾರಿ ಒಂದಕ್ಕೊಂದು ಹತ್ತಿರವಿದ್ದ ಗಿಡಗಳು ಪರಸ್ಪರರ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡುವುವು. ಆಗ ಅನವಶ್ಯಕವಾದ ರೆಂಬೆಗಳನ್ನು ಕಡಿದು ಹಾಕಬೇಕಾಗುತ್ತದೆ. ಪುಷ್ಟಿಕರವಾಗಿ ಬೆಳೆಯುವ ಮರಕ್ಕೆ ಸಹಕಾರಿಯಾಗುವಂತೆ ಮಾಡುವ ಈ ಕ್ರಿಯೆಗೆ ಥಿನ್ನಿಂಗ (Thinning) ಎಂದು ಹೆಸರು. ವೈಜ್ಞಾನಿಕವಾಗಿ ಅಧ್ಯಯನ ಮಾಡಿ ಯಾವ ರೀತಿ, ಎಷ್ಟು ಥಿನ್ನಿಂಗ್ ಮಾಡ

ಬೇಕೆಂಬುದನ್ನು ನಿರ್ಧರಿಸುವಾಗ ಅರಣ್ಯ ಕೃಷಿತಜ್ಞರ ಸಿದ್ಧಾಂತಗಳು ಮತ್ತು ಪ್ರತ್ಯಕ್ಷಿತ ಅನುಭವಗಳ ಸಹಾಯ ಪಡೆಯಬೇಕು.

ಅರಣ್ಯ ಇಲಾಖೆ ಕೇವಲ ಇರುವ ಅರಣ್ಯಗಳನ್ನು ಮಾತ್ರ ವೃದ್ಧಿಪಡಿಸುವುದಲ್ಲದೆ ಇನ್ನಿತರ ಸೂಕ್ತ ಗಿಡ-ಮರಗಳನ್ನು ನೆಟ್ಟು ಅಭಿವೃದ್ಧಿ ಪಡಿಸಬೇಕಾಗುವುದು. ಹಿಂದೆ, ಅರಣ್ಯಗಳನ್ನು ಜಮೀನ್ದಾರರು, ಪಾಳೆಯಗಾರರು, ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಪೂರ್ತಿ ವಹಿಸಿಕೊಡುವ ಪರಿಪಾಠವಿತ್ತು. ಆದರೆ ಬರಬರುತ್ತ ಇಂಥ ಖಾಸಗಿ ಒಡೆತನದ ಅರಣ್ಯಗಳನ್ನು ಬೇಕಾಬಿಟ್ಟಿಯಾಗಿ ಕಡಿದು ನಾಶಮಾಡಿ ಅಂಥ ಅರಣ್ಯ ಪ್ರದೇಶಗಳು ಬೆಂಗಾಡಾಗಿ ಉಳಿದಿವೆ. ಇಂಥ ಬೆಂಗಾಡುಗಳನ್ನು ಇಲಾಖೆಯು ತನ್ನ ಸುಪರ್ದಿಗೆ ತೆಗೆದುಕೊಂಡು ಅವುಗಳ ಅಭಿವೃದ್ಧಿ ಮಾಡಲು ಅವಕಾಶವಿದೆ. ಅದೇ ರೀತಿ ಬೇರಾವುದೇ ಕಾರಣಗಳಿಂದ (ಭೂ ಸವಕಳಿ ಮುಂತಾದ) ಯಾವುದೇ ವಿಶಾಲವಾದ ಪ್ರದೇಶವು ಬಂಜರಾಗಿದ್ದರೆ, ಕೊರಕಲಾಗಿದ್ದರೆ ಅಂಥ ಪ್ರದೇಶವನ್ನು ಅರಣ್ಯವಾಗಿ ಪರಿವರ್ತಿಸುವುದೂ ಆ ಇಲಾಖೆಯ ಕಾರ್ಯಾಡಳಿತಕ್ಕೆ ಒಳಪಡುತ್ತದೆ.

ಅರಣ್ಯಸಂವರ್ಧನೆ–ಹೊಸ ಬೆಳೆ

ಬಂಜರು ಭೂಮಿಯನ್ನು ವೃದ್ಧಿಗೊಳಿಸಿ ಹೊಸದಾಗಿ ಅರಣ್ಯವನ್ನು ಅಭಿವೃದ್ಧಿಗೊಳಿಸುವ (ಅಫಾರೆಸ್ಟೇಶನ್) ಕಾರ್ಯಕ್ಕೆ ಈಗ ತುಂಬಾ ಮಹತ್ವ ಕೊಡಲಾಗುತ್ತಿದೆ. ಅನೇಕ ವರ್ಷಗಳವರೆಗೆ ಗಿಡ-ಮರಗಳನ್ನೇ ಕಾಣದ ಭೂಮಿಯನ್ನು ಇಂಥ ಕಾರ್ಯಕ್ಕೆ ಬಳಸಲಾಗುತ್ತದೆ. ಇದು ತುಂಬ ಹಿಂದೆ ಕೃಷಿಗೆ ಬಳಸಿಬಿಟ್ಟ ಪಡುಭೂಮಿಯಾಗಿರಬಹುದು ಇಲ್ಲವೆ ಹವಾಮಾನದ ಏರುಪೇರಿನಿಂದ ಬರಡಾಗಿರಬಹುದು. ಹವಾಮಾನದ ವೈಪರೀತ್ಯ ಭೂಮಿಗಳನ್ನು ಬೆಂಗಾಡು ಮಾಡುವ ಉದಾಹರಣೆಗಳನ್ನು ನಾವು ಈಗಲೂ ನೋಡಬಹುದು. ತೀವ್ರ ಗಾಳಿಯಿಂದಾಗಿ ಮರಳಿನ ಹೇರುವಿಕೆಯಿಂದ ರಾಜಸ್ಥಾನದಲ್ಲಿ ಮರುಭೂಮಿ ಉಂಟಾಗಿರುವುದು ; ಕುದುರೆಮುಖ, ಕೆಮ್ಮಣ್ಣುಗುಂಡಿ ಸಂಡೂರು ಮುಂತಾದ ಪ್ರದೇಶದಲ್ಲಿ ಖನಿಗಳ ಹತ್ತಿರ ತೆಗೆದು ಬಿಸಾಕಿದ ನಿರುಪಯುಕ್ತ ಮಿಶ್ರಣದಿಂದಲೂ ಭೂಮಿ ಬರಡಾಗಿದೆ. ಹಾಗೆ ನೋಡಿದರೆ ಭಾರತ ದೇಶದ ತುಂಬೆಲ್ಲ ಕೋಟಿಗಟ್ಟಲೆ ಹೆಕ್ಟೇರು ಭೂಮಿ ಬರಡಾಗಿ ನಿಂತಿದೆ. ಆದ್ದರಿಂದಲೇ ಸರಕಾರವು ಈ ದಿಶೆಯಲ್ಲಿ ರಭಸದ ಕಾರ್ಯ ನಡೆಸುತ್ತಿದೆ. ರಾಷ್ಟ್ರೀಯ 'ಬರಡುಭೂಮಿ ಅಭಿವೃದ್ಧಿ ನಿಗಮ'ವನ್ನು ಇದಕ್ಕಾಗಿಯೇ ರಚಿಸಲಾಗಿದ್ದು ವರ್ಷಕ್ಕೆ ಸುಮಾರು 5 ದಶಲಕ್ಷ ಹೆಕ್ಟೇರು ಬಂಜರು ಭೂಮಿಯನ್ನು ಸಸ್ಯಸುಗಮಗೊಳಿಸುವ ಗುರಿ ಇದೆ. ಈಗಿರುವ 22% ಕಾಡು 33%ಕ್ಕೆ ಏರಬೇಕೆಂಬ ಮಹತ್ವಾಕಾಂಕ್ಷೆ ಯೋಜನೆ ಇದೆ. 7ನೆಯ ಪಂಚವಾರ್ಷಿಕ ಯೋಜನೆಯ ಪ್ರಕಾರ 2000ನೇ ಇಸ್ವಿಯ ಹೊತ್ತಿಗೆ 110 ದಶಲಕ್ಷ ಹೆಕ್ಟೇರುಗಳಷ್ಟು ಭೂಮಿಯನ್ನು ಕಾಡಾಗಿ ಪರಿವರ್ತಿಸುವ ಭಾರಿ ಗುರಿಯು ಇದೆ. ಆದರೆ ಇನ್ನುಳಿದ 12–13 ವರ್ಷಗಳಲ್ಲಿ 70–75 ದಶಲಕ್ಷ ಹೆಕ್ಟೇರು ಭೂಮಿ

ಸಸ್ಯಶ್ಯಾಮಲೆಯಾಗುವ ಗುರಿ ಬಹುಶಃ ದೊಡ್ಡ ಸವಾಲೇ ಸರಿ. ಇದನ್ನು ಸಾಧಿಸಲು ಎಲ್ಲರ ಸಹಕಾರ ಅಗತ್ಯ. ಜಿಲ್ಲೆಯಮಟ್ಟದಿಂದಾರಂಭಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟಗಳ ಕಾರ್ಯಯೋಜನೆಗಳು ತಯಾರಾಗಿ, ಚಾಲನೆ ನೀಡುವ ಕ್ರಿಯೆ ನಡೆಯ ಬೇಕು.

ಅರಣ್ಯಸಂವರ್ಧನೆ–ವಿವಿಧ ಯೋಜನೆ–ಕಾರ್ಯಕ್ರಮಗಳು

ಅಭಿವೃದ್ಧಿನಿಗಮದ ಕೆಲಸ ಅನೇಕ ತಜ್ಞರ ಅಭಿಪ್ರಾಯದಂತೆ ಸರಿಯಾಗಿ ನಡೆದಿಲ್ಲ. ಈವರೆಗೆ ಕೇವಲ 15 ಸಾವಿರ ಹೆಕ್ಟೇರನಷ್ಟು ಭೂಮಿಯನ್ನು ಪರಿವರ್ತಿಸಲು ಸಾಧ್ಯವಾಗಿಲ್ಲ. ಇದಕ್ಕೆ ಬಹುಶಃ ಕಾರ್ಯಚಾಲನೆ ಒಂದೆರಡು ಸಂಸ್ಥೆಗಳಲ್ಲಿ ಕೇಂದ್ರೀ ಕೃತವಾಗಿರುವುದು ಕಾರಣ ಎಂದು ಹೇಳಲಾಗಿದೆ. ಈ ರೀತಿಯ ಕೇಂದ್ರೀಕರಣದ ಬದಲಾಗಿ ಇಂಥ ಕಾರ್ಯವು ಮೂಲತಃ ರಾಜ್ಯ ಸರಕಾರಗಳಿಂದ, ಜಿಲ್ಲಾ ಪರಿಷತ್ತು, ಗ್ರಾಮಪಂಚಾಯತಿಗಳ ಮಟ್ಟದಲ್ಲಿ ನಡೆಯಬೇಕು. ಜನರೇ ಮನಃಪೂರ್ವಕವಾಗಿ ಇದರಲ್ಲಿ ಭಾಗವಹಿಸುವಂತಾಗಬೇಕು.

ಒಂದೊಂದು ಗ್ರಾಮವನ್ನು ಒಂದೊಂದು ಚಿಕ್ಕ ಕಾರ್ಯಕ್ಷೇತ್ರವನ್ನಾಗಿ ಮಾಡಿ ಗ್ರಾಮ ಪಂಚಾಯತಿಯ ಮೂಲಕ ವಾರ್ಷಿಕ, ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಗಿಡ–ಮರಗಳನ್ನು ಬೆಳೆಸುವ ಕಾರ್ಯ ಪ್ರಾರಂಭವಾಗಬೇಕು. ಈ ಯೋಜನೆಗಳ ಮೇಲ್ವಿಚಾರಣೆಯನ್ನು ಆಯಾ ಹಂತದಲ್ಲಿ ಮಂಡಲ ಪಂಚಾಯತೀ ಜಿಲ್ಲಾ ಪರಿಷತ್ತು ಮತ್ತು ರಾಜ್ಯ ಸರಕಾರಗಳು ನಡೆಸುತ್ತಿರಬೇಕು. ಅಂದರೇನೆ, ರಾಷ್ಟ್ರೀಯ ಗುರಿ ಸಾಧನೆಯಲ್ಲಿ ಯಶಸ್ವಿಯಾಗಬಹುದು.

ಈ ಸಂವರ್ಧನಕಾರ್ಯ ಕೇವಲ ಅರಣ್ಯ ಇಲಾಖೆಯ ಕೆಲಸ ಮಾತ್ರವಾಗಿರ ಕೂಡದು. ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಸಂಸ್ಥೆಗಳು ಮತ್ತು ಜನರು ಇದರಲ್ಲಿ ಭಾಗವಹಿಸಬೇಕು. ಸರಕಾರಿ ನೌಕರರು, ಶೈಕ್ಷಣಿಕ ಕೇಂದ್ರಗಳು, ವಿದ್ಯಾರ್ಥಿಗಳು, ಸಾರ್ವಜನಿಕ ಸಂಸ್ಥೆಗಳು, ಈ ಕಾರ್ಯಕ್ರಮಕ್ಕೆ ವಿಶೇಷ ಕೊಡುಗೆ ನೀಡಬಲ್ಲರು. ಗ್ರಾಮೀಣ ಹೆಂಗಸರು ಮತ್ತು ಮಕ್ಕಳಲ್ಲಿ ಅರಣ್ಯ ರಕ್ಷಣೆಯ ಮತ್ತು ವೃದ್ಧಿಯ ಮಹತ್ವವನ್ನು ವಿಶದಪಡಿಸಬೇಕು. ಪ್ರಾಥಮಿಕ ಶಿಕ್ಷಣದಲ್ಲಿಯೇ ಅರಣ್ಯಗಳ ಬಗೆಗೆ ಮಕ್ಕಳಲ್ಲಿ ಆಸಕ್ತಿ ಕುದುರುವಂತೆ ಪಠ್ಯಕ್ರಮಗಳಲ್ಲಿಯೇ ಅಂಥ ವಿಷಯಗಳನ್ನು ಅಳವಡಿಸಬೇಕು. ಎಲ್ಲ ಭೂ ಮಾಲೀಕರು ಹಾಗೂ ರೈತರು ತಮ್ಮ ಭೂಮಿಯ ಶೇಕಡಾ ಹತ್ತರಷ್ಟು ಭಾಗವನ್ನು ಗಿಡಮರ ಬೆಳೆಸಲು ಅವರ ಮನ ಒಲಿಸಬೇಕು. ಅಗತ್ಯವಾದರೆ ಅಂಥ ಕಾನೂನನ್ನು ತರುವ ಪ್ರಯತ್ನ ಮಾಡಬಹುದು. ಚಿಕ್ಕ-ಪುಟ್ಟ ರೈತರು ಮತ್ತು ಬಡ ಬೇಸಾಯಗಾರರು ತಮ್ಮ ಬಂಜರು ಭೂಮಿಯಲ್ಲಿ ಅಥವಾ ಬೇರೆ ಜಿಂಗಾಡುಗಳಲ್ಲಿ ಮರ ಬೆಳೆಸುವುದನ್ನು ಪ್ರೋತ್ಸಾಹಿಸಿ ಅಂಥ ಕಾರ್ಯವನ್ನು ಸ್ವಯಂ– ಉದ್ಯೋಗ ಅಥವಾ ಗ್ರಾಮೀಣ ಉದ್ಯೋಗಾವಕಾಶಗಳೆಂದು ಪರಿಗಣಿಸಿದರೆ ಅವರ

ಜೀವನಕ್ಕೂ ಅನುಕೂಲವಾಗುವುದಲ್ಲದೆ ಸಸ್ಯಸಂಪದ ಹೆಚ್ಚಲೂ ದಾರಿಯಾಗುವುದು. ಈ ಕಾರ್ಯಗಳಿಗೆ ಅವರಿಗೆ ಸಾಲವನ್ನು ಒದಗಿಸುವುದು ಸರಕಾರದ ಕರ್ತವ್ಯವಾಗಿದೆ.

ಅರಣ್ಯ ಮೂಲ ಉದ್ದಿಮೆಗಳ ಸಂಖ್ಯೆ ಈಗ ಅಪಾರವಾಗಿ ಬೆಳೆದಿದೆ. ಅರಣ್ಯ ಉತ್ಪಾದಕಗಳನ್ನು (ಮುಖ್ಯವಾಗಿ ಮರ) ದೊಡ್ಡ ಪ್ರಮಾಣದಲ್ಲಿ ಉಪಯೋಗಿಸುವ ಈ ಉದ್ದಿಮೆಗಳು ಅರಣ್ಯ ಸಂವರ್ಧನೆಗೂ ಸಹಾಯ ಮಾಡುವುದಗತ್ಯ. ತಮ್ಮ ಲಾಭದ ಹಲವಂಶವನ್ನು ಹೊಸ ಅರಣ್ಯ ಸ್ಥಾಪನೆ, ಅರಣ್ಯ ಸಂವರ್ಧನೆ, ಸಂರಕ್ಷಣೆಗೆ ಮೀಸಲಿಡುವುದಕ್ಕೆ ಹೊಸ ಕಾನೂನುಗಳು ರಚಿತವಾಗಬೇಕು. ಬ್ರಿಟನ್‌ನಂತಹ ರಾಷ್ಟ್ರಗಳಲ್ಲಿ ಅರಣ್ಯ ಸಂವರ್ಧನೆಗೆ ಅನೇಕ ಅನುಕೂಲತೆಗಳನ್ನು ಒದಗಿಸಲಾಗಿದೆ. ಈ ಕಾರ್ಯದಲ್ಲಿ ಆಸಕ್ತಿ ತೋರಿಸುವ ವ್ಯಕ್ತಿ, ಸಂಸ್ಥೆ, ಉದ್ದಿಮೆಗಳಿಗೆ ಧನಸಹಾಯ, ಸಾಲಗಳನ್ನು ಸುಲಭದಲ್ಲಿ ನೀಡಲಾಗುತ್ತಿದೆ. ತೆರಿಗೆಯಲ್ಲಿ ರಿಯಾಯಿತಿ ಕೊಡಲಾಗುತ್ತಿದೆ. ಅಂಥವೇ ಕ್ರಮಗಳನ್ನು ನಮ್ಮಲ್ಲೂ ಅಳವಡಿಸಿಕೊಳ್ಳಬಹುದು.

ಅರಣ್ಯ ಸಂವರ್ಧನೆ–ಸಾಮಾಜಿಕ ಅರಣ್ಯಯೋಜನೆ

ಸಾಮಾಜಿಕ ಅರಣ್ಯ ಯೋಜನೆ ಭಾರತದ ಅರಣ್ಯಾಭಿವೃದ್ಧಿಯ ಒಂದು ಮಹತ್ವದ ಮತ್ತು ಮಹತ್ವಾಕಾಂಕ್ಷೆಯ ಹಂತ. ಸಾಮಾಜಿಕ ಅರಣ್ಯ ಯೋಜನೆಯಡಿ ಬೆಳೆಸುವ ಅರಣ್ಯಗಳು ಮುಖ್ಯವಾಗಿ ಚಿಕ್ಕ ಮರಮಟ್ಟು, ಸೌದೆ, ಮೇವು, ಔಷಧಿಯ ಮೂಲಿಕೆಗಳಿಗಾಗಿ ಉಪಯುಕ್ತವಾಗಿವೆ. ಅಲ್ಲದೆ ಅರಣ್ಯದ ಇನ್ನುಳಿದ ಪ್ರಯೋಜನಗಳಾದ ಪರಿಸರ ಸಮತೋಲನ, ಮಣ್ಣಿನ ರಕ್ಷಣೆ, ಮಹಾಪೂರ ನಿಯಂತ್ರಣ, ನೀರಿನ ಒರತೆ, ಸೌಂದರ್ಯವರ್ಧನೆ ಮುಂತಾದವುಗಳನ್ನೂ ಇವುಗಳಿಂದ ಪಡೆಯಬಹುದು.

ಸಾಮಾನ್ಯವಾಗಿ ಸಾಮಾಜಿಕ ಅರಣ್ಯ ಯೋಜನೆಯೆಂದರೆ, ಸಾಂಪ್ರದಾಯಿಕವಾದ ದೊಡ್ಡ ಕಾಡುಗಳನ್ನು ಹೊರತುಪಡಿಸಿ ಉಳಿದೆಲ್ಲ ಅರ್ಹ ಭೂಮಿಯಲ್ಲಿ ಜನಸಾಮಾನ್ಯರ ನಿಕಟ ಸಹಕಾರದಿಂದ ಗಿಡ-ಮರಗಳನ್ನು ಬೆಳೆಸಿ ಅಂಥ ಭೂಮಿಯನ್ನು ಸದುಪಯೋಗಪಡಿಸಿಕೊಳ್ಳುವುದು ಎಂದರ್ಥ. ಇಂಥ ಗಿಡ-ಮರಗಳನ್ನು ರಸ್ತೆಯ ಪಕ್ಕದಲ್ಲಿ, ರೈಲು ಮಾರ್ಗದ ಬದಿಗೆ, ಹಳ್ಳಿಗಳ ಬರಡು ಭೂಮಿಯಲ್ಲಿ, ಶಾಲೆ, ಕಾಲೇಜುಗಳ, ದೇವಸ್ಥಾನದ ಆವರಣಗಳಲ್ಲಿ ಬೆಳೆಸುವುದರಿಂದ ಸಾಕಷ್ಟು ನೆಲವು ಹಸಿರಾಗಿ ಕಂಗೊಳಿಸುವುದರಲ್ಲಿ ಸಂದೇಹವಿಲ್ಲ.

ಇತ್ತೀಚಿನ ಪಂಚವಾರ್ಷಿಕ ಯೋಜನೆಗಳಲ್ಲಿ ಅರಣ್ಯ ಇಲಾಖೆಗೆ ನಿಗದಿಪಡಿಸಿದ ಒಟ್ಟು ಮೌಲ್ಯದ ಅರ್ಧದಷ್ಟನ್ನು ಈ ಸಾಮಾಜಿಕ ಅರಣ್ಯ ಯೋಜನೆಗೇ ಮೀಸಲಾಗಿರಿಸಿದೆ. ಒಂದು ಅಂದಾಜಿನ ಪ್ರಕಾರ ಈ ಯೋಜನೆಯಡಿಯಲ್ಲಿಯೇ 1985 ರಷ್ಟೊತ್ತಿಗೆ ಸುಮಾರು 5 ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಗಿಡ–ಮರಗಳನ್ನು ನೆಡಲಾಗಿದೆ. ಈ ಯೋಜನೆಗೆ ಜಾಗತಿಕ ಬ್ಯಾಂಕ್ ಮತ್ತು ಸ್ವೀಡನ್ನಿನ ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಗಳೂ ಧನ ಸಹಾಯ ನೀಡುತ್ತಿವೆ.

ಸಾಮಾಜಿಕ ಅರಣ್ಯ ಯೋಜನೆಯಿಂದ ಅಲ್ಪ ಪ್ರಮಾಣದ ಮರಮಟ್ಟು ಮಣ್ಣು ರಕ್ಷಣೆ ಮುಂತಾದ ಪ್ರಯೋಗಗಳಷ್ಟೇ ಅಲ್ಲದೆ ಗ್ರಾಮೀಣ ಉದ್ಯೋಗ ರಹಿತರಿಗೆ ಉದ್ಯೋಗಾವಕಾಶವನ್ನು ದೊರಕಿಸಿದಂತಾಗುವುದು ದುರ್ಬಲ ವರ್ಗದ ಜನರಿಗೆ ಈ ಯೋಜನೆ ವರದಾನವಾಗಬಲ್ಲದು. ಈ ಯೋಜನೆಯ ಪ್ರಗತಿಯಿಂದ ದೊಡ್ಡ ದೊಡ್ಡ ನೈಸರ್ಗಿಕ ಅರಣ್ಯಗಳ ಮೇಲಿನ ಒತ್ತಡ ಕಡಿಮೆಯಾಗುವುದಲ್ಲದೆ ಅಕ್ರಮ ಕೃತ್ಯಗಳಿಗೂ ತಡೆಹಾಕಿದಂತಾಗುತ್ತದೆ. ಈ ಸಾಮಾಜಿಕ ಅರಣ್ಯ ಉತ್ಪಾದನೆಗಳು ಗೃಹಕೈಗಾರಿಕೆಗಳಿಗೆ ಹೆಚ್ಚೆಚ್ಚು ದೊರೆಯುವುದರಿಂದ ಗ್ರಾಮೀಣ ಉತ್ಪನ್ನ ಹೆಚ್ಚುವುದರಲ್ಲಿ ಸಂದೇಹವಿಲ್ಲ. ನಮ್ಮ ಹಳ್ಳಿಗಳು ಹಸಿರಿನಿಂದ ಕಂಗೊಳಿಸಿ, ಸುಂದರವಾಗಲು ಇಂಥ ಸಾಮಾಜಿಕ ಅರಣ್ಯಗಳು ಹೆಚ್ಚು ಸಹಕಾರಿಯಾಗುತ್ತವೆ. ನಗರಗಳ ವಿಕೃತವಾಯು, ಕೃತಕ ಪರಿಸರಗಳಿಂದ ದೂರವಾಗಲು ನಗರವಾಸಿಗಳಿಗೆ ಇಂಥ ತಾಣಗಳು ಕೈಮಾಡಿ ಕರೆಯುವ ದಿನಗಳು ದೂರವಿಲ್ಲ. ರಾಜಸ್ಥಾನದಂತಹ ಮರಭೂಮಿಯಲ್ಲಿ ಈ ಸಾಮಾಜಿಕ ಅರಣ್ಯ ಯೋಜನೆಯಿಂದ ಮರಳು ಸರಿಯುವಿಕೆಯ ದುಷ್ಪರಿಣಾಮಗಳನ್ನು ಫಲಪ್ರದವಾಗಿ ತಡೆಗಟ್ಟಲಾಗಿದೆ. ಬೆಳೆ, ದನಕರುಗಳನ್ನು ತೀವ್ರ ಬಿಸಿ ಮತ್ತು ಚಳಿ ಗಾಳಿಗಳಿಂದ ಈ ಸಾಮಾಜಿಕ ಅರಣ್ಯ ಯೋಜನೆಯಡಿ ಬೆಳೆದ ಗಿಡ-ಮರಗಳು ಯಶಸ್ವಿಯಾಗಿ ರಕ್ಷಿಸಬಲ್ಲವೆಂಬುದಕ್ಕೆ ಅನೇಕ ಉದಾಹರಣೆಗಳು ದೊರಕುತ್ತವೆ.

ಸಾಮಾಜಿಕ ಅರಣ್ಯ ಯೋಜನೆ ಸಮಾಜದ ಎಲ್ಲರನ್ನು ಒಳಗೊಂಡಿರುವ ಯೋಜನೆ. ಪ್ರತಿಯೊಬ್ಬ ಪ್ರಜೆಯೂ ಅದರಲ್ಲಿ ಭಾಗವಹಿಸುವುದು ಅವಶ್ಯಕ. ಈ ಕಾರ್ಯ ಯೋಜನೆಯಿಂದ ಉಂಟಾಗುವ ಸದುಪಯೋಗಗಳನ್ನು ಜನರ ಮನಸ್ಸಿನಲ್ಲಿ ಮೂಡಿಸಲು ಸರಕಾರ ಮತ್ತು ಸಾಮಾಜಿಕ ಸಂಸ್ಥೆಗಳು ಸಾಕಷ್ಟು ಪ್ರಯತ್ನ ಮಾಡಬೇಕು. ರೇಡಿಯೋ, ಟಿ ವಿ.ಗಳ ಮುಖಾಂತರ ಕರಪತ್ರಗಳನ್ನು ಹಂಚುವುದರಿಂದ ವೃತ್ತ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಬರೆಯುವುದರಿಂದ ಈ ಯೋಜನೆಯ ಮಹತ್ವವನ್ನು ಒತ್ತಿ ಒತ್ತಿ ಹೇಳಬೇಕು. ಆಸಕ್ತ ಜನರಿಗೆ ಸರಕಾರವು ಹಣದ ಸಹಾಯವಷ್ಟನ್ನೇ ಅಲ್ಲದೆ ಮರಗಳ ಬೀಜ, ಗೊಬ್ಬರ, ರಾಸಾಯನಿಕಗಳು, ಉಪಕರಣ ಮುಂತಾದವನ್ನು ಪುಕ್ಕಟೆಯಾಗಿ ಇಲ್ಲವೆ ಕಡಮೆ ಬೆಲೆಯಲ್ಲಿ ಒದಗಿಸಬೇಕು. ತಾಂತ್ರಿಕ ಸಹಾಯವನ್ನೂ ನೀಡಬೇಕು. ಅನೇಕ ಸಾರ್ವಜನಿಕ ಮತ್ತು ಖಾಸಗಿ ಕಾರ್ಖಾನೆಗಳ ಸುತ್ತ ಶಾಲೆ, ಕಾಲೇಜುಗಳ ಸುತ್ತ ಸಾಕಷ್ಟು ಭೂಮಿ ಖಾಲಿ ಇರುವಾಗ ಅಂಥವನ್ನು ಉಪಯೋಗಿ ಗಿಡ-ಮರಗಳನ್ನು ನೆಡಲು ಪ್ರೋತ್ಸಾಹಿಸಬೇಕು. ಕೃಷಿ ಸಹಕಾರಿ ಯೋಜನೆಯಂತೆಯೇ ಅರಣ್ಯ ಸಹಕಾರಿ ನಿಗಮಗಳನ್ನು ಸ್ಥಾಪಿಸುವುದರಿಂದ ಈ ದಿಶೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಬಹುದಾಗಿದೆ. ಕೆಲವೇ ಜನರು ಕಲೆತು ಸ್ಥಳೀಯ ಬರಡು ಭೂಮಿಯಲ್ಲಿ ಪರಸ್ಪರ ಸಹಕಾರದಿಂದ ಗಿಡ-ಮರಗಳನ್ನು ಬೆಳೆಸಿ ಫಲವುಣ್ಣುವ ಯೋಜನೆ ನಮ್ಮ ದೇಶದಲ್ಲಿ ಪ್ರಚಲಿತವಾಗಬೇಕು. ವ್ಯವಸಾಯ ಮತ್ತು ಅರಣ್ಯವೃದ್ಧಿಗಳನ್ನೆರಡನ್ನು ಜೊತೆ ಜೊತೆಯಲ್ಲಿ ಮಾಡುವ ಯೋಜನೆಯೂ

ಸಾಮಾಜಿಕ ಅರಣ್ಯ ಯೋಜನೆಯಲ್ಲಿಯೇ ಸೇರ್ಪಡೆಯಾಗುತ್ತದೆ. ಇದರಿಂದ ರೈತರು ಹೆಚ್ಚು ಹೆಚ್ಚು ಲಾಭಗಳಿಸಲು ಅವಕಾಶವಾಗುತ್ತದೆ. ಬರ್ಮಾ ದೇಶದಲ್ಲಿ ಬಳಕೆಗೆ ತಂದ 'ತೆಂಗ್ಯಾ' ಪದ್ಧತಿಯು ಅರಣ್ಯ ಸಂವರ್ಧನೆಗೆ ಹೊಸ ಬಲ ನೀಡಬಲ್ಲದು. ಈ ಪದ್ಧತಿಯಂತೆ ಬಡಬೇಸಾಯಗಾರರಿಗೆ ನಾಲ್ಕೈದು ವರ್ಷಗಳವರೆಗೆ ಒಂದಷ್ಟು ಭೂಮಿಯನ್ನು ಬಿಟ್ಟುಕೊಡಲಾಗುವುದು. ಅವರು ಅದರಲ್ಲಿ ತಮಗೆ ಬೇಕಾದ ಧಾನ್ಯಗಳನ್ನು ಬೆಳೆಯಬೇಕಲ್ಲದೆ ಗಿಡ-ಮರಗಳನ್ನು ನೆಡಲು ಉಪಯುಕ್ತವಾಗುವಂತೆ ಭೂಮಿಯನ್ನು ಸಿದ್ಧಪಡಿಸಿ ಸಸಿಗಳನ್ನು ನೆಡಬೇಕು. ಈ ಪದ್ಧತಿ ನಮ್ಮಲ್ಲೂ ಫಲಪ್ರದವಾಗಬಲ್ಲದು. ಅನಿರೀಕ್ಷಿತವಾಗಿ ಉಂಟಾಗುವ ಘಟನೆಗಳಿಂದ, ಬೆಳೆದ ಕಾಡು ಹಾಳಾಗುವ ಸಂಭವವಿರುತ್ತದೆ. ಆದ್ದರಿಂದ ಸಾಮಾಜಿಕ ಅರಣ್ಯಗಳ ಮೇಲೆ ವಿಮೆ ಇಳಿಸುವ ಪದ್ಧತಿ ಬಳಕೆಗೆ ಬಂದರೆ ಜನರಿಗೆ ಸಾಕಷ್ಟು ಅನುಕೂಲವಾಗುವುದಲ್ಲದೆ, ಮುಂದುವರೆಯುವ ಧೈರ್ಯವೂ ಉಂಟಾಗುತ್ತದೆ.

ಹಳ್ಳಿಗಳ ಹತ್ತಿರ, ರಸ್ತೆಬದಿ, ಶಾಲೆ-ಕಾಲೇಜುಗಳ ಸುತ್ತ ಹಾಗೂ ಇನ್ನಿತರ ಖಾಲಿ ಭೂಮಿಯಲ್ಲಿ ಅನುಕೂಲಕ್ಕೆ ತಕ್ಕಂತೆ ಮತ್ತು ಸ್ಥಳೀಯ ಸ್ಥಿತಿ-ಗತಿಗಳಿಗನುಸಾರವಾಗಿ ಜಾಲಿ, ಮಾವು, ನೇರಳೆ, ಹೊಂಗೆ, ಬೇವು, ಬೋರೆ, ಹುಣಿಸೆ, ನೀಲಗಿರಿ, ಕ್ಯಾಸರಿನಾ ಮುಂತಾದ ಗಿಡಗಳನ್ನು ಬೆಳೆಸಬಹುದು. ಬೇಲಿಗಳಿಗೆ ಉಪಯುಕ್ತವಾಗುವ ಆಡುಸೋಗೆ, ವಿಷಮುದಾರಿ, ಚಿತ್ರಕ, ಅಮೃತಬಳ್ಳಿಗಳನ್ನು ಬೆಳೆಸಬಹುದಾಗಿದೆ.

ಯುದ್ಧ ಕಾಲದಲ್ಲಿ ಅಲ್ಲದೆ ಬೇರೆ ಸಮಯದಲ್ಲಿ ಕಾರ್ಯದ ಒತ್ತಡ ಹೆಚ್ಚಿರದ ಸೇನೆ ಮತ್ತಿತರ ರಕ್ಷಣಾ ವ್ಯವಸ್ಥೆಯ ಉಪಯೋಗವನ್ನು ಸಾಮಾಜಿಕ ಅರಣ್ಯ ಯೋಜನೆಗೆ ಪಡೆದುಕೊಳ್ಳಬಹುದು.

ಸಾಮಾಜಿಕ ಅರಣ್ಯ ಯೋಜನೆಗೆ 6ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ 600 ಕೋಟಿ ರೂಪಾಯಿಗಳನ್ನು ನೀಡಲಾಗಿದ್ದರೆ, 7ನೆಯ ಯೋಜನೆಯಲ್ಲಿ 7,000 ಕೋಟಿ ರೂಪಾಯಿಗೇರಿದೆ. ಅಪಾರ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳುವುದು ಜನರಿಗೇ ಸೇರಿದ್ದು.

ಅರಣ್ಯ-ನಮ್ಮ ಕರ್ತವ್ಯ

ನಿಸರ್ಗ ನಮಗೆ ಎಲ್ಲವನ್ನು ಕೊಟ್ಟಿದೆ. ಅದರಲ್ಲಿ ಅರಣ್ಯ ಸಂಪತ್ತು ಅಗಾಧವಾದುದು, ಅತ್ಯಂತ ಮಹತ್ತರವಾದುದು. ಸಸ್ಯವರ್ಗ ಮಾನವನಿಗೆ ಮಾಡುವ ಉಪಕಾರಕ್ಕಿಂತ ದೊಡ್ಡ ಉಪಕಾರವನ್ನು ಯಾರೂ ಬೇರಾರಿಗೂ ಮಾಡುವುದು ಅಸಾಧ್ಯ. ಹೀಗಿರುವಾಗ ಮನುಷ್ಯ ಅರಣ್ಯವನ್ನು ಬೆಳೆಸಿ, ಪೋಷಿಸುವುದು ಬೇರೇನಲ್ಲ, ತನ್ನನ್ನೇ ತನ್ನ ಕುಲವನ್ನೇ ಪೋಷಿಸಿದಂತೆ. ಒಂದೊಂದು ಸಸಿಯನ್ನು ಒಂದೊಂದು ಕೂಸಿನಂತೆ, ಒಂದೊಂದು ಗಿಡವನ್ನು ಒಂದು ಮಗುವಿನಂತೆ, ಒಂದೊಂದು ಮರವನ್ನು

ತನ್ನ ತಂದೆ-ತಾಯಿಯಂತೆ ಸಾಕಬೇಕು, ಸಲಹಬೇಕಿದೆ ಇಂದಿನ ಸ್ಥಿತಿಯಲ್ಲಿ. ನಮ್ಮ ಅರಣ್ಯಗಳ ದುಸ್ಥಿತಿ ದೇಶವನ್ನೇ ಹಾಳು ಮಾಡುವುದರಲ್ಲಿದೆ. 10 ವರ್ಷಗಳ ಹಿಂದೆ ಕೇವಲ ಬರಿಗಣ್ಣಿಗೆ ಬೀಳುತ್ತಿದ್ದ ಹಸಿರು ಈಗ ಕಾಣದಾಗಿದೆ ಎಂದು ವಿದೇಶೀತಜ್ಞರೊಬ್ಬರು ಬಣ್ಣಿಸಿದ್ದಾರೆ. ಕಾಡಿನ ಒಂದೊಂದು ರೆಂಬೆಯು ಕಡಿತ ಒಂದೊಂದು ಗಿಡದ ಸಾವು, ನಮ್ಮ ದೇಶವನ್ನು ವಿನಾಶದತ್ತ ಮುನ್ನಡೆಸುವ ಹೆಜ್ಜೆಗಳಾಗಿವೆ.

ಮರ ಒಂದು ದೇವತೆ ಎಂದು ಪೂಜಿಸುವ ಕಾಲ ಒಂದಿತ್ತು. ಈಗ ಮತ್ತೆ ಆ ವಾತಾವರಣ ನಿರ್ಮಾಣವಾಗಬೇಕಾಗಿದೆ. ಒಂದು ಮಗು ಹುಟ್ಟಿದಾಗ ಎರಡು ಗಿಡ ನೆಡುವ ಪ್ರತಿಜ್ಞೆ ಮಾಡಬೇಕಾಗಿದೆ. ಪ್ರತಿಯೊಬ್ಬ ತಂದೆ ತಾಯಿ ಮಕ್ಕಳಿಗೆ ಗಿಡಮರಗಳಲ್ಲಿ ಆಸಕ್ತಿ ಬೆಳೆಸುವ ಶಿಕ್ಷಣವು ಮನೆಯಿಂದಲೇ ಪ್ರಾರಂಭವಾಗಬೇಕಿದೆ. ಅವು ನಮ್ಮ ಪ್ರಾಣದಾಯಕ ವೃಕ್ಷಗಳಷ್ಟೇ ಅಲ್ಲ ನಮ್ಮ ಜೀವನವನ್ನು ಸುಖಮಯಗೊಳಿಸುವ ಕಲ್ಪವೃಕ್ಷಗಳೆಂದು ಮಕ್ಕಳ ಮನಸ್ಸಿನಲ್ಲಿ ಬಿಂಬಿಸಬೇಕಾಗಿದೆ.

ಅರಣ್ಯ ಸಂವರ್ಧನೆಗೆ, ಬೆಳವಣಿಗೆಗೆ ಎಲ್ಲರ ಕೊಡುಗೆಯೂ ಅತ್ಯಾವಶ್ಯಕ. ಬಡವ ಬಲ್ಲಿದರೂ, ಚಿಕ್ಕ-ದೊಡ್ಡವರು, ಸ್ತ್ರೀಪುರುಷರೂ ಈ ಕಾರ್ಯದಲ್ಲಿ ಒಂದಲ್ಲ ಒಂದು ರೀತಿ ಸಹಾಯಹಸ್ತ ಚಾಚಿದರೆ ಮತ್ತೆ ನಾವು ಉಳಿದು ಬಾಳಬಹುದು. ಇಲ್ಲವಾದರೆ ಬಹುಶಃ ಇನ್ನೊಂದು ಶತಮಾನದೊಳಗೆ ಜಗವೆಲ್ಲ ಬರಡಾಗಿ, ಬೆಂಗಾಡಾಗಿ ಮರುಭೂಮಿಯಾಗಿ ಮಾರ್ಪಡುವುದರಲ್ಲಿ ಸಂದೇಹವಿಲ್ಲ. ಅಪಾಯದ ಗಂಟೆ ಮೊಳಗುವುದಕ್ಕಾರಂಭಿಸಿ ಬಹುಕಾಲ ಸಂದುಹೋಗಿದೆ. ನಾವಿನ್ನು ಎಚ್ಚೆತ್ತುಕೊಳ್ಳದಿದ್ದರೆ ಬಹುಶಃ ನಾವು ಏಳುವುದೇ ಇಲ್ಲವೇನೋ. ಆದ್ದರಿಂದ ಗಿಡಮರಗಳ ಬೆಳವಣಿಗೆ, ಪೋಷಣೆ, ಅರಣ್ಯಸಂವರ್ಧನೆ ನಮ್ಮ ಈ ಕ್ಷಣದ ಪಣವಾಗಲಿ, ಗುರಿಯಾಗಲಿ. ನಮ್ಮ ಉಳಿಯುವಿಕೆಗೆ ಅದೊಂದೇ ದಾರಿ ಈಗ.

ಮಧುವಾತಾ ಋತಾಯತೇ
ಮಧುಲಕ್ಷರಂತಿ ಸಿಂಧವಃ
ಮಾಧ್ವೀನಃ ಸಂತೋಷಧೀಃ |
ಮಧುನಕ್ತಂ ಉತೋಷನಿ
ಮಧುಮತ್ಪಾರ್ಥಿವಂ ರಜಃ
ಮಧುದ್ಯೌರಸ್ತುನಃ ಪಿತಾ
ಮಧುಮಾನ್ನೋ ವನಸ್ಪತಿಃ
ಮಧುಮಾನಸ್ತು ಸೂರ್ಯಃ
ಮಾಧ್ವೀರ್ಗಾವೋ ಭವಂತು ನಃ

ಡಾ. ಎಸ್. ಟಿ. ನಾಯ್ಡು, ತೀರ್ಥಹಳ್ಳಿ

ಐತಿಹಾಸಿಕ ನಗರ ಶ್ರೀರಂಗಪಟ್ಟಣ

ಇಂದು ಮಂಡ್ಯ ಜಿಲ್ಲೆಯಲ್ಲಿ ಒಂದು ಚಿಕ್ಕ ತಾಲ್ಲೂಕು ಕೇಂದ್ರವಾಗಿರುವ ಶ್ರೀರಂಗಪಟ್ಟಣ ಮಧ್ಯಕಾಲೀನ ಯುಗದಲ್ಲಿ ಬೇರೆ ಬೇರೆ ರಾಜ ವಂಶಸ್ಥರ ರಾಜಧಾನಿಯಾಗಿ ಮೆರೆದ ಮಹಾನಗರ. ಸುಮಾರು ನಾಲ್ಕು ಶತಮಾನಗಳ ಕಾಲದ ಭವ್ಯವಾದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಹೊಂದಿದ್ದ ಈ ನಗರ ವಿಜಯನಗರ ಸಾಮ್ರಾಟರ ಸಾಮಂತರಿಗೆ, ಪೈಸ್ರಾಯಿಗಳಿಗೆ, ಮೈಸೂರಿನ ಒಡೆಯರಿಗೆ ತರುವಾಯ ಹೈದರಾಲಿ-ಟಿಪ್ಪುಸುಲ್ತಾನರಿಗೆ ರಾಜಧಾನಿಯಾಗಿ ಅಂತರರಾಷ್ಟ್ರೀಯ ಖ್ಯಾತಿ ಹೊಂದಿದ್ದಿತು. ನಾಗಮಂಗಲದ ನಾಯಕನಾಗಿದ್ದ ತಿಮ್ಮಣ್ಣನು ವಿಜಯನಗರ ಸಾಮ್ರಾಟರ ಅನುಮತಿ ಪಡೆದು ಶ್ರೀರಂಗಪಟ್ಟಣದಲ್ಲಿ ಕೋಟೆಯನ್ನು ಕಟ್ಟಿಕೊಂಡು ಕ್ರಿ.ಶ. 1454 ರಿಂದ ಅವರ ಸಾಮಂತನಾಗಿ ಆಳತೊಡಗಿದನು ಹದಿನೈದನೇ ಶತಮಾನದ ಕೊನೆಯುವರೆಗೂ ಅವನ ವಂಶಸ್ಥರ ಸ್ವಾಧೀನದಲ್ಲಿ ಇದ್ದ ಶ್ರೀರಂಗಪಟ್ಟಣ ತರುವಾಯ ವಿಜಯನಗರ ಸಾಮ್ರಾಟರ ಆಡಳಿತಕ್ಕೆ ನೇರವಾಗಿ ಒಳಪಟ್ಟು ಅವರ ಪ್ರಾಂತೀಯ ರಾಜಧಾನಿಗಳಲ್ಲಿ ಒಂದಾಯಿತು. ವಿಜಯನಗರ ಸಾಮ್ರಾಟರ ವಂಶಕ್ಕೆ ಸೇರಿದ ವೆಂಕಟ, ರಾಮರಾಜಯ್ಯ, ತಿರುಮಲ ಮುಂತಾದವರು ಶ್ರೀರಂಗಪಟ್ಟಣದ ಪೈಸ್ರಾಯಿಗಳಾಗಿ ಹದಿನೇಳನೇ ಶತಮಾನದ ಪ್ರಾರಂಭದವರೆಗೂ ಆಡಳಿತ ನಡೆಸಿದರು. ದಕ್ಷಿಣ ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಬಲಿಷ್ಟ ಕೇಂದ್ರಗಳಲ್ಲಿ ಒಂದಾಗಿದ್ದ ಶ್ರೀರಂಗಪಟ್ಟಣ ಕ್ರಿ.ಶ 1610ರಲ್ಲಿ[1] ಮೈಸೂರಿನ ರಾಜನಾದ ರಾಜ ಒಡೆಯರ ವಶವಾಯಿತು. ಮೈಸೂರು ರಾಜ್ಯದ ನಿಜವಾದ ಸ್ಥಾಪಕನಾದ ರಾಜ ಒಡೆಯರ್ ತನ್ನ ರಾಜಕೀಯ ಆಶೆಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ವಿಜಯನಗರದ ಪೈಸ್ರಾಯಿ ತಿರುಮಲನನ್ನು ಸೋಲಿಸಿ ಶ್ರೀರಂಗಪಟ್ಟಣವನ್ನು ತನ್ನ ವಶಕ್ಕೆ ತೆಗೆದುಕೊಂಡು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅಂದಿನಿಂದ 1799ರಲ್ಲಿ ನಡೆದ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಪತನ ಹೊಂದುವವರೆಗೂ ಇದು ಮೈಸೂರು ರಾಜ್ಯದ ರಾಜಧಾನಿಯಾಗಿದ್ದಿತು.

ದೀರ್ಘಕಾಲದವರೆಗೆ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ ಕೇವಲ ರಾಜಕೀಯ ಚಟುವಟಿಕೆಗಳಿಗೆ ಕೇಂದ್ರವಾಗಿರದೆ ಸಾಂಸ್ಕೃತಿಕ ಚಟುವಟಿಕೆಗಳಿಗೂ ಕೇಂದ್ರವಾಗಿದ್ದಿತು. ಹದಿನೇಳನೇ ಶತಮಾನದಲ್ಲಿ ರಚಿತವಾದ ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯಂ, ತಿರುಮಲಾರ್ಯನ ಚಿಕ್ಕದೇವರಾಜ ವಂಶಾವಳಿ ಹಾಗು ಚಿಕ್ಕದೇವರಾಜ ವಿಜಯಂ, ಚಿಕ್ಕುಪಾಧ್ಯಾಯನ ಕಾಮಂಧಕ ನೀತಿ, ದಿವ್ಯ ಸೂರಿಚರಿತೆ ಹಾಗು ಶ್ರೀರಂಗ ಮಹಾತ್ಮೆ, ತಿಮ್ಮ ಕವಿಯ ಶ್ರೀರಂಗ ಮಹಾತ್ಮೆ, ಚಿದಾನಂದ ಕವಿಯ ಮುನಿವಂಶಾಭ್ಯುದಯಂ, ಕ್ರೈಸ್ತ ಪಾದ್ರಿ ಫಾದರ್ ಸಿನ್ನಾಮಿ ಹಾಗೂ ಇತರ ಯರೋಪಿಯನ್ನರ ಲೇಖನಗಳು ಹಾಗು ಶಿಲಾಶಾಸನಗಳು ಕಾವೇರಿ ನದಿಯಿಂದ ಸುತ್ತುವರಿಯಲ್ಪಟ್ಟ ಈ ಸುಂದರ ದ್ವೀಪನಗರ ಹಾಗೂ ಅಲ್ಲಿಯ ಜನರ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಜೀವನದ ಬಗ್ಗೆ ಮಾಹಿತಿ ನೀಡುತ್ತವೆ.

ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯಂ ಗ್ರಂಥದಲ್ಲಿ ಕಂಡು ಬರುವ ವರ್ಣನೆಯಂತೆ ಶ್ರೀರಂಗಪಟ್ಟಣ ಒಂದು ವಿಶಾಲವಾದ ಹಾಗೂ ಸುಂದರವಾದ ಪಟ್ಟಣ. ಬಲಿಷ್ಠ ಪ್ರಾಕಾರ, ಗೋಡೆ, ಕಂದಕ, ಕೊತ್ತಳ ಹಾಗೂ ಮೊನಚುಗಳಿಂದ ಕೂಡಿರುವ ಇಲ್ಲಿಯ ಕೋಟೆ ಕಣ್ಮನಗಳನ್ನು ಸೆಳೆಯುತ್ತದೆ. ಕೋಟೆಯ ಗೋಡೆಗಳು ಹುಲಿ ಮುಖದ ಚಿತ್ರಗಳಿಂದ ಅಲಂಕೃತವಾಗಿವೆ. ನಗರದ ರಕ್ಷಣೆಗಾಗಿ ಕೋಟೆಯ ಕೊತ್ತಳಗಳಲ್ಲಿ ಬಲಿಷ್ಠ ಫಿರಂಗಿಗಳನ್ನಿಡಲಾಗಿದೆ. ನಗರದ ಸುತ್ತ ಇರುವ ಕೋಟೆಯ ನಾಲ್ಕು ಸಾಲಿನ ಗೋಡೆಗಳಲ್ಲಿರುವ ಕೊಠಡಿಗಳು ಶಸ್ತ್ರಸಜ್ಜಿತ ಕಾವಲುಗಾರರನ್ನೊಳಗೊಂಡಿವೆ. ಪೂರ್ವದ್ವಾರ, ಮೈಸೂರು ದ್ವಾರ ಮತ್ತು ಬಿಜಾಪುರ ದ್ವಾರ ಎಂಬ ಮೂರು ಮುಖ್ಯ ದ್ವಾರಗಳನ್ನು ಕೋಟೆ ಹೊಂದಿದೆ. ಪೂರ್ವ ದ್ವಾರಕ್ಕೆ ಹೊಂದಿಕೊಂಡಂತೆ ಇರುವ ಬೀದಿಯಲ್ಲಿ ಕುದುರೆ ಮತ್ತು ಆನೆಯ ಲಾಯಗಳಿವೆ. ನಗರದ ಪ್ರಮುಖ ಬೀದಿಗಳಾದ ಸೂರ್ಯ ಬೀದಿ ಹಾಗೂ ಚಂದ್ರ ಬೀದಿಗಳ ಎರಡೂ ಬದಿಯಲ್ಲಿ ಸುಂದರವಾದ ಮಹಡಿ ಮನೆಗಳಿವೆ. ನಗರದ ಮತ್ತೊಂದು ಪ್ರಮುಖ ಬೀದಿ ಸಂತೇಪೇಟೆ ವಿವಿಧ ಮಾರಾಟದ ವಸ್ತುಗಳನ್ನು, ದವಸ ಧಾನ್ಯಗಳನ್ನು ಒಳಗೊಂಡಿರುವ ಅಂಗಡಿಗಳ ಸಾಲುಗಳಿವೆ. ನಗರದ ಮುಖ್ಯ ಬೀದಿಗಳಿಗೆ ಹೊಂದಿಕೊಂಡಿರುವಂತೆ ಇರುವ ಉಪಬೀದಿಗಳಲ್ಲಿ ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು ಗಾಣಿಗರು, ಲೇವಾದೇವಿಗಾರರು, ಅಕ್ಕಸಾಲಿಗರು, ಕಮ್ಮಾರರು, ಚಿಪ್ಪಿಗರು, ಬೆಸ್ತರು, ಗಾಣಿಗರು ಇನ್ನೂ ಮುಂತಾದ ವರ್ಗಗಳಿಗೆ ಕಸುಬುಗಳಿಗೆ ಸೇರಿದ ಜನರು ವಾಸಿಸುವ ಮನೆಗಳಿವೆ. ಕೋಟೆಯ ಪೂರ್ವ ದಿಕ್ಕಿನಲ್ಲಿ ಸೈನಿಕರ, ಮಾವುತರ, ತಮಟೆಗಾರರ, ಕಹಳೆಯವರ ಹಾಗೂ ದೀವಟಿಗೆಯವರ ಮನೆಗಳಿವೆ. ಶೋಭಾಯಮಾನವಾಗಿರುವ ಶ್ರೀರಂಗನಾಥ ಮತ್ತು ಲಕ್ಷ್ಮೀನರಸಿಂಹ ದೇವಾಲಯಗಳು ಇಲ್ಲಿಯ ಪವಿತ್ರ ಸ್ಥಳಗಳಾಗಿವೆ.[2]

ಹದಿನೇಳನೆಯ ಶತಮಾನದ ಮಧ್ಯಭಾಗದಲ್ಲಿ ಎರಡು ಸಾರಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದ ಕ್ರೈಸ್ತ ಪಾದ್ರಿ ಫಾದರ್ ಸಿನ್ನಾಮಿಯ ಲೇಖನಗಳಲ್ಲಿ ಇದೇ ರೀತಿಯ ವರ್ಣನೆಯನ್ನು ಕಾಣಬಹುದು. ಇವರ ಲೇಖನಗಳ ಪ್ರಕಾರ ಶ್ರೀರಂಗಪಟ್ಟಣ ಬಲಿಷ್ಠ ಕೋಟೆಯನ್ನು, ಎತ್ತರದ ಗೋಪುರಗಳನ್ನು, ಬೆಲೆಬಾಳುವ ಆಭರಣಗಳಿಂದ ಅಲಂಕೃತವಾಗಿರುವ ದೇವಾಲಯಗಳನ್ನು, ವಿಶಾಲವಾದ ರಸ್ತೆಗಳನ್ನು, ಮಾರುಕಟ್ಟೆಯನ್ನು, ಉದ್ಯಾನವನಗಳನ್ನು, ಹಣ್ಣಿನ ತೋಟಗಳನ್ನು, ಕಲ್ಲಿನ ನಾಲ್ಕು ಸೇತುವೆಗಳನ್ನು ಒಳಗೊಂಡಿರುವ ಅತ್ಯಂತ ಜನಭರಿತವಾದ ನಗರವಾಗಿದ್ದಿತು.[3]

ಗೋವಿಂದ ವೈದ್ಯ ಮತ್ತು ಫಾ| ಸಿನ್ನಾಮಿ ವರ್ಣಿಸಿರುವಂತೆ ಶ್ರೀರಂಗಪಟ್ಟಣದ ಕೋಟೆ ಕಲ್ಲು ಮತ್ತು ಇಟ್ಟಿಗೆಗಳಿಂದ ನಿರ್ಮಿತವಾದ ಭದ್ರವಾದ ಕೋಟೆ. 15ನೇ ಶತಮಾನದಲ್ಲಿ ತಿಮ್ಮಣ್ಣನಾಯಕನಿಂದ ಪ್ರಾರಂಭವಾದ ಈ ಕೋಟೆಯ ನಿರ್ಮಾಣ, ಪುನರ್ ನಿರ್ಮಾಣ ಹಾಗೂ ವಿಸ್ತರಣಾ ಕಾರ್ಯ ಹೈದರಾಲಿ, ಟಿಪ್ಪು ಸುಲ್ತಾನರ ಕಾಲದವರೆಗೂ ಮುಂದುವರೆದುಕೊಂಡು ಹೋಗುತ್ತದೆ. ಈ ಕೋಟೆಗಿರುವ ಮೂರು ಸುತ್ತುಗಳಲ್ಲಿ ಎರಡು ಸುತ್ತುಗಳು ಇಂದಿಗೂ ಶಿಥಿಲವಾಗಿಲ್ಲ. ಈ ಸುತ್ತುಗಳ ನಡುವೆ ಇರುವ ಆಳವಾದ ಕಂದಕಗಳಿಗೆ ಕಾವೇರಿಯ ನೀರು ಹರಿಯುವಂತೆ ಮಾಡಿ ಹೊರಗಿನ ಆಕ್ರಮಣಕಾರರು ಕೋಟೆಯನ್ನು ಸುಲಭವಾಗಿ ಪ್ರವೇಶಿಸದಂತೆ ಮಾಡುತ್ತಿದ್ದರು. ಈ ಕೋಟೆಯ ಕೊತ್ತಲಗಳಲ್ಲಿ ವಿವಿಧ ಹೆಸರಿನ 42 ಫಿರಂಗಿಗಳನ್ನು ಚಿಕ್ಕದೇವರಾಜ ಒಡೆಯರ್ ಇರಿಸಿದ್ದರೆಂದು ಶ್ರೀಮನ್ಮಹಾರಾಜರ ವಂಶಾವಳಿಯಿಂದ ತಿಳಿದುಬರುತ್ತದೆ.[4] ರಂಗನಾಥ ಸ್ವಾಮಿ ದೇವಾಲಯಕ್ಕೆ ಪಶ್ಚಿಮ ದಿಕ್ಕಿನಲ್ಲಿರುವ ಕೋಟೆ ಗೋಡೆಗೆ ಹೊಂದಿಕೊಂಡಂತೆ ನೆಲಮಾಳಿಗೆಯಲ್ಲಿ ಟಿಪ್ಪು ಸುಲ್ತಾನನಿಂದ ನಿರ್ಮಿತವಾದ ಸೆರೆಮನೆಯಿದೆ. ಟಿಪ್ಪುವಿನಿಂದ ಬಂದಿಸಲ್ಪಟ್ಟ ವಿಲಿಯಂ ಬೇಲಿ ಎಂಬ ಆಂಗ್ಲ ಅಧಿಕಾರಿ ಇಲ್ಲಿಯೇ ಅಸುನೀಗಿದ್ದರಿಂದ ಬ್ರಿಟಿಷರು ಪಟ್ಟಣವನ್ನು ವಶಪಡಿಸಿಕೊಂಡ ಮೇಲೆ ಆ ಸೆರೆಮನೆಯನ್ನು ಬೇಲಿ ಡಂಜನ್ ಎಂದು ಕರೆಯತೊಡಗಿದರು. ಫ್ರೆಂಚರ ನೆರವಿನಿಂದ ನಿರ್ಮಿತವಾದ ಈ ಸೆರೆಮನೆ 40 ಅಡಿ ಅಗಲ 100 ಅಡಿ ಉದ್ದವಿದ್ದು ಒಳಭಾಗದಲ್ಲಿ ಕಮಾನಿನಾಕೃತಿಯಲ್ಲಿರುವ ಕಂಬಗಳಿವೆ. ಸೆರೆಯಾಳುಗಳನ್ನು ಗೋಡೆಗೆ ಒರಗಿ ನಿಲ್ಲಿಸಿ ಅವರ ಕೈಗಳನ್ನು ಮೇಲೆತ್ತಿ ಸರಪಳಿಯಿಂದ ಕಟ್ಟುತ್ತಿದ್ದಂತೆ ಭಾಸವಾಗುತ್ತದೆ. ಕೋಟೆಯ ಮೇಲಿಂದ ಶತ್ರುಗಳ ಮೇಲೆ ಗುಂಡು ಹೊಡೆಯಲು ಉಪಯೋಗಿಸುತ್ತಿದ್ದ ಫಿರಂಗಿಯೊಂದು ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಬ್ರಿಟಿಷರ ಗುಂಡಿನ ಧಾಳಿಯ ರಭಸಕ್ಕೆ ಸೆರೆಮನೆಯ ಮೇಲ್ಛಾವಣಿಯನ್ನು ಭೇದಿಸಿಕೊಂಡು ಕೆಳಗೆ ಬಿದ್ದಿರುವುದನ್ನು ಐತಿಹಾಸಿಕ ಹೆಗ್ಗುರುತಾಗಿ ಈಗಲೂ ಕಾಣಬಹುದು.

ಶ್ರೀರಂಗಪಟ್ಟಣ ದೇವಾಲಯಗಳ ನಗರವೆಂದೇ ಪ್ರಸಿದ್ಧಿಯಾಗಿದೆ. ಕೋಟೆಯ ಒಳಗೆ ಮತ್ತು ಹೊರಗೆ ನೂರಾರು ಸಣ್ಣ ಮತ್ತು ದೊಡ್ಡ ದೇವಾಲಯಗಳನ್ನು, ಮಠಗಳನ್ನು, ಮಂಟಪಗಳನ್ನು ಕಾಣಬಹುದು. ವಾಸ್ತುಶಿಲ್ಪ ಹಾಗೂ ಮೂರ್ತಿ

ಶಿಲ್ಪದ ದೃಷ್ಟಿಯಿಂದ ರಂಗನಾಥಸ್ವಾಮಿ ಮತ್ತು ಲಕ್ಷ್ಮೀನರಸಿಂಹ ದೇವಾಲಯಗಳು ಪ್ರಸಿದ್ಧವಾದವು. ರಂಗನಾಥ ದೇವಾಲಯ ಇಲ್ಲಿನ ಪ್ರಾಚೀನ ದೇವಾಲಯ. ಇದರ ಹೆಸರಿನ ಮೇಲೆಯೇ ಆ ಊರನ್ನು ಶ್ರೀರಂಗಪಟ್ಟಣ ಎಂದು ಕರೆಯಲಾಗಿದೆ. ಇಲ್ಲಿಯ ಕೋಟೆಗಿಂತಲೂ ಪ್ರಾಚೀನವಾದ ಇತಿಹಾಸ ಈ ದೇವಾಲಯಕ್ಕಿದೆ. ಗಂಗರ ಕಾಲದಲ್ಲಿ ಸ್ಥಾಪನೆಗೊಂಡ ದೇವಾಲಯ ಮುಂದೆ ಹೊಯ್ಸಳರ, ವಿಜಯನಗರದರಸರ, ಮೈಸೂರಿನ ಒಡೆಯರ ಹಾಗೂ ಹೈದರಾಲಿಯ ಕಾಲದಲ್ಲಿ ಹಂತಹಂತವಾಗಿ ವಿಸ್ತರಣೆಗೊಂಡಿತು. ಟಿಪ್ಪು ಸುಲ್ತಾನ್ ಈ ದೇವಾಲಯಕ್ಕೆ ನೀಡಿದ ಬೆಳ್ಳಿಯ 37 ಬಟ್ಟಲುಗಳನ್ನು ಈಗಲೂ ಕಾಣಬಹುದು. ದಕ್ಷಿಣ ಕರ್ನಾಟಕದಲ್ಲಿರುವ ಪ್ರಸಿದ್ಧ ವೈಷ್ಣವ ದೇವಾಲಯಗಳಲ್ಲಿ ಇದು ಒಂದು. ಎತ್ತರವಾದ ಗೋಪುರ, ಗೋಪುರಕ್ಕೆ ಹೊಂದಿಕೊಂಡಂತೆ ದೇವಾಲಯದ ಸುತ್ತಲೂ ಶ್ರೀ ವೈಷ್ಣವ ಆಚಾರ್ಯರ–ಆಳ್ವಾರರ ಹಾಗೂ ವಿವಿಧ ದೇವ ದೇವತೆಗಳ ವಿಗ್ರಹಗಳನ್ನೊಳಗೊಂಡಿರುವ ವಿಶಾಲವಾದ ಪ್ರಾಕಾರ, ದೇವಾಲಯದೊಳಗಿನ ವಿಸ್ತಾರವಾದ ಸ್ಥಂಭ ಮಂಟಪಗಳು, ಹಜಾರಗಳು ಹಾಗೂ ಗರ್ಭಗುಡಿಯಲ್ಲಿ ಏಳು ಹೆಡೆ ಸರ್ಪದ ಸುರಳಿಯ ಮೇಲೆ ಪವಡಿಸಿರುವ ರಂಗನಾಥಸ್ವಾಮಿಯ ಭವ್ಯ ಏಕಶಿಲಾ ವಿಗ್ರಹ ಈ ದೇವಾಲಯದಲ್ಲಿನ ಮುಖ್ಯ ಲಕ್ಷಣಗಳು.

17ನೇ ಶತಮಾನದ ಮಧ್ಯಭಾಗದಲ್ಲಿ ಶ್ರೀಕಂಠೀರವ ನರಸರಾಜ ಒಡೆಯರಿಂದ ನಿರ್ಮಿಸಲ್ಪಟ್ಟ ಲಕ್ಷ್ಮೀನರಸಿಂಹ ದೇವಾಲಯ ಇಲ್ಲಿಯ ಮತ್ತೊಂದು ಪ್ರಸಿದ್ಧ ವೈಷ್ಣವ ದೇವಾಲಯ. ಗರ್ಭಗೃಹದಲ್ಲಿ ನರಸಿಂಹಸ್ವಾಮಿ ತನ್ನ ತೊಡೆಯ ಮೇಲೆ ಲಕ್ಷ್ಮಿಯನ್ನು ಕೂರಿಸಿಕೊಂಡು ವಿಶೇಷವಾದ ಭಂಗಿಯಲ್ಲಿ ಕುಳಿತಿರುವ ವಿಗ್ರಹವಿದೆ. ರಂಗನಾಥ ದೇವಾಲಯದಲ್ಲಿರುವಂತೆ ಇಲ್ಲಿಯೂ ವಿವಿಧ ದೇವ ದೇವತೆಗಳ ಹಾಗೂ ಶ್ರೀವೈಷ್ಣವ ಆಳ್ವಾರರ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಈ ದೇವಾಲಯದಲ್ಲಿರುವ ಕಂಠೀರವ ನರಸರಾಜ ಒಡೆಯರ ಭಕ್ತವಿಗ್ರಹ ಜೀವಕಳೆಯಿಂದ ತುಂಬಿದ್ದು ಜನರ ಗಮನ ಸೆಳೆಯುತ್ತದೆ.

ಕೋಟೆಯೊಳಗಿನ ಪ್ರಮುಖ ಐತಿಹಾಸಿಕ ಸ್ಮಾರಕಗಳಲ್ಲಿ ಜುಮ್ಮಾ ಮಸೀದಿಯು ಒಂದು. ಹದಿನೆಂಟನೇ ಶತಮಾನದ ಕೊನೆಯಲ್ಲಿ ಟಿಪ್ಪು ಸುಲ್ತಾನನಿಂದ ನಿರ್ಮಿಸಲ್ಪಟ್ಟ ಈ ಮಸೀದಿ ಇಂಡೋ–ಪರ್ಷಿಯನ್ ಕಲಾಶೈಲಿಗೆ ಒಂದು ಉತ್ತಮ ನಿದರ್ಶನ. ಇದರ ಪ್ರಮುಖ ಆಕರ್ಷಣೆಯಾಗಿರುವ ಎತ್ತರದ ಮಿನಾರುಗಳು ಕಲಾತ್ಮಕವಾಗಿದ್ದು ತುದಿಯಲ್ಲಿ ಕಲಶಗಳನ್ನೊಳಗೊಂಡಿವೆ. ಮಿನಾರುಗಳ ಮೆಟ್ಟಿಲನ್ನೇರಿ ಮೇಲಕ್ಕೆ ಹೋದರೆ ಸುತ್ತಲಿನ ರಮ್ಯ ದೃಶ್ಯಗಳನ್ನು ಸವಿಯಬಹುದು.

ರಂಗನಾಥಸ್ವಾಮಿ ದೇವಾಲಯದೆದುರಿಗೆ ಅನತಿ ದೂರದಲ್ಲಿ ಪಾಳುಬಿದ್ದಿರುವ ಅರಮನೆಯ ನಿವೇಶನವಿದೆ. ಮೈಸೂರಿನ ಒಡೆಯರ ವಂಶಸ್ಥರು ವಾಸಿಸುತ್ತಿದ್ದ ಈ ಅರಮನೆ ನಾಶವಾಗಿದ್ದರೂ ಅದರ ವರ್ಣನೆಯನ್ನು ಗೋವಿಂದ ವೈದ್ಯನ ಕಂಠೀರವ ನರಸರಾಜ ವಿಜಯಂ ನಲ್ಲಿ ಕಾಣಬಹುದು. ಈ ಅರಮನೆ ಸುಂದರವಾದ ಉದ್ಯಾನ

ವನಗಳಿಂದ ಸುತ್ತುವರಿಯಲ್ಪಟ್ಟ ಭವ್ಯ ಕಟ್ಟಡ. ಮನಮೋಹಕವಾದ ಕೆತ್ತನೆ ಕೆಲಸ ಹಾಗೂ ಬಣ್ಣದ ಚಿತ್ರಗಳಿಂದ ಅಲಂಕೃತವಾಗಿರುವ ಅನೇಕ ಕೊಠಡಿಗಳಿವೆ. ಇಲ್ಲಿಯ ಮುಖ್ಯ ಆಕರ್ಷಣೆಯಾಗಿರುವ ದರ್ಬಾರ್ ಸಭಾಂಗಣವನ್ನು ವಿಶೇಷವಾಗಿ ರೇಷ್ಮೆಯ ವಸ್ತ್ರಗಳಿಂದ ಅಲಂಕರಿಸಲಾಗಿದೆ. ದರ್ಬಾರ್ ಸಭಾಂಗಣಕ್ಕೆ ಹೊಂದಿಕೊಂಡಂತೆ ಚಿತ್ರಶಾಲೆ, ಲಕ್ಷ್ಮಿ ವಿಲಾಸ, ಮದನವಿಲಾಸ, ದುರ್ಗಾಮಂಟಪ, ಸೌಂದರ್ಯವಿಲಾಸ, ಆಯುಧಶಾಲೆ, ಮಜ್ಜನಶಾಲೆ, ಭೋಜನಶಾಲೆ ಮತ್ತು ಬೊಕ್ಕಸ ಭಂಡಾರಗಳಿವೆ.[5]

ಕೋಟೆಯ ಹೊರಗಿರುವ ಸ್ಮಾರಕಗಳಲ್ಲಿ ದರಿಯಾದೌಲತ್ ಪ್ರಮುಖವಾದುದು. ಟಿಪ್ಪುಸುಲ್ತಾನನಿಂದ ನಿರ್ಮಿತವಾದ ಬೇಸಿಗೆ ಅರಮನೆಯೇ ದರಿಯಾದೌಲತ್. ಸುತ್ತಲೂ ಸುಂದರವಾದ ಉದ್ಯಾನವನ್ನು ಹೊಂದಿರುವ ಎರಡು ಅಂತಸ್ತಿನ ಈ ಅರಮನೆ ಬಹುಪಾಲು ಮರದಿಂದಲೇ ನಿರ್ಮಾಣವಾಗಿದೆ. ತನ್ನ ಆಸ್ಥಾನಕ್ಕೆ ಆಗಮಿಸಿದ್ದ ಗಣ್ಯರನ್ನು ವಿದೇಶಿ ರಾಯಭಾರಿಗಳನ್ನು ಟಿಪ್ಪು ಇಲ್ಲಿ ಸತ್ಕರಿಸುತ್ತಿದ್ದನು. ಟಿಪ್ಪು ಪತನದ ನಂತರ ಬ್ರಿಟಿಷ್ ವೈಸ್ರಾಯ್ ಲಾರ್ಡ್ ವೆಲ್ಲೆಸ್ಲಿ ಸ್ವಲ್ಪ ಕಾಲ ಇಲ್ಲಿ ವಾಸವಾಗಿದ್ದನು. ಇಂದು ವಸ್ತುಸಂಗ್ರಹಾಲಯವಾಗಿ ಮಾರ್ಪಟ್ಟಿರುವ ಈ ಅರಮನೆಯ ಗೋಡೆಗಳ ಮೇಲೆ ಟಿಪ್ಪು ಬರೆಸಿದ ಬಣ್ಣಬಣ್ಣದ ಚಿತ್ರಗಳನ್ನು ಈಗಲೂ ಕಾಣಬಹುದು. ಒಂದು ಪಾರ್ಶ್ವದ ಗೋಡೆಯ ಮೇಲೆ ಹೈದರಾಲಿ ಮತ್ತು ಟಿಪ್ಪು ಬ್ರಿಟಿಷರ ವಿರುದ್ಧ ನಡೆಸಿದ ಯುದ್ಧಗಳ ದೃಶ್ಯಗಳಿದ್ದರೆ, ಇನ್ನೊಂದು ಪಾರ್ಶ್ವದ ಗೋಡೆಯ ಮೇಲೆ ಟಿಪ್ಪು ಆಸ್ಥಾನದ ಹಾಗೂ ಸಮಕಾಲೀನ ರಾಜರ ದರ್ಬಾರಿನ ದೃಶ್ಯಗಳನ್ನು ಕಾಣಬಹುದು. ಉಪ್ಪರಿಗೆಯ ಮೇಲೆ ಹೈದರಾಲಿ–ಟಿಪ್ಪು ಕಾಲದ ನಾಣ್ಯಗಳನ್ನು, ಆಯುಧಗಳನ್ನು, ವಸ್ತ್ರಗಳನ್ನು ಮತ್ತು ಟಿಪ್ಪು ಹಾಗೂ ಅವನ ಅಧಿಕಾರಿಗಳ ಬಗ್ಗೆ ಬ್ರಿಟಿಷರು ಚಿತ್ರಿಸಿರುವ ಚಿತ್ರಗಳನ್ನು ಸಂಗ್ರಹಿಸಿಡಲಾಗಿದೆ.

ಶ್ರೀರಂಗಪಟ್ಟಣ ರಾಜಕೀಯ ಚಟುವಟಿಕೆಗಳಿಗೆ ಕೇಂದ್ರವಾಗಿರುವಂತೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ಕೇಂದ್ರವಾಗಿದ್ದಿತು. ಪ್ರಮುಖ ಸಗಟು ವ್ಯಾಪಾರ ಕೇಂದ್ರವಾಗಿದ್ದ ಶ್ರೀರಂಗಪಟ್ಟಣ ದೇಶ ವಿದೇಶಗಳ ವರ್ತಕರನ್ನು ಆಕರ್ಷಿಸಿದ್ದಿತು. 17ನೇ ಶತಮಾನದಲ್ಲಿಯೇ ಗುಜರಾತಿನ ಮಾರ್ವಾಡಿ ವ್ಯಾಪಾರಸ್ಥರು ಇಲ್ಲಿ ಬಂದು ನೆಲೆಸಿದ್ದರು. ಹನ್ಸೋಜಿ ಎಂಬ ಗುಜರಾತಿನಿಂದ ಬಂದ ರತ್ನವ್ಯಾಪಾರಿ ಇಲ್ಲಿಯ ಧಾರ್ಮಿಕ ಸಂಸ್ಥೆಗಳಿಗೆ ಉದಾರವಾಗಿ ದಾನ ದತ್ತಿ ನೀಡಿದ ಬಗ್ಗೆ ಉಲ್ಲೇಖಗಳಿವೆ.[6]

ಶಿಲಾಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ಶ್ರೀರಂಗಪಟ್ಟಣದಲ್ಲಿ ಆಚರಿಸುತ್ತಿದ್ದ ಹಬ್ಬ ಉತ್ಸವಗಳ ಬಗ್ಗೆ ಮಾಹಿತಿ ನೀಡುತ್ತವೆ. ಇಲ್ಲಿ ವಿಶೇಷವಾಗಿ ಆಚರಿಸುತ್ತಿದ್ದ ಹಬ್ಬವೆಂದರೆ ಮಹಾನವಮಿ.[7] ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಮಹತ್ವವನ್ನೊಳಗೊಂಡಿದ್ದ ಈ ನಾಡಹಬ್ಬವನ್ನು 9 ದಿನಗಳ ಕಾಲ

ವಿಜೃಂಭಣೆಯಿಂದ ಆಚರಿಸುತ್ತಿದ್ದರು.[8] ವಿಜಯನಗರ ಸಾಮ್ರಾಟರ ಸಂಪ್ರದಾಯ ವನ್ನನುಸರಿಸುತ್ತಿದ್ದ ಮೈಸೂರಿನ ಒಡೆಯರು ಈ ಹಬ್ಬಕ್ಕೆ ವಿಶೇಷ ಮಹತ್ವ ನೀಡಿದ್ದರು. ಪ್ರತಿವರ್ಷ ಅಕ್ಟೋಬರ್ ತಿಂಗಳಿನಲ್ಲಿ ಶಕ್ತಿಯ ಸಂಕೇತವಾಗಿದ್ದ ದುರ್ಗಾನವರಾತ್ರಿಯ ಗೌರವಾರ್ಥ ಈ ಹಬ್ಬವನ್ನು ಆಚರಿಸುತ್ತಿದ್ದರು. ಈ ಹಬ್ಬದ ಅಂಗವಾಗಿ ನೆರೆಹೊರೆಯ ರಾಜರನ್ನು, ಗಣ್ಯವ್ಯಕ್ತಿಗಳನ್ನು, ಕವಿಗಳನ್ನು ಸಂಗೀತ ಗಾರರನ್ನು ತಮ್ಮ ಆಸ್ಥಾನಕ್ಕೆ ಆಹ್ವಾನಿಸಿ ವಿಶೇಷ ದರ್ಬಾರನ್ನು ಮೈಸೂರಿನ ಒಡೆಯರು ನಡೆಸುತ್ತಿದ್ದರು.[9] ಅನೇಕ ಕ್ರೀಡೆಗಳನ್ನು ಈ ಹಬ್ಬದ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದರು. ರಾಜನ ಸಮ್ಮುಖದಲ್ಲಿಯೇ ಬಯಲು ಕುಸ್ತಿ ಪಂದ್ಯಾವಳಿ ಗಳನ್ನು ನಡೆಸಿ ಉತ್ತಮ ಕ್ರಿಡಾಪಟುಗಳನ್ನು ಅಭಿನಂದಿಸಲಾಗುತ್ತಿತ್ತು.[10] ಸಂಗೀತ, ನೃತ್ಯ, ನಾಟಕ, ರಾಮಾಯಣ–ಮಹಾಭಾರತಗಳ ವಾಚನ ದಿನನಿತ್ಯವೂ ನಡೆಯು ತ್ತಿದ್ದವು.[11] ಶ್ರೀರಂಗಪಟ್ಟಣದಲ್ಲಿದ್ದ ರಂಗಮಂದಿರದ ಬಗ್ಗೆ ಮಾಹಿತಿಗಳಿವೆ.[12]

ರಾಜಧಾನಿಯಲ್ಲಿ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಗೋಷ್ಠಿ ಗಳು ಆಗಾಗ ನಡೆಯುತ್ತಿದ್ದುವು ವಿವಿಧ ಧರ್ಮಗಳ, ಪಂಥಗಳ ಪಂಡಿತರು ಈ ಗೋಷ್ಠಿಗಳಲ್ಲಿ ಭಾಗವಹಿಸಿ ಚರ್ಚೆ ನಡೆಸುತ್ತಿದ್ದರು. 1632ರಲ್ಲಿ ಇಂತಹ ಒಂದು ವಿಚಾರಗೋಷ್ಠಿ ಶ್ರವಣಬೆಳಗೊಳದ ಜೈನಮುನಿ ಚಾರುಕೀರ್ತಿ ಪಂಡಿತ ಇವರ ಅಧ್ಯಕ್ಷತೆಯಲ್ಲಿ ಏರ್ಪಟ್ಟಿತ್ತು.[13]

ಶ್ರೀರಂಗಪಟ್ಟಣ ಸಾಹಿತ್ಯ ಚಟುವಟಿಕೆಗಳ ಕೇಂದ್ರವಾಗಿದ್ದು ಅನೇಕ ಸಾಹಿತಿ ಗಳನ್ನು ಪಂಡಿತರನ್ನು ಹಾಗೂ ವಿದ್ವಾಂಸರನ್ನು ಆಕರ್ಷಿಸುತ್ತಿತ್ತು. ಗೋವಿಂದ ವೈದ್ಯ, ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಷಡಕ್ಷರಯ್ಯ, ತಿಮ್ಮ ಕವಿ, ಮಲ್ಲಿಕಾರ್ಜುನ, ಮಲ್ಲರಸ, ಸಿಂಗರಾರ್ಯ, ಚಿದಾನಂದ ಕವಿ, ಸಂಚಿ ಹೊನ್ನಮ್ಮ ಮುಂತಾದ ಕವಿ–ಕವಯತ್ರಿಯರು ಪಟ್ಟಣದಲ್ಲಿ ಆಶ್ರಯ ಪಡೆದು ಕನ್ನಡ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.

ನಾಲ್ಕು ಶತಮಾನಗಳ ಕಾಲ ರಾಜಧಾನಿಯಾಗಿ ಮೆರೆದ ಶ್ರೀರಂಗಪಟ್ಟಣ ಇಂದು ಒಂದು ಸಾಮಾನ್ಯ ಊರು. ಇತಿಹಾಸ ಚಕ್ರದಲ್ಲಿ ಅನೇಕ ನಗರಗಳು, ರಾಜ್ಯಗಳು, ಸಾಮ್ರಾಜ್ಯಗಳು ಉದಯಿಸಿ ಅವನತಿ ಹೊಂದಿರುವಂತೆ ಶ್ರೀರಂಗ ಪಟ್ಟಣವೂ ಕಾಲಕ್ರಮದಲ್ಲಿ ತನ್ನ ಮಹತ್ವವನ್ನು ಕಳೆದುಕೊಂಡಿತು. 1799ರಲ್ಲಿ ನಡೆದ ನಿರ್ಣಾಯಕ ನಾಲ್ಕನೆಯ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಪತನ ಹೊಂದಿದ ಮೇಲೆ ಶ್ರೀರಂಗಪಟ್ಟಣವೂ ಅವನತಿ ಹೊಂದತೊಡಗಿತು. 1800ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದ ಬುಖಾನನ್ನನ ಪ್ರಕಾರ ಅದರ ಜನಸಂಖ್ಯೆ ಒಂದು ಲಕ್ಷದ ಎಂಬತ್ತುಸಾವಿರವಿದ್ದಿತು. ಅಂದಿನಿಂದ ಅದರ ಜನಸಂಖ್ಯೆ ಇಳಿಮುಖವಾಗ ತೊಡಗಿತೇ ಹೊರತು ಏರಲಿಲ್ಲ. ಇಂದು ಅದರ ಜನಸಂಖ್ಯೆ ಹತ್ತು ಹದಿನೈದು ಸಾವಿರ ಇರಬಹುದು. 1799ರ ಯುದ್ಧದ ನಂತರ ಬ್ರಿಟಿಷರು ಶ್ರೀರಂಗಪಟ್ಟಣವನ್ನು

ತಮ್ಮ ವಶಕ್ಕೆ ತೆಗೆದುಕೊಂಡಿದ್ದರಿಂದ ಮತ್ತು ಬ್ರಿಟಿಷರಿಂದ ಸ್ವಲ್ಪ ರಾಜ್ಯವನ್ನು ಪಡೆದ ಒಡೆಯರು ಮೈಸೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರಿಂದ ಅದು ತನ್ನ ಮಹತ್ವವನ್ನು ಕಳೆದುಕೊಂಡು ಅವನತಿ ಹೊಂದತೊಡಗಿತು.

ಶ್ರೀರಂಗಪಟ್ಟಣ ಅವನತಿ ಹೊಂದಿದ್ದರೂ ಅಲ್ಲಿಯ ಐತಿಹಾಸಿಕ ಸ್ಮಾರಕಗಳಾಗಿರುವ ಕೋಟೆ, ದೇವಾಲಯಗಳು, ಮಸೀದಿ, ಡಂಜನ್ನುಗಳು, ಅರಮನೆ, ಮದ್ದುಗುಂಡಿನ ಉಗ್ರಾಣಗಳು ಅದರ ಗತವೈಭವದ ಬಗ್ಗೆ ಸದಾ ಬೆಳಕು ಚೆಲ್ಲುತ್ತಿವೆ.

ಅಡಿಟಿಪ್ಪಣಿಗಳು

1. ತಿರುಮಲಾರ್ಯ—ಚಿಕ್ಕದೇವರಾಜ ವಂಶಾವಳಿ, ಪು. 31.
2. ಗೋವಿಂದ ವೈದ್ಯ—ಕಂಠೀರವ ನರಸರಾಜ ವಿಜಯಂ, ಅಧ್ಯಾಯ 6, ಪ 1–23, ಅಧ್ಯಾಯ 7, ಪ-116.
3. ಫಾ| ಸಿನ್ನಾಮಿಯ ವರದಿ—ಜೆಸೂಟ್ಸ್ ಇನ್ ಮೈಸೂರ್, ಪು. 26.
4. ಶ್ರೀ ಮನ್ಮಹಾರಾಜರ ವಂಶಾವಳಿ, ಪು. 112.
5. ಗೋವಿಂದ ವೈದ್ಯ—ಅಧ್ಯಾಯ 5, 1–50.
6. ಎಂ. ಎ. ಆರ್.—1934, ನಂ. 39, ಪು. 162.
7. ಎ. ಕಾ. ಸಂಪುಟ-3, ಭಾಗ-1, ಶ್ರೀರಂಗಪಟ್ಟಣ-14.
8. ಐ. ಎಂ. ಸಿ., ನಂ. 18–15–20, ಪು. 55–56.
9. ಮಲ್ಲಿಕಾರ್ಜುನ—ಶ್ರೀರಂಗ ಮಹಾತ್ಮೆ, ಅಧ್ಯಾಯ 2, ಪದ್ಯ–58.
10. ಗೋವಿಂದ ವೈದ್ಯ—ಅಧ್ಯಾಯ 21, ಪದ್ಯ 89–92.
11. ತಿರುಮಲಾರ್ಯ—ಚಿಕ್ಕದೇವರಾಜ ವಂಶಾವಳಿ, ಪು. 107.
12. ಗೋವಿಂದ ವೈದ್ಯ—ಅಧ್ಯಾಯ 2, ಪದ್ಯ–26, 96–97.
13. ಚಿದಾನಂದ ಕವಿ—ಮುನಿವಂಶಾಭ್ಯುದಯಂ, ಪು. 16.

ತೀನಿ ಅಮೃತಪದಾನಿ
ಇಅಸು ಅನುಠಿತಾನಿ
ನೇಯಂತಿ ಸ್ವಗಂ-
ದಮ ಚಾಗ ಅಪ್ರಮಾದ

ಸ್ವರ್ಗ ವನ್ನೇರಲು ಮೂರು
ಮೆಟ್ಟಿಲುಗಳಿವೆ-
ಆತ್ಮ ಸಂಯಮ
ತ್ಯಾಗ
ಜಾಗರೂಕತೆ

(ಭಗಭದ್ರನ ಬೆಸನಗರ್ ಶಾಸನ)

* * *

ಮಾನವ ಉನ್ನತಸ್ಥಾನ
ಕ್ಕೇರಿದಂತೆಲ್ಲ ಅವನ
ಹಕ್ಕುಗಳು ಕಡಿಮೆ
ಯಾಗುತ್ತವೆ ಅವನ
ಕರ್ತವ್ಯಗಳು ಅಧಿಕವಾ
ಗುತ್ತವೆ.

ಡಾ. ಎಸ್. ರಾಧಾಕೃಷ್ಣನ್

ಬಿ. ಆರ್. ಹಿರೇಮಠ
ಎಸ್. ಪಿ. ಪಾಟೀಲ್
ಕೆ. ಪಿ. ವೀರಣ್ಣ

ಗೋವೆಯ ಕದಂಬ ಮೂರನೆಯ ಗೂವಲದೇವನ ಪ್ರಾಚೀನ ಶಾಸನ

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮುತ್ತಗಿ ಗ್ರಾಮದ ಕಲ್ಮೇಶ್ವರ ದೇವಾಲಯದ ನೂತನ ಕಟ್ಟಡ ನಿರ್ಮಾಣಕ್ಕಾಗಿ ನೆಲ ಅಗೆಯುವಾಗ ಎರಡು ಹೊಸ ಶಿಲಾಶಾಸನಗಳು ಲಭಿಸಿದ್ದು, ಇವುಗಳಲ್ಲಿ ಒಂದು ಅತ್ಯಂತ ಸುಸ್ಥಿತಿಯಲ್ಲಿಯೂ ಇನ್ನೊಂದು ತ್ರುಟಿತ ಸ್ಥಿತಿಯಲ್ಲಿಯೂ ಇರುತ್ತವೆ. ಸುಸ್ಥಿತಿಯಲ್ಲಿರುವ ಶಾಸನವನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ.

13–5–1987ರಂದು ಮುಂಜಾನೆ ಮುತ್ತಗಿ ಗ್ರಾಮ ತಲುಪಿದ ನಾವು, ಈ ಎರಡೂ ಹೊಸ ಶಿಲಾಶಾಸನಗಳನ್ನು ಕಂಡುಹಿಡಿದು, ಅವುಗಳ ಪಡಿಯಚ್ಚು ತೆಗೆದು ಕೊಂಡೆವು. ಸುಸ್ಥಿತಿಯಲ್ಲಿರುವ ಶಾಸನವನ್ನು ಅಲ್ಲಿಯೇ ಓದಿ ಶಾಸನಪಠ್ಯ ಸಿದ್ಧಪಡಿಸಿ ಕೊಂಡೆವು. ಆಮೇಲೆ ಪಡಿಯಚ್ಚಿನ ಸಹಾಯದಿಂದ ಶಾಸನ ಪಾಠವನ್ನು ಅಂತಿಮವಾಗಿ ತಯಾರಿಸಿದೆವು. ಈ ಶಾಸನದಲ್ಲಿ ಒಟ್ಟು 37 ಸಾಲುಗಳಿರುತ್ತವೆ. ಶಾಸನದ ಅಕ್ಷರಗಳು ಅಂದವಾಗಿದ್ದು, ಸುಸ್ಪಷ್ಟವಾಗಿರುತ್ತವೆ. ಕೆಲವು ಸಾಲುಗಳ ಆರಂಭ, ಅಂತ್ಯಗಳಲ್ಲಿ ಆಲಂಕಾರಿಕ ವರ್ತುಳ ವಿನ್ಯಾಸಗಳಿರುತ್ತವೆ. ಒಂದೆರಡು ಕಡೆ ಮಾತ್ರ ಶಾಸನ ತ್ರುಟಿತ ವಾಗಿದೆ. ಶಾಸನದ ಲಿಪಿ ಮತ್ತು ಭಾಷೆ ಕನ್ನಡವಾಗಿರುತ್ತದೆ.

ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಪ್ರಸ್ತುತ ಶಾಸನ ಹುಟ್ಟಿಕೊಂಡಿದೆ. ಆರನೆಯ ವಿಕ್ರಮಾದಿತ್ಯನ ಮಹಾ ಮಂಡಳೇಶ್ವರರಲ್ಲಿ ಅಗ್ರಗಣ್ಯರಾದವರು, ಗೋವೆಯ ಕದಂಬರು. ಈ ಗೋವೆಯ ಕದಂಬ ಮೂರನೆಯ ಗೂವಲದೇವ ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ನಾಗಿದ್ದನು. ಹೀಗೆ ಆರನೆಯ ವಿಕ್ರಮಾದಿತ್ಯ ಚಕ್ರವರ್ತಿಯಾಗಿಯೂ ಗೋವೆಯ ಕದಂಬ ಮೂರನೆಯ ಗೂವಲದೇವ ಮಹಾಮಂಡಳೇಶ್ವರನಾಗಿಯೂ ಆಳುತ್ತಿದ್ದ

ಕಾಲದಲ್ಲಿ ಸಿಂಗಗಾವುಂಡ ಹಾಗೂ ಚಾವುಂಡ (ಚವುಂಡ) ಗಾವುಂಡರು ಮುತ್ತಗಿ ಗ್ರಾಮದಲ್ಲಿ ಕಲಿದೇವ ದೇವಾಲಯ ಕಟ್ಟಿಸಿ, ಈ ದೇವಾಲಯದ ಅಂಗಭೋಗ—ಚೈತ್ರ — ಪವಿತ್ರಪರ್ವ — ಜೀರ್ಣೋದ್ಧಾರಗಳಿಗಾಗಿ, ಮಲ್ಲಿದೇವರ ಪೂಜಾರಿಯ ಆಹಾರ (=ಗ್ರಾಸ)—ಬಟ್ಟೆ (ಕಪ್ಪಡ)ಗಳಿಗಾಗಿ ಹಾಗೂ ದೇವರ ನೈವೇದ್ಯ ತಯಾರಿಸುವ ಗೊರವಕಬ್ಬೆಯ ಆಹಾರ (=ಕೂಳು)—ಬಟ್ಟೆಗಳಿಗಾಗಿ ತಟ್ಟೆಯ ಕೆರೆಯ ಕೆಳಗಿನ ಗದ್ದೆಯನ್ನೂ ಗೋವಿಂದ ಪಣಂಗಿ ಮಾಡುವ ಹಕ್ಕಲು ಭೂಮಿಯನ್ನೂ ಮುದ್ರಾಪಣ, ಬೀದಿವಣ ತೆಂಗೆಗಳನ್ನೂ ದಾನವಾಗಿ ನೀಡಿದುದು ಈ ಶಾಸನದ ಪ್ರಮುಖ ವಿಷಯ. ಇದಲ್ಲದೆ ಉಗುರಮೂನೂರ್ವರು (ವೀಳ್ಯದೆಲೆ ಕೊಯ್ಯುವವರು) ಈ ದೇವಾಲಯದ ನಂದಾದೀವಿಗೆಗಾಗಿ ಎಣ್ಣೆಯನ್ನೂ ಹಣ (ದರ್ಶನ)ವನ್ನೂ ದಾನವಾಗಿ ಕೊಟ್ಟಿದ್ದಾರೆ. ಹೀಗೆ ಈ ಶಾಸನದಲ್ಲಿ ಎರಡು ದತ್ತಿಗಳಿರುತ್ತವೆ.

ಸಾಲು 21-22ರಲ್ಲಿ ಬರುವ "ಚಾಳುಕ್ಯ ವಿಕ್ರಮಾಂಕನ ಕಾಳಂ ಶಶಿಸಂಖ್ಯೆ ವರ್ತಿಸಲ್ಕೆ ಸಳಾಬ್ದಕಲ್ಕಾಳಂಬಮೆನಿಪ್ಪೊಳ್ಪಂ ಪಾಳಿಸುವಾಶ್ವಯುಜ ಮಾಸದೊಳ್ ಪುಣ್ಣಮೆಯೊಳ್ ಹಿಮಕರವಾರದೊಳತ್ಯುತ್ತಮ ವ್ಯತೀಪಾತ ಸಂಕ್ರಮಣಮೆಂಬಿವರೊಳ್ ಸಮುಚಿತ ಸೋಮಗ್ರಹಣಂ ಸಮನಿಸೆ" ಎಂಬ ತಿಥಿಯು ಕ್ರಿ.ಶ 1077 ಅಕ್ಟೋಬರ್ 4 ಬುಧವಾರಕ್ಕೆ ಸಮಾನವಾಗಿರುತ್ತದೆ. ಇಲ್ಲಿ ವಾರದ ಉಲ್ಲೇಖ ತಪ್ಪಾಗಿ ನಮೂದಿತವಾಗಿದೆ. ಅಂದು ಇದ್ದುದು ಸೋಮವಾರವಲ್ಲ, ಬುಧವಾರ.

ಕಲಘಟಗಿ ತಾಲ್ಲೂಕಿನ ಮುತ್ತಗಿ ಪ್ರದೇಶ ಕಲ್ಯಾಣ ಚಾಲುಕ್ಯ ಹಾಗೂ ಗೋವೆಯ ಕದಂಬರ ಆಡಳಿತಕ್ಕೆ ಒಳಪಟ್ಟಿದ್ದಿತು. ಈ ಅರಸರ ಕಾಲದ ರಾಜಕೀಯ ಆಡಳಿತ ವಿಭಾಗಗಳಲ್ಲಿ ಮಾರಜವಾಡಿಯೂ ಒಂದು. ಈ ಮಾರಜವಾಡಿಯಲ್ಲಿ ಹುಲ್ಲಂಬಿ-70 ಒಂದು ರಾಜಕೀಯ ಉಪ ವಿಭಾಗ. ಹುಲ್ಲಂಬಿ-70ರಲ್ಲಿ ಪ್ರಸ್ತುತ ಮುತ್ತಗಿ ಗ್ರಾಮ ಸಮಾವೇಶವಾಗಿದ್ದಿತು.

ಸಿಂಗಗಾವುಂಡ ಹಾಗೂ ಚಾವುಂಡ ಗಾವುಂಡರು ಮುತ್ತಗಿ ಗ್ರಾಮದ ಗಾವುಂಡ ಮನೆತನದವರು, ಬಹುಶಃ ಸ್ಥಳೀಯ ಆಡಳಿತಾಧಿಕಾರಿಗಳು. ಈ ಸಿಂಗಗಾವುಂಡನಿಗೆ ಬರ್ಮಗಾವುಂಡನೂ, ಚಾವುಂಡ ಗಾವುಂಡನಿಗೆ ಚಟ್ಟಗಾವುಂಡನೂ ಎಂಬ ಮಕ್ಕಳಿದ್ದರು.

ಶಾಸನದ ಆರಂಭದಲ್ಲಿ "ನಮಸ್ತುಂಗ ಶಿರಶ್ಚುಂಬಿ ಚನ್ದ್ರಚಾಮರ ಚಾರವೇ। ತ್ರೈಳೋಕ್ಯನಗರಾರಂಭ ಮೂಳಸ್ತಂಭಾಯ ಸ(ಶ)ಂಭವೇ" ಎಂಬ ಶಿವಸ್ತುತಿಯೂ "ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವಂ। ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ" ಎಂಬ ವಿಷ್ಣು ಸ್ತುತಿಯೂ ಇದ್ದು, ಇವು ಅಂದಿನ ಕಾಲದ ಆ ಗ್ರಾಮದ ಶೈವ-ವೈಷ್ಣವ ಧರ್ಮಗಳ ಸಾಮರಸ್ಯವನ್ನು ಸೂಚಿಸುವಂತಿವೆ.* ಮುತ್ತಗಿ ಗ್ರಾಮದಲ್ಲಿ ಶೈವ, ವೈಷ್ಣವ ಧರ್ಮಗಳಲ್ಲದೆ ಜೈನ ಧರ್ಮವೂ

---

* ಈ ಗ್ರಾಮದ ರಾಮಲಿಂಗೇಶ್ವರ ದೇವಾಲಯದಲ್ಲಿರುವ ಶಾಸನದ ಆರಂಭದಲ್ಲಿಯೂ ಶಿವ-ವಿಷ್ಣು ಸ್ತುತಿಗಳಿರುತ್ತವೆ.

ಇದ್ದುದಕ್ಕೆ ಈ ಹಿಂದೆ ಇಲ್ಲಿ ದೊರೆತಿರುವ ನೇಮಿನಾಥ, ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳೂ ಈ ವಿಗ್ರಹಗಳ ಪಾದಪೀಠದ ಮೇಲಿರುವ ಶಾಸನಗಳೂ ಆಧಾರವನ್ನೊದಗಿಸುತ್ತವೆ. ಹೀಗೆ ಪ್ರಾಚೀನ ಕಾಲದಲ್ಲಿ ಮುತ್ತಗಿ ಗ್ರಾಮ ಶೈವ, ವೈಷ್ಣವ ಹಾಗೂ ಜೈನ ಧರ್ಮಗಳ ಸಂಗಮ ಸ್ಥಾನವೆನಿಸಿದ್ದಿತು. ಇಲ್ಲಿ ಧರ್ಮ ಸಾಮರಸ್ಯದೊಂದಿಗೆ ಧರ್ಮ ಸಂಘರ್ಷವೂ ನಡೆದಿರುವ ಸಾಧ್ಯತೆಯಿದೆ. ಶಾಸನಾರಂಭದ ಶಿವ, ವಿಷ್ಣು ಸ್ತುತಿಗಳು ಧರ್ಮ ಸಾಮರಸ್ಯವನ್ನು ಸಾರಿದರೆ ನೇಮಿನಾಥ–ಪಾರ್ಶ್ವನಾಥ ತೀರ್ಥಂಕರರ ವಿಗ್ರಹ, ಜಿನಾಲಯದ ಭಗ್ನಾವಶೇಷಗಳೂ ಶಿವಲಿಂಗ, ಶಿವ ದೇವಾಲಯಗಳ ಭಗ್ನಾವಶೇಷಗಳೂ ಜೈನ–ಶೈವ ಧರ್ಮಗಳ ಸಂಘರ್ಷವನ್ನು ಸೂಚಿಸುತ್ತಿವೆ.

ಹೀಗೆ ಪ್ರಾಚೀನ ಮುತ್ತಗಿ ಗ್ರಾಮದಲ್ಲಿ ಕಲಿದೇವಸ್ವಾಮಿ, ಮಲ್ಲಿದೇವ, ಸೋಮನಾಥ, ಸುಳ್ಳೇಶ್ವರ ಶಿವಾಲಯಗಳೂ ಪಾರ್ಶ್ವನಾಥ ಮತ್ತು ನೇಮಿನಾಥರ ಜಿನಾಲಯಗಳೂ ಇದ್ದುದು ಇಲ್ಲಿಯ ಶಾಸನಗಳಿಂದ ಗೊತ್ತಾಗುತ್ತದೆ. ಆದರೆ ಇಂದಿನ ಮುತ್ತಗಿಯಲ್ಲಿ ಇವುಗಳ ಅವಶೇಷಗಳು ಮಾತ್ರ ಕಂಡುಬರುತ್ತವೆ.

ಶೈವ ದೇವಾಲಯದ ಸ್ಥಾನಾಚಾರ್ಯನನ್ನು ಈ ಶಾಸನದಲ್ಲಿ 'ಮಠಪಂ' ಎಂದು ಕರೆಯಲಾಗಿದೆ. ಈ 'ಮಠಪರು' ಗುಣಶೀಲರಾಗಿರಬೇಕೆಂಬ ಕಡ್ಡಾಯ ನಿಯಮವಿದ್ದಿತು. ಒಂದು ವೇಳೆ 'ಮಠಪರು' ಗುಣಶೀಲರಾಗಿರದಿದ್ದರೆ, ಅರಸು ಇಲ್ಲವೆ ಗೌಡರು ಇಂಥವರನ್ನು ದೇವಾಲಯದಿಂದ ಹೊರಹಾಕುತ್ತಿದ್ದರೆಂಬ ಮಹತ್ವದ ಅಂಶವನ್ನು ಈ ಶಾಸನ ತಿಳಿಸುತ್ತದೆ. ಅಂದಿನ ಸಮಾಜದ ಧಾರ್ಮಿಕ ಕ್ಷೇತ್ರದಲ್ಲಿ ಚಾರಿತ್ರ್ಯ–ನೀತಿಗಳಿಗಿದ್ದ ಪೂಜ್ಯತೆ ಹಾಗೂ ಪುರಸ್ಕಾರಗಳನ್ನು ಇದು ಎತ್ತಿ ತೋರಿಸುತ್ತದೆ. ಇವುಗಳ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಆಡಳಿತಗಾರರು ವಹಿಸುತ್ತಿದ್ದ ತೀವ್ರ ಕಾಳಜಿಯನ್ನೂ ನಾವಿಲ್ಲಿ ಕಾಣುತ್ತೇವೆ.

ಪ್ರಾಚೀನ ಕರ್ನಾಟಕದ ಮೌಲ್ಯಗಳಲ್ಲಿ ದಾನವೂ ಒಂದು. ಸಿಂಗಗಾವುಂಡ, ಚಾವುಂಡ ಗಾವುಂಡರು ಹಾಗೂ ಇವರ ಮಕ್ಕಳು ದಾನ ಮೌಲ್ಯವನ್ನು ಬದುಕಿದ ಧೀಮಂತ ವ್ಯಕ್ತಿಗಳಾಗಿದ್ದಾರೆ. ಸಿಂಗಗಾವುಂಡನ ವಿವಿಧ ಗುಣಗಳನ್ನು

> ದಯೆಯೊಳ್ ಧರ್ಮದೊಳೊಳ್ಪಿನೊಳ್ವಿನಯದೊಳ್ಚಾತುರ್ಯ್ಯದೊಳ್ ಧೈರ್ಯ್ಯದೊಳ್
> ನಯದೊಳ್ವಿಕ್ರಮದೊಳ್ಮಭುತ್ವಗುಣದೊಳ್ಸತ್ಯೋಕ್ತಿಯೊಳ್ದಾನಶ
> ಕ್ತಿಯೊಳೀತಂ ಮಿಗಿಲೆನ್ದು ಬಣ್ಣಿಪುದು ಲೋಕಂ ತಾರನಿಹಾರಹಾ
> ರಯಶಸ್ಸಂಗನನೂರ್ಜ್ಜಿತೋಜ್ವಳ ಗುಣಪ್ರೋತ್ತುಂಗನಂ ಸಿಂಗನಂ ॥

ಎಂದು ಈ ಶಾಸನ ಕೀರ್ತಿಸುತ್ತದೆ. ಈತನ ಮಗ ಬರ್ಮಗಾವುಂಡನು ವಿನಯನಿಧಿಯೂ ಸತ್ಯವಾಕ್ಯನೂ ಮನೋಮಾರ್ಗನೂ ಶೌರ್ಯಶಾಲಿಯೂ ಆಗಿದ್ದನು. ವಿನಯ, ಪರಹಿತ, ಧರ್ಮ ಮತ್ತು ಶೌಚ ಗುಣಗಳು ಚಾವುಂಡ ಗಾವುಂಡನಲ್ಲಿ ನೆಲೆನಿಂತಿದ್ದವು. ಈತನ ಮಗ ಚಟ್ಟಗಾವುಂಡನು ಏಕವಾಕ್ಯನೂ ಶೌರ್ಯನಿಧಿಯೂ ಕಾರ್ಯಬೃಹಸ್ಪತಿಯೂ ಆಗಿದ್ದನು. ಹೀಗೆ ಮುತ್ತಗಿಯ ಈ ಗಾವುಂಡ ಮನೆತನ

ದಾನವರ್ಶೌಲ್ಯಕ್ಕೆ ಹೆಸರಾಗಿದ್ದಿತು. ಇದಲ್ಲದೆ ಮುತ್ತಗಿಯ ಗೋವಗಾವುಂಡ ಮತ್ತು ಜೊಂತಗಾವುಂಡರ ಉಲ್ಲೇಖಗಳು ಇಲ್ಲಿಯ ಕ್ರಿ.ಶ. 1202–1223ರ ಶಾಸನಗಳಲ್ಲಿರುತ್ತವೆ.

ದೇವಾಲಯಗಳಲ್ಲಿ ದೇವರನ್ನು ಪೂಜಿಸುವವರನ್ನು 'ಪೂಜಾರಿ'ಯೆಂದೂ ದೇವಾಲಯದ ಮುಖ್ಯಸ್ಥನಾದ ಸ್ಥಾನಾಚಾರ್ಯನನ್ನು 'ಮಠಪ'ನೆಂದೂ ಕರೆಯಲಾಗಿದೆ. ಇದರಿಂದ 'ಪೂಜಾರಿ' ಹಾಗೂ 'ಸ್ಥಾನಾಚಾರ್ಯ' ಇಬ್ಬರೂ ಬೇರೆ ಬೇರೆಯೆಂಬ ಸ್ಪಷ್ಟವಾದ ವಿವರಗಳನ್ನು ಈ ಶಾಸನ ನಮಗೆ ನೀಡುತ್ತದೆ.

ಈ ಶಾಸನದ ಕವಿಯ ಹೆಸರು ಜಯದೇವ. ತನ್ನ ಈ ಶಾಸನ ಕಾವ್ಯವನ್ನು "ಶ್ರವ್ಯಂ ನವ್ಯಂ ಮನೋಹರಂ" ಎಂದು ಈತ ಕರೆದಿದ್ದಾನೆ. ಈ ಶಾಸನ ಕವಿ ಜಯದೇವ ಸಂಸ್ಕೃತ, ಕನ್ನಡ ಈ ಉಭಯ ಭಾಷೆಗಳಲ್ಲಿಯೂ ಬಲ್ಲಿದನಾಗಿದ್ದಾನೆ. ಕಂದ—ವೃತ್ತ—ಗದ್ಯ—ಶ್ಲೋಕಗಳಿಂದ ಕೂಡಿದ ಪ್ರಸ್ತುತ ಶಾಸನ ಪುಟ್ಟ ಚಂಪೂ ಕಾವ್ಯದಂತಿದೆ. ಶಾಸನಕ್ಕೆ ಸಾಹಿತ್ಯವನ್ನೊದಗಿಸಿದ ಈ ಜಯದೇವನೇ ಈ ಶಾಸನದ ಲಿಪಿಕಾರನಾಗಿರುವ ಸಾಧ್ಯತೆಯನ್ನು "ಏತಚ್ಛಾಸನ ಲಿಖಿತಂ" ಎಂಬ ವಾಕ್ಯ ತಿಳಿಸುವಂತಿದೆ. ಕಲ್ಲೋಜ ಈ ಶಾಸನದ ರೂವಾರಿ. ಈ ರೀತಿಯಾಗಿ ಕವಿ–ಲಿಪಿಕಾರ–ರೂವಾರಿಗಳ ಹೆಸರುಗಳನ್ನು ವಿವರವಾಗಿ ಹೇಳುವ ವಿರಳ ಶಾಸನಗಳಲ್ಲಿ ಇದೂ ಒಂದಾಗಿದೆ.

ಮುದ್ರಾವಣ (ಟಂಕಶಾಲೆಯ ಮೇಲಿನ ತೆರಿಗೆ), ಬೀದಿವಣ (ಸಾರಿಗೆ ತೆರಿಗೆ) ಹಾಗೂ ದರ್ಶನವೆಂಬ ತೆರಿಗೆ ವಿಶೇಷಣಗಳ ಉಲ್ಲೇಖ ಇಲ್ಲಿದೆ. ಇದಲ್ಲದೆ ತಟ್ಟೆಯಕೆರೆ* (ಮುತ್ತಗಿಯ ಒಂದು ಕೆರೆ), ನೀರುಸಾಗರ (ಊರಿನ ಹೆಸರು), ಮೂಡಗೇರಿ (ಮುತ್ತಗಿಯ ಒಂದು ಕೇರಿ) ಹಾಗೂ ಉಗುರಮೂನೂರ್ವರು (ವೀಳ್ಯದೆಲೆ ಕೊಯ್ಯುವವರು) ಮೊದಲಾದವುಗಳ ಉಲ್ಲೇಖ ಈ ಶಾಸನದಲ್ಲಿದೆ. ಜೊತೆಗೆ ಇಲ್ಲಿ ಬರುವ "ದ್ವಿಜೋತ್ತಮ ನಾಗದಾಸಿಮಯ್ಯ" ಪದವನ್ನು ಅವಶ್ಯ ಗಮನಿಸಬೇಕು. ಬಸವಪೂರ್ವಯುಗದಲ್ಲಿಯೇ ಈ ಪದ ಪ್ರಯೋಗವಾಗಿರುವುದನ್ನು ಲಕ್ಷಿಸಬೇಕು. ಮುತ್ತಗೆ ಗ್ರಾಮದ ಪ್ರಾಚೀನರೂಪ 'ಮುತ್ತರ್ಗೆ'ಯೆಂಬುದು ಗೊತ್ತಾಗುತ್ತದೆ.

ಕಲಘಟಗಿ ತಾಲ್ಲೂಕಿನಲ್ಲಿ ಗೋವೆಯ ಕದಂಬರಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಒಟ್ಟು 37 ಶಾಸನಗಳು ದೊರೆತಿವೆ. ಈ ಶಾಸನಗಳು ಚಟ್ಟಯದೇವ II (1150, ಕಂದಲಿ), ಜಯಕೇಶಿ I (1062 ಶೇಡಂಬಿ, 1062 ಶೇಡಂಬಿ, 1065 ಸಂಗಮೇಶ್ವರ, 1065 ಸಂಗಮೇಶ್ವರ), ಗೂವಲದೇವ II (1120 ತಂಬೂರ), ಗೂವಲದೇವ III (1079 ಮುಕ್ಕಲ್ಲ, 1079 ಸಂಗಮೇಶ್ವರ, 1082 ಸಂಗಮೇಶ್ವರ, 1103 ಮಲಕನಕೊಪ್ಪ). ಜಯಕೇಶಿ II (1125 ಮಾವಳ್ಳಿ, 1125 ತಂಬೂರ, 1130–31

* ಈಗ 'ಪುಟ್ಟಿಯಕೆರೆ'ಯೆಂದು ಕರೆಯುತ್ತಾರೆ. ಈ ಕೆರೆ ಸಂಪೂರ್ಣ ಮುಚ್ಚಿ ಹೋಗಿದೆ.

ಹುಣಶೀಕಟ್ಟಿ, 1136 ಮಿಶ್ರಿಕೋಟಿ, 1138 ಜಿನ್ನೂರ), ಪೆರ್ಮಾಡಿದೇವ (1142 ಹುಣಶೀಕಟ್ಟಿ, 1147–48 ಬೊಮ್ಮಿಗಟ್ಟಿ, 1158 ಮಡಕಿ ಹೊನ್ನಳ್ಳಿ, 1158 ಮಿಶ್ರಿಕೋಟಿ, 1159 ಸಿದ್ಧನಹಳ್ಳಿ, 1162 ಹಾಳಸೀಗೀಕಟ್ಟಿ, 1169 ಶೇಡಂಬಿ, 1168 ಸೋಮನಕೊಪ್ಪ, 1170–71 ಹರಸಂಬಿ, 1171 ಕಾಮಧೇನು, 1174 ಡಿಂಬವಳ್ಳಿ, 1174 ಮುತ್ತಗಿ), ಜಯಕೇಶಿ III (1171 ಉಗ್ನಿಕೇರಿ, 1171 ಉಗ್ನಿಕೇರಿ, 1171 ಉಗ್ನಿಕೇರಿ, 1171 ಉಗ್ನಿಕೇರಿ, 1192 ಮುತ್ತಗಿ, 1199–1200 ಮುತ್ತಗಿ, 1201 ತಂಬೂರ, 1202 ಮುತ್ತಗಿ, 1202 ಗಳಿಗಿ, 1223 ಮುತ್ತಗಿ), ಚಟ್ಟಯದೇವ III (1250 ಭಟ್ಟಿಕೊಪ್ಪ)ರಿಗೆ ಸಂಬಂಧಿಸಿದವುಗಳಾಗಿರುತ್ತವೆ.

ಗೋವೆಯ ಕದಂಬ ಮೂರನೆಯ ಗೂವಲದೇವನನ್ನು ಕುರಿತು ಇಲ್ಲಿಯವರೆಗೆ ಒಟ್ಟು 20 ಶಾಸನಗಳು ಲಭಿಸಿರುತ್ತವೆ. ಇವುಗಳಲ್ಲಿ ನಾಲ್ಕು ಶಾಸನಗಳು ಮಾತ್ರ ಈ ತಾಲ್ಲೂಕಿನಲ್ಲಿದ್ದು, ಇವು ಕ್ರಿ.ಶ. 1079 ರಿಂದ 1103ರ ವರೆಗಿನ ಕಾಲದವುಗಳಾಗಿರುತ್ತವೆ

ಮುತ್ತಗಿಯಲ್ಲಿ ಈಗಾಗಲೇ ನಾಲ್ಕು ಶಾಸನಗಳಿದ್ದು, ಇವೆಲ್ಲ ಗೋವೆಯ ಕದಂಬ ಮೂರನೆಯ ಜಯಕೇಶಿ ಮತ್ತು ಪೆರ್ಮಾಡಿದೇವರಿಗೆ ಸಂಬಂಧಿಸಿದವುಗಳಾಗಿರುತ್ತವೆ. ಈ ನಾಲ್ಕೂ ಶಾಸನಗಳು ಕ್ರಿ.ಶ. 1174 ರಿಂದ 1223ರ ವರೆಗಿನ ಅವಧಿಯಲ್ಲಿ ಹುಟ್ಟಿಕೊಂಡಿರುತ್ತವೆ.

ಮುತ್ತಗಿಯಲ್ಲಿ ದೊರೆತ ಪ್ರಸ್ತುತ ಶಾಸನ, ಈ ಗ್ರಾಮದ ಅತ್ಯಂತ ಪ್ರಾಚೀನ ಶಾಸನವೂ ಮೂರನೆಯ ಗೂವಲದೇವನ ಪ್ರಪ್ರಥಮ ಶಾಸನವೂ ಆಗಿದೆ. ಇದಲ್ಲದೆ ಕಲಘಟಗಿ ತಾಲ್ಲೂಕಿನಲ್ಲಿಯೇ ಇದು ಮೂರನೆಯ ಗೂವಲದೇವನ ಅತ್ಯಂತ ಪ್ರಾಚೀನತಮ ಶಾಸನವಾಗಿರುತ್ತದೆ. ಹೊಸದಾಗಿ ಲಭಿಸಿದ ಈ ಎರಡು ಶಾಸನಗಳ ಮೂಲಕ ಕಲಘಟಗಿ ತಾಲ್ಲೂಕಿನ ಗೋವೆಯ ಕದಂಬರ ಶಾಸನ ಸಂಖ್ಯೆ 37 ರಿಂದ 39ಕ್ಕೆ ಏರುತ್ತದೆ, ಮುತ್ತಗಿ ಗ್ರಾಮದ ಶಾಸನ ಸಂಖ್ಯೆ ನಾಲ್ಕರಿಂದ ಆರಕ್ಕೆ ವರ್ಧಿಸುತ್ತದೆ.

ಡಾ. ಆರ್. ಎನ್. ಗುರವ ಅವರು "The Kadmbas of Goa and Their Inscriptions" ಎಂಬ ತಮ್ಮ ಮಹಾಪ್ರಬಂಧದಲ್ಲಿ (ಅಪ್ರಕಟಿತ, ಪುಟ 108, ಕ. ವಿ. ವಿ. ಧಾರವಾಡ) ಕ್ರಿ.ಶ. 1079ರ ಮುಕ್ಕಲ್ಲ (ಕಲಘಟಗಿ ತಾಲ್ಲೂಕು) ಶಾಸನವೇ ಗೋವೆಯ ಕದಂಬ ಮೂರನೆಯ ಗೂವಲದೇವನ ಅತಿ ಪ್ರಾಚೀನ ಶಾಸನವೆಂದು ಹೇಳುತ್ತ, ಕ್ರಿ.ಶ 1078ರಲ್ಲಿ ಈತ ಸಿಂಹಾಸನವನ್ನೇರಿದನೆಂಬ ನಿರ್ಣಯ ತಾಳಿದ್ದಾರೆ ಆದರೆ ಮೂರನೆಯ ಗೂವಲದೇವನ ಮುತ್ತಗಿಯ ಈ ಹೊಸ ಶಾಸನದ ಕಾಲ ಕ್ರಿ. ಶ. 1077 ಆಗಿರುವುದರಿಂದ ಮುತ್ತಗಿಯ ಈ ಶಾಸನವೇ ಮೂರನೆಯ ಗೂವಲದೇವನ ಅತ್ಯಂತ ಪ್ರಾಚೀನ ಶಾಸನವೆನಿಸಿಕೊಳ್ಳುತ್ತದೆ. ಕ್ರಿ. ಶ. 1076 ಈತನ ಆಳ್ವಿಕೆಯ ಆರಂಭಕಾಲವಾಗುತ್ತದೆ. ಇದು ಕಲ್ಯಾಣ ಚಾಲುಕ್ಯ

ಚಕ್ರವರ್ತಿ ಅರಸನೆಯು ವಿಕ್ರಮಾದಿತ್ಯನ ಆಳಿಕೆಯು ಆರಂಭಕಾಲವೂ ಆಗಿದೆ. ಹೀಗೆ ಚಕ್ರವರ್ತಿ ಅರಸನೆಯು ವಿಕ್ರಮಾದಿತ್ಯ, ಈತನ ಮಹಾಮಂಡಳೇಶ್ವರ ಗೋವೆಯ ಕದಂಬ ಮೂರನೆಯ ಗೂವಲದೇವರ ಆಳಿಕೆಯು ಆರಂಭಕಾಲ ಎರಡೂ ಒಂದೇ ಆಗಿರುವುದು ಒಂದು ಯೋಗಾಯೋಗ.

ಈ ಶಾಸನದ ಸಂಶೋಧನೆಯ ಮೂಲಕ ಡಾ. ಆರ್. ಎನ್. ಗುರವ ಅವರ ಮೇಲಿನ ನಿರ್ಣಯ ಈಗ ಬಿದ್ದುಹೋಗಿ, ಕ್ರಿ. ಶ. 1077ರ ಮುತ್ತಗಿಯ ಈ ಹೊಸ ಶಾಸನವೇ ಗೋವೆಯ ಕದಂಬ ಮೂರನೆಯ ಗೂವಲದೇವನ ಆಳಿಕೆಯ ಮೊಟ್ಟ ಮೊದಲನೆಯ ಶಾಸನವೆಂಬ, ಈತನ ಆಳಿಕೆಯ ಆರಂಭ ಕಾಲ ಕ್ರಿ. ಶ. 1076 ಎಂಬ ಹೊಸ ನಿರ್ಣಯಗಳು ಹೊರಬರುತ್ತವೆ. ಇದರಿಂದ ಮೂರನೆಯ ಗೋವಲದೇವನ ಶಾಸನ ಸಂಖ್ಯೆ ಈಗ 21 ಆಗುತ್ತದೆ. ಹೀಗೆ ಮುತ್ತಗಿಯ ಈ ಹೊಸ ಶಾಸನ ಅತ್ಯಂತ ಬೆಲೆಯುಳ್ಳದ್ದಾಗಿರುತ್ತದೆ. ಈ ಶಾಸನದ ಸಂಶೋಧನೆಯಿಂದ ಮೂರನೆಯ ಗೂವಲದೇವನ ಆಳಿಕೆಯ ಆರಂಭ ಕಾಲ ಕ್ರಿ.ಶ. 1076ರಷ್ಟು ಹಿಂದೆ ಹೋಗುತ್ತದೆ. ಕ್ರಿ. ಶ. 1125ರ ಮುಗದ (ಧಾರವಾಡ ತಾಲೂಕು) ಶಾಸನವೇ ಮೂರನೆಯ ಗೂವಲದೇವನ ಆಳಿಕೆಯ ಕೊನೆಯ ಶಾಸನವಾಗಿದೆ. ಹೀಗೆ ಈತನು ಕ್ರಿ. ಶ. 1076ರಿಂದ 1125ರ ವರೆಗೆ, ಅಂದರೆ 49 ವರ್ಷಗಳ ದೀರ್ಘಾವಧಿಯ ವರೆಗೆ ಕಲ್ಯಾಣ ಚಾಲುಕ್ಯದ ಮಹಾಮಂಡಳೇಶ್ವರನಾಗಿದ್ದನು. ಇದರಿಂದ ಅರಸನೆಯ ವಿಕ್ರಮಾದಿತ್ಯನ ಆಳಿಕೆಯ ಅಂತ್ಯದವರೆಗೂ ಈತ ಮಹಾಮಂಡಳೇಶ್ವರನಾಗಿಯೇ ಕಾರ್ಯ ನಿರ್ವಹಿಸಿದುದು ವ್ಯಕ್ತವಾಗುತ್ತದೆ. ಇದು ಇತ್ತೀಚಿನ ವರ್ಷಗಳಲ್ಲಿಯೇ ಅತ್ಯಂತ ಮಹತ್ವದ ಸಂಶೋಧನೆಯಾಗಿದೆ.

ಹೀಗೆ ಪ್ರಸ್ತುತ ಶಾಸನ ರಾಜಕೀಯ-ಧಾರ್ಮಿಕ ಹಾಗೂ ಸಾಹಿತ್ಯಿಕ ಸಂಗತಿಗಳನ್ನು ಕುರಿತು ಅನೇಕ ಹೊಸ ವಿಷಯಗಳನ್ನು ಪ್ರಥಮ ಸಲ ತಿಳಿಸಿಕೊಡುತ್ತದೆ. ಇಂಥ ಮಹತ್ವವುಳ್ಳ ಅಪ್ರಕಟಿತವಾದ ಈ ಶಾಸನ ಈ ಮೂಲಕ ಪ್ರಪ್ರಥಮ ಬಾರಿಗೆ ಇಲ್ಲಿ ಪ್ರಕಟವಾಗುತ್ತಿದೆ. ಈ ಶಾಸನದ ಪೂರ್ಣಪಾಠ ಹೀಗಿದೆ :

1. ನಮಸ್ತುಂಗ ಶಿರಶ್ಚುಂಬಿ ಚನ್ದ್ರ ಚಾಮರ ಚಾರವೇ [।*] ತ್ರೈಳೋಕ್ಯ
   ನಗರಾರಂಭ ಮೂಳಸ್ತಂಭಾಯ ಸ(ಶ)ಂಭವೇ ॥
2. ಜಯತ್ಯಾವಿಷ್ಕೃತಂ ವಿಷ್ಣೋರ್ವ್ವರಾಹಂ ಕ್ಷೋಭಿತಾರ್ಣ್ಣವಂ [।*]
   ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ ॥ ಕನ್ದ ॥
3. ಭುವನವನಕೇಷಮುಂ ವೀರವೃತ್ತಿಯಿಂ ನಿಜಭುಜಪ್ರತಾಪದಿನಾಳುತ್ತ
   ಮಿರಲ್ಕೆ ಹಿಮದಿನಾಸೇತುವರಂ ಚಾಳುಕ್ಯ ವಿಕ್ರಮಾದಿತ್ಯನೃಪಂ ॥
4. ಸ್ವಸ್ತಿ [॥*] ಸಮಸ್ತ ಭುವನಾಶ್ರಯ ಶ್ರೀಪೃಥ್ವಿವಲ್ಲಭ ಮಹಾರಾಜಾಧಿ
   ರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ
   ಚಾಳುಕ್ಯಾ—

5. ಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತ ರಾಭಿವೃದ್ಧಿ ಪ್ರವರ್ದ್ಧಮಾನಮಾ ಚನ್ದ್ರಾರ್ಕ್ಕ ತಾರಂಬರಂ ಸಲುತ್ತ ಮಿರೆ ॥ ಸಮ ಧಿಗತ

6. ಪಂಚಮಹಾಶಬ್ದ ಮಹಾಮಣ್ಡಳೇಶ್ವರಂ। ಬನವಾಸೀ ಪುರವರಾಧೀಶ್ವರ। ನನೇಕ (ನನೇಕ) ಸಮರ ವಿಜಯೋಪಾರ್ಜ್ಜಿತ ವೀರಶ್ರೀನಿವಾಸ ದಕ್ಷಿಣ ದೋರ್ದ್ದಣ್ಡಂ। ಪಾ ದಿ

7. ಪರಶುರಾಮಂ। ನಿಶ್ಶಂಕರಾಮಂ। ಮಲೆಗೆ ಭೈರವಂ। ವೈರೀಭ ಕಣ್ಠೀರವಂ। ಸುಭಟ ಕನಕ ನಿಕಷೋಪಳ। ನಂಭಯುಬಳ ಗಣ್ಡ ಮುಖದರ್ಪ್ಪಣಂ। ಹಯವತ್ಸ—

8. ರಾಜ। ತ್ಯಾಗವಿನೋದಂ। ಕನ್ದುಕ ಸಹಸ್ರಕೇಳೀ ವಿದಗ್ಧಜನ ಮಣ್ಡನಂ। ಪರಮಣ್ಡಳ ಖಣ್ಡವ ಪಾಣ್ಡುನನ್ದನಂ। ಭುಜಬಳಮಲ್ಲಂ। ಮಣ್ಡಳಿಕ ಶಿಖಾಮಣಿ।

9. ಕಾದಂಬ ಚೂಡಾಮಣೀತ್ಯಖಿಳ ರಾಜಾವಳೀ ಸಮಾಳಂಕೃತ ಶ್ರೀಮದ್ಗೂ ವಲದೇವನ್ನಿಜರಾಜಧಾನಿ ಗೋವಗೆಯೊಳ್। ದುಷ್ಟನಿಗ್ರಹ ವಿಶಿ—

10. ಷ್ಟ ಪ್ರತಿಪಾಳನೆಯಿಂ ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತ ಮಿರೆ ॥ ಕನ್ದ ॥ ಸಾರಂ ವಿಚಾರಿಪಾಗಳ್ ಮಾರಜವಾಡಿಯ ಸಮಸ್ತ ದೇಶಂ ಗಳೊ—

11. ಳಾ ಮಾರಜವಾಡಿಯೊಳನ್ತದೆ ಸಾನಂ ಪುಲ್ಲಂಬಿಯೆಪ್ಪತಾನಾಡೂರೊಳ್ ॥ ವೃತ್ತ ॥ ನೆಗಳ್ದುದು ಪೆಂಪನಾವರಿಸಿ ಮುತ್ತ್ರಗೆ ತದ್ವಿಷಯಾನ್ತರಾಳ ದೊಳ್

12. ನೆಗಟ್ಟರಗಣ್ಯಪುಣ್ಯಧನರಿಷ್ಟ ವಿಶಿಷ್ಟ ಸುಹೃಜ್ಜನ ಪ್ರಮಾದಿಗಳೆನಿಸಿರ್ದ್ದ ಸತ್ಪನಿಧಿ ಸಿರಗ ಗವುಣ್ಡನುಮೊಬ್ಬ ತನೂಳಾವಗಮೆಸೆದಿರ್ಪ್ಪ ಸತ್ಪ್ರಭು ಚ—

13. ವುಣ್ಡ ಗವುಣ್ಡನುಮೆಂಬ ದಾನಿಗಳ್ ॥* ದಯೆಯೊಳ್ ಧರ್ಮ್ಮದೊಳೊ ಳ್ಪಿನೊಳ್ಪನಯ ದೊಳ್ಚಾತುರ್ಯ್ಯದೊಳ್ ಧೈರ್ಯ್ಯದೊಳ್ ನಯದೊಳ್ಪಿ ಕ್ರಮದೊಳ್ಪ್ರಭುತ್ವ ಗುಣ—

14. ದೊಳ್ಸತ್ಯೋಕ್ತಿಯೊಳ್ದಾನಶಕ್ತಿಯೊಳೀತಂ ಮಿಗಿಲೆನ್ದು ಬಣ್ಣಿಪುದು ಲೋಕಂ ತಾರನಿಹಾರಹಾರಯಶಸ್ಸಂಗನನೂರ್ಜ್ಜಿತೋಜ್ವಳ ಗುಣ ಪ್ರೋತ್ತುಂಗನಂ ಸಿಂಗನಂ ॥

15. ಕನ್ದ ॥ ವಿನಯನಿಧಿ ಸತ್ಯವಾಕ್ಯಂ ಮನೋಮಾರ್ಗ್ಗಂ ಶೌರ್ಯ್ಯಶಾಳಿನಿ ಶೀವಿದಂ ಪೆಂಪಿನ ಕ(ಖ)ಣಿ ಬಮ್ಮ ಗವುಣ್ಡಂ ತನಯನೆನಲ್ ಸಿಂಗ ನನ್ತನೂನರುಮೊಳರೆ ॥

16. ಬರ್ಮ್ಮಗೆ ಮೊದಲಣ್ಣಿಂಗೆಡೆ ಧರ್ಮ್ಮಕ್ಕೆಱೆವಟ್ಟು ತೊಡವು ನನ್ನಿಗೆ
ವಿನಯಕ್ಕಾವರ್ಮ್ಮಂ ಶಾಂತಗುಣಕ್ಕೆ ತವರ್ಮ್ಮನೆ ಪರಹಿತದ ತುತ್ತತುದಿ
ಚಾವುಣ್ಡಂ ॥ ಸ್ಥಿತಿ ಸಾರ—

17. ಸೇಕವಾಕ್ಯಂ ವಿತತಯಶೋರಾಶಿ ಶೌರ್ಯ್ಯನಿಧಿ ಕಾರ್ಯ್ಯ ಬೃಹಸ್ಪತಿ
ಚಟ್ಟಗವುಣ್ಡಂ ಪ್ರಿಯಸುತನೆನೆ ಚಾವುಣ್ಡನೇಂ ಕೃತಾರ್ಥನೊ
ಜಗದೊಳ್ ॥

18. ಆ ನೆಗಟ್ಟ ಪುರನ್ದರ ಗುರು ತಾನೆಣೆ ಗಾವುಣ್ಡಗಳ್ಗೆ ಪುರುಷವಿಶೇಷ
ಜ್ಞಾನದೊಳವರಿವರೆಣೆಯೆಂಬೀ ನುಡಿ ಬಾಸೋಪಮಾ—

19. ನವಿಲ್ಲದೆ ಪೆಱತೆ ॥ ಇನ್ತು ಸಮಸ್ತಗುಣ ಸಮ್ಪನ್ನರುಂ ವ್ಯುತ್ಪನ್ನರು
ಮೆನಿಸಿದ ಸಿಂಗಗಾವುಣ್ಡನುಂ ಚಾವುಣ್ಡಗಾವುಣ್ಡನುಮಿರ್ದ್ದರ್ ॥ ಕನ್ದ ॥

20. ಚಾಳುಕ್ಯ ವಿಕ್ರಮಾಂಕ ಕಾಳಂ ಶಶಿಸಂಖ್ಯೆ ವರ್ತ್ತಿಸಲ್ಕೆ ನಳಾಬ್ದಕ್ಕಾಳಂ
ಬಸಮೇಸಿವೊಳ್ಳಂ ಪಾಳಿಸುವಾಶ್ವಯುಜಮಾಸದೊಳ್ ಪುಣ್ಣಮೆಯೊಳ್

21. ಹಿಮಕರವಾರದೊಳತ್ಯುತ್ತಮ ವ್ಯತೀಪಾದ ಸಂಕ್ರಮಣಮೆಂಬಿವಱೊಳ್
ಸಮುಚಿತ ಸೋಮಗ್ರಹಣಂ ಸಮನಿಸೆ ತದಗಣ್ಯಪುಣ್ಯ ಪಾವನ

22. ದಿನದೊಳ್ ॥ ಗದ್ಯ ॥ ಶ್ರೀಮತ್ತ್ರಿಭುವನಸ್ವಾಮಿಯೆನಿಸಿದ ಮೂಲಸ್ಥಾನದ
ಕಲಿದೇವ ಸ್ವಾಮಿಯ ದೇಗುಲಮಂ ಮಾಡಿಸಿಯಾ ಕಲಿದೇವಸ್ವಾಮಿ—

23. ದೇವರ್ಗ್ಗೆ ದೇವರಂಗಭೋಗಕ್ಕಂ ಚೈತ್ರ ಪವಿತ್ರ ಪರ್ವ್ವಂಗಳ್ಗಮಾ
ದೇಗುಲದ ಜೀರ್ಣ್ನೋದ್ಧಾರದ ಬೆಸಂಗಳ್ಗೆ ಮಲ್ಲಿದೇವರಂ ಪೂಜಿಸು
ತಿರ್ಪ್ಪ ಪೂಜಾರಿಯ ಗ್ರಾಸ—

24. ಕ್ಕಂ ಕಪ್ಪಡಕ್ಕಮಲ್ಲಿಯ ಪರ್ಯ್ಯಪ್ಪೆಗೆಯ್ಯುತಿರ್ಪ್ಪ ನಿವೇದ್ಯಮನಡುವ
ಗೊರವಕಬ್ಬೆಯ ಕೂಳು ಕಪ್ಪಡಕ್ಕಂ ಬೇಱ್ಮೆಂದು ಸಮಕಟ್ಟಿ ತನ್ನ
ಮಿತ್ತಂ ತಟ್ಟೆಯ—

25. ಕೆಱೆಯೊಳಗಣ ಕೆಱೆಯೊತ್ತಿನ ಸರಿವಿನ ಗದ್ದೆಯುಮಂ । ನೀರುಸಾಗರದ
ಬಟ್ಟೆಯಂ ಪಡುವಲ್ ಪಾರ್ವ್ವಂ ಗೋವಿನ್ದ ಸ(ಷ)ಣಂಗಿ ಮಾಡುವ
ಪಕ್ಕಲುಮಂ

26. ಸರ್ವ್ವಬಾಧಾ ಪರಿಹಾರಂ ಸರ್ವ್ವನಮಸ್ಯಂ ಮಾಡಿ ಬಿಟ್ಟರ್ ॥ ಮತ್ತಂ
ವಿಚಾರದಲ್ಲುಟ್ಟಿದ ಮುದ್ರಾವಣಮುಮ । ನಂಕದ ಬೀದಿವಣಮುಮಂ
ಬಿಟ್ಟರ್ ॥ ವೃತ್ತ ॥ ವರಗು—

27. ಈ ಶೀಳಮೊಳ್ನಡೆವ ನಿಸ್ಪೃಹನಿಲ್ಲಿಗೆ ನಿಲ್ವುದ್ಧತಾಚರಣದ ವೇಷಧಾರಿ
ಮಠಪಂ ನಿಲಲಾಗದು ನಿನ್ದನಪ್ಪಡಾಳ್ದರಸುಗಳುಂ ಗವುಣ್ಡುಗಳು
ಮಿರ್ದ್ದವನಂ ಕಳೆದಿ—

28. ಕನ್ಯಾಗಾಗ್ರಹಂ ಬೆರಸಿದನಾರುಪೇಕ್ಷಿಸಿದಡಂತವಗಲ್ಲಿಯ ದೋಷವೆಯ್ದು ಗುಂ ॥ ಇನ್ತೀ ಧರ್ಮ್ಮಮನೀವ ತೆಱದಿಂ ಕಾವಂ ಯಥಾ ನ್ಯಾಯದಿಂ–

29. ದನ್ತಾತಂಗಹಿತಂಗೆ ಗಂಗೆ ಗಯೆ ಕೇದಾರಂಗಳೊಳ್ ಸನ್ದ ಮತ್ತಂ ತೀರ್ತ್ಥಂಗಳೊಳಿನ್ದಿನ ಗ್ರಹಣ ತಾತ್ಕಾಳಂಗಳೊಳ್ ಭಕ್ತಿಯಿನ್ದಂ ತಾಂ ಕೊಟ್ಟ ಫಳಂ ಮ—

30. ಹಾದ್ವಿಜರ್ಗ್ಗೆ ಭಾಸ್ವದ್ಗೋಸಹಸ್ರಂಗಳಂ ॥ ಕನ್ದ ॥ ಗಂಗಾಯಮುನೆ ಗಳೆಡೆಱ ಸಂಗಮದೊಳಗನ್ಯಪುಣ್ಯ ವರತೀರ್ತ್ಥಸ್ಥಾನಂಗಳೊಳಿರ್ದ್ದ ತಪೋಧನ—

31. ರಂ ಗೋಬ್ರಾಹ್ಮಣರನಳಿದನಿನ್ತಿದನಳಿದಂ ॥ ಶ್ಲೋಕ ॥ ಸ್ವದತ್ತಾಂ ಪರ ದತ್ತಾಂ ವಾಯೋ ಹರೇತಿ ವಸುನ್ಧರಾಂ [।*] ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯ—

32. ತೇ ಕ್ರಿಮಿಃ ॥ ಬಹುಭಿರ್ವ್ವಸುಧಾ ಭುಕ್ತಾ ರಾಜಭಿಸಗರಾದಿಭಿಃ [।*] ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಳಂ ॥ ವೃತ್ತ ॥ ಸಾಮಾ—

33. ನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಳೇ ಕಾಳೇ ಪಾಳನೀಯೋ ಭವದ್ಭಿಃ । ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇನ್ದ್ರಾನ್ಭೂಯೋ ಭೂಯೋ ಯಾಚತೇ ರಾ—

34. ಮಚನ್ದ್ರಃ ॥ ಶ್ಲೋಕ ॥ ಸ್ವಂ ದಾತುಂ ಸುಮಹಚ್ಛಕ್ಯಂ ದುಃಖಮನ್ಯಸ್ಯ ಪಾಳನಂ [।*] ದಾನಂ ವಾ ಪಾಲನಂ ವೇತಿ ದಾನಾಚ್ಛ್ರೇಯೋನು ಪಾಲನಂ ॥

35. ಏತಚ್ಛಾಸನ ಲಿಖಿತಂ ಶ್ರವ್ಯಂ ನವ್ಯಂ ಮನೋಹರಂ ಜಯದೇವಕೃತಂ ಕಾವ್ಯಂ ತಿಷ್ಠತ್ವಾ ಚನ್ದ್ರತಾರಕಂ ॥ ಸೋಮಗ್ರಹಣದೊಳ್—

36. ಗುರುಮೂನೂರ್ವ್ವರುಂ ಮೂಡಗೇರಿಯ ದರ್ಶನಮುಂ ದೇವರ ಸೊಡರೆಣ್ಣೆಗೆ ಬಿಟ್ಟರ್ ॥ ಕನ್ದ ॥ ಇದನಿತ್ಯಂ ಸಂಸ್ಕೃತಿಯೆಂಬುದನನಿಂಬಾಗ—

37. ಱದು ಮೋಹಮಿಲ್ಲದ ದೃಷ್ಟಾರ್ತ್ಥದೆ ದೇವಕಾರ್ಯ್ಯಮಂ ನಾಗದಾಸಿ ಮಯ್ಯಂ ದ್ವಿಜೋತ್ತಮಂ ನಡೆಯಿಸುವ ॥ ಕಲ್ಲೋಜಂ ಬೆಸಗೆಯ ॥

ಈ ಶಾಸನದಲ್ಲಿ ಬಂದಿರುವ ಕಾಲದ ವಿವರಣೆ : "ಚಾಳುಕ್ಯ ವಿಕ್ರಮಾಂಕನ ಕಾಳಂ ಶಶಿಸಂಖ್ಯೆ ವರ್ತಿಸಲ್ಕೆನ್ಪಳಾಬ್ದಕ್ಕಾಳಂಬ ವೆನಿಪ್ಪೊಳ್ಪಂ ಪಾಳಿಸುವಾಶ್ವಯುಜಮಾಸದೊಳ್ ಪೂರ್ಣಿಮೆಯೊಳ್ ಹಿಮಕರದಾರದೊಳತ್ಯುತ್ತಮ ವ್ಯತೀಪಾತ ಸಂಕ್ರಮಣಮೆಂಬಿವರೊಳ್ ಸಮುಚಿತ ಸೋಮಗ್ರಹಣಂ ಸಮನಿಸೆ" ಈ ದಿನಾಂಕ ಕ್ರಿ.ಶ. 1077 ಅಕ್ಟೋಬರ್ 4 ಬುಧವಾರಕ್ಕೆ ಸಮಾನವಾಗಿದೆಯೆಂದು ಲೇಖಕರು ವಿವರಿಸಿದ್ದಾರೆ. ಆದರೆ ಕ್ರಿ.ಶ. 1077ರಲ್ಲಿ ನಳ ಸಂವತ್ಸರ ಬರುವುದಿಲ್ಲ. ಸ್ವಾಮಿ ಕಣ್ಣುಪಿಳ್ಳೆ ಅವರ ಎಫಿಮೆರೀಸ್ ಪ್ರಕಾರ ನಳ ಸಂವತ್ಸರ 1076ರಲ್ಲಿ ಬರುತ್ತದೆ. ಆದರೆ ಆಶ್ವಯುಜ ಪೌರ್ಣಿಮೆಯಂದು ಚಂದ್ರಗ್ರಹಣ ಬರುವುದಿಲ್ಲ. ಅಂದು ಸೋಮವಾರವೂ ಅಲ್ಲ. ಗ್ರಹಣದ ಲೆಕ್ಕವನ್ನು ಅನುಸರಿಸಿ ಲೆಕ್ಕ ಹಾಕಿದರೆ ಉತ್ತರ ಭಾರತದ ಪಂಚಾಂಗದ ಲೆಕ್ಕಾಚಾರದಂತೆ ನಳ ಸಂವತ್ಸರವು ಕ್ರಿ.ಶ. 1074ರಲ್ಲಿ ಬಂದಿದ್ದು ಆಶ್ವಯುಜ ಪೌರ್ಣಿಮೆಯಂದು ಚಂದ್ರಗ್ರಹಣವೂ ಸಂಭವಿಸುತ್ತದೆ. ಅಂದು ಸೋಮವಾರವಿರಲೂ ಸಾಧ್ಯವಿದೆ. ಆದ್ದರಿಂದ ಆರನೆಯ ವಿಕ್ರಮಾದಿತ್ಯನ ಸಿಂಹಾಸನ ಆರೋಹಣ ಕ್ರಮ ಮತ್ತು ಚಾಲುಕ್ಯ ವಿಕ್ರಮವಂಶ ಉತ್ತರ ಭಾರತದ ಎಣಿಕೆಯಂತೆ ಆಗಿರುವಂತೆ ತೋರುತ್ತದೆ. ಚಾಲುಕ್ಯರು ತಮ್ಮ ಮೂಲ ಸ್ಥಳವನ್ನು ಅಯೋಧ್ಯೆಯೆಂದು ಹೇಳಿಕೊಂಡಿರುವುದರಿಂದ ಚಾಲುಕ್ಯ ವಿಕ್ರಮ ಶಕೆ ಉತ್ತರ ಭಾರತದ ಪದ್ಧತಿಯಂತೆ ಆರಂಭವಾಗಿರಲ ಸಾಧ್ಯವಿದೆ. ಕ್ರಿ.ಶ. 1074 ವರ್ಷವನ್ನು ಒಪ್ಪುವುದಾದರೆ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ವರ್ಷ ಹಿಂದಕ್ಕೆ ಸರಿಯುವುದರಿಂದ ಈ ಅಂಶವನ್ನು ಇತಿಹಾಸಕಾರರು ಗಮನಿಸಬೇಕಾಗುತ್ತದೆ.

ಎಂ. ವಿ. ಶ್ರೀನಿವಾಸ್
(ಸಂಪಾದಕ)

ಲಕ್ಷ್ಮಣ್ ತೆಲಗಾವಿ

ಕಾಮಗೇತಿ ಅರಸರು-ಕೆಲವು ವಿಚಾರಗಳು: ಪ್ರತಿಕ್ರಿಯೆ

'ಮಾನವಿಕ ಕರ್ಣಾಟಕ'ದ ಸಂಪುಟ 17, ಸಂಚಿಕೆ 1-2 (ನವೆಂಬರ್ 1986 ಮತ್ತು ಫೆಬ್ರವರಿ 1987)ರ ಪುಟ 91-98ರಲ್ಲಿ ಪ್ರಕಟವಾದ ಪಿ. ಅಬ್ದುಲ್ ಸತ್ತಾರ್ ಅವರ 'ಕಾಮಗೇತಿ ಅರಸರು-ಕೆಲವು ವಿಚಾರಗಳು' ಎಂಬ ಲೇಖನಕ್ಕೆ ಸಂಬಂಧಿಸಿದಂತೆ ವ್ಯಕ್ತಪಡಿಸಿದ ಪ್ರತಿಕ್ರಿಯೆಯೇ ಈ ಲೇಖನ.

* * *

ಲೇಖಕರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುವ ವಿಚಾರಗಳಲ್ಲಿಯ ಮುಖ್ಯ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು:

1. ಶಾಸನೋಕ್ತ ಕಾಲಕ್ಕೆ ಹಿಂದೆಯೂ ಚಿತ್ರದುರ್ಗವು ಒಂದು ಆಡಳಿತ ಪ್ರದೇಶದ ಕೇಂದ್ರವಾಗಿದ್ದಿತೆನ್ನುವುದು ಸಾಧ್ಯವಾದರೂ ಈ ದಿಸೆಯಲ್ಲಿ ಇನ್ನೂ ಸಂಶೋಧನೆ ನಡೆಯಬೇಕಾಗಿದೆ (ಪು. 91-92).

2. ಚಿತ್ರದುರ್ಗವನ್ನು ಆಳಿದ ಕಾಮಗೇತಿ ಅರಸರ ವಂಶಜರ ಮೂಲಪುರುಷ ಚಿತ್ರನಾಯಕ ಹಾಗೂ ಮನೆದೇವರು ಚಿತ್ರದೇವರೆಂತಲೂ ಆದುದರಿಂದ ಈ ಗಿರಿದುರ್ಗಕ್ಕೆ ಚಿತ್ರಕಲ್ಲುದುರ್ಗ (ಚಿತ್ರದುರ್ಗ) ಎಂಬ ಹೆಸರು ಬಂದಿತೆಂತಲೂ ಹೇಳುವುದು ಕೇವಲ ಕಾಲ್ಪನಿಕವಾದ ಕಟ್ಟುಕಥೆ; ಈ ನಾಯಕರು ತಮ್ಮ ಶಾಸನಗಳಲ್ಲಿ ಚಿತ್ರದೇವರನ್ನು ತಮ್ಮ ಮನೆದೇವರೆಂದಾಗಲೀ ಚಿತ್ರನಾಯಕನನ್ನು ತಮ್ಮ ಮೂಲಪುರುಷನೆಂದಾಗಲೀ ಹೇಳಿಕೊಂಡಿಲ್ಲ; ಈ ಅರಸರ ಕಾಲದಲ್ಲಿ ಚಿತ್ರದುರ್ಗದ ಗಿರಿಗೆ 'ಚಿತ್ರದುರ್ಗ' ಎಂಬ ಹೆಸರು ಅವರ ಆಳ್ವಿಕೆಯ ಪ್ರಾರಂಭದಿಂದ ಎಂದರೆ ಕ್ರಿ.ಶ. 1566 ರಿಂದ 1799ರವರೆಗೆ ಇರಲಿಲ್ಲ, ಅದು ಇತ್ತೀಚಿಗೆ ಬಂದ ಹೆಸರಾಗಿದೆ, ಇತ್ಯಾದಿ (ಪು 92).

3. ಕಾಮಗೇತಿ ಅರಸರ ಸುಮಾರು 46 ಶಾಸನಗಳಲ್ಲಿ ಮೂರು ಶಾಸನಗಳು ಮಾತ್ರ ಈ ವಂಶಜರ ಮೂಲದ ಬಗೆಗೆ ಬೆಳಕು ಚೆಲ್ಲುತ್ತವೆ; ಐತಿಹಾಸಿಕವಾಗಿ

ಕಾಮಗೇತಿ ತಿಮ್ಮಣ್ಣನಾಯಕನೇ ಈ ವಂಶದ ಮೊದಲನೆಯ ಅರಸ; ಹನುಮಿನಾಯಕ ಈತನ ಮತ್ತು ಓಬಣ್ಣನಾಯಕನ ತಂದೆ; ತನ್ನನ್ನು ಸಗಲೆಯ ಹನುಮಿನಾಯಕ ಎಂದು ಕರೆಸಿಕೊಂಡ ಹನುಮಿನಾಯಕನು ಕಾಮಗೇತಿ ಅರಸರ ಮೂಲಪುರುಷ; ಪ್ರಾಯಶಃ ತಿಮ್ಮಣ್ಣನಾಯಕ ನಿಪುತ್ರಿಕನಾಗಿ ಸತ್ತಿರಬೇಕು; ಈತನ ನಂತರ ಆಳಿದವನು (ಮೊದಲನೇ) ಮೆದಕೆರಿನಾಯಕ; 'ಮೆದಕೆರಿ' ಎಂಬುದು ಆತನ ಹುಟ್ಟೂರಿನ ಹೆಸರಿರಬೇಕು ಹಾಗೂ ಈ ಗ್ರಾಮ ಚಿತ್ರದುರ್ಗ ಜಿಲ್ಲೆ ಗೋಸಿಕೆರೆಯ ಆಸುಪಾಸಿನಲ್ಲಿ ಇರಬಹುದು; ಕಾಮಗೇತಿ ಅರಸರು ಹುಟ್ಟಾ ಚಿತ್ರದುರ್ಗ ಜಿಲ್ಲೆಯವರೇ, ಇತ್ಯಾದಿ (ಪು. 93–95).

4. ಕಾಮಗೇತಿ ಅರಸರ ಹೆಸರುಗಳಲ್ಲಿ 'ಮೆದಕೆರಿನಾಯಕ' ಎಂದು ಕಂಡು ಬರುತ್ತದೆ; ಆದರೆ ಯಾವ ಶಾಸನದಲ್ಲೂ 'ಮದಕರಿ' ಎಂದು ಇಲ್ಲ; ಈ ವಂಶದಲ್ಲಿ ಆಳಿದ ಅರಸರು ತಮ್ಮನ್ನು ಅಪ್ಪಿತಪ್ಪಿಯೂ 'ಮದಕರಿನಾಯಕ' ಎಂದು ಕರೆದು ಕೊಂಡಿಲ್ಲ: 'ಮದಕರಿ' ಮದಿಸಿದ ಆನೆಯ ಕಥೆ ಸತ್ಯದೂರವಾದುದು; ಈ ಹೆಸರನ್ನು ನಮ್ಮ ಸಂಶೋಧಕರು, ಚರಿತ್ರಕಾರರು, ಲೇಖಕರು ಅನಾಮತ್ತಾಗಿ ಸ್ವೀಕರಿಸಿ ಆ ಅಸ್ಥಿಪಂಜರಕ್ಕೆ ರಕ್ತಮಾಂಸಾದಿಗಳನ್ನು ತುಂಬಿದ್ದಾರೆ; ಈ ಅರಸರ ನ್ಯಾಯವಾದ ಹೆಸರು 'ಮೆದಕೆರಿ'ನಾಯಕ ಎಂಬುದೇ ಹೊರತು 'ಮದಕರಿ'ನಾಯಕ ಎಂದಲ್ಲ, ಇತ್ಯಾದಿ (ಪು. 95–96).

5. ಕಾಮಗೇತಿ ವಂಶದ ಕೊನೆಯ ಅರಸ ರಾಜಾ ಮೆದಕೆರಿನಾಯಕ ನೇರವಾಗಿ ಸಗಲೆ ಹನುಮಿನಾಯಕ, ಓಬಣ್ಣನಾಯಕರ ವಂಶಸ್ಥ ಹಾಗೂ ಹಿರೇ ಮೆದಕೆರಿನಾಯಕನ ಪೌತ್ರ; ಗೌಡನಹಳ್ಳಿ ಶಾಸನವು (ಹಿರಿಯೂರು 53) ಸ್ಪಷ್ಟವಾಗಿ ಈತನ ವಂಶವೃಕ್ಷವನ್ನು ತಿಳಿಸುತ್ತದೆ; ಸ್ವಯಂ ರಾಜಾ ಮೆದಕೆರಿನಾಯಕನೇ ತನ್ನ ಶಾಸನದಲ್ಲಿ ತನ್ನ ತಂದೆ ಕಸ್ತೂರಿ ದುಗ್ಗಪ್ಪನಾಯಕನೆಂದೂ ತನ್ನ ತಾತ ಕಸ್ತೂರಿ (ಹಿರೇ) ಮೆದಕೆರಿನಾಯಕನೆಂದೂ ಹೇಳಿಕೊಂಡಿದ್ದಾನೆ; ಈತ ಕಸ್ತೂರಿ ರಂಗಪ್ಪನಾಯಕನ ಸೋದರನ ಮಗ; ಪ್ರಾಯಶಃ ಚಿಕ್ಕ ತಂದೆಯಾದ ಕಸ್ತೂರಿ ರಂಗಪ್ಪನಾಯಕನ ಕಾಲದಲ್ಲಿ ರಾಜಕಾರ್ಯಗಳಲ್ಲಿ ಭಾಗವಹಿಸುತ್ತಿದ್ದಂತೆ ತೋರಿಬರುತ್ತದೆ; ಆತನ ಜೀವನಕಾಲದಲ್ಲಿ ಈ ಮೆದಕೆರಿನಾಯಕನು ಆತನ ಕಾವಲುಪಡೆಯ ಮುಖ್ಯಸ್ಥ (ಕಾಯಿ) ಆಗಿ ನೇಮಕಗೊಂಡಿದ್ದ ಹಾಗೂ ಆತನ ಪರವಾಗಿ ತಾನೇ ದಾನಗಳನ್ನು ನೀಡುವಷ್ಟು ಅಧಿಕಾರ ಪಡೆದಿದ್ದ (ಶಾಸನ : ಹೊಳಲ್ಕೆರೆ 54, ಹೊರಕೆರೆದೇವರಪುರ, ಕ್ರಿ.ಶ. 1754); ಆದ್ದರಿಂದ ಹಿರೇಮೆದಕೆರಿನಾಯಕನಿಗೆ ರಂಗಪ್ಪ ಮತ್ತು ದುಗಪ್ಪ ಎಂಬ ಮಕ್ಕಳಿದ್ದುದು ಇದರಿಂದ ಸಿದ್ಧವಾಗುತ್ತದೆ; ಮೆದಕೆರಿನಾಯಕನ ಅಂತ್ಯ ಶ್ರೀರಂಗಪಟ್ಟಣದಲ್ಲಿ ಆಯಿತು; ಈತನ ಸಾವು ಚಿತ್ರದುರ್ಗದಲ್ಲೇ ಆಯಿತೆಂದು ಕಲ್ಪಿಸಿ ಗೊಂದಲ ಸೃಷ್ಟಿಸಲಾಗಿದೆ, ಇತ್ಯಾದಿ (ಪು. 96–98).

6. ಕಾಮಗೇತಿ ಅರಸರ ಲಾಂಛನ ಹನುಮದ್ಗರುಡ ಧ್ವಜ; ಈ ಇಬ್ಬರು ಭಾಗವತ ಶ್ರೇಷ್ಠರನ್ನು ಒಂದೇ ಕಡೆ ಸೇರಿಸಿರುವುದು ಪ್ರಾಯಶಃ ಭಾರತದಲ್ಲಿ ಇದೊಂದೇ ಕಡೆ ಇರಬೇಕು, ಇದೊಂದು ವಿಶೇಷ; ಕಾಮಗೇತಿ ಆಸ್ತಿ ಎಂದು ಗುರುತಿಸಲು ಈ ಅರಸರು ಹನುಮದ್ಗರುಡ ಮುದ್ರೆಗಳನ್ನು ಹಾಕುತ್ತಿದ್ದರು; ಇದಕ್ಕೆ ಮೊದಲೇ ಹರತಿ ಮಲ್ಲಯ್ಯನಾಯಕನು ಗರುಡದೇವರನ್ನೂ ಹನುಮಂತದೇವರನ್ನೂ ಮಾಡಿಸಿ ಪ್ರತಿಷ್ಠೆ ಮಾಡಿಸಿದ್ದ; ಕಾಮಗೇತಿ ಮತ್ತು ಹರತಿ ನಾಯಕರ ಮಧ್ಯೆ ಸಂಬಂಧವಿದ್ದು, ತಮ್ಮ ಮೂಲ ಮನೆದೇವರುಗಳಾದ ಹನುಮ ಮತ್ತು ಗರುಡದೇವರನ್ನು ಹೀಗೆ ತಮ್ಮ ಲಾಂಛನವಾಗಿ ಆರಿಸಿಕೊಂಡು ಗೌರವಿಸಿರಬಹುದು; ಇದು ಪರಿಶೀಲನೆಗೆ ಗುರಿಯಾಗಬೇಕು, ಇತ್ಯಾದಿ (ಪು. 98).

* * *

ಈ ಮೇಲಿನ ಸಾರಾಂಶದಲ್ಲಿ ಉಕ್ತವಾಗಿರುವ ಬಹುಪಾಲು ವಿಚಾರಗಳು ಹೊಸವೇನಲ್ಲ; ಗ್ರಂಥ, ಲೇಖನ, ಟಿಪ್ಪಣಿ, ಇತ್ಯಾದಿಗಳಲ್ಲಿ ಈಗಾಗಲೇ ಚರ್ಚೆಯಾಗಿ ತಿದ್ದುಪಾಟುಗಳಿಗೆ ಒಳಗಾಗಿರುವಂತಹವು; ಉಳಿದುವು ಇನ್ನೂ ಸಂಶೋಧನೆಗೊಳ್ಳಬೇಕಾದುವು. ಚಿತ್ರದುರ್ಗ ನಾಯಕ-ಅರಸರ ಇತಿಹಾಸ ಕುರಿತು ಈವರೆಗೆ ಬೆಳಕಿಗೆ ಬಂದಿರುವ ಹೊಸ ಸಂಗತಿ, ಇತ್ಯಾದಿಗಳನ್ನು ಈ ಮೇಲಿನ ಅಂಶಗಳಿಗನುಸಾರವಾಗಿ ಇಲ್ಲಿ ಪ್ರಸ್ತಾಪಿಸಬಹುದು:

1. ಕ್ರಿಸ್ತಶಕದ ಆರಂಭದ ವೇಳೆಗಾಗಲೇ ಚಿತ್ರದುರ್ಗವು ಆಡಳಿತ ಕೇಂದ್ರವಾಗಿದ್ದಿತು. ಪ್ರಾಗೈತಿಹಾಸಿಕ ಕಾಲದ ಕಬ್ಬಿಣಯುಗದಿಂದ ಕದಂಬರ ಕಾಲದವರೆಗೆ ಅಂದರೆ ಕ್ರಿಸ್ತಪೂರ್ವ 3 ರಿಂದ ಕ್ರಿಸ್ತಶಕ 3ನೆಯ ಶತಮಾನದವರೆಗೆ ಇಲ್ಲಿ ಆದ ನಗರ ಸಂಸ್ಕೃತಿಯ ಬೆಳವಣಿಗೆಯನ್ನು ವೈಜ್ಞಾನಿಕ ಸ್ವರೂಪದ ಭೂಶೋಧನೆ ಕೈಗೊಳ್ಳುವುದರ ಮೂಲಕ ಬೆಳಕಿಗೆ ತರಲಾಗಿದೆ. ಪ್ರಾಕ್ತನಶಾಸ್ತ್ರಜ್ಞರಾದ ಆರ್. ನರಸಿಂಹಾಚಾರ್ (1908), ಡಾ|| ಎಂ. ಎಚ್. ಕೃಷ್ಣ (1928, 1940), ಆರ್. ಇ. ಮಾರ್ಟಿಮರ್ ವ್ಹೀಲರ್ (1947) ಹಾಗೂ ವಿ. ಮಿಶ್ರಾ (1978) ಅವರುಗಳ ನೇತೃತ್ವದಲ್ಲಿ ನಡೆದ ಕ್ರಮಬದ್ಧ ಭೂಶೋಧನೆಗಳು, ಈ ನೆಲೆಯು ಶಾತವಾಹನರ ಮತ್ತು ಅವರ ಮಾಂಡಲಿಕರ ಕೇಂದ್ರವಾಗಿದ್ದಿತೆಂಬುದನ್ನು ಹಾಗೂ ಕ್ರಿಸ್ತಶಕ 200ರ ತರುವಾಯ ಚಂದ್ರವಳ್ಳಿಯು ಶಾತವಾಹನರ ರಾಜಧಾನಿಗಳಲ್ಲಿ ಒಂದಾಗಿದ್ದಿತೆಂಬುದನ್ನು ಸ್ಪಷ್ಟಪಡಿಸಿವೆ.

2. ಚಿತ್ರದುರ್ಗದ ಕಾಮಗೇತಿ ಅರಸರಿಗೆ ಸಂಬಂಧಿಸಿದ 'ವಂಶಾವಳಿ'ಗಳಾವುವೂ ಚಿತ್ರನಾಯಕ ಎಂಬವನು ಈ ಮನೆತನದ ಮೂಲಪುರುಷನೆಂದು ಹೇಳುವುದಿಲ್ಲ. ಆದರೆ ಕೊನೆಯ ಅರಸ ರಾಜಾ ಮದಕರಿನಾಯಕನ ಆಸ್ಥಾನದಲ್ಲಿ ಮರಾಠರ ಪ್ರತಿನಿಧಿಯಾಗಿ ಉಪಸ್ಥಿತನಿದ್ದ (ಚಂದ್ರಗಿರಿ) ಭೀಮೋಜಿ ಪಂತ ಎಂಬುವನು ಪೂನಾದ

ಪೇಷ್ವೆಗಳಿಗೆ ಬರೆದ 'ಚಿತ್ರದುರ್ಗದ ಬಖೈರು' ಎಂದು ಪ್ರಸಿದ್ಧವಾದ ತನ್ನ ಸುದೀರ್ಘ ರಾಜಕೀಯ ದಿನಚರಿಯಲ್ಲಿ, "ಆಗ ಕಾಮಗೇರೆ ವಂಶಸ್ಥರು ಚಿತ್ರನಾಯ್ಕರೆಂದು ಯಶೋವಂತರಾದರು. ಅವರು ಆನೆಗೊಂದಿ ನರಪತಿ ಕೃಷ್ಣರಾಜ ಮಹಾರಾಜಾಧಿರಾಜರವರ ಆಜ್ಞಾನುಸಾರ ಈ ಪರ್ವತಕ್ಕೆ ಜಹಗೀರು ತೆಗೆದುಕೊಂಡು ಈ ಪರ್ವತ ವಾಸವನ್ನು ಮಾಡಿ ಕಿಲ್ಲೆ ಕಟ್ಟಿಸಿದರು. ಆದ್ದರಿಂದ ಈ ಪರ್ವತಕ್ಕೆ ಅವರ ಹೆಸರಾಯಿತು. ಆಗಿನಿಂದ ಚಿತ್ರದುರ್ಗವೆಂದು ಹೆಸರಾಯಿತು. ಇವರಿಗೆ ತಿಮ್ಮಣ್ಣನಾಯಕರು, ಅವರಿಗೆ ಬಾಳರಾವು, ದಾದೇರಾವು ಎಂದು ಆಯಿತು. ಮದಕೇನಾಯಕರು ಎಂದು ಆದರು. ಅವರಿಗೆ ರಸಾಸಿದ್ಧರು ಪ್ರತ್ಯಕ್ಷವಾಗಿ ಒಂದು ಕತ್ತಿ, ವಿಭೂತಿ ಸಹಿತ ಕೊಟ್ಟರು. ಅವರಿಗೆ ಚಿಕ್ಕಣ್ಣನಾಯಕರು ಆದರು" ಎಂದು ದಾಖಲಿಸಿರುವನು.[1] ಅವನ ಪ್ರಕಾರ ಚಿತ್ರನಾಯಕನು ಈ ಅರಸರ ಮೂಲಪುರುಷ; ಚಿತ್ರದುರ್ಗ ಸಂಸ್ಥಾನದ ಮೊದಲ ದೊರೆ; ಹಾಗೂ (ಮತ್ತಿ) ತಿಮ್ಮಣ್ಣನಾಯಕ ಈತನ ಮಗ. ಈ ರೀತಿ ದಾಖಲಿಸಲು ಭೀಮೋಜಿಗೆ ದೊರೆತ ಆಧಾರವೇನೋ ತಿಳಿಯದು; ಅಥವಾ ಕೇವಲ ಊಹೆ ಮಾಡಿರುವನೋ ಹೇಳಲು ಬರುವಂತಿಲ್ಲ. 18ನೆಯ ಶತಮಾನದ ಕಡೆಯ ಕಾಲು ಭಾಗದ ಅವಧಿಯಲ್ಲಿ ಸಿದ್ಧಪಡಿಸಲಾಗಿರಬಹುದಾದ ತನ್ನ ಬಖೈರ್‌ನಲ್ಲಿ, ಭೀಮೋಜಿಯು ಆ ವೇಳೆಗೆ ಈ ಅರಸರಿಗೆ ಸಂಬಂಧಿಸಿದ ಸುಮಾರು 200 ವರುಷಗಳ ಹಿಂದಿನ ಸಂಗತಿಗಳನ್ನು ಸಂಗ್ರಹಿಸುವಲ್ಲಿ ತೋರಿಸಿರುವ ನಿಖರತೆ ಬಗೆಗೆ ಶಂಕೆಪಡುವಂತಾಗುತ್ತದೆ.

ಆದರೆ ಚಿತ್ರನಾಯಕನ ಚಾರಿತ್ರಿಕತೆಯನ್ನು ಸಿದ್ಧಪಡಿಸಲು ಪ್ರಯತ್ನಿಸಿದವರಲ್ಲಿ ಮೊದಲಿಗರೆಂದರೆ ಪಾವಗಡದ ವಿ. ರಂಗನಾಯಕ ಅವರು.[2] ಇದೇ ಸಂಗತಿಯನ್ನು ರಾಜಾ ಬಿಚ್ಚುಗತ್ತಿ ಪರಶುರಾಮ ಪ್ಪನಾಯಕ ಅವರು ಇನ್ನಷ್ಟು ವಿವರವಾಗಿ ಹೇಳಿರುವರು.[3] ಪರಶುರಾಮಪ್ಪನಾಯಕ ಅವರು ಹೇಳಿರುವಂತೆ, ಚಿತ್ರದುರ್ಗದ ಒಂದನೆಯ ದೊರೆ ಚಿತ್ರನಾಯಕ; ಈತ ದೆಹಲಿಯಲ್ಲಿ ತಾನು ಸಾಧಿಸಿದ ಮದಿಸಿದ ಆನೆಯನ್ನು ಪಳಗಿಸಿದ ಸಾಹಸಕ್ಕೆ ಪ್ರತಿಫಲವಾಗಿ ದಕ್ಷಿಣದಲ್ಲಿ ಜಡೆಕಲ್ಲು, ಕರಿಮಲೆ, ರಾಮದುರ್ಗ ಮೊದಲಾದ ಸ್ಥಳಗಳನ್ನು ಜಹಗೀರಾಗಿ ಪಡೆದು, ವರುಷಕ್ಕೆ 10,000 ವರಹಗಳನ್ನು ಖಂಡಣಿ ಕೊಡುತ್ತಿದ್ದನಂತೆ. ಕಾಲಕ್ರಮೇಣ ಪರಕೀಯರ ಅತ್ಯಾಚಾರಗಳಿಂದ ನೊಂದವನಾಗಿ ಈ ಜಹಗೀರುಗಳನ್ನು ತ್ಯಾಗಮಾಡಿ, ಬಾದಶಹನ ಅಪ್ಪಣೆ ಪಡೆದು ಅಲ್ಲಿಂದ ಹೊರಟು ಆನೆಗೊಂದಿ ಸೀಮೆ ಪೈಕಿ ಹಂಪೆಗೆ ಬಂದು ಇಳಿದನು; ಕ್ರಿ.ಶ. 1289ನೆಯ ಪರಾಭವ ಸಂವತ್ಸರದಲ್ಲಿ (ಕ್ರಿ.ಶ. 1367) ಚಿನ್ಮೂಲಾದ್ರಿಯ ಮಹಾ ಪರ್ವತದಲ್ಲಿ ತನ್ನ ನೂತನ ರಾಜ್ಯಸ್ಥಾಪನೆ ಮಾಡಲು ಪ್ರಶಸ್ತವಾಗಿ ತೋರಿಬಂದು,

1 ಹುಲ್ಲೂರು ಶ್ರೀನಿವಾಸ ಜೋಯಿಸ (ಸಂ.): ಚಿತ್ರದುರ್ಗದ ಬಖೈರು, ಮೈಸೂರು, 1968, ಪು. 49

2 ವಾಲ್ಮೀಕ ವಂಶಪಾವನಿ, ಪಾವಗಡ, 1938, ಪು. 9–10

3 ಚಿತ್ರದುರ್ಗದ ಗಜಕೇಸರಿ, ಒಂದನೆಯ ಭಾಗ, ಚಿತ್ರದುರ್ಗ, 1961, ಪು. 6–21

ಆನೆಗೊಂದಿಗೆ ಹೋಗಿ ನರಪತಿಗಳಿಂದ ಚಿನ್ಮೂಲಾದ್ರಿ ಪರ್ವತದ ಜಹಗೀರನ್ನೂ ಹೊಳಲ್ಕೆರೆ ನಾಯಕತನವನ್ನೂ ಪಡೆದುಕೊಂಡು ಬಂದು ತಳವೂರಿದನು. ಈ ಮಹಾ ಪರ್ವತಕ್ಕೆ ಕಾಮಗೇತಿ ವಂಶದ ಪ್ರಮುಖನೂ ಹಿರಿಯನೂ ಎಂದು ನಿರ್ಧರಿಸುವ ಮಹಾಕಾಂಕ್ಷೆಯಿಂದ 'ಚಿತ್ರದುರ್ಗ' ಎಂದು ನಾಮಕರಣ ಮಾಡಿದನು,[4] ಇತ್ಯಾದಿ. ಈ ನಾಯಕನಿಗೆ ಸಂಬಂಧಿಸಿದಂತೆ ಪ್ರಚಾರದಲ್ಲಿರುವ ಎಲ್ಲ ಐತಿಹ್ಯಗಳನ್ನೂ ಲೇಖಕರು ಸಂಗ್ರಹಿಸಿ ಕೊಟ್ಟಿರುವರು. ಇವೆಲ್ಲವೂ ಈಗಾಗಲೇ ಈ ನಾಯಕರ ಚರಿತ್ರೆಯನ್ನು ಗಮನಿಸಿದವರು ತಿಳಿದಿರುವ ಸಂಗತಿಗಳೇ.

ಮುಖ್ಯ ಸಂಗತಿಯೆಂದರೆ, 16ನೆಯ ಶತಮಾನದ ಮಧ್ಯಭಾಗದವರೆಗೆ, ಅಂದರೆ ಕ್ರಿ.ಶ. 1568ರ ವೇಳೆಗೆ ಮತ್ತಿ ತಿಮ್ಮಣ್ಣನಾಯಕನು ವಿಜಯನಗರದ ಪರವಾಗಿ ಚಿತ್ರದುರ್ಗದ ಪ್ರತಿನಿಧಿಯಾಗಿ ಅಧಿಕಾರ ವಹಿಸುವವರೆಗೆ, ಈ ಭಾಗದ ಆಡಳಿತವನ್ನು ನೋಡಿಕೊಳ್ಳುತ್ತಿದ್ದವರು ವಿಜಯನಗರದ ಪ್ರತಿನಿಧಿಗಳು. ಆಗ ಚಿತ್ರದುರ್ಗವನ್ನು ಬೆ(ಚಿ)ಮ್ಮತ್ತನಕಲ್ಲು ಎಂತಲೇ ಸಂಬೋಧಿಸಲಾಗುತ್ತಿದ್ದಿತು. ಆದ್ದರಿಂದ ಚಿತ್ರನಾಯಕನು ಇಲ್ಲಿಗೆ ರಾಜಪ್ರತಿನಿಧಿಯಾಗಿ ಬಂದುದಾಗಲೀ ತನ್ನ ಹೆಸರಿನಿಂದ ಈ ಪರ್ವತವನ್ನು 'ಚಿತ್ರದುರ್ಗ'ವೆಂದು ಕರೆದುದಾಗಲೀ ಸಂಭವನೀಯವಲ್ಲ. ಈ ಹಿನ್ನೆಲೆಯಲ್ಲಿ ಪರಶುರಾಮಪ್ಪನಾಯಕ ಅವರ ಕೃತಿಯನ್ನೂ ಅದರಲ್ಲಿ ಅವರು ಪ್ರಸ್ತಾಪಿಸಿರುವ ಈ ಮೇಲಿನ ವೃತ್ತಾಂತವನ್ನೂ ಈಗಾಗಲೇ ವಿವರವಾಗಿ ವಿಮರ್ಶಿಸಿದೆ.[5]

ಇವೆಲ್ಲಾ ಏನೇ ಇದ್ದರೂ, ಬೇಡ (ನಾಯಕ) ಜನಾಂಗದವರೇ ಹೆಚ್ಚಾಗಿ ನೆಲಸಿರುವ ಈ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿ ಚಿತ್ರನಾಯಕನಹಳ್ಳಿ (ತಳಕು ಹೋಬಳಿ) ಎಂಬುದು ಅಸ್ತಿತ್ವದಲ್ಲಿದೆಯೆಂಬುದನ್ನೂ ಇಲ್ಲಿ ಗಮನಿಸಬೇಕು. ಈ ಗ್ರಾಮದ ಸ್ಥಾಪನೆಯ ಹಿನ್ನೆಲೆಯಾಗಲೀ ಕಾಲವಾಗಲೀ ಸದ್ಯಕ್ಕೆ ತಿಳಿಯದು. ತಮ್ಮ ಹೆಸರಿನಲ್ಲಿ, ತಮ್ಮ ನಾಗತಿಯರು, ಮಕ್ಕಳು ಹಾಗೂ ಹಿರಿಯರ ಹೆಸರಿನಲ್ಲಿ ಕಾಮಗೇತಿ ಅರಸರು ಊರುಗಳನ್ನು ನಿರ್ಮಾಣ ಮಾಡಿರುವರೆಂಬುದಕ್ಕೆ ಓಬಣ್ಣನಹಳ್ಳಿ, ಕಸ್ತೂರಿ ರಂಗಪ್ಪನಹಳ್ಳಿ, ವೀರಮದಕೇರಿಪುರ, ಮದಕೇರಿಹಳ್ಳಿ, ಮದಕರಿನಾಯಕನಹಳ್ಳಿ, ಮದಕರಿನಾಯಕನಕೋಟೆ, ಭರಮಣ್ಣನಾಯಕನದುರ್ಗ, ಭರಮನಹಳ್ಳಿ, ಪರಶುರಾಮಪುರ, ಓಬವ್ವನಾಗತಿಹಳ್ಳಿ, ವೀರವ್ವನಾಗತಿಹಳ್ಳಿ, ಲಿಂಗವ್ವನಾಗತಿಹಳ್ಳಿ, ರಂಗವ್ವನಹಳ್ಳಿ, ಬೊಮ್ಮವ್ವನಾಗತಿಹಳ್ಳಿ, ಕೆಂಚವ್ವನಾಗತಿಹಳ್ಳಿ, ಬಸವ್ವನಾಗತಿಹಳ್ಳಿ, ಕಲ್ಲವ್ವನಾಗತಿಹಳ್ಳಿ, ಚಿಕ್ಕವ್ವನಾಗತಿಹಳ್ಳಿ, ದ್ಯಾಮವ್ವನಹಳ್ಳಿ, ಯರ್ರವ್ವ

---

4 ಅದೇ, ಪು. 10–11, 18

5 ನೋಡಿ : ಲಕ್ಷ್ಮಣ್ ತೆಲಗಾವಿ : ಚಿತ್ರದುರ್ಗ ಇತಿಹಾಸ ಮತ್ತು ಸ್ಥಳೀಯ ಲೇಖಕರು (ಲೇಖಾಂಕ 2), ತರಳಬಾಳು, ಸಂಚಿಕೆ 27, ಏಪ್ರಿಲ್ 1982, ಪು. 12–17

ನಾಗತಿಹಳ್ಳಿ, ಚಿಕ್ಕಸಿದ್ದವ್ವನಹಳ್ಳಿ, ದೊಡ್ಡಸಿದ್ದವ್ವನಹಳ್ಳಿ, ಚಿಕ್ಕಪಾಲವ್ವನಹಳ್ಳಿ, ಕೊಮಾರನಹಳ್ಳಿ, ಕೊಮಾರ ಮದಕರಿನಾಯ್ಕನಕೋಟೆ ಮೊದಲಾದುವನ್ನು ಉಲ್ಲೇಖಿಸಬಹುದು. ಹಾಗೆಯೇ, ಈ ನಾಯಕ–ನಾಯಕಿತಿ–ಕುಮಾರ–ಕುಮಾರಿಯರ ಹೆಸರಿನಲ್ಲಿರುವ ಕೆರೆ–ಕುಂಟೆ–ಕೋಟೆ–ಮಠ–ಮಂದಿರ, ಇತ್ಯಾದಿಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಆದ್ದರಿಂದ ಚಿತ್ರನಾಯಕನ ಹೆಸರಿನಲ್ಲಿಯೂ ಗ್ರಾಮವೊಂದನ್ನು ನಿರ್ಮಿಸಲಾಗಿದೆಯೆಂದು ತಿಳಿಯಬಹುದೇ ?

ಸಾಂಪ್ರದಾಯಿಕ ಸಂಗತಿಗಳನ್ನೂ ಆಶಯಗಳನ್ನೂ ತನ್ನ ಹಿನ್ನೆಲೆಯಲ್ಲಿ ಹೊಂದಿದೆ ಚಿತ್ರದೇವರು. ಚಿತ್ರದುರ್ಗ ಅರಸರ ಮೂಲಪುರುಷರು ತಮ್ಮ ಮೂಲ ನೆಲೆಯಿಂದ ವಲಸೆ ಹೊರಟಾಗ ತಮ್ಮೊಡನೆ ತಮ್ಮ ಮನೆದೇವರುಗಳಲ್ಲಿ ಅಹೋಬಲ ನರಸಿಂಹದೇವರನ್ನೂ ಕಂಪಳ ದೇವರಲ್ಲೊಂದಾದ ಚಿತ್ರದೇವರನ್ನೂ ತಂದರೆಂದು ವ್ಯಕ್ತಪಡುತ್ತದೆ ಈ ಜನಾಂಗದವರ ವಂಶ ಮತ್ತು ಗೋತ್ರ–ಸೂತ್ರ–ಶಾಖೆಗಳಲ್ಲಿ ಮಹಿಪರಿಗೋತ್ರ-ಮನುಮುನಿಸೂತ್ರಶಾಖೆಗಳೆಂದು ತೋರಿಸಲಾದ ಚಂದ್ರವಂಶಕ್ಕೆ ಸೇರಿದವರಲ್ಲಿ ಸೂರೇದೇವರು, ದೊಡ್ಡಕಂಪಳದೇವರು ಮತ್ತು ಚಿತ್ರದೇವರುಗಳಿಗೆ ಸಂಬಂಧಿಸಿದವರು ಹಸ್ತಿನಾವತಿ, ಆನೆಗೊಂದಿ ಮತ್ತು ಚಿತ್ರದುರ್ಗದ ರಾಜವಂಶಸ್ಥರೆಂದು ಪ್ರಸ್ತಾಪಿಸಲಾಗಿದೆ.[6] ದಿಳ್ಳಿಯಿಂದ ಬಂದ ಚಿತ್ರದೇವರು ಇಲ್ಲಿ ನಿಂತಿದ್ದರಿಂದ ಚಿತ್ರಹಳ್ಳಿ ಎಂದು ಹೆಸರಿಡಲಾಯಿತೆಂದೂ ಈ ಗ್ರಾಮದ ಗೌಡಿಕೆಗೆ ಶಾವಂತಲೋರ ಲಿಂಗಣ್ಣ, ಶ್ಯಾನಭೋಗಿಕೆಗೆ ಪುಟ್ಟರಸ್ಯೆಯ ಮತ್ತು ತಳವಾರಿಕೆಗೆ ಲಕ್ಕೆಮನೋರ ಮರಿಲಕ್ಕೈಯರನ್ನು ನಿಲ್ಲಿಸಲಾಯಿತೆಂದೂ ಕಂಪಳದೇವರಾದ ಚಿತ್ರದೇವರ ಪೂಜಾರಿಕೆಗೆ ಸಿದ್ದಲಿಂಗೈಯ್ಯನನ್ನು ನೇಮಿಸಲಾಯಿತೆಂದೂ ಹೇಳಿದೆ.[7] ಆದರೆ ಈ ಸಂಬಂಧದಲ್ಲಿ ಚಿತ್ರಹಳ್ಳಿ ಶ್ಯಾನುಬೋಗತನ ನಿರ್ವಹಿಸಿದವರ ವಂಶಾವಳಿಯ ವಿವರಗಳನ್ನು ಹೊಂದಿರುವ ಹಿತ್ತಾಳೆ ತಗಡುಗಳು ಒದಗಿಸುವ ವೃತ್ತಾಂತವು[8] ಚಿತ್ರಹಳ್ಳಿಯ ಸ್ಥಾಪನೆಯ ಹಿನ್ನೆಲೆಯಲ್ಲಿ ಪ್ರಸ್ತಾಪಗೊಂಡಿರುವುದು ಗಮನಾರ್ಹ. ಕರಡಿ ಬ(ಬು)ಳ್ಳನಾಯಕ ಮತ್ತು ಚಿತ್ರನಾಯಕ ಅವರುಗಳು ಸಹ ಬಂದು ಹಟ್ಟಿಯನ್ನು ಹಾಕಿ ಆಮೇಲೆ ಗ್ರಾಮವನ್ನು ಕಟ್ಟಿದರೆಂದೂ ಅದಕ್ಕೆ 'ಚಿತ್ರನಹಳ್ಳಿ' ಎಂಬ

---

6 ವಾಲ್ಮೀಕ ವಂಶಪಾವನಿ, ಪು. 43

7 ಗೊಲ್ಲಕುಲದ ಶಾಸನಪತ್ರ (ಕಾಗದದ ಸುರುಳಿ–ಅಪ್ರಕಟಿತ ; ಸೌಜನ್ಯ : ಟಿ.ಎನ್. ಗಂಡುಗಲಿ, ಚಿತ್ರದುರ್ಗ), ಕಾಗದದ ಭಾಗಗಳು 4 ಮತ್ತು 14

8 ಚಿತ್ರಹಳ್ಳಿ ಸೀಮೆಸ್ಥಳದ ಶ್ಯಾನುಬೋಗತನ ವಂಶಾವಳಿ ವಿವರ ಅಥವಾ ಚಿತ್ರಹಳ್ಳಿ ಸ್ಥಳದ ಶ್ಯಾನುಬೋಗ ವೆಂಕಟರಮಣಪ್ಪನವರ ವಂಶಸ್ಥರ ವಿವರ (9 ಹಿತ್ತಾಳೆ ತಗಡುಗಳು–ಅಪ್ರಕಟಿತ ; ಸೌಜನ್ಯ : ಆಲಗಟ್ಟದ ವೇದಮೂರ್ತಿಸ್ವಾಮಿ ಮತ್ತು ಎಚ್. ಶ್ರೀಶೈಲ ಆರಾಧ್ಯ, ಚಿತ್ರದುರ್ಗ)

ಹೆಸರಾಯಿತೆಂತಲೂ ಹೇಳಿದೆ.[9] ಚಿತ್ರನಾಯಕನನ್ನು ಈ ತಗಡುಗಳಲ್ಲಿ ಒಂದೆರಡು ಕಡೆ ಚಿತ್ತನಾಯಕನೆಂತಲೂ ಬರೆಯಲಾಗಿದೆ.

ಚಿತ್ರಹಳ್ಳಿ ಶ್ಯಾನುಬೋಗರ ವಂಶಾವಳಿ ವಿವರಗಳನ್ನು ಹೇಳುವ ಈ ತಗಡುಗಳು ಚಿತ್ರಹಳ್ಳಿ ಗ್ರಾಮವು ಅಸ್ತಿತ್ವಕ್ಕೆ ಬಂದ ಬಗೆಗೆ ಬೇರೆ ಹಿನ್ನೆಲೆಗಳನ್ನು ಸೂಚಿಸಿರುವುದು ಸ್ವಾರಸ್ಯಕರವಾದದು. ಡಿಲ್ಲಿ ದೇಶವನ್ನು ಬಿಟ್ಟುಬಂದ ಶ್ಯಾನುಬೋಗ ವೆಂಕಟರಮಣಪ್ಪನು 'ಆನೆಗೊಂದಿ ರಾಯರು' ಮಾಡಿಕೊಟ್ಟ ಹೊಲ-ಮನೆ-ಆಯ ಮುಂತಾದುವನ್ನು 60 ವರುಷಗಳ ಕಾಲ ಅನುಭವಿಸಿದನೆಂದೂ ಆಗ ಈ ಗ್ರಾಮ (ಚಿತ್ರಹಳ್ಳಿ) ಕಟ್ಟಿತೆಂದೂ ಹೇಳಿದೆ.[10] ಈ ವೆಂಕಟರಮಣಪ್ಪನು ಗೊಲ್ಲನಾಯಕರು, ಕುರುಬನಾಯಕರು ಹಾಗೂ ಸಾದನಾಯಕರಿಗೂ ಹೇಳಿಕೊಂಡು ಈ ಗ್ರಾಮಕ್ಕೆ ಬಂದು ನಿಂತಾಗ ಆನೆಗೊಂದಿ ಅಚ್ಯುತರಾಯರ ದೊರೆತನದಲ್ಲಿ ಇಲ್ಲಿ ಒಂದು ಕೋಟೆಯನ್ನು ಕಟ್ಟಲಾಯಿತೆಂದೂ ಮಲ್ಲಿಬಸವೇಶ್ವರ ಮತ್ತು ವೀರಭದ್ರ— ಈ ಎರಡು ದೇವಸ್ಥಾನಗಳು ನಿರ್ಮಾಣಗೊಂಡುವೆಂದೂ ಅಚ್ಯುತರಾಯರಿಗೆ ಹೇಳಿಕೊಂಡು ಗೌಡರು, ಶ್ಯಾನುಬೋಗರು, ಹನ್ನೆರಡು ಕೈವಾಡದವರು ಸ್ಥಳ-ಮನೆ ಮಾಡಿಸಿಕೊಂಡು ಸಂತೆ ನೆರವೇರುವ ಹಾಗೆ ಕೂಡಿ ಸುಖದಲ್ಲಿ ಇದ್ದರೆಂದೂ ಕೋಟೆಕಟ್ಟಿ ಗ್ರಾಮ ದೊಡ್ಡದಾದ ತರುವಾಯ ರಾಯರ ಕಾಲಕ್ಕೆ ಇದಕ್ಕೆ 'ಚಿತ್ರಪುರಿ' ಎಂದು ಹೆಸರಿಟ್ಟರೆಂದೂ ಹೀಗೆ ಬಹುಕಾಲ ನಡೆದು ಬಂದು ಈಚೆಗೆ ಇದು ತರೀಕೆರೆ ಸಂಸ್ಥಾನಕ್ಕೆ ಸೇರಿದಾಗ ಗೊಲ್ಲಕಾದಿ ನಾಯಕರ ಬಳಿ ಚಿತ್ರದೇವರು ಇದ್ದ ಕಾರಣ ಇದಕ್ಕೆ ಚಿತ್ರಹಳ್ಳಿ ಎಂಬ ಹೆಸರಾಯಿತೆಂದೂ ಈ ಪಟಗಳು ಹೇಳುತ್ತವೆ.[11] ಕ್ರಿ ಶ 1531, 1534 ಮತ್ತು 1536ರ ಅಚ್ಯುತರಾಯನ ಅವಧಿಯ ಮೂರು ಶಿಲಾಶಾಸನಗಳು ಇಲ್ಲಿ

---

9 ಅದೇ, 1ನೆಯ ತಗಡು–ಹಿಮ್ಮುಖ ಹಾಗೂ 2ನೆಯ ತಗಡು–ಹಿಮ್ಮುಖ : 'ಪಾಳೆಯಗಾರರ ಪೈಕಿ ಚಿತ್ರನಾಯಕ'ನು ಇಲ್ಲಿ ಆಳ್ವಿಕೆ ನಡೆಸಿದುದರಿಂದ ಈ ಊರಿಗೆ ಚಿತ್ರಹಳ್ಳಿಯೆಂಬ ಹೆಸರಾಯಿತೆಂದು ಸ್ಥಳೀಯವಾಗಿ ಪ್ರಚಾರದಲ್ಲಿರುವ ಸಂಗತಿಯನ್ನು ನನ್ನ ಗಮನಕ್ಕೆ ತಂದ ಶ್ರೀಚಿತ್ರಲಿಂಗೇಶ್ವರಸ್ವಾಮಿ ದೇವಾಲಯದ ಅರ್ಚಕರಾದ ಚಿತ್ರಹಳ್ಳಿಮಠದ ಸಿದ್ದಪ್ಪಯ್ಯ ಅವರಿಗೆ ಕೃತಜ್ಞನಾಗಿದ್ದೇನೆ.

10 ಅದೇ, 5ನೆಯ ತಗಡು–ಮೇಲ್ಮುಖ ಹಾಗೂ ಹಿಮ್ಮುಖ

11 ಅದೇ, 4ನೆಯ ತಗಡು–ಮೇಲ್ಮುಖ : ಚಿತ್ರಹಳ್ಳಿಯ ಶ್ರೀವೀರಾಂಜನೇಯ ದೇವಾಲಯದಲ್ಲಿರುವ ಒಂದೂವರೆ ಅಡಿ ಎತ್ತರದ ಪಂಚಲೋಹದ ಹನುಮಂತನ ಉತ್ಸವಮೂರ್ತಿಯ ಪೀಠದ ಸುತ್ತಲೂ ಕೆತ್ತಲಾದ ಬರಹದಲ್ಲಿ 'ಚಿತ್ರಪುರಿ' ಎಂದಿರುವುದು ಗಮನಾರ್ಹ. ಆ ಬರಹದ ಪೂರ್ಣಪಾಠ ಇಂತಿದೆ :

1. ಚಿತ್ರಪುರಿ ಮೇಲನಾಡು 2. ಚೊಳಚಪರದ ಶ್ರೀ ವೀರಹನುಮಂತ
3. ಪಂಚರಾತ್ರೆ

ಈ ಹನುಮಂತಮೂರ್ತಿಯನ್ನು ಪರಿಶೀಲಿಸಲು ಅವಕಾಶವಿತ್ತ ಅರ್ಚಕರಾದ ಶ್ಯಾನುಬೋಗ ಸುಬ್ಬರಾವ್ ಅವರಿಗೂ ಈ ಬಗೆಗೆ ಸೂಚನೆಯಿತ್ತ ಚಿತ್ರದುರ್ಗದ ಎಲ್. ನಾಗರಾಜ ಹೊಯ್ಸಳ ಮತ್ತು ಜತೆಗಿದ್ದು ಸಹಕರಿಸಿದ ಶಂಕರ ಅಥಣಿ ಅವರುಗಳಿಗೂ ಕೃತಜ್ಞನಾಗಿದ್ದೇನೆ.

ದೊರೆತಿರುವುದರಿಂದ[12] ಈ ಮೇಲಿನ ಸಂಗತಿಗಳಿಗೆ ಚಾರಿತ್ರಿಕ ಮಹತ್ವ ಪ್ರಾಪ್ತವಾಗಿದೆಯೆನ್ನಬಹುದು.

ಚಿತ್ರದುರ್ಗವನ್ನು 'ಚಿಂಚನಕಲ್ಲು' ಎಂತಲೂ ಸಂಬೋಧಿಸಿರುವುದು ವ್ಯಕ್ತಪಡುತ್ತದೆ. ಚಿತ್ರದುರ್ಗ ಅರಸರ ವಿವರಗಳನ್ನು ನೀಡುವ ದಾಖಲೆಗಳಲ್ಲಿ 'ಚಿಂಚನಕಲ್ಲ ಅರಸುಗಳ ವಂಶಾವಳಿ'ಯೂ ಒಂದು.[13] ಇಂಗ್ಲಿಷರು ಶ್ರೀರಂಗಪಟ್ಟಣವನ್ನು ಮುತ್ತಿದಾಗ (1799) ಟಿಪ್ಪುಸುಲ್ತಾನನು ತನ್ನ ಕುಟುಂಬವರ್ಗದವರನ್ನು ಚಿತ್ರದುರ್ಗದಂತಹ ಸುರಕ್ಷಿತ ಸ್ಥಳಕ್ಕೆ ಸಾಗಿಸಲು ಪ್ರಯತ್ನಪಟ್ಟಿದ್ದನೆಂದು ತಿಳಿದು ಬರುತ್ತದೆ. ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರ ಅವಧಿಯ ಆಸ್ಥಾನ ಚರಿತ್ರಕಾರನೆಂದು ಕರೆಯಿಸಿಕೊಂಡ ಮೀರ್ ಹುಸೇನ್ ಅಲಿಖಾನ್ ಕಿರ್ಮಾನಿಯೂ ಆ ಬಗೆಗೆ ಸೂಚನೆ ನೀಡಿದ್ದಾನೆ.[14] ಅದರ ಪ್ರಸ್ತಾಪವು 'ಕೊಡಗು ವೀರರಾಜೇಂದ್ರರ ಪತ್ರ'ದಲ್ಲಿಯೂ ಬಂದಿದೆ.[15] ಇಲ್ಲಿ ಚಿತ್ರದುರ್ಗವನ್ನು ಚಿಂಚನಕಲ್ಲುದುರ್ಗವೆಂಬುದರ ಬದಲಿಗೆ 'ಬೆಂಚನಕಲ್ಲುದುರ್ಗ'ವೆಂದು ತಪ್ಪಾಗಿ ಸೂಚಿಸಿದೆ (ಬಹುಶಃ ಮುದ್ರಣ ದೋಷ ಕಾರಣವಿರಬೇಕು). ಹಾಗೆಯೇ, "ರಾಮಗೇಶಲೋರ ಚಿಕ್ಕನಾಯಕ ನಿಂತಸ್ಥಳ ಚಿಂಚನಕಲ್ಲು" ಎಂದು ಹೇಳಿರುವುದರಿಂದಲೂ[16] ಚಿತ್ರನಾಯಕನನ್ನು ಚಿಕ್ಕನಾಯಕನೆಂದು ಇಲ್ಲಿ ತಪ್ಪಾಗಿ ಬರೆದಿರುವ ಸಾಧ್ಯತೆ ತೋರುವುದರಿಂದಲೂ ಚಿತ್ರನಾಯಕನ ಚಾರಿತ್ರಿಕತೆ ಬಗೆಗೆ ಇಲ್ಲಿ ಸೂಚಿಸಿದ್ದಿರಬೇಕೆಂದು ಭಾಸವಾಗುತ್ತದೆ.

ಚಿತ್ರನಾಯಕ ಮತ್ತು ಚಿತ್ರಹಳ್ಳಿಯನ್ನು ಪರಸ್ಪರ ತಳಕುಹಾಕುವ ಹಾಗೂ ಚಿತ್ರದುರ್ಗ ಹೆಸರಿನ ಹಿನ್ನೆಲೆಯಲ್ಲಿ ಚಿತ್ರನಾಯಕನನ್ನು ಕಲ್ಪಿಸುವ ಪ್ರಯತ್ನವು ಇಂತಹ ಸಾಂಪ್ರದಾಯಿಕ ಬರಹಗಳಲ್ಲಿ ನಡೆದಿರುವುದನ್ನು ಇವುಗಳಿಂದ ತಿಳಿಯಬಹುದು. ಚರಿತ್ರೆಯ ಬರವಣಿಗೆಯಲ್ಲಿ ಇಂತಹ ಸಾಹಿತ್ಯವನ್ನು ಆಕರವಾಗಿ ಬಳಸಿಕೊಳ್ಳುವ ಬಗೆಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲವೆನ್ನುವುದು ದಿಟ. ಕೇವಲ ಕುಲ

---

12 ಎ.ಕ., 11, ಹೊಳಲ್ಕೆರೆ 48, 49 ಮತ್ತು 51

13 ಈ ಅಪೂರ್ಣ ಹಾಗೂ ಅಪ್ರಕಟಿತ ಹಸ್ತಪ್ರತಿಯ ಆರಂಭದಲ್ಲಿ "ಹುಲ್ಲೂರು ಕರಣಿಕ ಕೋನಪ್ಪಯ್ಯನವರ ಪುತ್ರರಾದ ನಾರಾಣಪ್ಪಯ್ಯನವರು ತಮ್ಮ ಪುತ್ರ ಅಣಯ್ಯಗೆ ಬುದ್ಧಿಗಲಿಸಿ ಬರಕೊಟ್ಟ ವಿವರಾ।" ಎಂದಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಇದನ್ನು ಮೂಲದಿಂದ ಎತ್ತಿ ಬರೆದಿರುವರು (ಸೌಜನ್ಯ : ಹು. ಶ್ರೀ. ಪಾಂಡುರಂಗ ಜೋಯಿಸ್, ಚಿತ್ರದುರ್ಗ).

14 *History of Tipu Sultan* (Translated by Col. W. Miles), Calcutta, 1958, p. 124

15. ತಿ. ತಾ. ಶರ್ಮ (ಸಂ.) : ಚಾರಿತ್ರಿಕ ದಾಖಲೆಗಳು, ಬೆಂಗಳೂರು, 1971, ಪು.167; *Banchanakallu* (Chitaldrug)—ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್, 1941, ಪು. 121

16 ಗೊಲ್ಲಕುಲದ ಶಾಸನಪತ್ರ, ಕಾಗದದ ಭಾಗ 16

ವೃತ್ತಾಂತವನ್ನು ಅರಹುವ ಈ ಬರವಣಿಗೆಗಳು ಆಶಯರೂಪದ ಕತೆಗಳಿಂದ ತುಂಬಿದ್ದು, ಚರಿತ್ರಕಾರರನ್ನು ತಪ್ಪುದಾರಿಗೆಳೆಯುವ ಸಾಧ್ಯತೆ ಇದೆಯೆಂದು ಗುಮಾನಿಪಡುವುದುಂಟು. ಇಲ್ಲಿ ಪ್ರಸ್ತಾಪಗೊಂಡಿರುವ ದಾಖಲೆಗಳನ್ನು ಪ್ರಸ್ತುತ ಲೇಖನದಲ್ಲಿ ಚಾರಿತ್ರಿಕವಾಗಿ ವಿಮರ್ಶಿಸಲು ಸಾಧ್ಯವಿಲ್ಲವಾದರೂ ಚಿತ್ರನಾಯಕನ ಅಸ್ತಿತ್ವವನ್ನು ಸಿದ್ಧಪಡಿಸುವ ದಿಸೆಯಲ್ಲಿ ತಲಸ್ಪರ್ಶಿಯಾದ ಸಂಶೋಧನೆ ಮುಂದುವರಿಯಬೇಕಾಗಿದೆಯೆಂದು ಸದ್ಯಕ್ಕೆ ಹೇಳಬಹುದೇ ವಿನಾ ಅವನಿಗೆ ಸಂಬಂಧಿಸಿದ ವೃತ್ತಾಂತವೇ ಕಟ್ಟುಕಥೆ ಎನ್ನುವ ವಾದವನ್ನು ಅನುಮೋದಿಸುವುದು ದುಸ್ತರವಾದುದು.

ಯಾವುದೇ ಸ್ಥಳನಾಮವಾದರೂ ಸ್ಥಳೀಯರ ಸೌಲಭ್ಯಕ್ಕನುಗುಣವಾಗಿ ಕಾಲಕ್ರಮದಲ್ಲಿ ರೂಪಾಂತರಗೊಳ್ಳುವುದು ಸಹಜ. 'ಚಿತ್ರದುರ್ಗ'ವೆಂಬ ಈಗಿನ ಅಧಿಕೃತ ರೂಪವೇ ಎಲ್ಲೆಡೆ ಬಳಕೆಗೆ ಬಂದಿದ್ದರೂ ತೆಲುಗು ಭಾಷಿಕರಲ್ಲಿ ಬಹುಮಂದಿ ಇಂದಿಗೂ 'ಚಿತ್ರಕಲ್‌ದುರ್ಗ'ವೆಂದೇ ಕರೆಯುತ್ತಿರುವುದುಂಟು. ಇದು ಚಿತ್ರದುರ್ಗ ಹೆಸರಿನ ಹಿಂದಿನ ರೂಪವೂ ಹೌದು. ಕ್ರಿ.ಶ. ಸುಮಾರು 10ನೆಯ ಶತಮಾನದಲ್ಲೇ ಇಲ್ಲಿ ಕೋಟೆಯು ನಿರ್ಮಾಣಗೊಂಡಿದ್ದಿತೆಂಬುದಕ್ಕೆ ಕ್ರಿ.ಶ. 1073ರ ಶಾಸನವು ಸೂಚನೆ ನೀಡುತ್ತದೆ.[17] 'ದುರ್ಗ'ವೆಂಬ ಅಂತ್ಯಪ್ರತ್ಯಯವು ಈ ಎಡೆಯ ಹೆಸರಿನೊಂದಿಗೆ ನೇರವಾಗಿ ಸೇರಿಕೊಂಡಿರುವುದನ್ನು ಕ್ರಿ.ಶ. 1235ರ ಶಾಸನವು ವ್ಯಕ್ತಪಡಿಸುತ್ತದೆ[18] ಬೆ(ಬಿ)ಮ್ಮತ್ತನೂರದುರ್ಗ,[19] ಚಿಂನ್ಮನಗಿರಿದುರ್ಗ,[20] ಶಿಂಗನಗಿರಿದುರ್ಗ,[21] ಚಿಂನನಗಿರಿನುರ್ಗ,[22] ಚಿ|ದುರ್ಗ,[23] ಚಿಂತಲಕಲದುರ್ಗ,[24] ಚಿತ್ರಕಲ್ಲುದುರ್ಗ,[25] ಇತ್ಯಾದಿ ರೂಪಗಳು ಕ್ರಿ.ಶ. 1286 ರಿಂದ 1781ರ ಅವಧಿಯಲ್ಲಿ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಅವಧಿಯಲ್ಲಿ ಶಾಸನಗಳಲ್ಲಿ ಪ್ರಯೋಗಗೊಂಡಿರುವ ಇತರ ರೂಪಗಳ ಪ್ರಸ್ತಾಪವು ಸದ್ಯಕ್ಕೆ ಇಲ್ಲಿ ಅಪ್ರಸ್ತುತ.

---

17 ಎ.ಕ., 11, ಚಿತ್ರದುರ್ಗ 82

18 ಅದೇ, ಜಗಲೂರು 33 ಕಲ್ಲೇದೇವರಪುರ : ಬೆ(ಬಿ)ಮ್ಮತ್ತನೂರುದುರ್ಗ

19 ಅದೇ, ಚಿತ್ರದುರ್ಗ 12, ಕ್ರಿ.ಶ. 1286

20 ಅದೇ, ದಾವಣಗೆರೆ 164 (ನೀರಥಡಿ), ಕ್ರಿ.ಶ. 1698

21 ಅದೇ, ಚಿತ್ರದುರ್ಗ 37 (ಮದಕೆರೆಪುರ), ಕ್ರಿ.ಶ. ಸು. 1700

22 ಅದೇ, ಚಿತ್ರದುರ್ಗ 31 (ಪಿಳ್ಳೇಕೆರೆಗ್ರಾಮ), ಕ್ರಿ.ಶ. ಸು. 1714

23. ಅದೇ, ಚಿತ್ರದುರ್ಗ 54 (ಸಿರಗೆರೆ), ಕ್ರಿ.ಶ. ಸು. 1730 : ಲೂಯಿರೈಸ್ ಅವರು ಈ ಶಾಸನದ ಅನುವಾದದಲ್ಲಿ ಇದನ್ನು 'ಚಿತ್ರದುರ್ಗ'–Chi[tra]durga–ಎಂತಲೇ ವಿಸ್ತರಿಸಿದ್ದಾರೆ.

24 ಮೈ. ಆ. ರಿ., 1939, ಸಂಖ್ಯೆ 6, 18ನೆಯ ಶತಮಾನ, ಪು. 107

25 ಎ.ಕ., 11, ಚಿತ್ರದುರ್ಗ 21 (ತಾಮ್ರಪಟ–ತೆಲುಗುಭಾಷೆ), ಕ್ರಿ.ಶ.ಸು. 1781

ನಿರೂಪ, ಚಾರಿತ್ರಿಕ ದಾಖಲೆ, ಸಾಹಿತ್ಯಕೃತಿ, ಇತ್ಯಾದಿಗಳಲ್ಲಿ ಚಿತ್ರದುರ್ಗ,[26] ಚಿಮುಟಿದುರ್ಗ,[27] ಚಿಂತನಕಲ್ಲುದುರ್ಗ,[28] ಚಿತ್ರಕಲ್ಲು–ಚಿತ್ರದುರ್ಗ,[29] ಚಿತ್ರಕಲ್–ಚಿತ್ರಕಲ್‌ದುರ್ಗ,[30] ಚಿತ್ರಕಲ್‌ನಗರ(ದುರ್ಗ),[31] ಚಿನ್ಮೂಲಗಿರಿದುರ್ಗ–ಚಿತ್ರದುರ್ಗ,[32] ಚಿತ್ರಕಲ್ಲು,[33] ಚಿತ್ರದು(ರ್ಗ)ರ್ಗ,[34] ದುರ್ಗ–ಚಿತ್ರದುರ್ಗ[35] ಮೊದಲಾದ ರೂಪಗಳೂ ದೊರೆಯುತ್ತವೆ.

ಚಿತ್ರದುರ್ಗ ಸಂಸ್ಥಾನವನ್ನು 'ದುರ್ಗದ ಸೀಮೆ'ಯೆಂತಲೂ[36] 'ದುರ್ಗದರಾಜ್ಯ'

---

26 ಶ್ರೀ ಕೂಡ್ಲಿ ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ, ಭಾಗ 1, ಮೈಸೂರು, 1965 : ಹಿಂದೂರಾವ ಘೋರ್ಪಡೆಯ ಪ್ರಮಾಣಪತ್ರ (ಮರಾಠೀ), ಸಂಖ್ಯೆ 494, ಕ್ರಿ.ಶ.ಸು. 1724, ಪು. 346 ಹಾಗೂ ಬಾಳಾಜೀ ಬಾಜೀರಾಯನ ನಿರೂಪ (ಮರಾಠೀ), ಸಂಖ್ಯೆ 460, ಕ್ರಿ.ಶ. 1760, ಪು. 328

27 ಡಾ॥ ವಿ. ಎಸ್. ಎಸ್. ಆಚಾರ್ಯ (ಸಂ.) : ಶ್ರೀಕೃಷ್ಣದೇವರಾಯನ ದಿನಚರಿ, ಬೆಂಗಳೂರು, 1983, ಪು. 13

28 ಆರ್. ಶಾಮಾಶಾಸ್ತ್ರಿ (ಸಂ.) : ಲಿಂಗಣ್ಣಕವಿ ವಿರಚಿತ ಕೆಳದಿನೃಪ ವಿಜಯಂ, ಮೈಸೂರು, 1921, ದಶಮಾಶ್ವಾಸಂ–40, ಪು. 181

29 ಚಾರಿತ್ರಿಕ ದಾಖಲೆಗಳು : ಹೈದರ್‌ನಾಮಾ, ಪು. 22, 25, 54, 56, ಇತ್ಯಾದಿ

30 ಮತ್ಸಮುದ್ರಗ್ರಾಮ ಹುಟ್ಟಿದ್ದು (ಹಸ್ತಪ್ರತಿ–ಅಪ್ರಕಟಿತ; ಸೌಜನ್ಯ : ನಾ. ಪ್ರಭಾಕರ್, ಪಾಂಡವಪುರ), ಪು. 119, 120

31 ಕಪಟರಾಳ ಕೃಷ್ಣರಾವ್ : ಸುರಪುರ ಸಂಸ್ಥಾನದ ಇತಿಹಾಸ, ಬೆಂಗಳೂರು, 1977, ಪು. 230–31 : ಅಹೋಬಲ ಪಂಡಿತ ಎಂಬವನು 'ವಿರೂಪಾಕ್ಷ ವಸಂತೋತ್ಸವ' ಎಂಬ ತನ್ನ ಸಂಸ್ಕೃತ ಕಾವ್ಯದಲ್ಲಿ ಚಿತ್ರದುರ್ಗ(ಚಿತ್ರಕಲ್‌ನಗರ)ದ ಅರಸನನ್ನು 'ಚಿತ್ರಶಿಲಾನಗರಾಧೀಶ್ವರೋ' ಎಂದು ಸಂಬೋಧಿಸಿರುವ ಭಾಗವನ್ನು ಲೇಖಕರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

32 ಕೈಫೀಯತ್ತು (ಚಿತ್ರದುರ್ಗದ ಆಯಗಾರರ ವಿವರ; ಸೌಜನ್ಯ : ಕೆ. ಗುಂಡಾ ಜೋಯಿಸ್, ಕೆಳದಿ)

33 ಡಿ. ಎನ್. ಕೃಷ್ಣಯ್ಯ, ಎಂ. ಎಸ್. ಸುಬ್ಬರಾಯ (ಸಂ.) : ಕೊಡಗು ಸಂಸ್ಥಾನದ ರಾಜೇಂದ್ರನಾಮೆ, ಮಡಿಕೇರಿ, 1959, ಪು. 17 ; ಕಳಲೆನಾಯಕರ (ದಳವಾಯಿಗಳ) ವಂಶಾವಳಿ– ಮೈ. ಆ. ರಿ., 1942, ಪು. 98; ಬುಕ್ಕರಾಯ ಚರಿತ್ರೆ–ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ, 8–2, ಜುಲೈ 1923, ಪು. 104

34 ಎಂ. ಎನ್. ಪ್ರಭಾಕರ್ (ಸಂ.) : ನಾಯಕನಹಟ್ಟಿ ಬಖೈರು, ಚಂದ್ರವಳ್ಳಿ, ಚಿತ್ರದುರ್ಗ, 1976 : ಭಾಗ–4, ಪು. 31, 32, 34; ಲಕ್ಷ್ಮಣ್ ತೆಲಗಾವಿ (ಸಂ.) : ಜರಿಮಲೆ ಸಂಸ್ಥಾನದ ವಂಶಾವಳಿ, ಅದೇ, ಪು. 43; 'ಆರ್ಕಾಡ ಸಂಸ್ಥಾನದ ಕೈಫೀಯತು', ಕ.ಸಾ.ಪ., ಜುಲೈ 1924, ಪು. 140–41; ನಿಡುಗಲ್ಲು ಅರಸುಗಳ ವಂಶಾವಳಿ, ಅದೇ, 17–2, ಜುಲೈ 1932, ಪು. 108

35 ಬಿ. ರಾಮರಾವ್ (ಸಂ.) : ಕಣುಕುಪ್ಪೆ ಕೋಟೆ ಕಟ್ಟಿದ ಕೈಫಿಯತ್ತು, ಕ.ಸಾ.ಪ., ಜುಲೈ 1931, ಪು. 128–134

36 ಎ.ಕ., 11, ಚಿತ್ರದುರ್ಗ 56 (ಹಳುವಧಾರ), ಕ್ರಿ.ಶ. 1718; ಕೂ.ಶೃಂ.ಸಂ.ಪ್ರಾ. ಶಾ.ಲೇ. ಸಂ., ಸಂಖ್ಯೆ 99 (ದಾನಶಾಸನ), ಕ್ರಿ.ಶ. 1689, ಪು. 74

ವೆಂತಲೂ[37] ಉಲ್ಲೇಖಿಸಿದೆ. ರಾಜಧಾನಿಯನ್ನು ಕೇವಲ 'ದುರ್ಗ'ವೆಂದು ಸಂಬೋಧಿಸಿದೆ.[38] ಇಲ್ಲಿ 'ದುರ್ಗ'ವೆಂದರೆ ಚಿತ್ರ(ಕಲ್ಲು)ದುರ್ಗವೇ. ಇಂದಿಗೂ ಈ ಜಿಲ್ಲೆಯ ಬಹುಮಂದಿ ನಿತ್ಯ ವ್ಯವಹಾರದಲ್ಲಿ ಈ ಊರನ್ನು 'ದುರ್ಗ'ವೆಂದೇ ಕರೆಯು ವುದುಂಟು. ಒಟ್ಟಿನಲ್ಲಿ, 13ನೆಯ ಶತಮಾನದಲ್ಲೆ 'ದುರ್ಗ'ವೆಂಬ ಅಂತ್ಯಪ್ರತ್ಯಯ ವನ್ನು ಪಡೆದ ಈ ಸ್ಥಳವು, 18ನೆಯ ಶತಮಾನದ ಮೂರನೆಯ ದಶಕದ ವೇಳೆಗಾಗಲೇ 'ಚಿತ್ರಕಲ್ಲುದುರ್ಗ'ದೊಡನೆ 'ಚಿತ್ರದುರ್ಗ' ಎಂಬ ಅಧಿಕೃತ ನಾಮವನ್ನು ಹೊಂದಿದ್ದಿತು. ಮೇಲಿನ ಉಲ್ಲೇಖಗಳು ಈ ಅಂಶವನ್ನು ಅತ್ಯಂತ ದೃಢವಾಗಿ ಸಮರ್ಥಿಸುತ್ತವೆ.

3. ಚಿತ್ರದುರ್ಗ ನಾಯಕರು, ಅವರ ಪರಿವಾರದವರು ಹಾಗೂ ಅಧಿಕಾರ ಸ್ಥರು ಹಾಕಿಸಿರುವ 48 ಶಾಸನಗಳನ್ನು ಬಿ. ಲೂಯಿರೈಸ್ ಅವರು ಎಪಿಗ್ರಾಫಿಯ ಕರ್ನಾಟಿಕದ 11ನೆಯ ಸಂಪುಟದಲ್ಲಿ(1903) ಅಚ್ಚಿಸಿದ್ದಾರೆ; 1556 ರಿಂದ 1756ರ ವರೆಗಿನ ಕಾಲಾವಧಿಯ ಶಾಸನಗಳು ಇವು. ಇಷ್ಟರಿಂದಲೇ ಈ ಕಾಮಗೇತಿ ಅರಸರ ಚರಿತ್ರೆಯನ್ನು ಕರಾರುವಾಕ್ಕಾಗಿ ರಚಿಸುವುದು ಸಾಧ್ಯವೆನಿಸದು. ಇತರರ ಪ್ರಯತ್ನ ದಿಂದಲ್ಲೂ ಈ ಅರಸರಿಗೆ ಸಂಬಂಧಿಸಿದ ಶಾಸನ, ನಿರೂಪ, ಇತ್ಯಾದಿಗಳು ಬೆಳಕಿಗೆ ಬಂದಿವೆ. ಡಾ|| ಎಂ. ಎಚ್. ಕೃಷ್ಣ, ಹುಲ್ಲೂರು ಶ್ರೀನಿವಾಸ ಜೋಯಿಸ, ಡಾ|| ಎಂ. ಶೇಷಾದ್ರಿ, ಬಿ. ರಾಜಶೇಖರಪ್ಪ, ಲಕ್ಷ್ಮಣ್ ತೆಲಗಾವಿ ಹಾಗೂ ಕೋ. ಶ. ವಿಶ್ವನಾಥ ಅವರುಗಳು ಪ್ರಕಟಿಸಿರುವ ಹಾಗೂ ಬೆಳಕಿಗೆ ತಂದಿರುವ ಈ ಅರಸರ ಶಾಸನ ಗಳ ಸಂಖ್ಯೆ ಸುಮಾರು 50. ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿ, ವಿವಿಧ ನಿಯತಕಾಲಿಕೆ, ಸಂದರ್ಭ ಸಂಚಿಕೆ, ದೈನಿಕ ಇತ್ಯಾದಿಗಳಲ್ಲಿ ಈ ಶಾಸನಗಳು ಅಚ್ಚುಗೊಂಡಿವೆ; ಸುದ್ದಿರೂಪದಲ್ಲಿ ಕೆಲವು ಪ್ರಕಟಗೊಂಡಿವೆ. ಶ್ರೀಮಜ್ಜಗದ್ಗುರು ಶ್ರೀಕೂಡ್ಲಿ ಶೃಂಗೇರಿ ಸಂಸ್ಥಾನದವರು ಹೊರತಂದಿರುವ 'ಪ್ರಾಚೀನ ಶಾಸನಲೇಖನ ಸಂಗ್ರಹ'ದ ಒಂದನೆಯ ಭಾಗದಲ್ಲಿ ಚಿತ್ರದುರ್ಗ ಅರಸರು ನೀಡಿರುವ 24 ನಿರೂಪ, ದಾನಶಾಸನ ಹಾಗೂ ಲೇಖನಗಳನ್ನು ಸೇರಿಸಲಾಗಿದೆ. ಲೂಯಿರೈಸ್ ಅವರ ಸಂಗ್ರಹವೂ ಸೇರಿ ಒಟ್ಟು 125 ಶಾಸನಬರಹ, ಇತ್ಯಾದಿಗಳು ಈವರೆಗೆ ಲಭ್ಯ ಗೊಂಡಿವೆ. ಚಿತ್ರದುರ್ಗ ಅರಸರ ಚರಿತ್ರೆ ಕುರಿತು ಬರೆಯಲು ತೊಡಗುವ ಮೊದಲು ಇವೆಲ್ಲವನ್ನೂ ಒಮ್ಮೆ ಗಮನಿಸಬೇಕಾದುದು ಅತ್ಯಗತ್ಯ

---

37 ಮತ್ಸಮುದ್ರಗ್ರಾಮ ಹುಟ್ಟಿದ್ದು, ಪು 120

38 ಮೈ.ಆ.ರಿ., 1947–56, ಸಂಖ್ಯೆ 2–ಚಿತ್ರದುರ್ಗ (ಗಂಟೆಶಾಸನ), ಕ್ರಿ.ಶ. 1760, ಪು. 66; ಕೂ.ಶೃಂ.ಸಂ.ಪ್ರಾ.ಶಾ.ಲೇ.ಸಂ., ಸಂಖ್ಯೆ 100 ಮತ್ತು 103 (ನಿರೂಪ), ಕ್ರಿ.ಶ. 1729, ಪು. 74, 76; 460 (ಲೇಖನ–ಮರಾಠೀ), ಕ್ರಿ.ಶ. 1760, ಪು. 328; 112 (ಲೇಖನ), ಕ್ರಿ.ಶ.ಸು. 1763, ಪು. 80; ಚಿತ್ರಹಳ್ಳಿ ಸೀಮೆಸ್ಥಳದ ಶ್ಯಾನುಬೋಗತನದ ವಂಶಾವಳಿ ವಿವರ, ತಗಡು 5– ಹಿಮ್ಮುಖ

ಈ ನಾಯಕರ ಶಾಸನಗಳಲ್ಲಿ ಪ್ರಸ್ತಾಪಗೊಂಡಿರುವಂತೆ, ಸ್ಯಾ(ಸ)ಗಲೆ ಹನುಮಿ ನಾಯಕ ಎಂಬವನು ಚಿತ್ರದುರ್ಗ ನಾಯಕ ಸಂಸ್ಥಾನದ ಮೊದಲನೆಯ ಅರಸನಾದ ಕಾಮಗೇತಿ (ಮತ್ತಿ) ತಿಮ್ಮಣ್ಣನಾಯಕನ ತಂದೆ.[39] ತಿಮ್ಮಣ್ಣನಾಯಕನು ತನ್ನ ತಂದೆಗೆ ಪುಣ್ಯವಾಗಲೆಂದು ತುಂಗಭದ್ರಾತೀರದ (?) ಅರೆಕೆರೆ ಗ್ರಾಮವನ್ನು ಶ್ರೀ ಮಾಲ್ಯವಂತ ರಾಮಾನುಜಜೀಯರೆಂಬವರಿಗೆ ಧಾರೆಯೆರೆದಿರುವ ಬಗೆಗೆ ಶಾಸನ ಹಾಕಿಸಿದ್ದಾನೆ.[40] ಈ ಅಂಶಗಳ ವಿನಾ ಈ ನಾಯಕರ ಪೂರ್ವಿಕರ ವಿವರಗಳು ಶಾಸನೋಕ್ತವಾಗಿಲ್ಲ. ಹನುಮಿನಾಯಕನನ್ನು ಹಿರೇಹನುಮಪ್ಪನಾಯಕನೆಂದು ಚಿತ್ರದುರ್ಗ ನಾಯಕರ ವಂಶಾವಳಿಗಳು ಸಂಬೋಧಿಸುತ್ತವೆ. ಈ ದಾಖಲೆಗಳು ಹೇಳುವಂತೆ, ಕಾಮಗೇತಿ ಕುಲದ ಗಬ್ಬಗಡಿ ಓಬನಾಯಕ, ಜಡವಿನಾಯಕ ಮತ್ತು ಬುಳ್ಳಿ(ಳ್ಳ)ನಾಯಕರೆಂಬ ಮೂರುಮಂದಿ ಸಹೋದರರು ಜಡಕಲ್ಲುದುರ್ಗದ ಕಡೆ ಯಿಂದ ಹೊರಟು, ಈಗಿನ ದಾವಣಗೆರೆ ತಾಲ್ಲೂಕು ನೀರಥಡಿಗೆ ಬಂದು ಹಟ್ಟಿಯನ್ನು ಹಾಕಿಕೊಂಡು ನಿಂತರು. ಜಡವಿನಾಯಕನ ಮಗ ಹಿರೇ ಹನುಮಪ್ಪನಾಯಕನು ಅದೇ ತಾಲ್ಲೂಕಿನ ಸ್ಯಾಗಲೆ ಗ್ರಾಮದಲ್ಲಿ ನಿಂತನು. ಬುಳ್ಳನಾಯಕನ ಮಗ ಚಿಕ್ಕ ಹನುಮನಾಯಕ ಮತ್ತು ಓಬಣ್ಣನಾಯಕರು ನೀರಥಡಿಯಲ್ಲೇ ನಿಂತರು. ಹಾಗೆಯೇ, ಕಾಮಗೇತಿ ತಿಮ್ಮಣ್ಣನಾಯಕನು ಮತ್ತಿಯಲ್ಲಿ ನೆಲಸಿದನು.[41] ಈ ತಿಮ್ಮಣ್ಣನನ್ನು ಗಬ್ಬಗಡಿ ಓಬನಾಯಕನ ಮಗನೆಂದು ಅನ್ಯತ್ರ ಹೇಳಿದೆ.

ಕಾಮಗೇತಿ ತಿಮ್ಮಣ್ಣನಾಯಕನು ಶಾಸನಗಳಲ್ಲಿ ಸ್ಯಾಗಲೆ ಹನುಮಿನಾಯಕ ನನ್ನು ತನ್ನ ತಂದೆಯೆಂದು ಹೇಳಿಕೊಂಡಿದ್ದರೂ ವಂಶಾವಳಿಗಳು ಈ ಹನುಮಿನಾಯಕನ ತಂದೆಯ ಹೆಸರನ್ನು ಪ್ರಸ್ತಾಪಿಸಿರುವುದರಿಂದ, ಶಾಸನೋಕ್ತ ಹನುಮಿನಾಯಕನಿಗಿಂತ ಜಡವಿನಾಯಕ ಅಥವಾ ಗಬ್ಬಗಡಿ ಓಬನಾಯಕನೇ ಕಾಮಗೇತಿ ಅರಸರ ಮೂಲ ಪುರುಷನೆಂದು ತಿಳಿಯಲು ಇದರಿಂದ ಅವಕಾಶವಾಗುತ್ತದೆ. ಶಾಸನಸ್ಥನಾಗಿರುವನೆಂದ ಮಾತ್ರಕ್ಕೆ ಸ್ಯಾಗಲೆ ಹನುಮಿನಾಯಕನನ್ನೇ ಮೂಲಪುರುಷನೆಂದು ತಿಳಿಯುವುದು ಸರಿಯಲ್ಲ.

ಮತ್ತಿ ತಿಮ್ಮಣ್ಣನಾಯಕನಿಗೆ ಈಗಲೋಬಣ್ಣ (ಓಬಣ್ಣ), ದ್ರವ್ಯಾನ್ನ (ದವ್ಯಾನ್ನ)ದೋಬಣ್ಣ, ದೊಡ್ಡಣ್ಣ, ಗುಲಪಿನಾಯಕ—ಹೀಗೆ ನಾಲ್ಕುಮಂದಿ ಮಕ್ಕಳಿದ್ದುದನ್ನು ವಂಶಾವಳಿಗಳು ತಿಳಿಸುತ್ತವೆ. ಅಣ್ಣಗಾರ ಓಬಣ್ಣನೆಂಬ ತಮ್ಮ ನಿದ್ದಂತೆಯೂ ಸೂಚಿಸುತ್ತವೆ. ಬಾಳರಾವು ಮತ್ತು ದಾದೇರಾವು ಎಂಬ ಈರ್ವರು

---

39 ಎ.ಕ., 11, ಹಿರಿಯೂರು 75 ಮತ್ತು 76 (ರಂಗಸಮುದ್ರ), ಕ್ರಿ.ಶ. 1545; ಚಿತ್ರದುರ್ಗ 48 (ರೊಟ್ಟಿಹಳ್ಳಿ), ಕ್ರಿ.ಶ. 1581

40 ಅದೇ, ಹಿರಿಯೂರು 76 (ರಂಗಸಮುದ್ರ)

41 ಶ್ರೀ ಚಿನ್ಮೂಲಾದ್ರಿ ಗಿರಿದುರ್ಗದಲ್ಲಿ ಆಳಿದ ಹಿಂದಿನ ಅರಸರುಗಳು (ಹಸ್ತಪ್ರತಿ–ಅಪ್ರಕಟಿತ: ಸೌಜನ್ಯ : ಪಂಡಿತ ಚೆನ್ನಪ್ಪ ಎರೇಸೀಮೆ, ಬೆಂಗಳೂರು); ಚಿನ್ಮೂಲಾದ್ರಿಯ ಪೂರ್ವಾಪರ ವಿಚಾರ ವಿಸ್ತಾರ (ಹಸ್ತಪ್ರತಿ–ಅಪ್ರಕಟಿತ; ಸೌಜನ್ಯ : ಟಿ. ಎನ್. ಗಂಡುಗಲಿ)

ಮಾತ್ರ ತಿಮ್ಮಣ್ಣನಾಯಕನ ಮಕ್ಕಳೆಂಬುದಾಗಿ ದಾಖಲಿಸಿದ್ದಾನೆ 'ಚಿತ್ರದುರ್ಗದ ಬಖೈರ್'ನ ಕರ್ತೃ ಭೀಮೋಜಿ ಪಂತ್. ವಂಶಾವಳಿಗಳ ಪ್ರಕಾರ, ದೊಡ್ಡಣ್ಣನಿಗೆ ಉಚ್ಚಂಗಿದುರ್ಗದ (ಹರಪನಹಳ್ಳಿ ತಾಲ್ಲೂಕು, ಬಳ್ಳಾರಿ ಜಿಲ್ಲೆ) ನಾಯಕತನವಾಯಿತು. ಈ ದೊಡ್ಡಣ್ಣ ಮತ್ತು ಗುಲಪಿನಾಯಕರು ಚಿತ್ರದುರ್ಗದಲ್ಲಿ ಮಾಡಿಸಿದ ವಿವಿಧ ಕಾಮಗಾರಿಗಳ ವಿಷಯ ಸಹ ತಿಳಿದುಬರುತ್ತದೆ. ಆದರೆ ಮತ್ತೆ ತಿಮ್ಮಣ್ಣನಾಯಕನ ತರುವಾಯದ ಸ್ಥಿತಿಗತಿಗಳ ಬಗೆಗೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ. ಅಲ್ಲದೆ, ತಿಮ್ಮಣ್ಣನ ನಂತರ ಅವನ ಮಕ್ಕಳು ಚಿತ್ರದುರ್ಗ ಸಂಸ್ಥಾನದ ಆಧಿಪತ್ಯವನ್ನು ಪಡೆಯದೆ ಆತನ ಸಹೋದರ(ಓಬಣ್ಣನಾಯಕ)ನು ಅದನ್ನು ವಹಿಸಿಕೊಳ್ಳಲು ಒದಗಿಬಂದ ಕಾರಣಗಳ ಬಗೆಗೂ ಸೂಚನೆಗಳಿಲ್ಲ. ಇಲ್ಲಿ ಸ್ವಲ್ಪಮಟ್ಟಿಗೆ ಅಸ್ಪಷ್ಟತೆ ಇದೆ. ಎಂ. ವಿ. ಚಿತ್ರಲಿಂಗಯ್ಯ ಅವರು ಇಲ್ಲಿಯ ಕೆಲವು ಅಂಶಗಳನ್ನು ವಿವರವಾಗಿ ಚರ್ಚಿಸಲು ತಮ್ಮ ಲೇಖನವೊಂದರಲ್ಲಿ ಪ್ರಯತ್ನಿಸಿದ್ದು,[42] ಅದನ್ನು ಪ್ರತ್ಯೇಕವಾಗಿ ಪರಿಶೀಲಿಸುವ ಆಗತ್ಯವಿರುವುದರಿಂದ ಅವರ ಅಭಿಪ್ರಾಯ, ನಿರ್ಣಯ, ಇತ್ಯಾದಿಗಳನ್ನು ಇಲ್ಲಿ ಬಳಸಿಕೊಂಡಿಲ್ಲ.

ಓಬಣ್ಣನಾಯಕನನ್ನು (ಒಂದನೆಯ) ಮದಕರಿನಾಯಕನೆಂದು ಕರೆಯಲಾಯಿತೆಂದು ವಂಶಾವಳಿಗಳು ತಿಳಿಸುತ್ತವೆ. 'ಮದಕೆರಿ' ಎಂಬುದು ಆತನ ಹುಟ್ಟೂರಿನ ಹೆಸರಾಗಿರುವ ಬಗೆಗೆ ಎಲ್ಲಿಯೂ ಸೂಚನೆಯಿಲ್ಲ. 'ಮದಕರೆ' ಎಂಬುದು ಹಿರಿಯೂರು ತಾಲ್ಲೂಕಿನ ವೇಣುಕಲ್ಲುಗುಡ್ಡ ಗ್ರಾಮದಲ್ಲಿ ದೊರೆತ ಶಾಸನದಲ್ಲಿ[43] ಪ್ರಸ್ತಾಪಗೊಂಡಿರುವುದು ದಿಟವಾದರೂ ಕಾಮಗೇತಿ ಅರಸನೊಂದಿಗೆ ಇದರ ಸಂಬಂಧವನ್ನು ಕಲ್ಪಿಸಿ ಹೇಳುವುದಕ್ಕೆ ಇತರ ಆಧಾರಗಳಾವುವೂ ಸದ್ಯಕ್ಕೆ ಲಭ್ಯವಿಲ್ಲ. ಶಾಸನದಲ್ಲಿ "ಗೋಸಿಕೆರೆಯ ಲಿಂಗದ ವೀರಯ್ಯನ ಮಕ್ಕಳು ಅಯನ ಮದಕರೆ ಲಿಂಗವೀರಯ್ಯಗೆ ಕೊಟ್ಟ ಕಲ್ಲಿನ ಶಾಸನ" ಎಂದು ಉಲ್ಲೇಖಿಸಲ್ಪಟ್ಟಿದೆ. ಈ ಮದಕರೆಯು ಈಗ ಮರೆತು ಹೋಗಿರುವ ಗ್ರಾಮಗಳ ಪೈಕಿ ಒಂದಾಗಿದೆಯೆಂದು ವ್ಯಕ್ತಪಟ್ಟರೂ ಹಸ್ತಪ್ರತಿಯಲ್ಲಿ ದೊಡ್ಡೇರಿ-ಮದ್ದಿಹಳ್ಳಿ(ಮದ್ದೀಹಳ್ಳಿ)ಗಳ ಪ್ರಸ್ತಾಪವಿರುವುದರಿಂದ,[44] ಈ 'ಮದಕರೆ'ಯೇ ಈಗಿನ ಮದ್ದೀಹಳ್ಳಿಯಾಗಿರಬಹುದೆಂಬ ಊಹೆ ಮಾಡಲು ಇದರಿಂದ ಅವಕಾಶವಾಗುತ್ತದೆ. ಮದ್ದೀಹಳ್ಳಿಯೆಂಬುದು ಹಿರಿಯೂರು ತಾಲ್ಲೂಕಿನ ಧರ್ಮಪುರಕ್ಕೆ ಸುಮಾರು 6 ಕಿ. ಮೀ. ಹಾಗೂ ವೇಣುಕಲ್ಲುಗುಡ್ಡ ಗ್ರಾಮಕ್ಕೆ 12 ಕಿ.ಮೀ.

---

42 ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯಲ್ಲಿ 'ಸೆಗಲೆ' ಮನೆತನ, ವಾಲ್ಮೀಕಿ ಸಂದೇಶ, 4-7 ರಿಂದ 12, ಅಕ್ಟೋಬರ್ 1986 ರಿಂದ ಫೆಬ್ರುವರಿ 1987, ಪು. 6-7, 13-16 ಮತ್ತು 13-16

43 ಎ.ಕ., 11, ಸಂಖ್ಯೆ 34, ಕ್ರಿ. ಶ. 1553

44 ಜಾಜೂರು ಕಾಮಸಮುದ್ರದ ಸ್ಥಳದ ಶ್ಯಾನುಭೋಗರ ವಂಶಾವಳಿ, ಪು. 5; ಯಾದಲಕಟ್ಟೆ ಗೌಡರ ವಂಶಾವಳಿ, ಪು. 22; ಕಾಲುವೇಹಳ್ಳಿಗ್ರಾಮ ಹುಟ್ಟಿದ್ದು, ಪು. 76, 80

ದೂರದಲ್ಲಿ ನೆಲಸಿರುವುದರಿಂದ,[45] ಈ ಮೇಲಿನ ಊಹೆಗೆ ಮತ್ತಷ್ಟು ಪುಷ್ಟಿ ದೊರೆತಂತಾಗಿದೆ.

ಕಾಮಗೇತಿ ಅರಸರು ಹುಟ್ಟಾ ಚಿತ್ರದುರ್ಗ ಜಿಲ್ಲೆಯವರೆಂಬುದನ್ನು ಸಮರ್ಥಿಸಲು ಈತನಕ ಬೆಳಕು ಕಂಡಿರುವ ಆಧಾರಗಳು ನೆರವಿಗೆ ಬರುವುದಿಲ್ಲ. ಅಲ್ಲದೆ, ಈ ಅರಸರ ಮೂಲನೆಲೆಯನ್ನು ಗುರುತಿಸುವ ದಿಸೆಯಲ್ಲಿ ಸರಿಯಾದ ಪ್ರಯತ್ನವೂ ನಡೆದಿಲ್ಲ. ಕುಲಶಾಸ್ತ್ರಕ್ಕೆ ಅನುಸಾರವಾದ ಅಧ್ಯಯನದಲ್ಲಿ ಗಮನಿಸಬಹುದಾದ ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಪ್ರವೃತ್ತಿ ಮೊದಲಾದುವು ಆಯಾ ಕುಲದ ಮೂಲನೆಲೆ, ಇತ್ಯಾದಿಯನ್ನು ಗುರುತಿಸಲು ಸಹಾಯ ಮಾಡುತ್ತವೆಂಬುದನ್ನು ಈ ಅರಸರ ವಿಚಾರದಲ್ಲಿಯೂ ನೋಡಬಹುದು. ಈ ಅರಸರ ಮೂಲಪುರುಷರು ಜಡಕಲ್ಲುದುರ್ಗದ ಕಡೆಯಿಂದ ಹೊರಟು ಬಂದು ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿದ ಬಗೆಗೆ ಮೇಲೆಯೇ ಹೇಳಿದೆ. ' ಬೇರೊಂದು ಮೂಲದಿಂದ ಸಂಗ್ರಹಿಸಲಾದುದು ' ಎಂಬ ಸೂಚನೆಯೊಡನೆ ಲೂಯಿ ರೈಸ್ ಅವರು ಪ್ರಸ್ತಾಪಿಸಿರುವ ಸಂಗತಿಯು, ತಿಮ್ಮಣ್ಣ ನಾಯಕನು ತನ್ನ ಪುಟ್ಟ ಸೇನೆಯೊಡನೆ ತಿರುಪತಿಗೆ ಹತ್ತು ಗಾವುದ (ಅಂದರೆ ಸುಮಾರು 60 ಮೈಲಿಗಳು) ದೂರದಲ್ಲಿಯ ಪರ್ವತದ ಸಮೀಪದಲ್ಲಿರುವ 'ಮದಕೆ(ೕ)ರಿ' (Madakeri) ಎಂಬ ಎಡೆಯಿಂದ ಹೊರಟುಬಂದು ಬಸವಾಪಟ್ಟಣ (ಚನ್ನಗಿರಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ) ಪಾಳೆಯಗಾರನ ಸೇವೆಯಲ್ಲಿ ನಿಂತನೆಂದು ಅರಹುತ್ತದೆ.[46] ಇದರಿಂದ ಅವನ ನಂತರದ ಅರಸರನ್ನು ಈ ನೆಲೆಯ ಹೆಸರಿನಿಂದಲೇ ಕರೆಯಲ್ಪಟ್ಟಿರಬೇಕೆಂದು ಭಾವಿಸಲು ಇಲ್ಲಿ ಅವಕಾಶವಿದೆ. ಆದರೆ ಈ ' ಮದಕೆ(ೕ)ರಿ ' ಇರುವುದೆಲ್ಲಿ? ತಮ್ಮ ಮೂಲನೆಲೆಯಿಂದ ಹೊರಟ ಈ ನಾಯಕ-ಅರಸರ ವಂಶಜರು ಚಿತ್ರದುರ್ಗ ಜಿಲ್ಲೆಯನ್ನು ಯಾವ ಮಾರ್ಗದಿಂದ ಪ್ರವೇಶಿಸಿ, ಎಲ್ಲಿ ಎಲ್ಲಿ ನೆಲಸಿದರು? ಇತ್ಯಾದಿ ಅಂಶಗಳನ್ನು ಸ್ಥೂಲವಾಗಿಯಾದರೂ ಇಲ್ಲಿ ಚರ್ಚಿಸಬೇಕಾಗುತ್ತದೆ.

ಈ ಸಂಬಂಧದಲ್ಲಿ ಈ ಅರಸರ ವಂಶಾವಳಿಗಳು ಕೊಂಚಮಟ್ಟಿಗೆ ಬೆಳಕು ಚೆಲ್ಲುತ್ತವೆಂಬುದನ್ನು ಈಗಾಗಲೇ ಹೇಳಿದೆ. ಅವುಗಳ ಪ್ರಕಾರ, ಗಬ್ಬಗಡಿ ಓಬನಾಯಕ, ಜಡವಿನಾಯಕ ಮತ್ತು ಬುಳ್ಳನಾಯಕ ಎಂಬ ಮೂರು ಮಂದಿ ಸಹೋದರರು ತಮ್ಮ ಮನೆದೇವರು ಅಹೋಬಲ ನರಸಿಂಹಮೂರ್ತಿ ಪೆಟ್ಟಿಗೆ ಸಹಿತ ತಮ್ಮ ನೆಲೆಯಿಂದ ಹೊರಟು ಮಾರ್ಗಮಧ್ಯೆ ಹಂಪೆಯಲ್ಲಿ ವಿರೂಪಾಕ್ಷೇಶ್ವರನ ದರ್ಶನ ಮಾಡಿಕೊಂಡು, ಅಲ್ಲಿಂದ ಬಿಳಿಚೋಡಿಗೆ (ಜಗಲೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ) ಬಂದು ರೊಪ್ಪ ಹಾಕಿಕೊಂಡು ಮೂರು ತಿಂಗಳ ಕಾಲ ಇದ್ದರು. ಅಲ್ಲಿಂದ ನೀರಥಡಿಗೆ ಬಂದು ನೆಲೆ

---

45 ಈ ಮದ್ದೀಹಳ್ಳಿಯ ನೆಲೆಯನ್ನು ನನ್ನ ಗಮನಕ್ಕೆ ತಂದ ಚಳ್ಳಕೆರೆಯ ಹೆಚ್.ಪಿ.ಪಿ.ಸಿ. ಪ್ರಥಮದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಮೀರಾಸಾಬಿಹಳ್ಳಿ ಶಿವಣ್ಣ ಅವರಿಗೆ ಕೃತಜ್ಞನಾಗಿದ್ದೇನೆ.

46 *Mysore, Vol.* 2, Westminster, 1897, p. 501, note 1

ನಿಂತರು. ಅನಂತರ ಇವರಿಗೆ ಸಂಬಂಧಿಸಿದವರು ಚದುರಿ ಸ್ಯಾಗಲೆ, ಮತ್ತಿ ಹಾಗೂ ಅಡವನಹಾಳು ಗ್ರಾಮಗಳಲ್ಲಿ ವಾಸಿಸತೊಡಗಿದರು. ಅವರು ಬಹುಶಃ ಬಳ್ಳಾರಿ ಜಿಲ್ಲೆಯ ಹಂಪೆಯಿಂದ ಕೊಟ್ಟೂರು ಕೂಡ್ಲಿಗೀ ಮಾರ್ಗವಾಗಿ ಬಿಳಿಚೋಡಿಗೆ ಬಂದಿರಬಹುದು. ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುವ ಅಗತ್ಯ ಅವರಿಗೆ ಒದಗಿ ಬಂದ ಸಂದರ್ಭವನ್ನು ಗಮನಿಸಿದರೆ, ಅವರ ಮೂಲನೆಲೆ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ತಿರುಪತಿಯ ಪರಿಸರವಾಗಿರದೆ ಅದರ ಉತ್ತರ ದಿಕ್ಕಿಗಿರುವ ಹಾಗೂ ಅಲ್ಲಿಂದ ಸಾಕಷ್ಟು ಅಂತರದಲ್ಲಿರುವ ಯಾವುದಾದರೂ ನೆಲೆಯಿದ್ದಿರಬೇಕು; ಅದು ಹಂಪೆಗೆ ಸಮೀಪವಿದ್ದಿರಬೇಕು. ಜಡಕಲ್ಲು ಎಂಬುದು ತಿರುಪತಿಯ ಬಳಿ ಇರುವುದೆಂತಲೂ ಹಾಗೂ ಜಡಕಲ್ಲು, ಕರಿಮಲೆ ಮತ್ತು ರಾಮದುರ್ಗಗಳು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿ ಇರುವುವೆಂತಲೂ ಕೆಲವು ಲೇಖಕರು ಉಲ್ಲೇಖಿಸಿರುವುದುಂಟು. ಕರ್ನೂಲು ಜಿಲ್ಲೆಯಲ್ಲಿ ಈ ನಾಯಕ-ಅರಸರ ಹಿರಿಯರು ಇತ್ತಕಡೆಗೆ ಬರುವ ಮುನ್ನ ನೆಲಸಿದ್ದಿರಬೇಕೆಂಬುದನ್ನು ಸಮರ್ಥಿಸಲು ಇನ್ನಿತರ ಆಧಾರಗಳೂ ನೆರವಿಗೆ ಬರುತ್ತವೆ. ಕರ್ನೂಲು ತಿರುಪತಿಯಿಂದ ಸುಮಾರು 280 ಕಿ.ಮೀ. ಅಂತರದಲ್ಲಿದೆ.

ಕರ್ನೂಲು ಜಿಲ್ಲೆ, ಪತ್ತಿಕೊಂಡ ತಾಲ್ಲೂಕಿನ ದಕ್ಷಿಣದಲ್ಲಿ 'ಮದ್ದಿಕೇರ' ಎಂಬ ಊರು ನೆಲಸಿದ್ದು, ಇದು ಗುಂತಕಲ್ಲಿನಿಂದ ವಿಜಯವಾಡಕ್ಕೆ ಹೋಗುವ ರೈಲು ಮಾರ್ಗದಲ್ಲಿ ಉಪನಿಲ್ದಾಣವಾಗಿದ್ದು; ಗುಂತಕಲ್ಲು ಜಂಕ್ಷನ್‌ಗೆ 8 ಕಿ.ಮೀ. ದೂರದಲ್ಲಿದೆ. ಮದ್ದಮ್ಮನೆಂಬ ಗ್ರಾಮದೇವತೆಯಿಂದಾಗಿ ಇದಕ್ಕೆ 'ಮದ್ದಿಕೆರೆ' ಎಂಬ ಹೆಸರು ಬಂದಿದೆ. ಇಲ್ಲಿರುವ ಹಳೆಯ ಕೋಟೆಯು ವಿಜಯನಗರದರಸರ ಅವಧಿಯಲ್ಲಿ ವಸಂತರಾಜಗ ವಂಶಜರಿಂದ ನಿರ್ಮಿಸಲ್ಪಟ್ಟಿತು.[47] ರಾಬರ್ಟ್ ಸಿವೆಲ್ ಅವರು ಸಂಗ್ರಹಿಸಿರುವ ಮಾಹಿತಿಯ ಪ್ರಕಾರ, ಪತ್ತಿಕೊಂಡ ತಾಲ್ಲೂಕನ್ನು ಹಿಂದೆ ಪಂಚಪಾಳೆಮು (ಪಂಚಪಾಳೆಯ) ತಾಲ್ಲೂಕೆಂದು ಕರೆಯಲಾಗುತ್ತಿದ್ದು, ಅದು ಐದುಮಂದಿ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟಿದ್ದಿತು; ಚನ್ನಪಲ್ಲೆ, ಪ್ಯಾಪಲಿ, ಕಪ್ಪತ್ರಳ್ಳ (ಕಪಟ್ರಾಳ), ಮದ್ದಿಕಿ(ಕೆ)ರ ಮತ್ತು ದೇವಕೊಂಡ—ಇವುಗಳು ಕ್ರಮವಾಗಿ ಈ ಪಾಳೆಯಪಟ್ಟುಗಳ ರಾಜಧಾನಿಗಳಾಗಿದ್ದವು; ಇವುಗಳಲ್ಲಿ ಈಗ ಚನ್ನಪಲ್ಲೆ ಮತ್ತು ದೇವಕೊಂಡ ಮನೆತನಗಳು ಇಲ್ಲವಾಗಿದ್ದು, ಉಳಿದ ಮೂರು ಮನೆತನಗಳವರು ಸರ್ಕಾರದಿಂದ ಗೌರವವೇತನ ಪಡೆಯುತ್ತಿರುವರು.[48]

ಚಿತ್ರದುರ್ಗದ ಕಾಮಗೇತಿ ಅರಸರ ವಂಶಜರು ಈ ಮೂಲಕ್ಕೆ ಸೇರಿದ್ದವರಿರಬಹುದೇ? 'ಮದಕರಿನಾಯಕ'ರೆಂದು ಕರೆದುಕೊಳ್ಳಲು ಈ ಅರಸರಿಗೆ ಇದು ಹಿನ್ನೆಲೆ

---

47 M. V. Rajagopal (Ed.): *Karnool District Gazetteer*, Hyderabad, 1974, p. 252

48 *Lists of the Antiquarian Remains in the Presidency of Madras, Vol.* 1, Delhi, 1972, p. 93

ಯಾಗಿದ್ದಿರಬಹುದೇ ?—ಎಂಬ ಸಂದೇಹಗಳು ಈ ಹಿನ್ನೆಲೆಯಲ್ಲಿ ಉದ್ಭವಿಸುತ್ತವೆ.[49] ಅಲ್ಲದೆ, ಲೂಯಿರೈಸ್ ಅವರು ಪ್ರಸ್ತಾಪಿಸಿರುವ 'ಮದಕೆ(ಱ)ರಿ'ಯು ಇಲ್ಲಿಯ 'ಮದ್ದಿಕೆರೆ' ಇರಬಹುದೇ? ಮದ್ದಿಕೆರೆಯ ಮದ್ದಮ್ಮನ ಗುಡಿಯ ಮುಂದಿರುವ ಶಾಸನದಲ್ಲಿ (ಶಕ 1741), ಮಲ್ಲಿಕಾರ್ಜುನ ನಾಯಕನೆಂಬವನು ಶ್ರೀಮಾಧವ ದೇವರನ್ನು ಮರುಪ್ರತಿಷ್ಠಾಪಿಸಿದ ಸಂಗತಿಯಿದ್ದು, ಅದರಲ್ಲಿ 'ಮದ್ದಿಕೇರಿ' ಎಂಬ ರೂಪವನ್ನು ಕಾಣಬಹುದು.[50]

ನಮ್ಮ ಅಧ್ಯಯನದ ದೃಷ್ಟಿಯಿಂದ ಮತ್ತೊಂದು ಗಮನಾರ್ಹ ಎಡೆಯೆಂದರೆ, ಕರ್ನೂಲು ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿ ನೆಲೆಗೊಂಡಿರುವ 'ಗುಳ್ಳಿಯಮ್' ಎಂಬುದು. ಇದು ಮದ್ದಿಕೆರೆಯಿಂದ ಪಶ್ಚಿಮಕ್ಕೆ ಸುಮಾರು 40 ಕಿ.ಮೀ. ದೂರದಲ್ಲಿಯೂ ಬಳ್ಳಾರಿಗೆ ಸಮೀಪದಲ್ಲಿಯೂ ನೆಲಸಿದೆ. ಇಲ್ಲಿಯ ಪ್ರಸಿದ್ಧ ದೇವರೆಂದರೆ ಗದಿಲಿಂಗಸ್ವಾಮಿ. ಕ್ರಿ.ಶ. 1568ರ ಹೊಳಲ್ಕೆರೆಯ ಗೋಪಾಲಕೃಷ್ಣ ದೇವಾಲಯದ ಶಾಸನದಲ್ಲಿ ಪ್ರಸ್ತಾಪಗೊಂಡಿರುವ 'ಮೈದುನ ಗುಳ್ಳಿಯಪ್ಪನಾಯಕ'ನೆಂಬವನ ಹೆಸರಿನ ಹಿನ್ನೆಲೆಯಲ್ಲಿ ಈ ಎಡೆ ಮತ್ತು ದೇವರು ಇದ್ದಿರಬಹುದೆಂಬುದನ್ನು ಇದು ಪುಷ್ಟೀಕರಿಸುವಂತೆ ತೋರುತ್ತದೆ.

ಕಾಮಗೇತಿ ಅರಸರ ಮನೆದೇವರು ಅಹೋಬಲ ನರಸಿಂಹ. ಕರ್ನೂಲು ಜಿಲ್ಲೆಯ ಆಲ್ಲಗಡ್ಡ ತಾಲ್ಲೂಕಿನಲ್ಲಿ ಈ ಅಹೋಬಲ(ಅಹೋಬಿಲ)ವು ನೆಲಸಿದ್ದು, ಮದ್ದಿಕೆರೆಯ ಪೂರ್ವಕ್ಕೆ ಸುಮಾರು 100 ಕಿ.ಮೀ. ಅಂತರದಲ್ಲಿದೆ. ಈ ಅಹೋಬಲ ಕ್ಷೇತ್ರದ ಗರುಡಾಚಲಕ್ಕೆ ಹೊಂದಿಕೊಂಡಂತೆ ಉತ್ತರಕ್ಕೂ ದಕ್ಷಿಣಕ್ಕೂ ಬೆಟ್ಟಸಾಲುಗಳು ಸುಮಾರು 250 ಮೈಲಿ ಉದ್ದಕ್ಕೆ ಹಬ್ಬಿದ್ದು, ಉತ್ತರಭಾಗಕ್ಕೆ ಶ್ರೀಶೈಲವೆಂದೂ ದಕ್ಷಿಣಭಾಗಕ್ಕೆ ಶೇಷಾಚಲ(ತಿರುಪತಿಬೆಟ್ಟ)ವೆಂದೂ ಹೆಸರುಗಳಿವೆ. ಇಲ್ಲಿ ಕೆಳಗಿನ ಅಹೋಬಲ ಮತ್ತು ಮೇಲಿನ ಅಹೋಬಲಗಳಿದ್ದು, ಕೆಳಗಿನ ಅಹೋಬಲವು ಬೆಟ್ಟದ ತಪ್ಪಲಿನಲ್ಲಿ ಅರಣ್ಯದ ಮಧ್ಯದಲ್ಲಿದೆ. ದೇವಾಲಯದ ಮುಂದುಗಡೆ 'ನೂರುಕಾಲು (ಶತಸ್ತಂಭ) ಮಂಟಪ'ವಿದ್ದು, ಐತಿಹ್ಯ ಹೇಳುವಂತೆ, ಆ ಪ್ರಾಕಾರದಲ್ಲೇ ದೇವಾಲಯದ ವಾಯುವ್ಯದಿಕ್ಕಿನಲ್ಲಿ ಶ್ರೀನಿವಾಸನು ಪದ್ಮಾವತೀದೇವಿಯನ್ನು ವಿವಾಹವಾಗುವ ಮುನ್ನ ದೇವರ ಸಮಾರಾಧನೆಯನ್ನು ತನ್ನ ವಾಸಭೂಮಿಯಾದ ಶೇಷಾದ್ರಿಗೆ ಸೇರಿದಂತೆಯೇ ಇರುವ ಗರುಡಾಚಲದ ಈ ಅಹೋಬಲ ಕ್ಷೇತ್ರದಲ್ಲಿ ಮಾಡಿ, ಲಕ್ಷ್ಮೀನೃಸಿಂಹನ

---

49 ಕರ್ನೂಲು ತಾಲ್ಲೂಕು ಅಲಂಪುರದ ವಿದ್ವಾಂಸರಾದ ಗಡಿಯಾರಂ ರಾಮಕೃಷ್ಣಶರ್ಮಾ ಅವರು ದಿನಾಂಕ 1–10–1985ರ ತಮ್ಮ ಪತ್ರದಲ್ಲಿ ನನ್ನ ಈ ಊಹೆಯನ್ನು ಸಮರ್ಥಿಸಿರುವರು.

50 ಈ ತೆಲುಗು ಶಾಸನದ ಪಾಠವನ್ನು ಕಳುಹಿಸಿಕೊಟ್ಟು ಸಹಕರಿಸಿದ ಅನಂತಪುರದ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕ ಡಾ॥ ಆರ್. ಶೇಷಶಾಸ್ತ್ರಿ ಹಾಗೂ ತೆಲುಗು ಎಂ.ಫಿಎಲ್. ವಿದ್ಯಾರ್ಥಿ ರಾಮಾಂಜನೇಯುಲು ಅವರುಗಳಿಗೆ ಕೃತಜ್ಞನಾಗಿದ್ದೇನೆ.

ಅನುಮತಿ ಪಡೆದು ಮದುವೆಯಾದನು.[51] ಇಲ್ಲಿಯ ಅಹೋಬಿಲಮಠದ ಸ್ಥಾಪನೆಗೆ ಕಾರಣರಾದವರು ಶ್ರೀವೈಷ್ಣವ ಆಚಾರ್ಯ ರಾಮಾನುಜರ ಶಿಷ್ಯಪರಂಪರೆಯ ಎರಡು ಶಾಖೆಗಳಾದ ಸಮಾಶ್ರಯಣ ಪರಂಪರೆ ಮತ್ತು ಗ್ರಂಥಪರಂಪರೆಗಳಲ್ಲಿ ಸಮಾಶ್ರಯಣ ಪರಂಪರೆಗೆ ಸೇರಿದ ಮಂಡ್ಯ ಜಿಲ್ಲೆ ಮೇಲುಕೋಟೆಯ ಆದಿವಣ್ ಶಠಕೋಪಜೀಯರ್ (ಶ್ರೀನಿವಾಸಾಚಾರ್ಯ); ಕ್ರಿ.ಶ. ಸು. 1445 ರಿಂದ 1504(?) ರವರೆಗೆ ಆಳ್ವಿಕೆ ನಡೆಸಿದ ವಿಜಯನಗರದ ಸಾಳುವ ನರಸಿಂಹನ ಕಾಲದಲ್ಲಿದ್ದವರು. ಇವರು ತಿರುಪತಿಯಲ್ಲೂ ಕೆಲವು ಕಾಲ ನೆಲಸಿದ್ದರಾದ ಕಾರಣ ತಿರುಪತಿ(ವೇಂಗಡ)ಬೆಟ್ಟದ ಮೇಲೆ ಅಹೋಬಲ ನರಸಿಂಹನ ಮೂರ್ತಿಗಳು ಕಾಣಿಸಿಕೊಂಡವಂತೆ.[52] ಅಂದರೆ ಅಹೋಬಲ ಮತ್ತು ತಿರುಪತಿಗಳು ಒಂದೇ ಬೆಟ್ಟಸಾಲಿನಲ್ಲಿ ನೆಲಸಿರುವ ಹಾಗೂ ಪರಸ್ಪರ ಸಂಬಂಧ ಹೊಂದಿರುವ ಕ್ಷೇತ್ರಗಳೆಂದು ಇವುಗಳಿಂದ ವ್ಯಕ್ತಪಡುವ ಅಂಶ.

ಈ ಎರಡೂ ಕ್ಷೇತ್ರಗಳ ಬಗೆಗೆ ಕಾಮಗೇತಿ ಅರಸರು ತಮ್ಮ ಸಮಾನ ಭಕ್ತಿಯನ್ನು ವ್ಯಕ್ತಪಡಿಸಿರುವರೆಂಬುದಕ್ಕೆ ಈ ಮೇಲಿನ ವಿವರಣೆಯು ಪೂರಕವಾಗಿದೆಯೆಂಬುದನ್ನು ಇಲ್ಲಿ ಗ್ರಹಿಸುವುದು ಅಗತ್ಯ. ಮೂಲನೆಲೆಯಿಂದ ಹೊರಟ ಕಾಮಗೇತಿ ಅರಸರ ಮೂಲಪುರುಷರು ತಾವು ಹೋದೆಡೆಯಲ್ಲೆಲ್ಲ ತಮ್ಮ ಮನೆದೇವರಾದ ಅಹೋಬಲನನ್ನು ಹೊತ್ತೊಯ್ದರು. ಈ ದೇವರು ನೆಲಸಿರುವ ಕ್ಷೇತ್ರದ ಸಮೀಪದ ಎಡೆಯೇ ಅವರ ಮೂಲನೆಲೆಯಾಗಿದ್ದಿರಬೇಕೆಂಬ ಪರೋಕ್ಷ ಸೂಚನೆ ಇದರಿಂದ ದೊರಕುತ್ತದೆ. ಹೋಬಳ ಅಥವಾ ಓಬಳ ಹಾಗೂ ಯೋಬಳ(ತಮಿಳು)ಗಳು ಅಹೋಬಲ ಎನ್ನುವುದರ ರೂಪಾಂತರವಾಗಿದ್ದು, ಈ ಅರಸರ ಮೂಲಪುರುಷರೂ ಅವರ ಪೀಳಿಗೆಯವರೂ ಈ ದೈವದ ಹೆಸರನ್ನೆ ಹೊಂದಿದ್ದುದನ್ನು ಲಕ್ಷಿಸಬೇಕು. 'ತಿಮ್ಮಣ್ಣ' ಎಂಬ ಹೆಸರು ಸಹ ತಿರುಪತಿ ದೈವದ ಬಗೆಗೆ ಈ ಅರಸರು ಇರಿಸಿಕೊಂಡಿದ್ದ ಭಕ್ತಿಯ ಸಂಕೇತವಾಗಿ ಇದೆಯೆನ್ನಬಹುದು.

ಈಗಾಗಲೇ ಪ್ರಸ್ತಾಪಗೊಂಡಿರುವ, ಕ್ರಿ.ಶ. ಸು. 1583ರಲ್ಲಿ ಕಾಮಗೇತಿ ತಿಮ್ಮಣ್ಣನಾಯಕನು ನೀಡಿದ ಹಾಗೂ ಶಾಸನಪಾಠದ ಮಧ್ಯೆ 'ಶ್ರೀಮತೇರಾಮಾನುಜಾಯನಮಃ' ಎಂಬ ಸ್ತುತಿಯುಳ್ಳ ತೆಲುಗು ಶಾಸನವು,[53] ರಾ[ಮ]ರಾಜಯ್ಯ ಮತ್ತು ತಿರುಮಲರಾಜಯ್ಯಗಳಿಗೆ ಪುಣ್ಯವಾಗಲೆಂದು ಹಂಪೆಯ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಶ್ರೀಮಾಲ್ಯವಂತಂ ರಾಮಾನುಜಜೀಯರಿಗೆ ದತ್ತಿ ಕೊಟ್ಟಿರುವ ಬಗೆಗೆ ಹಾಗೂ ಅದೇ ಶಾಸನಕಲ್ಲಿನ ಎಡಭಾಗದಲ್ಲಿರುವ ಪಾಠದಲ್ಲಿ (ಸಂಖ್ಯೆ 76) ತನ್ನ ತಂದೆ ಹನುಮಿ

---

51 ಎಸ್. ರಂಗಾಚಾರ್ : ಶ್ರೀ ಅಹೋಬಿಲ ಮಠ ವೈಭವ, ಬೆಂಗಳೂರು, 1953. ಪು.1 (ಅಡಿಟಿಪ್ಪಣಿ), 6, 35

52 ಪ್ರೊ|| ಎಸ್. ಕೆ. ರಾಮಚಂದ್ರರಾವ್: ತಿರುಪತಿ ತಿಮ್ಮಪ್ಪ, ಬೆಂಗಳೂರು, 1980, ಪು. 86-88, 115

53 ಎ.ಕ., 11, ಹಿರಿಯೂರು 75 (ರಂಗಸಮುದ್ರ)

ನಾಯಕನಿಗೆ ಪುಣ್ಯವಾಗಲೆಂದು ಅದೇ ಜೀಯರಿಗೆ ತುಂಗಭದ್ರಾತೀರದಲ್ಲಿಯ(?) ಅರಿಕೆರೆ ಗ್ರಾಮವನ್ನು ಧಾರಾಪೂರ್ವಕವಾಗಿ ನೀಡಿದ ಬಗೆಗೆ ಹೇಳುತ್ತದೆ. ಅಹೋಬಲ ಮಠದ ಪರಂಪರೆಯ ಗುರುಗಳನ್ನು 'ಜೀಯರ್' ಎಂದು ಕರೆಯಲಾಗುತ್ತದೆಂಬುದನ್ನು ಇಲ್ಲಿ ಗಮನಿಸಬೇಕು.

ಮಾಲ್ಯವಂತಂ ರಾಮಾನುಜಜೀಯರ್ ಶ್ರೀ ವೈಷ್ಣವ ಆಚಾರ್ಯರೆಂಬುದು ದಿಟವಾದರೂ ಅವರು ಎಲ್ಲಿಯ ಪೀಠದವರೆಂಬುದು ಸ್ಪಷ್ಟಪಡುವುದಿಲ್ಲ. ಇವರ ಪೀಠವು ಹಂಪೆಯ ಪರಿಸರದಲ್ಲಿ ಇದ್ದಿರಬಹುದು. ಮಾಲ್ಯವಂತಂ ಎಂಬುದು ಪರ್ವತವೊಂದರ ಹೆಸರಾಗಿದ್ದು, ಇದು ಕಿಷ್ಕಿಂಧೆಗೆ ಸಮೀಪವಾಗಿರುವಂತಹದು; ಪೂರ್ವಘಟ್ಟಗಳ ಈಶಾನ್ಯಭಾಗದಲ್ಲಿ ಕಡಪ, ಕರ್ನೂಲು, ನೆಲ್ಲೂರು, ಗುಂಟೂರು ಜಿಲ್ಲೆಗಳಲ್ಲಿ ಹಬ್ಬಿದ್ದು, ಇದಕ್ಕೆ ಪ್ರಸ್ರವಣವೆಂಬ ನಾಮಾಂತರವಿರುವುದು.[54] ಪುರಾಣಪ್ರಸಿದ್ಧವಾದ ಕಿಷ್ಕಿಂಧೆಯು ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾನದಿಯ ಉತ್ತರತೀರದಲ್ಲಿದ್ದು, ಇದರ ಬಳಿಯೇ ಹಂಪೆಯೆಂದು ಕರೆಯಲ್ಪಡುವ ಪಂಪಾಕ್ಷೇತ್ರವೂ ಇರುವುದು ಗಮನಾರ್ಹ. ವಿದ್ವಾಂಸರು ಗಮನಿಸಿರುವಂತೆ, ಪೂರ್ವಘಟ್ಟಕ್ಕೆ ಸೇರಿದ ಬೆಟ್ಟಸಾಲಿನ ನಡುವಣ್ಣಿಯ ಭಾಗವೇ ಅಹೋಬಲ.[55] ಮಾಲ್ಯವಂತಂ ರಾಮಾನುಜಜೀಯರ್ ಈ ಭಾಗಕ್ಕೆ ಸೇರಿದವರೆಂಬುದು ಇದರಿಂದ ಸ್ಪಷ್ಟಪಡುತ್ತದೆ. ಅವರಿಗೆ ಧಾರಾಪೂರ್ವಕವಾಗಿ ಕೊಡಲಾದ ಅರಿಕೆರೆ ಗ್ರಾಮವು ಯಾವುದೆಂಬುದು ಸದ್ಯಕ್ಕೆ ತಿಳಿಯದು.

ಈ ಪರಂಪರೆಯನ್ನು ಅನಂತರದ ಕಾಮಗೇತಿ ಅರಸರು ಸಹ ಮುಂದುವರೆಸಿಕೊಂಡು ಬಂದರು. ಕಸ್ತೂರಿ ಚಿಕ್ಕಣ್ಣನಾಯಕನು (ಕ್ರಿ.ಶ. 1675–1686) ಕ್ರಿ.ಶ. 1678ರಲ್ಲಿ ತಮ್ಮ ತಂದೆಗಳಿಗೆ ಪುಣ್ಯವಾಗಲೆಂದು ಹಿರಿಯೂರು ತಾಲ್ಲೂಕಿನ ತೊರೆ(ಸಾಲು)ನಾಗೇನಹಳ್ಳಿಯನ್ನು ಧಾರಾದತ್ತವಾಗಿ 'ರಾಮಾನುಜಕೂಟ'ಕ್ಕೆ ಅರ್ಪಿಸಿದ್ದಾನೆ. ಇದನ್ನು 'ತಿರುಪತಿ ಪೆದಜೀಯರ್ಯೆಯ'ನವರಿಗೆ ಸಮರ್ಪಿಸಲಾಗಿದೆ.[56] 'ಶ್ರೀಮತೇರಾಮಾನುಜಾಯನಮಃ' ಎಂಬ ಸ್ತುತಿಯುಳ್ಳ ಇದೇ ನಾಯಕನ ಕ್ರಿ.ಶ. 1681ರ ಇನ್ನೊಂದು ಶಾಸನವು ತಿರುವೆಂಗಳಾಚಾರ್ಯ(?)ರಿಗೆ ಹಾಲುವರ್ತಿ ಗ್ರಾಮವನ್ನು ದಾನಮಾಡಿದ ಬಗೆಗೆ ತಿಳಿಸುತ್ತದೆ.[57]

ಒಟ್ಟಾರೆ, ಕಾಮಗೇತಿ ಅರಸರ ಮೂಲಪುರುಷರು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಕಡೆಯಿಂದ ಚಿತ್ರದುರ್ಗ ಜಿಲ್ಲೆಗೆ ಬಂದಿರುವ ಬಗೆಗೆ, ಅವರ ಮನೆದೇವರು ಅದೇ ಜಿಲ್ಲೆಯ ಪತ್ತಿಕೊಂಡ ತಾಲ್ಲೂಕು ನಂದ್ಯಾಲ್ ಬಳಿಯಿರುವ ಅಹೋಬಲ

54 ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ: ಪುರಾಣನಾಮ ಚೂಡಾಮಣಿ, ಮೈಸೂರು, 1941, ಪು. 467

55 ತಿರುಪತಿ ತಿಮ್ಮಪ್ಪ, ಪು. 14

56 ಎ.ಕ., 11, ಸಂಖ್ಯೆ 59

57 ಅದೇ, ದಾವಣಗೆರೆ 160

ಅಥವಾ ನವನಾರಸಿಂಹಕ್ಷೇತ್ರದ ನರಸಿಂಹಸ್ವಾಮಿ ಆಗಿರುವ ಬಗೆಗೆ ಹಾಗೂ ಆ ಪಂಥದ ಆಚಾರ್ಯರಿಗೆ ಈ ಅರಸರು ಪೂಜ್ಯಭಾವನೆಯಿಂದ ನಡೆದುಕೊಂಡ ಬಗೆಗೆ ಈ ಮೇಲಿನ ಅಂಶಗಳು ಸ್ಪಷ್ಟವಾದ ಹಿನ್ನೆಲೆಯನ್ನು ಒದಗಿಸುತ್ತವೆ. ಈ ಅರಸರು ತಿರುಪತಿಯ ತಿರುವೇಂಗಡ ದೇವರನ್ನೂ ಆ ಬಗೆಗಿನ ಆಚಾರ್ಯರನ್ನೂ ಗೌರವದಿಂದ ನಡೆಸಿಕೊಂಡು ದನ್ನು ಅರಹುತ್ತವೆ. ಇವೇ ಮೊದಲಾದ ಕಾರಣಗಳಿಂದ ಕಾಮಗೇತಿ ಅರಸರ ವಂಶಜರು ಪ್ರಥಮತಃ ಚಿತ್ರದುರ್ಗ ಜಿಲ್ಲೆಯವರಾಗಿರಲು ಸಾಧ್ಯವೇ ಇಲ್ಲ. ಕರ್ನೂಲು ಜಿಲ್ಲೆಯ ಮ(ದ)ದ್ದಿಕೆ(ೇ)ರ(ರಿ, ರೆ)ಯ ಪರಿಸರವು ಇವರ ಮೂಲನೆಲೆಯಾಗಿರುವ ಸಾಧ್ಯತೆಯು ಇದರಿಂದ ಮತ್ತಷ್ಟು ಹೆಚ್ಚಿದೆ ಎನ್ನಬೇಕಾಗುತ್ತದೆ.

4. 'ಮದಕರಿನಾಯಕ'ರೆಂದು ಕರೆಯಿಸಿಕೊಂಡು ಪ್ರಸಿದ್ಧರಾದ ಕಾಮಗೇತಿ ಅರಸರು ಅದನ್ನು ತಮ್ಮ ಮೂಲನೆಲೆಯ ನೆನಪಿಗೆ ಅಡ್ಡಹೆಸರಾಗಿ ಬಳಸಿಕೊಂಡಿದ್ದಿರ ಬಹುದು. ಆದರೆ ಇದನ್ನು ನಿಖರವಾಗಿ ಸಮರ್ಥಿಸಲು ಆಧಾರಗಳ ಅಭಾವ. ಇದನ್ನು ಈ ಅರಸರ ಉಪನಾಮವೆಂದಾಗಲೀ ರೂಢನಾಮವೆಂದಾಗಲೀ ಭಾವಿಸಲು ಅವಕಾಶ ವಿದ್ದು, ಅವರ ಶಾಸನಗಳಲ್ಲೂ ಸಮಕಾಲೀನ ಬರಹಗಳಲ್ಲೂ ದಾಖಲೆಗಳಲ್ಲೂ ಈ ಹೆಸ ರಿನ ವಿವಿಧ ರೂಪಗಳು ವಿಪುಲವಾಗಿ ಪ್ರಯೋಗಗೊಂಡಿರುವುದನ್ನು ನೋಡಬಹುದು. ಶಾಸನೋಕ್ತವಾಗಿರುವ ಈ ರೂಢನಾಮವನ್ನು ಕಾಲಾನುಕ್ರಮಣಿಕೆಯಲ್ಲಿ ಈ ಮುಂದಿನಂತೆ ಉದಾಹರಣಾರ್ಥ ಉಲ್ಲೇಖಿಸಬಹುದು : ಮದಕೆರಿನಾಯಕ,[58]

---

58 ಅದೇ, ಹೊಳಲ್ಕೆರೆ 6, ಕ್ರಿ.ಶ. 1568 ; ಚಿತ್ರದುರ್ಗ 48 (ರೊಟ್ಟಿಹಳ್ಳಿ), ಕ್ರಿ.ಶ. 1581 ಚಿತ್ರದುರ್ಗ 22 (ಹುಲ್ಲೂರು), ಕ್ರಿ.ಶ. 1609; ಚಿತ್ರದುರ್ಗ 73 (ನೆಲ್ಲಿಕಟ್ಟೆ ಕ್ರಿ.ಶ.,); 1640; ಚಿತ್ರದುರ್ಗ 51 (ಕಡಳಿಗುದ್ದು), ಕ್ರಿ.ಶ. 1653 ; ಜಗಲೂರು 23 (ಮೆದಕೆರಿಪುರ), ಕ್ರಿ.ಶ. 1655 ; ಹೊಳಲ್ಕೆರೆ 79 (ಗುಂಡಸಮುದ್ರ), ಕ್ರಿ.ಶ. 1660 ; ಜಗಲೂರು 27, ಕ್ರಿ.ಶ. 1668 ; ಜಗಲೂರು 36 (ಭರಮಸಮುದ್ರ), ಕ್ರಿ.ಶ. 1672 ; ಜಗಲೂರು 46 (ಕಸವನಹಳ್ಳಿ), ಕ್ರಿ.ಸ. 1683 ; ಹಿರಿಯೂರು 58 (ಆನೇಸಿದ್ರಿ), ಕ್ರಿ.ಶ. 1687 ; ದಾವಣಗೆರೆ 131 (ಕೋಲು ಕುಂಟೆ), ಕ್ರಿ.ಶ. 1708 ; ಜಗಲೂರು 17 (ಕಲ್ಲೇನಹಳ್ಳಿ), ಕ್ರಿ.ಶ. 1715 ; ದಾವಣಗೆರೆ 147 (ದ್ಯಾಮವನಹಳ್ಳಿ), ಕ್ರಿ.ಶ. 1716 ; ಚಿತ್ರದುರ್ಗ 56 (ಹಳುವಧಾರ), ಕ್ರಿ.ಶ. 1718 ; ಹಿರಿಯೂರು 57 (ಆನೇಸಿದ್ರಿ), ಕ್ರಿ.ಶ. 1721 ; ದಾವಣಗೆರೆ 157 (ಮಲ್ಲೇನಹಳ್ಳಿ), ಕ್ರಿ.ಶ. 1728 ; ಚಿತ್ರ ದುರ್ಗ 54 (ಸಿರಗೆರೆ), ಕ್ರಿ.ಶ. 1730 ; ಮೈ.ಆ.ರಿ., 1944, ಸಂಖ್ಯೆ 49 (ಕೊಲ್ಲೂರು), ಕ್ರಿ.ಶ. 1749, ಪು. 172-73, ಇತ್ಯಾದಿ

ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಕನ್ನಡ ಪ್ರವಾಚಕ ಬಿ. ರಾಜಶೇಖರಪ್ಪ ಅವರು ಬೆಳಕಿಗೆ ತಂದಿರುವ ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಕಸವನಹಳ್ಳಿಯ 16ನೆಯ ಶತ ಮಾನದ ಶಿಲಾಶಾಸನದಲ್ಲಿ 'ಮೆದಕ್ಕೆರಿನಾಯಕ' ಎಂದಿದೆ. ಇದರಲ್ಲಿ ಉಲ್ಲೇಖಗೊಂಡಿರುವ 'ನಾರಸಿಂಹನಾಯಕ' ಎಂಬ ಹೆಸರು ಗಮನಾರ್ಹವಾದುದು. ಹಾಗೆಯೇ, ತುರುವನೂರಿನ ಗ್ರಾಮ ಲೆಕ್ಕಾಧಿಕಾರಿ ಕೋ. ಶ. ವಿಶ್ವನಾಥ ಅವರು ಬೆಳಕಿಗೆ ತಂದಿರುವ ಚಿತ್ರದುರ್ಗ ತಾಲ್ಲೂಕು ಬಂಗಾರಕ್ಕನ ಹಳ್ಳಿಯಲ್ಲಿ ದೊರೆತ ಇಮ್ಮಡಿ ಮದಕರಿನಾಯಕನ ಕ್ರಿ.ಶ. 1629ರ ತಾಮ್ರಪತ್ರದಲ್ಲಿ 'ಮೆದಕೆರಿ ನಾಯಕ' ಎಂದಿದೆ. ಇಂತಹ ಅಪ್ರಕಟಿತ ಶಾಸನಗಳು ಇನ್ನೂ ಇವೆ.

ಮೆದಕೆರ್‍ರಿನಾಯಃಕ,[59] ಮೆದಿಕೆರಿನಾಯಕ,[60] ಮದಕೆರಿನಾಯಕ,[61] ಮೆದಕೇರಿ ನಾಯಕ,[62] ಮದಕರಿನಾಯಕ,[63] ಮದಿಕೆರಿನಾಯಃಕ,[64] ಮೆದಕರ(ರೆ/ರಿ?) ನಾಯಕ,[65] ಮೆದಕರಿನಾಯಕ,[66] ಮೆದಕೆರ(ರೆ/ರಿ?)ನಾಯಕ,[67] ಮದಕೇರಿ ನಾಯಕ,[68] ಇತ್ಯಾದಿ ಒಂದೇ ಪಾಠದಲ್ಲಿ ಕಂಡಃಬಂದಿರುವ ಈ ಹೆಸರಿನ ಎರಡು ರೂಪಗಳೆಂದರೆ, ಮೆದಕೆರಿನಾಯಕ ಮತ್ತು ಮೆದೆಕೆರಿನಾಯಃಕ[69]; ಮೆದಿಕೆರಿನಾಯಃಕ ಮತ್ತು ಮೆದಿಕೆರೆನಾಯಕ[70] ಹಾಗೂ ಮೆದಕೆರಿನಾಯಕ ಮತ್ತು ಮದಕರ್‍ರಿನಾಯಕ.[71] 'ಚಿತ್ರಹಳ್ಳಿ ಸೀಮೆಸ್ಥಳದ ಶ್ಯಾನುಬೋಗತನ ವಂಶಾವಳಿ ವಿವರ'ವುಳ್ಳ ಹಿತ್ತಾಳೆ ತಗಡು ಸಂಖ್ಯೆ 5ರ ಹಿಮ್ಮುಖದಲ್ಲಿ ಮೆದಕರ್‍ರಿ, ಮೆದಿಕೆರಿ ಹಾಗೂ ಮೆದಿಕೇರಿ ಎಂದು ಮೂರು ವಿಧವಾಗಿ ಬರೆಯಲ್ಪಟ್ಟಿರುವುದು ಕಂಡುಬರುತ್ತದೆ.

ಇಲ್ಲಿ ಉಲ್ಲೇಖಿಗೊಂಡಿರುವ ಕೆಲವು ರೂಪಗಳು ತಪ್ಪು ಓದಿಕೆ ಹಾಗೂ ತಪ್ಪು ಮುದ್ರಣದ ಕಾರಣದಿಂದ ದೋಷಪೂರಿತವಾಗಿರುವ ಸಾಧ್ಯತೆಯೂ ಇಲ್ಲದಿಲ್ಲ. ಉದಾಹರಣೆಗೆ, ಕ್ರಿ.ಶ. 1673ರ ತಾಮ್ರಪಟವೊಂದರಲ್ಲಿ ಕೆತ್ತಲಾಗಿರುವ 'ಮೆದಕೆರಿ

---

59 ಎ.ಕ., 11. ಹೊಳಲ್ಕೆರೆ 7, ಕ್ರಿ.ಶ. 1568; ದಾವಣಗೆರೆ 164 (ನೀರತಡಿ), ಕ್ರಿ.ಶ. 1698; ಹಿರಿಯೂರು 53 (ಗೌಡನಹಳ್ಳಿ), ಕ್ರಿ.ಶ. 1756; ಹೊಳಲ್ಕೆರೆ 81 (ಗುಂಡ ಸಮುದ್ರ), ಕ್ರಿ.ಶ. ಸು. 1800; ಲಕ್ಷ್ಮಣ್ ತೆಲಗಾವಿ : ಶ್ರೀಬ್ರಹ್ಮಸಮುದ್ರದಲ್ಲಿ ದೊರೆತ ಕೆಲವು ಅಪ್ರಕಟಿತ ಶಾಸನಗಳು, ಜಂಗಮಜ್ಯೋತಿ (ಸ್ಮರಣ ಸಂಚಿಕೆ), ಚಿತ್ರದುರ್ಗ, 1975 : ಗಂಟೆಶಾಸನ 1 ಕ್ರಿ.ಶ. 1712, ಪು. 50

60 ಎ.ಕ., 11, ಹೊಳಲ್ಕೆರೆ 55 (ಹೊರಕೆರೆದೇವರಪುರ), ಕ್ರಿ.ಶ. 1650

61 ಅದೇ, ಚಿತ್ರದುರ್ಗ 31 (ಬಿಳಿಕೆರೆಗ್ರಾಮ), ಕ್ರಿ.ಶ. 1689

62 ಶ್ರೀ ಕೂ. ಶೃಂ. ಸಂ. ಪ್ರಾ. ಶಾ. ಲೇ. ಸಂ., ಲೇಖನ 119 (ಕ್ರಿ.ಶ. 1772). 120 (ಕ್ರಿ.ಶ. 1773), ಪು. 82, 83

63 ಅದೇ, ದಾನಶಾಸನ–ಲೇಖನ 99 (ಕ್ರಿ.ಶ. 1689), 109 (ಕ್ರಿ.ಶ. 1757), 110 (ಕ್ರಿ.ಶ. 1759), 111 (ಕ್ರಿ.ಶ. 1760), 121 (ಕ್ರಿ.ಶ. 1773), ಪು. 74,78,79,84

64 ಎ.ಕ., 11, ದಾವಣಗೆರೆ 130 (ಗಂಡಮುಕ್ಕೇನಹಳ್ಳಿ) ಕ್ರಿ.ಶ. 1711

65 ಅದೇ. ಹಿರಿಯೂರು 74 (ನಾಕೀಕೆರೆ), ಕ್ರಿ.ಶ. 1726

66 ಶ್ರೀ ಕೂ. ಶೃಂ. ಸಂ. ಪ್ರಾ. ಶಾ. ಲೇ. ಸಂ., ದಾನಶಾಸನ 101 (ಕ್ರಿ.ಶ. 1729), 108 (ಕ್ರಿ.ಶ. 1754), ಪು. 75, 77

67 ಎ.ಕ., 11, ಹೊಳಲ್ಕೆರೆ 39 (ತಾಳ್ಯ), ಕ್ರಿ.ಶ. 1730

68 ಶ್ರೀ ಕೂ. ಶೃಂ. ಸಂ. ಪ್ರಾ. ಶಾ. ಲೇ. ಸಂ., ಲೇಖನ 112 (ಕ್ರಿ.ಶ. 1763), ಪು. 80

69 ಎ.ಕ., 11, ಚಿತ್ರದುರ್ಗ 84 (ಕ್ಯಾಸಾಪುರ), ಕ್ರಿ.ಶ. 1653

70 ಅದೇ, ಹೊಳಲ್ಕೆರೆ 54 (ಹೊರಕೆರೆದೇವರಪುರ). ಕ್ರಿ.ಶ. 1755

71 ಮೈ.ಆ.ರಿ., 1947–56, ಬೆಂಗಳೂರು 1, ಕ್ರಿ.ಶ. 1757, ಪು. 64

ನಾಯಕ' ಎಂಬುದನ್ನು ಪ್ರಕಟಿತ ಪಾಠದಲ್ಲಿ 'ಮೆದಕೆರಿನಾಯಕ' ಎಂದು ಅಚ್ಚಿಸಿದೆ.[72] ಗ್ರಾಮಗಳಿಗೆ ನಾಮಕರಣ ಅಥವಾ ಮರುನಾಮಕರಣ ಮಾಡುವಾಗ ಬಳಸಿರುವ ರೂಪಗಳಲ್ಲಿ ಮೆದಕೆರಿಪುರ,[73] ವೀರಮೆದಕೆರಿಪುರ,[74] ಮೊದಲಾದುವು ಗಮನಾರ್ಹವಾದುವು.

ಸಮಕಾಲೀನ ಗ್ರಂಥ, ದಾಖಲೆ, ಹಸ್ತಪ್ರತಿ ಮೊದಲಾದವುಗಳಲ್ಲಿ ಸಹ ಈ ನಾಮವನ್ನು ವಿಧವಿಧವಾಗಿ ಉಲ್ಲೇಖಿಸಲಾಗಿದೆ. ಉದಾಹರಣೆಗೆ, ಮೇದ(ದಿ)ಕೇರಿ ನಾಯಕ,[75] ಮೇದಕೆರೆನಾಯಕ,[76] ಮೇದಿಕೆರಿನಾಯಕ,[77] ಮೆದಿಕೇರಿನಾಯಕ,[78] ಮೆದೆಕೆರೆನಾಯಕ,[79] ಇತ್ಯಾದಿ ಪ್ರಯೋಗಗಳು ಗ್ರಂಥ ಮತ್ತು ದಾಖಲೆಗಳಲ್ಲಿಯೂ ಮದಕರಿನಾಯಕ,[80] ಮದ್ದಿಕೇರಿನಾಯಕ,[81] ಮೆದಕೇರಿನಾಯಕ,[82] ಮ್ಯೆದಕೇರಿ ನಾಯಕ,[83] ಇತ್ಯಾದಿ ರೂಪಗಳು ಹಸ್ತಪ್ರತಿಗಳಲ್ಲಿಯೂ ಉಕ್ತಗೊಂಡಿವೆ. ಕೆಲವು ದಾಖಲೆಗಳಲ್ಲಿ ಇದೇ ಹೆಸರು ಈ ಮುಂದಿನಂತೆ 2–3 ರೂಪಗಳಲ್ಲಿ ಉಕ್ತವಾಗಿರುವುದೂ

---

72 ಅದೇ, 1929, ಚಿತ್ರದುರ್ಗ 7, ಪು. 212 : ಛಾಯಾಚಿತ್ರ ಪುಟಸಂಖ್ಯೆ XIII; ಈ ತಾಮ್ರಪಟವನ್ನು ಚಿತ್ರದುರ್ಗದ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ರಕ್ಷಿಸಿಡಲಾಗಿದ್ದು, ಇದನ್ನು ಪರಿಶೀಲಿಸಲು ಅವಕಾಶವಿತ್ತ ಕ್ಯೂರೇಟರ್ ಶಂಕರ ಅಥಣಿ ಅವರಿಗೆ ಕೃತಜ್ಞನಾಗಿದ್ದೇನೆ.

73 ಎ.ಕ., 11 ದಾವಣಗೆರೆ 157 (ಮಲ್ಲೇನಪಳ್ಳಿ), ಕ್ರಿ.ಶ. 1728

74 ಅದೇ, ಚಿತ್ರದುರ್ಗ 61 (ಹಾಯಕಲ್ಲು), ಕ್ರಿ.ಶ.ಸು. 1800

75 ವಿದ್ವಾನ್ ಎಂ. ಎಸ್. ಬಸವರಾಜಯ್ಯ (ಸಂ.) : ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿ ಕೃತ ಮುರಿಗೆ ತಾರಾವಳಿ, ಮೈಸೂರು 1976, ಪು. 21; ಡಾ॥ ಎಸ್. ವಿದ್ಯಾಶಂಕರ (ಸಂ.) : ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು, ಚಿತ್ರದುರ್ಗ, 1978, ಪು. 285

76 ಕೆಳದಿನೃಪ ವಿಜಯಂ, ಪು. 181, 206, ಇತಾದಿ

77 ಆರ್ಕಾಡ ಸಂಸ್ಥಾನದ ಕೈಫೀಯತು, ಕ.ಸಾ.ಪ., ಜುಲೈ 1924, ಪು. 141

78 ಡಾ॥ ಎಲ್. ಬಸವರಾಜು (ಸಂ.) : ಮಹಾದೇವನ ಮಹಾಲಿಂಗೇಂದ್ರ ವಿಜಯ, ಚಿತ್ರದುರ್ಗ, 1971 : 19ನೆಯ ಅಧ್ಯಾಯ, ಪದ್ಯ 40, 44, 58, 60

79 ಚಾರಿತ್ರಿಕ ದಾಖಲೆಗಳು : ಹೈದರ್‌ನಾಮಾ, ಪು. 54-56, 92–95

80 ಚಿತ್ರದುರ್ಗದ ಸಂಸ್ಥಾನ ಮಹಾರಾಜ ಮದಕರಿನಾಯ್ಕರವರ ಬಖೈರು (ಕಾಗದದ ಪ್ರತಿ, 1887; ಸೌಜನ್ಯ : ನಿಶಾನಿ ರಾಮಣ್ಣ ಮತ್ತು ಎಚ್. ಶ್ರೀಶೈಲ ಆರಾಧ್ಯ, ಚಿತ್ರದುರ್ಗ)

81 ಚಂದ್ರಭೀಮಕವಿ : ಮದ್ದಿಕೇರಿನಾಯ್ಕನ ದಂಡಕ (ಕಾಗದದ ಪ್ರತಿ, ಬಿ 662/1-25; ಸೌಜನ್ಯ : ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ); ಇದು ಶಕ 1741ರ ಮದ್ದಿಕೆರೆ ಶಾಸನದಲ್ಲಿಯ 'ಮದ್ದಿಕೇರಿ' ಎಂಬ ರೂಪವನ್ನು ಹೋಲುವುದು ಗಮನಾರ್ಹ.

82 ಕಣಕುಪ್ಪೆ ಕೋಟೆ ಕಟ್ಟಿದ ಕೈಫೀಯತ್ತು, ಕ.ಸಾ.ಪ., ಜೂಲೈ 1931, ಪು. 128, 132–34

83 ಮ್ಯೆದಕೇರಿನಾಯಕ ಹೇಳಿದ ದಂಡಕ (ಕಾಗದದ ಪ್ರತಿ, ಸಂಖ್ಯೆ 2099; ಸೌಜನ್ಯ : ಡಾ॥ ಬಿ. ಆರ್. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ), ಪು. 72

ಉಂಟು: ಮೆದಕರಿನಾಯಕ ಮತ್ತು ಮೆದಕೇರಿನಾಯಕ,[84] ಮೆದಕೆರಿನಾಯಕ, ಮೆದಕೇರಿನಾಯಕ ಮತ್ತು ಮೆದೆಕೆರೆನಾಯಕ,[85] ಮೆದೆಕೆರಿನಾಯಕ ಮತ್ತು ಮೆದೆಕೆರೆನಾಯಕ,[86] ಇತ್ಯಾದಿ.

ಚಾರಿತ್ರಿಕ ಕಾಗದ–ಪತ್ರಗಳಲ್ಲಿ ಮೆದೆಕೆರೆನಾಯಕ,[87] ಮ್ಯೆದಕೆರ್‍ರಿನಾಯಕ[88] ಎಂಬ ರೂಪಗಳೂ ಕಣ್ಣಿಗೆ ಬೀಳುತ್ತವೆ. ಶ್ರೀ ಕೂಡ್ಲೀ ಶೃಂಗೇರಿ ಸಂಸ್ಥಾನದ ವಶದಲ್ಲಿರುವ ಈ ಕಾಮಗೇತಿ ಅರಸರ ಸನ್ನದು ಒಂದರಲ್ಲಿ ಕಂಡುಬರುವ ರಾಜಮುದ್ರೆಯಲ್ಲಿ 'ಮದಕೇರಿನಾಯಕರು' ಎಂದಿರುವುದನ್ನು ಸಮರ್ಥಿಸಲಾಗಿದೆ.[89] ಈಚಿನ ಕಾಗದ-ಪತ್ರ, ಸರ್ಕಾರಿ ದಾಖಲೆ ಮೊದಲಾದವುಗಳಲ್ಲಿಯೂ ಈ ಹೆಸರಿನ ನಾನಾ ರೂಪಗಳು ದಾಖಲುಗೊಂಡಿದ್ದು, ಚಳ್ಳಕೆರೆ ಪಾಳೆಯಗಾರನ ಮಗ ಮೆದ(ದಿ)ಕೆರಿ ನಾಯಕನನ್ನು ಹಿಡಿದುಕೊಡುವ ಸಂಬಂಧದಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ಮೈಸೂರು ಕಮಿಶನ್ ಹೊರಡಿಸಿದ 'ಇಸ್ತಿಹಾರುನಾಮೆ'ಯಲ್ಲಿ ಮೆದಕೆರೆನಾಯಕ ಮತ್ತು ಮೆದಿಕೆರೆನಾಯಕ ಎಂಬ ಎರಡು ರೂಪಗಳಿರುವುದನ್ನು ನೋಡಬಹುದು.[90] ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕಿನ ಗುಡಿಕೋಟೆ ಪಾಳೆಯಗಾರರಿಗೆ ಸಂಬಂಧಿಸಿದ ಕಾಗದ-ಪತ್ರಗಳಲ್ಲಿ[91] ಕಂಡುಬರುವ ಹಸ್ತಾಕ್ಷರಗಳು ಹಾಗೂ ಉಲ್ಲೇಖಗಳಲ್ಲಿಯೂ ಈ ಹೆಸರು ಭಿನ್ನರೂಪ ಪಡೆದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಕೆಲವು ಉದಾಹರಣೆಗಳು: ಮೆದಕರಿನಾಯಕ (ಮನವಿ ಪತ್ರಗಳ ದಿನಾಂಕ: 15-3-1887,

---

84 ಮದಕರಿನಾಯಕನ ಚರಿತ್ರೆ (ಬಖೈರು–ಕಾಗದದ ಪ್ರತಿ, ಸಂಖ್ಯೆ ಕೆ.ಬಿ. 482, 18ನೆಯ ಶತಮಾನ; ಸೌಜನ್ಯ: ನಿರ್ದೇಶಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ)

85 ಚಿಂಚನಕಲ್ಲ ಅರಸುಗಳ ವಂಶಾವಳಿ

86 ಜಾಜೂರು ಕಾಮಸಮುದ್ರದ ಸ್ಥಳದ ಶ್ಯಾನುಭೋಗರ ವಂಶಾವಳಿ, ಇತ್ಯಾದಿ, ಪು. 9, 10, 13, 14, 39, 87, 107, 119, 120, 124

87 ಲಕ್ಷ್ಮಣ್ ತೆಲಗಾವಿ, ಡಾ॥ ಎಂ. ವಿ. ಶ್ರೀನಿವಾಸ್ (ಸಂ.): ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಚಿತ್ರದುರ್ಗ. 1976: ಚೆಲುವೈಯ್ಯನವರ 2 ಪತ್ರಗಳು (ಕ್ರಿ.ಶ. 1725) ಹಾಗೂ ದಳವಾಯಿ ದೇವರಾಜಯ್ಯನವರ ಪತ್ರ (ಕ್ರಿ.ಶ. 1748), ಪತ್ರ ಸಂಖ್ಯೆ 1–3, ಪು. 74–77; ಈ ಪತ್ರಗಳ ಮೂಲಪ್ರತಿಗಳನ್ನು ಪರಿಶೀಲನೆಗೆ ನೀಡಿ ಸಹಕರಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ॥ ಎಂ. ಚಿದಾನಂದಮೂರ್ತಿ ಅವರಿಗೆ ಕೃತಜ್ಞನಾಗಿದ್ದೇನೆ.

88 ಚಿತ್ರಹಳ್ಳಿ ಸ್ಥಳದ ಶ್ಯಾನುಬೋಗ ಮೇಲು ಕರಿಯಪ್ಪನ ಮೊಮ್ಮಗ ಗಿರಿಯಪ್ಪ ಬರೆಸಿ ಕೊಟ್ಟ ಮಹಜರ್‌ನಾಮಾ (ಚಿತ್ರಹಳ್ಳಿಮಠದ ಕಾಗದಪತ್ರಗಳು: ಕಾಗದದ ಪ್ರತಿ, 1883; ಸೌಜನ್ಯ: ಆಲಗಟ್ಟದ ವೇದಮೂರ್ತಿಸ್ವಾಮಿ, ಚಿತ್ರದುರ್ಗ)

89 ಮೈ.ಆ.ರಿ., 1941, 85

90 ಮಹದೇವ ಬಣಕಾರ: ಆಂಗ್ಲರ ಕಾಲದಲ್ಲಿ ಕನ್ನಡ, ಬೆಂಗಳೂರು, 1986: ದಾಖಲೆ ಸಂಖ್ಯೆ 53, ಕ್ರಿ.ಶ. 1848, ಪು. 130, 246

91 ಇವುಗಳನ್ನು ಪರಾಮರ್ಶಿಸಲು ಅನುಮತಿಯಿತ್ತ ಬೆಂಗಳೂರಿನ ರಾಜ್ಯ ಪತ್ರಾಗಾರದ ನಿರ್ದೇಶಕರಿಗೆ ಕೃತಜ್ಞನಾಗಿದ್ದೇನೆ.

11–1–1895 ಮತ್ತು 1–4–1895), ಮೆದಿಕೆರೆನಾಯಕ (15–3–1887), ಮದಕರಿನಾಯಕ (17–3–1887, 11–1–1895, 15–1–1895, 17–1–1895 ಮತ್ತು 13–2–1895), ಮದಿಕೆರೆನಾಯಕ (8–9–1894), ಮೆದಕೆರೆ ನಾಯಕ (26–3–1895), ಮದಿಕೆರಿನಾಯಕ (8–6–1895) ಹಾಗೂ ಮೆದಿಕೆರಿ ನಾಯಕ (13-7–1898). ಈಚಿನ ಉದಾಹರಣೆಯಾಗಿ, ಕಾಮಗೇತಿ ಅರಸರ ವಂಶಜರೂ ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ 'ಅಂಬಾವಿಲಾಸ'ದ ವಾಸಿಯೂ ಆಗಿದ್ದ ಬಿಚ್ಚುಗತ್ತಿ ದೊಡ್ಡ ಮದಕರಿನಾಯಕರು ತಮ್ಮ ನಿತ್ಯ ವ್ಯವಹಾರದಲ್ಲಿ ಬಳಸುತ್ತಿದ್ದ 'ಲೆಟರ್‌ಹೆಡ್'ನಲ್ಲಿ ತಮ್ಮ ಹೆಸರನ್ನು 'ಚಿತ್ರದುರ್ಗದ ಪಾಳೆಗಾರ ಬಿ. ಡಿ. ಮದಕರಿನಾಯಕ' (B. D. Madakari Naik, Palyagar of Chitaldroog) ಎಂದೇ ಬಳಸಿರುವುದು ಗಮನಾರ್ಹ.[92]

ಒಟ್ಟಿನಲ್ಲಿ, ಕಾಮಗೇತಿ ಅರಸರು ಧರಿಸಿಕೊಂಡ ಈ ಉಪನಾಮವು ಹಲವು ರೂಪಗಳಲ್ಲಿರುವುದನ್ನು ಈ ಉಲ್ಲೇಖಗಳು ಸ್ಪಷ್ಟಪಡಿಸುತ್ತವೆ. ಇಲ್ಲಿಯ ಯಾವುದೇ ರೂಪವನ್ನು ಅಧಿಕೃತವೆಂದು ಭಾವಿಸುವುದು ಹಾಗೂ ಸಾಧಿಸುವುದು ಸಮರ್ಥ ನೀಯವಲ್ಲ. ಶಿಷ್ಟರೂಪವೆಂದು ಮೇಲ್ನೋಟಕ್ಕೆ ಕಂಡುಬರುವ 'ಮದಕರಿನಾಯಕ' ಎಂಬುದು ಸಹ ಈ ಅರಸರ ಅವಧಿಯಲ್ಲಿಯೇ ಬಳಕೆಗೊಂಡಿರುವುದರಿಂದ ಇವರ ಚರಿತ್ರೆಯ ಅಧ್ಯಯನದಲ್ಲಿ ಅದನ್ನು ಹೊರತುಪಡಿಸಿ ಅಥವಾ ಅಲಕ್ಷಿಸಿ ಮುಂದುವರೆಯು ವುದು ಕ್ರಮವಲ್ಲ. ಅಂತಹ ಪ್ರಯೋಗವೇ ಇಲ್ಲವೆಂದು ವಾದಿಸುವುದು ದಿಟ್ಟತನದ ಪರಿಪಾಟವೇ ಸರಿ!

ಮೇಲೆ ಪ್ರಸ್ತಾಪಿಸಿರುವ ಎಲ್ಲ ಅಂಶಗಳ ಪರಿಶೀಲನೆಯ ನಂತರ ಈ ವಿಚಾರದಲ್ಲಿ ಈ ಮುಂದಿನಂತೆ ಕೆಲವು ವಿಚಾರಗಳನ್ನು ಮಂಡಿಸಬಹುದು: 1. ಕಾಮಗೇತಿ ಅರಸರು ಧರಿಸಿದ 'ಮದಕರಿ' ಅಥವಾ ಬೇರಾವುದೇ ರೂಪದ ಉಪನಾಮವು ಆರಂಭ ದಲ್ಲಿಯೋ ಕಾಲಕ್ರಮದಲ್ಲಿಯೋ ಉಚ್ಚಾರಣೆಯಲ್ಲಿಯೂ ಬರವಣಿಗೆಯಲ್ಲಿಯೂ ಜನರು ತೋರಿದ ಅಸಡ್ಡೆಯ ಕಾರಣದಿಂದಾಗಿ ನಾನಾ ರೂಪವನ್ನು ತಳೆಯಿತು; 2. ಈ ಹೆಸರಿನ ಮೂಲರೂಪವನ್ನಾಗಲೀ ಅಧಿಕಾರೂಪವನ್ನಾಗಲೀ ಈ ಉಪನಾಮಗಳ ಆಧಾರದಿಂದ ನಿರ್ಧರಿಸುವುದು ಕಷ್ಟಸಾಧ್ಯವಾದುದರಿಂದಲೂ ಒಂದೇ ಹೆಸರಿನ ಹಲವು ರೂಪಗಳು ಶೋಧಕರಲ್ಲಿಯೂ ಅಭ್ಯಾಸಿಗಳಲ್ಲಿಯೂ ಗೊಂದಲವನ್ನುಂಟುಮಾಡುವ ಸಾಧ್ಯತೆ ಇರುವುದರಿಂದಲೂ (ಹಾಗಿರುವುದಕ್ಕೆ ಹಲವಾರು ಉದಾಹರಣೆಗಳುಂಟು) ಇವೆಲ್ಲವನ್ನೂ ಸಮೀಕರಿಸುವುದರೊಂದಿಗೆ ಒಂದು ಸಾಮಾನ್ಯರೂಪವನ್ನು ಸ್ಥಿರೀಕರಿಸು ವುದು ಅಗತ್ಯ; 3. ಶಾಸನೋಕ್ತವಾಗಿರುವ ಹಾಗೂ ಈಗಾಗಲೇ ವ್ಯಾಪಕವಾಗಿ ಬಳಕೆ

---

92 ತಾ॥ 15–3–1937ರಲ್ಲಿ ಬಿ. ಡಿ. ಮದಕರಿನಾಯಕರು ಬೆಂಗಳೂರಿನಿಂದ ತಮಗೆ ಬರೆದ ವೈಯಕ್ತಿಕ ಪತ್ರವನ್ನು ನನ್ನ ಗಮನಕ್ಕೆ ತಂದ ಭದ್ರಾವತಿಯ ಸಿ. ಪರುಶರಾಮನಾಯಕ (ಈಗ ದಿವಂಗತರು) ಅವರಿಗೆ ಕೃತಜ್ಞನಾಗಿದ್ದೇನೆ.

ಯಲ್ಲಿರುವ 'ಮದಕರಿನಾಯಕ' ಎಂಬ ಅಧಿಕೃತ ಹಾಗೂ ಸುಧಾರಿತ ರೂಪವನ್ನೇ ಬರವಣಿಗೆಯ ಮಟ್ಟಿಗೆ ಅನುಸರಿಸುವುದು ಸರ್ವದೃಷ್ಟಿಯಿಂದಲೂ ಔಚಿತ್ಯಪೂರ್ಣವಾದುದು.

ಇನ್ನು 'ಮದಕರಿನಾಯಕ' ಎಂಬ ಹೆಸರಿನ ಹಿನ್ನೆಲೆಯಲ್ಲಿರುವ ಐತಿಹ್ಯದ ವಿಚಾರ. ಕಾಮಗೇತಿ ಅರಸರ ಮೂಲಪುರುಷನೆನ್ನಲಾದ ಚಿತ್ರನಾಯಕನು ರೊಚ್ಚಿಗೆದ್ದ ಆನೆ(ಕರಿ)ಯನ್ನು ತನ್ನ ಅಂಗಸಾಮರ್ಥ್ಯದಿಂದ ಪಳಗಿಸಿದುದರಿಂದ ಅವನ ವಂಶಜರಿಗೆ 'ಮದಕರಿನಾಯಕ'ರೆಂದು ಕರೆಯಲಾಯಿತೆನ್ನುವ ಘಟನೆಯನ್ನು ಚಾರಿತ್ರಿಕವಾಗಿ ಸಮರ್ಥಿಸಲು ತಕ್ಕ ಆಧಾರಗಳಿಲ್ಲ. ಆಶಯರೂಪದ ಈ ಕಥೆಯನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸಿರುವುದರ ವಿನಾ ಯಾವ ಇತಿಹಾಸಕಾರರೂ ದೃಢೀಕರಿಸಲು ಪ್ರಯತ್ನಿಸಿಲ್ಲ. ಚಿತ್ರದುರ್ಗ ಬೆಟ್ಟದಲ್ಲಿದ್ದ ರಸಸಿದ್ಧರು ಈ ವಂಶದ ಓಬಣ್ಣನಾಯಕನಿಗೆ 'ಮದಕರಿನಾಯಕ'ನೆಂದು ಕರೆದರೆಂದು ಅಥವಾ ಹೆಸರಿಟ್ಟರೆಂದು ವಂಶಾವಳಿಗಳಲ್ಲಿ ಪ್ರಸ್ತಾಪಗೊಂಡಿರುವ ಸಂದರ್ಭ ಸಹ ಇನ್ನೂ ಪರಿಶೋಧನೆಗೆ ಒಳಪಡಬೇಕಾಗಿರುವಂತಹದು. ಏನೇ ಇದ್ದರೂ, 'ಮದಕರಿನಾಯಕ' ಎಂಬುದರ ಹಿನ್ನೆಲೆಯಲ್ಲಿ ತಲೆಹಾಕಿರುವ ಸಾಂಪ್ರದಾಯಿಕ ಕತೆಯನ್ನು ಹೊರತುಪಡಿಸಿ ಈ ಹೆಸರಿನ ಪ್ರಯೋಜನ ಪಡೆಯಬೇಕೆನ್ನುವುದನ್ನು ಹಾಗೂ ಈ ಘಟನೆಯು ಅಸಂಬದ್ಧವಾದುದಾಗಿದ್ದು ಉತ್ಪ್ರೇಕ್ಷೆಯಿಂದ ಕೂಡಿದೆಯೆನ್ನುವುದನ್ನು ಈಗಾಗಲೇ ವ್ಯಕ್ತಪಡಿಸಿದೆ.[93]

5. ಕಾಮಗೇತಿ ಅರಸರಲ್ಲಿ ಕೊನೆಯವನಾದ ರಾಜಾ (ಚಿಕ್ಕ) ಮದಕರಿನಾಯಕನು (ಕ್ರಿ.ಶ. 1754–1779) ದಕ್ಷಿಣಭಾರತದ ಚರಿತ್ರೆಯಲ್ಲಿ ಪ್ರಸಿದ್ಧನಾದವನು. ತನ್ನ 12ನೆಯ ವಯಸ್ಸಿನಲ್ಲಿಯೇ ಚಿತ್ರದುರ್ಗದ ರಾಜಗದ್ದುಗೆಯನ್ನು ಏರಿದ ಈ ಅರಸನ ತಂದೆಯ ಹೆಸರು ಮೊದಲು ಭರಮಪ್ಪ ಅಥವಾ ಭರಮನಾಯಕ; ಈಗಿನ ಹೊಸದುರ್ಗ ತಾಲ್ಲೂಕು ಜಾನಕಲ್ಲಿನಲ್ಲಿ ನಾಯಕತನ ಮಾಡಿಕೊಂಡಿದ್ದವನು. ಈತನು ಕ್ರಿ.ಶ. 1689 ರಿಂದ 1721ರವರೆಗೆ ದುರ್ಗವನ್ನಾಳಿದ ಬಿಚ್ಚುಗತ್ತಿ ಭರಮಣ್ಣನಾಯಕನ ಮಕ್ಕಳಲ್ಲೊಬ್ಬನು ಹಾಗೂ ಕ್ರಿ.ಶ. 1748ರವರೆಗೆ ಆಳ್ವಿಕೆ ನಡೆಸಿದ ಹಿರಿಯ ಮದಕರಿನಾಯಕನ ಸಹೋದರ. ಬಿಚ್ಚುಗತ್ತಿ ಭರಮಣ್ಣನಾಯಕನು ಕಾಮಗೇತಿ ಅರಸರ ಮೂಲಪುರುಷರಲ್ಲೊಬ್ಬನಾದ ಆದಿಬುಳ್ಳನ ಸಂತತಿ (ಬಿಳಿಚೋಡು ಸಂತತಿ)ಗೆ ಸೇರಿದವನು. ತರುವಾಯ ದುರ್ಗದ ಸಿಂಹಾಸನ ಏರಿದವರೆಲ್ಲರೂ ಈತನ ಪೀಳಿಗೆಯವರೇ. ಈ ಅರಸರ ಕೆಲವು ಶಾಸನಗಳು ಒಂದನೆಯ ಕಸ್ತೂರಿ ರಂಗಪ್ಪನಾಯಕ (ಕ್ರಿ.ಶ. 1603–1652) ನಿಂದ ರಾಜಾ ಮದಕರಿಯವರೆಗಿನ ವಂಶಾವಳಿ

93 ಲಕ್ಷ್ಮಣ ತೆಲಗಾವಿ : ಚಿತ್ರದುರ್ಗ ಇತಿಹಾಸ ಶೋಧನೆ–ಈಚಿನ ಬೆಳವಣಿಗೆ (ದಿನಾಂಕ 19–8–1984 ರಂದು ಚಿತ್ರದುರ್ಗದಲ್ಲಿ ಸಮಾವೇಶಗೊಂಡಿದ್ದ 'ಚಿತ್ರದುರ್ಗ–ವಿಚಾರ ಸಂಕಿರಣ'ದಲ್ಲಿ ಸಾದರಪಡಿಸಿದ ಪ್ರಬಂಧ ಅಪ್ರಕಟಿತ)

ಯನ್ನು ಕೊಡುತ್ತವೆ.[94] ಇವುಗಳ ಪೈಕಿ ಈ ಕೊನೆಯ ಅರಸರ ಹಿರಿಯೂರ ತಾಲ್ಲೂಕು ಗೌಡನಹಳ್ಳಿಯ ಶಿಲಾಶಾಸನವು (ಕ್ರಿ.ಶ. 1756) ಕುತೂಹಲಕಾರಿ ಸ್ವಾರಸ್ಯವುಳ್ಳದ್ದು.

ಕಾಮಗೇತಿ ಅರಸರ ಶಾಸನಗಳನ್ನು ಎ. ಕ. 11ನೆಯ ಸಂಪುಟದಲ್ಲಿ ಸಂಕಲಿಸಿ ಕೊಟ್ಟಿರುವ ಲೂಯಿರೈಸ್ ಅವರು, ಪೀಠಿಕೆಯಲ್ಲಿ (ಪು. [illegible]9) ಇವುಗಳನ್ನು ಆಧರಿಸಿ ಈ ಅರಸರ ತಾತ್ಕಾಲಿಕವಾದ ವಂಶಾನುಕ್ರಮಣಿಕೆಯನ್ನು ರಚಿಸಿದ್ದಾರೆ. ಈ ಸಂಪುಟ ದಲ್ಲಿ ಅಚ್ಚಾಗಿರುವ ಗೌಡನಹಳ್ಳಿ ಶಾಸನದಲ್ಲಿ ಉಕ್ತವಾಗಿರುವಂತೆ ತೋರಿಸುವ ಪ್ರಯತ್ನದಲ್ಲಿ ಲೂಯಿರೈಸ್ ಅವರು, ಬಿಚ್ಚುಗತ್ತಿ ಭರಮಣ್ಣನಾಯಕನ ಮಗ (ಹಿರಿಯ) ಮೆದಕೇರಿನಾಯಕನೆಂದೂ ಆತನ ಮಗ 'ದುಗಪಣಯಕ' ಅಥವಾ 'ದುಗ್ಗಪ' (Duggapa) ನಾಯಕನೆಂದೂ ಆತನ ಮಗನೇ (ರಾಜಾ) ಮೇದಕೇರಿ ನಾಯಕನೆಂದೂ ನಿರ್ಣಯಿಸಿದ್ದಾರೆ. ಅವರ ಈ ನಿರ್ಣಯವನ್ನು ಸಮರ್ಥಿಸಿರುವವರಲ್ಲಿ ಮುಖ್ಯರೆಂದರೆ ಆರ್. ಎನ್. ಸಾಲೆತ್ತೊರೆ[95] ಮತ್ತು ಡಾ|| ಎಂ. ಶೇಷಾದ್ರಿ.[96] 'ದುಗ್ಗಪನಾಯಕ'ನನ್ನು 'ದುರುಗಪ್ಪನಾಯಕ'ನೆಂತಲೂ ಕರೆದಿದ್ದಾರೆ ಸಾಲೆತ್ತೊರೆ ಅವರು. ಆದರೆ 'ದುಗ್ಗಪನಾಯಕ'ನೆಂಬ ಹೆಸರನ್ನು ಹೊಂದಿದವರು ಕಾಮಗೇತಿ ಅರಸರಲ್ಲಿ ಯಾರೂ ಇಲ್ಲವೆಂದೂ 'ರಂಗಪ್ಪನಾಯಕ' ಎಂಬ ಹೆಸರಿನ ತಪ್ಪು ಓದಿಕೆಯ ಫಲವೇ ಈ 'ದುಗಪಣ (ದುಗ್ಗಪನಾ)ಯಕ' ಅವತರಿಸಲು ಕಾರಣವೆಂದೂ ಇತರ ವಿದ್ವಾಂಸರು ತಮ್ಮ ಗೊಂದಲದ ನಿರ್ಣಯಗಳನ್ನು ಮಂಡಿಸಲು ಇದರಿಂದ ಅವಕಾಶ ವಾಯಿತೆಂದೂ ಗೌಡನಹಳ್ಳಿಯ ಶಾಸನವನ್ನು ಸ್ವಯಂ ಪರಿಶೀಲಿಸಿದ ತರುವಾಯ ಪ್ರತಿಪಾದಿಸಲಾದ ನೂತನಾಂಶಗಳ ಸಹಿತ ಈಗಾಗಲೇ ವ್ಯಕ್ತಪಡಿಸಿದೆ.[97]

ರಾಜಾ ಮದಕರಿನಾಯಕನು ದುರ್ಗದ ಸಿಂಹಾಸನ ಏರುವ ಮುನ್ನ ತನ್ನ ಚಿಕ್ಕತಂದೆ (?)ಯಾದ ಕಸ್ತೂರಿ ರಂಗಪ್ಪನಾಯಕನ ಕಾಲದಲ್ಲಿ ರಾಜಕಾರ್ಯಗಳಲ್ಲಿ ಭಾಗವಹಿಸುತ್ತಿದ್ದನೆಂಬುದಾಗಲೀ ಆತನ ಜೀವಿತಕಾಲದಲ್ಲಿ ಈ ಮದಕರಿಯು ಆತನ

---

94 ಎ. ಕ., 11, ದಾವಣಗೆರೆ 131 (ಕೋಲುಕುಂಟೆ), ಕ್ರಿ. ಶ. 1708 ; 130 (ಗಂಡ ಮುಕ್ತೇನಹಳ್ಳಿ). ಕ್ರಿ.ಶ. 1711 ; ಜಗಲೂರು 17 (ಕಲ್ಲೇನಹಳ್ಳಿ), ಕ್ರಿ.ಶ. 1715 ; ದಾವಣಗೆರೆ 141 (ದ್ಯಾಮಪ್ಪನಹಳ್ಳಿ), ಕ್ರಿ.ಶ. 1716 ; ಚಿತ್ರದುರ್ಗ 56 (ಹಳುವಧಾರ), ಕ್ರಿ.ಶ. 1718 ; ದಾವಣಗೆರೆ 16 (ಬೂದಿಹಾಳು), ಕ್ರಿ.ಶ. 1719 ; ದಾವಣಗೆರೆ 157 (ಮಲ್ಲೇನಹಳ್ಳಿ), ಕ್ರಿ.ಶ. 1728 ; ಜಗಲೂರು 46 (ಕಸವನಹಳ್ಳಿ), ಕ್ರಿ.ಶ. 1733 ; ಹೊಳಲ್ಕೆರೆ 54 (ಹೊರಕೆರೆದೇವರಪುರ) ಕ್ರಿ.ಶ. 1754 ; ಹಿರಿಯೂರು 53 (ಗೌಡನಹಳ್ಳಿ). ಕ್ರಿ.ಶ. 175೬. ಇತ್ಯಾದಿ

95 *The Genealogy of the Madakere Nayakas of Citradurga.* Journal of the University of Bombay. Vol. VIII, Part 4. January 1940. p. 17

96 ಮೈ. ಆ. ರಿ., 1947–56, ಪು. 65–66

97 ವಿವರಗಳಿಗೆ : ಲಕ್ಷ್ಮಣ ತೆಲಗಾವಿ : ಚಿತ್ರದುರ್ಗ ರಾಜಾ ಮದಕರಿನಾಯಕನ ಗೌಡನ ಹಳ್ಳಿ ಶಾಸನ : ಮರುಪರಿಶೀಲನೆ, ಇತಿಹಾಸ ದರ್ಶನ, 1–1, 1986. ಪು. 62–75

ಕಾವಲುಪಡೆಯ ಮುಖ್ಯಸ್ಥ (ಕಾಯಿ) ಆಗಿ ನೇಮಕಗೊಂಡಿದ್ದನೆಂಬುದಾಗಲೀ ಆತನ ಪರವಾಗಿ ತಾನೇ ದಾನ ನೀಡುವಷ್ಟು ಅಧಿಕಾರ ಪಡೆದಿದ್ದನೆಂಬುದಾಗಲೀ ನಿರಾಧಾರ ವಾದುದು ಹಾಗೂ ಸ್ವಕಪೋಲಕಲ್ಪಿತ ಸಂಗತಿಯಿಂದ ಕೂಡಿದುದು. ಮೇಲೆಯೇ ಹೇಳಿದಂತೆ, ರಾಜಾ ಮದಕರಿನಾಯಕನು ದುರ್ಗದ ಸಿಂಹಾಸನವನ್ನು ಏರುವ ವೇಳೆಗೆ ಆತನಿಗಿನ್ನೂ 12 ವರುಷದ ಪ್ರಾಯ. ರಾಜ್ಯಭಾರದಂತಹ ಗುರುತರ ಹೊಣೆ ಹೊರುವ ಶಕ್ತಿ–ಯುಕ್ತಿಗಳಾವುವೂ ಆಗ ಆತನಿಗಿರಲಿಲ್ಲವೆನ್ನಬಹುದು. ಆದುದರಿಂದಲೇ ಆತನ ಪರವಾಗಿ ಹಿರಿಯ ಮದಕರಿನಾಯಕನ (ಕ್ರಿ.ಶ. 1721–1748) ನಾಯಕಿತಿಯೂ (ಇಮ್ಮಡಿ) ಕಸ್ತೂರಿ ರಂಗಪ್ಪನಾಯಕನ (ಕ್ರಿ.ಶ. 1748–1754) ತಾಯಿಯೂ ಆಗಿದ್ದ ಓಬವ್ವನಾಗತಿಯು ಎರಡು ವರುಷಗಳ ಕಾಲ ದುರ್ಗದ ಸರ್ವಾಧಿಕಾರಿಣಿ ಯಾಗಿದ್ದು ಆಳ್ವಿಕೆ ನಡೆಸಿದಳು. ದುರ್ಗದ ಅರಸನಾಗಿ ತಾನು ಕಿರೀಟ ಧರಿಸಿಕೊಂಡ ವರುಷವೇ ಅಂದರೆ ಕ್ರಿ.ಶ. 1754ರಲ್ಲಿ, ಈ ಮದಕರಿಯು ತನ್ನ 'ಮಹಾಮಾತೋಶ್ರೀ' ಓಬವ್ವನಾಗತಿಯ ಸಮ್ಮುಖದಲ್ಲಿ, ಕಂಗಳರಂಗದಾಸನ ವಂಶದ ಹೊಂನಿಕೆಂಚಿಯ ಮಗ ಹೊರಕೆರೆರಂಗಧಾಮನ ದಡಿಗೆದಾಸನಿಗೆ ಹೊರಕೆರೆದೇವರಪುರ ಕಸಬೆಯಲ್ಲಿ ಭೂದಾನಮಾಡಿ ಶಿಲಾಶಾಸನ ಬರೆಯಿಸಿಕೊಟ್ಟನು.[98] ಈ ಶಾಸನದಲ್ಲಿ ಕಂಡರಿಸ ಲಾಗಿರುವ 'ತಾಯಿ' ಎಂಬ ಪದವನ್ನು ಲೂಯಿರೈಸ್ ಅವರು 'ಕಾಯಿ' ಎಂದು ಓದಿ, 'guard' ಎಂದು ಅನುವಾದಿಸಿದುದರಿಂದ, ಅದನ್ನು 'ಕಾವಲುಪಡೆಯ ಮುಖ್ಯಸ್ಥ' ನೆಂದು ತಪ್ಪಾಗಿ ಗ್ರಹಿಸಿ ವ್ಯಾಖ್ಯಾನಿಸಲು ಇತರರಿಗೆ ಆಸ್ಪದವಾಯಿತು.

ಹೊರಕೆರೆದೇವರಪುರದ ಶಾಸನವನ್ನು ಈಗ ಸ್ವಯಂ ಪರಿಶೀಲಿಸಲಾಗಿದ್ದು, ಇಲ್ಲಿಯ 'ತಾಯಿ' ಎಂಬ ಪ್ರಯೋಗವು ಓಬವ್ವನಾಗತಿಯನ್ನು ನಿರ್ದೇಶಿಸುತ್ತದೆಂಬು ದನ್ನೂ ಕ್ರಿ.ಶ. 1756ರಲ್ಲಿ ಆಕೆ ಕಾಲವಾಗಲು ಆಕೆಗೆ ಪುಣ್ಯವಾಗಲೆಂದು ರಾಜಾ ಮದಕರಿನಾಯಕನು ಗೌಡನಹಳ್ಳಿಯನ್ನು ಹಿರಿಯೂರಿನ ಅನ್ನಛತ್ರದ ಮಠಕ್ಕೆ ಧಾರಾದತ್ತವಾಗಿ ಬಿಟ್ಟುಕೊಟ್ಟನೆಂಬುದನ್ನೂ ಗೌಡನಹಳ್ಳಿಯ ಶಾಸನದಲ್ಲಿ ಆಕೆಯನ್ನು 'ಮಹಾಮಾತೋಶ್ರೀ' ಎಂದು ಸೂಚ್ಯವಾಗಿ ಕರೆದಿದೆಯೆಂಬುದನ್ನೂ ಈ ಶಾಸನಕ್ಕೆ ಹೊರಕೆರೆದೇವರಪುರದ ಶಾಸನವು ಪೂರಕವಾಗಿದೆಯೆಂಬುದನ್ನೂ ಮೊತ್ತಮೊದಲ ಬಾರಿಗೆ ಶೋಧಿಸಿ ಬೆಳಕಿಗೆ ತರಲಾಗಿದೆ.[99]

ಕ್ರಿಸ್ತಶಕ 1779ರಲ್ಲಿ ಹೈದರ್‌ಆಲಿಯು ಚಿತ್ರದುರ್ಗ ಸಂಸ್ಥಾನದ ವಿರುದ್ಧ ಹೂಡಿದ ಕಡೆಯ ಯುದ್ಧದಲ್ಲಿ ರಾಜಾ ಮದಕರಿನಾಯಕನನ್ನು ಸೆರೆಯಾಳನ್ನಾಗಿಸಿ ಶ್ರೀರಂಗಪಟ್ಟಣಕ್ಕೆ ಸಾಗಿಸಿದನೆಂಬ ಸಂಗತಿಯು ಸಮಕಾಲೀನವಾದ ಎಲ್ಲ ದಾಖಲೆ

98 ಎ.ಕ., 11, ಹೊಳಲ್ಕೆರೆ 54

99 ನೋಡಿ: ಇತಿಹಾಸ ದರ್ಶನ, 1–1, ಪು. 68–70; ಈ ಶೋಧನೆಯನ್ನು ಕೈ ಗೊಳ್ಳಲು ಪ್ರೇರೇಪಿಸಿದ ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನ ಇತಿಹಾಸ ಉಪನ್ಯಾಸಕ ರಷೀದ್. ಮಹ್ಮದ್ ಜಫ್ರುಲ್ಲಾ ಅವರಿಗೆ ಕೃತಜ್ಞನಾಗಿದ್ದೇನೆ.

ಗಳಲ್ಲಿಯೂ ಉಕ್ತವಾಗಿದೆ. ಚರಿತ್ರೆಕಾರರು ಸಹ ಅದನ್ನು ಸಮರ್ಥಿಸಿರುವರು. ಆದರೆ ಚಿತ್ರದುರ್ಗ ಅರಸರ ಚರಿತ್ರೆಯನ್ನಾಧರಿಸಿ ರಚನೆಗೊಂಡ ಕಾದಂಬರಿಗಳಲ್ಲಿ ಈ ಸಂದರ್ಭವು ತಿರುಚಲ್ಪಟ್ಟಿರುವುದು ವಾಸ್ತವ ಸಂಗತಿ. ಮೂಲಚರಿತ್ರೆಗೆ ಸಂಬಂಧವೇ ಇಲ್ಲದಿರುವ ರೀತಿಯಲ್ಲಿ ಹಲವಾರು ಸೃಜನಸಾಹಿತ್ಯ ಕೃತಿಗಳು ಹೊರಬಿದ್ದಿವೆಯೆಂಬು ದನ್ನೂ ಪ್ರಾಜ್ಞರು ಬಲ್ಲರು. ಆದ್ದರಿಂದ ಇಂತಹ ಗೊಂದಲ ಸೃಷ್ಟಿಸುವಲ್ಲಿ ಕಾದಂಬರಿ ಕಾರರು ನೇರ ಹೊಣೆಗಾರರೇ ವಿನಾ ಚರಿತ್ರಕಾರರಲ್ಲವೆಂಬ ಅಂಶವನ್ನುಸರಿಯಾಗಿ ಗ್ರಹಿಸುವುದು ಅಗತ್ಯ. ದುರ್ಗದ ಚರಿತ್ರೆಗೆ ಸಂಬಂಧಿಸಿದ ಇಂತಹ ಕೆಲವು ಅಂಶಗಳನ್ನು ಸ್ಥೂಲವಾಗಿಯಾದರೂ ಈಗಾಗಲೇ ಚರ್ಚಿಸಿದೆ.[100]

6. ಕಾಮಗೇತಿ ಅರಸರ ರಾಜಲಾಂಛನವಾವುದು? ಇವರ ಧ್ವಜಲಾಂಛನ ಮತ್ತು ರಾಜಲಾಂಛನಗಳು ಒಂದೇ ಆಗಿದ್ದುವೇ? ಈ ಬಗೆಗೆ ಖಚಿತವಾಗಿ ತಿಳಿದು ಬರುವುದಿಲ್ಲ. ಚಿತ್ರದುರ್ಗ ಬೆಟ್ಟದ ಒಂದು ದೊಡ್ಡ ಟೇಕಡಿ (ಝಾಂಡಾ ಬತೇರಿ ?) ಮೇಲೆ 'ಕುಸುಂಬಿ ಝಾಂಡ್ಯಾ'ವನ್ನು ನಿಲ್ಲಿಸಲಾಗಿದ್ದಿತೆಂಬ ಬಗೆಗೆ ಹಾಗೂ ಲಡಾಯಿ ಮಾಡುವ ಸಂದರ್ಭದಲ್ಲಿ ದುರ್ಗದ ಸೇನೆ ಅಥವಾ ದಂಡು ಬಿಡಾರ ಹೂಡಿದ ಸ್ಥಳದಲ್ಲಿ 'ಚಂದ್ರಗಾವಿ ಝಾಂಡಾ'ವನ್ನು ನಿಲ್ಲಿಸಲಾಗುತ್ತಿದ್ದ ಬಗೆಗೆ ದಾಖಲೆಗಳು ಒದಗಿಸುವ ಸೂಕ್ಷ್ಮವಾದ ವಿವರಗಳ[101] ವಿನಾ ಈ ಅರಸರ ಧ್ವಜದ ಬಗೆಗೆ ಸದ್ಯಕ್ಕೆ ಏನೂ ತಿಳಿಯದು.

ಹನುಮಂತ ಮತ್ತು ಗರುಡ—ಈ ಈರ್ವರು ಭಾಗವತಶ್ರೇಷ್ಠರನ್ನು ಈ ಅರಸರು ಪೂಜಿಸಿ ಗೌರವಿಸಿರುವ ಸಾಧ್ಯತೆಯನ್ನು ಶಂಕಿಸುವಂತಿಲ್ಲವೆಂಬುದಕ್ಕೆ ಚಿತ್ರ ದುರ್ಗ ಬೆಟ್ಟದ ಮೇಲೆ ಕಂಡುಬರುವ ಸ್ಮಾರಕರೂಪದ ಸಾಕ್ಷ್ಯವು ಸಮರ್ಥನೆ ನೀಡು ತ್ತದೆ. ಗೋಪಾಲಕೃಷ್ಣದೇವರ ಗುಡಿ ಹಾಗೂ ಹೊಂಡದ ಆವರಣವನ್ನು ತಲುಪುವ ಮೊದಲು ಮಾರ್ಗದಲ್ಲಿ ಅಡ್ಡ ಹಾಯ್ದಿರುವ ಕೋಲೆಸಾಲೊಂದರ ದ್ವಾರವನ್ನು ಪ್ರವೇಶಿಸಬೇಕಾಗಿದ್ದು, ಅದರ ಮಂಟಪಕ್ಕೆ ಹೊಂದಿಕೊಂಡಂತೆ ಎಡಬಲಗಳಲ್ಲಿಯೂ ಹುಟ್ಟುಬಂಡೆಯ ಮೇಲಿರುವ ಹನುಮಂತ ಮತ್ತು ಗರುಡರ ಉಬ್ಬುಗೆತ್ತನೆಗಳು ಗಮನ ಸೆಳೆಯುತ್ತವೆ. ದ್ವಾರದ ಹಿಮ್ಮುಖದಲ್ಲಿ ಬಲತುದಿಯ ಬಂಡೆಯ ಮೇಲೆ ಮೂಡಿಸಲಾಗಿರುವ ಗರುಡ ಮೂರ್ತಿಯ ಕೆತ್ತನೆಗೆ ರಕ್ಷಣೆಯಾಗಿ ಹುಟ್ಟುಬಂಡೆಗೆ ಹೊಂದಿಸಿದಂತೆ ಚಪ್ಪಡಿಕಲ್ಲುಗಳನ್ನಿಟ್ಟು ಗೂಡಿನಂತಹ ಪುಟ್ಟ ಗುಡಿಯನ್ನು ಸೃಷ್ಟಿಸ ಲಾಗಿದೆ. ಇದರ ಎದುರಿಗಿರುವ ಹನುಮಂತನ ಗುಡಿಯು ಗರುಡನ ಗೂಡಿಗಿಂತಲೂ ದೊಡ್ಡದಿದ್ದು, ಇದನ್ನು ಈ ದ್ವಾರದ ಮೂಲರಚನೆಯಲ್ಲಿಯೇ ಅಳವಡಿಸಿಕೊಂಡಂತೆ ನಿರ್ಮಿಸಲಾಗಿದೆ. ಈ ಅರಸರಿಗೆ ಈ ದೈವದ ಬಗೆಗೆ ಇದ್ದ ಅಧಿಕ ಭಕ್ತಿಯೇ ಇದಕ್ಕೆ

---

100 ನೋಡಿ : ಚಿತ್ರದುರ್ಗ ಇತಿಹಾಸ ಮತ್ತು ಸ್ಥಳೀಯ ಲೇಖಕರು (ಲೇಖಾಂಕ 3), ತರಳಬಾಳು, ಸಂಚಿಕೆ 28, ಜುಲೈ 1982, ಪು. 2–4

101 ಉದಾಹರಣೆ : ಚಿತ್ರದುರ್ಗದ ಬಖೈರು, ಪು. 43–44, 66, 97

ಕಾರಣವಾಗಿದ್ದಿರಬಹುದು. ಆದರೆ ಗರುಡ–ಹನುಮರ ಈ ಕೆತ್ತನೆಗಳ ಸಂಬಂಧದಲ್ಲಿ ಹೇಳಬೇಕಾದ ಮುಖ್ಯ ಸಂಗತಿಯೆಂದರೆ, ಈ ದ್ವಾರವು ನಿರ್ಮಾಣಗೊಳ್ಳುವುದಕ್ಕಿಂತ ಸಾಕಷ್ಟು ಕಾಲದ ಹಿಂದೆಯೇ ಇವು ಇಲ್ಲಿಯ ಬಂಡೆಗಳ ಮೇಲೆ ಮೂಡಿದ್ದಿರಬೇಕೆನ್ನು ವುದು ಈ ಗುಡಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ವೇದ್ಯವಾಗುತ್ತದೆ. ಕಾಮ ಗೇತಿ ಅರಸರ ಆಳ್ವಿಕೆಯ ಪೂರ್ವದಲ್ಲೇ ಇವುಗಳನ್ನು ಕೆತ್ತಿರುವ ಸಾಧ್ಯತೆಯಿದೆ. ಇಂದಿಗೂ ಈ ದ್ವಾರಕ್ಕೆ 'ಗರುಡಾಂಜನೇಯ ಬಾಗಿಲು' ಎಂಬ ಹೆಸರೇ ಪ್ರಚಾರದಲ್ಲಿದೆ.

ಆದರೆ ಈ ಹನುಮ ಮತ್ತು ಗರುಡ ದೇವರುಗಳನ್ನು ಮಾಡಿಸಿ ಪ್ರತಿಷ್ಠಾಪಿಸಿ ದವರಲ್ಲಿ ಹರತಿಯ ಮಲ್ಲಯ್ಯನಾಯಕನೆಂಬವನು ಮೊದಲಿಗನೆಂಬುದಾಗಲೀ ಕಾಮ ಗೇತಿ ಮತ್ತು ಹರತಿ ನಾಯಕರ ಮಧ್ಯೆ ಸಂಬಂಧವಿದ್ದು, ಅವರಿಗೆ ಹನುಮ ಮತ್ತು ಗರುಡ ದೇವರುಗಳು ಮೂಲ ಮನೆದೇವರುಗಳಾಗಿದ್ದುವೆಂಬುದಾಗಲೀ ಶೋಧಿಸಿ ಸಮರ್ಥಿಸಲು ಯಾವ ಆಧಾರಗಳನ್ನು ಅವಲಂಬಿಸಬೇಕೋ ತಿಳಿಯದು! ಹಾಗೆಯೇ, ಕಾಮಗೇತಿ ಅರಸರ 'ಹನುಮದ್ಗರುಡ ಮುದ್ರೆ' ಸಹ ಶೋಧಕರ ಗಮನಕ್ಕೆ ಬಾರದೆ ನಿಗೂಢವಾಗಿಯೇ ಉಳಿದಿದೆ. ಆದರೆ ಇಲ್ಲಿಯ ಗಮನಾರ್ಹ ಸಂಗತಿಯೆಂದರೆ, ಸುರಪುರದ ಅರಸರು ಹನುಮಧ್ವಜ (ಹನುಮ ಪತಾಕೆ)ವನ್ನು ಹೊಂದಿದ್ದರು.[102] ಶಕ್ತಿವಂತನೂ ಸಂಬುಗೆಯ ಭಂಟನೂ ಸಾಹಸ ಕಾರ್ಯಗಳಿಗೆ ಸ್ಫೂರ್ತಿದಾಯಕನೂ ಆಗಿರುವ ಪುರಾಣಪುರುಷ ಹನುಮಂತನು ಬೇಡಕೂಟದ ದೊರೆಗಳಿಗೆ ಅಚ್ಚುಮೆಚ್ಚಿನ ದೈವನಾಗಿದ್ದನೆಂಬುದನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ.

* * *

ಚಿತ್ರದುರ್ಗದ ಕಾಮಗೇತಿ ಅರಸರ ಚರಿತ್ರೆಯ ಶೋಧನಕಾರ್ಯವು ಮೊದಲಿ ಗಿಂತಲೂ ಸಮಗ್ರವಾಗಿ ಹಾಗೂ ನಿರ್ಣಯಯುತವಾಗಿ ನಡೆಯಲಾರಂಭಗೊಂಡಿದ್ದು, ಈ ಶೋಧನೆಯ ಬೆಳಕಿನಲ್ಲಿ ಈವರೆಗೆ ಕಂಡುಬಂದಿರುವ ಲೋಪಗಳನ್ನೂ ಅಸ್ಪಷ್ಟ ಸಂಗತಿಗಳನ್ನೂ ನಿವಾರಿಸಲು ಹಾಗೂ ಸರಿಪಡಿಸಲು ಯತ್ನಿಸಲಾಗುತ್ತಿದೆ. ಆದರೆ ಆಧಾರರಹಿತ, ಅಪಕ್ವ ಹಾಗೂ ಪೂರ್ವಗ್ರಹ ದೃಷ್ಟಿಯ ಬರವಣಿಗೆಗಳು ಹುಟ್ಟಿ ಕೊಂಡು ಆಯಾ ಕ್ಷೇತ್ರದ ಅಭ್ಯಾಸಿಗಳನ್ನೂ ಆಸಕ್ತರನ್ನೂ ದಿಕ್ಕುತಪ್ಪಿಸುವಂತಾದಾಗ, ಅಂತಹ ಅಪಾಯದಿಂದ ಅವರನ್ನು ಪಾರುಗಾಣಿಸಲು ಶೋಧಕರು ತಕ್ಕಮಟ್ಟಿನ ಪ್ರಯತ್ನ ಮಾಡಬೇಕಾದುದು ಅನಿವಾರ್ಯ. ಸಹಜ ಶ್ರದ್ಧಾಸಕ್ತಿಯುತ ತಲಸ್ಪರ್ಶಿ ಅಧ್ಯಯನ ಕೈಗೊಂಡ ನಂತರವೂ ಕೆಲವೊಮ್ಮೆ ಸಂಬಂಧಿಸಿದ ವಿಷಯದಲ್ಲಿ ಖಚಿತಾಂಶ ಗಳನ್ನು ಶ್ರುತಪಡಿಸುವುದು ದುಸ್ತರವಾದುದೆಂದೆನಿಸಬಹುದು. ಆದರೆ ವಿವೇಚನೆ ರಹಿತ ಹಾಗೂ ಅಸಡ್ಡೆಯ ನಿರ್ಣಯಗಳು ಉಂಟುಮಾಡುವ ಆಭಾಸವನ್ನು ಪರಿಹರಿಸುವ ಮಟ್ಟಿಗಾದರೂ ಅದರಿಂದ ಸಾಧ್ಯವಾಗುವುದು.

---

102 ಸುರಪುರ ಸಂಸ್ಥಾನದ ಇತಿಹಾಸ, ಪು. 87

ಟಿ. ಬಿ. ಬಸವರಾಜ್

ಅನುಭಾವ: ಒಂದು ವಿವೇಚನೆ

ಅನುಭಾವ ಎಂಬ ಪದವು ಆಧ್ಯಾತ್ಮಿಕತೆಯಲ್ಲಿ ಅತಿ ಹೆಚ್ಚು ರೂಢಿಯಲ್ಲಿರುವ ಶಬ್ದ. ಆಂಗ್ಲಭಾಷೆಯಲ್ಲಿ 'ಮಿಸ್ಟಿಸಿಸಂ' ಎಂದು ಕರೆಯಲ್ಪಡುವ ಈ ಶಬ್ದ ಅನೇಕ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ. 'ತಪ್ಪಾದ ಆಧ್ಯಾತ್ಮಶಾಸ್ತ್ರ' (Bad Metaphysics)[1] ಎಂದೂ ಇದನ್ನು ಅರ್ಥೈಸುವುದುಂಟು ! ಈ ಅನುಭಾವವನ್ನು ಪವಾಡ, ಮೋಹಿನಿವಿದ್ಯೆ, ಹಗಲುಕನಸು, ಮಾಯಾ, ಮಂತ್ರ, ಸ್ತಂಭನ ಇತ್ಯಾದಿ ಅರ್ಥಗಳಿಂದ ಅರ್ಥೈಸುತ್ತಾ ಬಂದಿದ್ದಾರೆ. ಆದರೆ ಇವು ಯಾವುವೂ ಅನುಭಾವದ ನೈಜ ಅರ್ಥ ತಿಳಿಸಲು ಅಸಮರ್ಥವಾಗಿವೆ ಎನ್ನುವ ಅಂಶ ಗಮನಾರ್ಹ.

ಈ ಜಗತ್ತಿನಲ್ಲಿ ಆವಿಷ್ಕಾರಗೊಂಡಿರುವ ದೈವ ನಿಯಮಗಳನ್ನು ಭಕ್ತಿ ಮತ್ತು ಶ್ರದ್ಧೆಗಳ ತಳಹದಿಯಲ್ಲಿ ಮನನಮಾಡಿ ಆ ನಿಯಮಗಳನ್ನು ದೈನಂದಿನ ಜೀವನಕ್ಕೆ ಆಧಾರ ಸೂತ್ರಗಳನ್ನಾಗಿ ಮಾಡಿಕೊಂಡು ತನ್ಮೂಲಕ ಆವಿರ್ಭವಿಸುವ ಪರಮಾನಂದದಲ್ಲಿ ಮುಳುಗಿ, ಅಲ್ಪತನವೆಲ್ಲವನ್ನೂ ಮರೆತು ದೈವ ಸಾಯುಜ್ಯವನ್ನು ಪಡೆದುಕೊಳ್ಳುವ ಬಗೆಯೇ ಅನುಭಾವ; ಅಪ್ಪಟ ಪರಿಶುದ್ಧ ಆಧ್ಯಾತ್ಮಿಕ ಜೀವನಶಾಸ್ತ್ರವೇ ಅನುಭಾವ. ಇದೇ ನೈಜ ಅರ್ಥವೇ ಹೊರತು ಇತರ ಸಾಮಾನ್ಯ ತಪ್ಪು ಅರ್ಥಗಳಲ್ಲ ! ಎಲ್ಲಕ್ಕೂ ತಳಹದಿಯಾಗಿ ಎಲ್ಲವನ್ನೂ ಮೀರಿನಿಂತಿರುವ ಸರ್ವಶಕ್ತ ಭಗವಂತನೇ ಅನುಭಾವಿಯ ಸ್ಫೂರ್ತಿಯ ನೆಲೆ. ಪ್ರೇಮದ ಅತ್ಯುನ್ನತ ಸ್ಥಿತಿ, ಮಹಾಮೇರು ! ಪ್ರೇಮವೇ ಅನುಭಾವಿಯ ಸರ್ವಸಂಪತ್ತು. ಜೀವ ಸರ್ವಸ್ವ ಭಗವಂತ ಒಬ್ಬನೆ, ಆತ ಪ್ರೇಮ ಸ್ವರೂಪಿ, ದಯಾಳು, ಕೃಪಾಪರಿಪೂರ್ಣ. ಆತನಿಗೆ ಯಾವುದರ ಭೇದವೂ ಇರದು. ಎಲ್ಲವನ್ನೂ ಒಂದಾಗಿ ಕಂಡು ಸರ್ವರಿಗೆ ಒಲಿಯುವವನು, ಬೆಳಕು ನೀಡುವವನು.

ವಾತ್ಸಲ್ಯಪೂರಿತ, ಪ್ರೇಮದ ಪರಿಪೂರ್ಣಸ್ವರೂಪಿಯಾದ ಆತನಲ್ಲಿ ಏಕಚಿತ್ತದಿಂದ ತನ್ಮಯರಾಗಿ ಎಲ್ಲ ಬಗೆಯ ಅಲ್ಪತನದಿಂದ ದೂರಾಗಿ, ಅನಂತಸಾಗರದ ಆಳದಲ್ಲಿ

1 ಇ. ಅಂಡರ್‌ಹಿಲ್ : ಮಿಸ್ಟಿಸಿಸಂ: ಪೀಠಿಕೆ. ಪುಟ–10

ಮುಳುಗಿ ಅದರಿಂದ ಉಂಟಾಗುವ ಮಹದಾನಂದವನ್ನು ಸವಿಯಿರಿ. ಜೀವನದ ಹಾದಿಯಲ್ಲಿ ಬೆಳಕನ್ನು ಕಾಣಿರಿ. ಈ ವಿಷಯಗಳ ಬಗೆಗಿನ ಪ್ರೇಮುವನ್ನು ಭಗವಂತ ನೆಡೆಗೆ ಕೊಂಡೊಯ್ದು ಉದಾತ್ತೀಕರಿಸಿ ; ಸಕಲ ಕಲ್ಯಾಣ ಗುಣಪರಿಪೂರ್ಣವಾದ ಆ ಭಗವಂತನ ನಿರಂತರ ಕೃಪಾದೃಷ್ಟಿಯಲ್ಲಿ ಬದುಕಿ ಎನ್ನುವುದು ಅನುಭಾವಿಗಳ ಒಟ್ಟಾರೆ ಬೋಧೆ.

ಪರಮ ಪವಿತ್ರನಾದ ದೇವರು ಅಥವಾ ತತ್ವ, ಕ್ರೈಸ್ತಧರ್ಮ ಹೇಳುವ ಭಗವಂತ ನಾಗಿರಬಹುದು, ವಿಶ್ವಾತ್ಮಕವಾದದಲ್ಲಿ ಹೇಳಿರುವ ವಿಶ್ವಾತ್ಮನಾಗಿರಲೂಬಹುದು ಅಥವಾ ತತ್ವಶಾಸ್ತ್ರ ಹೇಳುವ ಪರಬ್ರಹ್ಮನೂ ಆಗಿರಬಹುದು. ನಾಮಗಳು ಇಲ್ಲಿ ಅಮುಖ್ಯ. ಎಷ್ಟು ವಿಧದ ನಾಮ ಬೇಕಾದರೂ ಇರಬಹುದು. ಆದರೆ ಇಂತಹ ದೇವರೊಡನೆ ಭಾವಾತ್ಮಕ ಐಕ್ಯವೇ '' ಅನುಭಾವ '' ಎಂದು ಅಂಡರ್‌ಹಿಲ್[2] ವಿವರಿಸುತ್ತಾರೆ.

ಭಗವಂತನೊಡನೆ ಐಕ್ಯ ಎಂಬುದನ್ನು ಕೇವಲ ಕುಹಕವಾಗಿ, ಕುಚೋದ್ಯವಾಗಿ ನೋಡಕೂಡದು. ಶುಷ್ಕ ಒಣತರ್ಕ ಇಲ್ಲಿ ಅಪ್ರಯೋಜನಕಾರಿ. ಬರೀ ಬುದ್ಧಿಯ ಸ್ತರ ದಲ್ಲಿ ನಿಲ್ಲಿಸದೆ ಅನುಭವಗಮ್ಯವಾಗಿ ತಿಳಿಯಬೇಕು. ಇದೇ ಅನುಭಾವದಲ್ಲಿ ಬಹು ಮುಖ್ಯವಾದ ಅಂಶವಾಗಿದೆ ಎಂದು ಪ್ಲೋಟೈನಸ್[3] ಎಂಬ ಅನುಭಾವಿ ಅಭಿಪ್ರಾಯ ಪಡುತ್ತಾನೆ.

ದೇವರಿದ್ದಾನೆಯೇ ಎನ್ನುವ ಅನುಮಾನದ ಪ್ರಶ್ನೆಗೆ ಅನುಭಾವದಲ್ಲಿ ಅವಕಾಶವೇ ಇಲ್ಲ. ದೇವರು ಸ್ವಯಂಸಿದ್ಧತತ್ವ. ದೇವರ ಅಸ್ತಿತ್ವದ ಬಗೆಗೆ ವಿಚಾರಣೆಮಾಡುವ ತಾತ್ವಿಕನ ಸಂದೇಹಕ್ಕೆ ಅನುಭಾವಿ ನಗುತ್ತಾನೆ. ಸೋದರ, ನಿನ್ನ ಅಸ್ತಿತ್ವದಷ್ಟೇ ದೇವರ ಅಸ್ತಿತ್ವ ಸಹ ಸತ್ಯವಾದದು ಹಾಗೂ ಖಂಡಿತವಾದುದು. ನಾನು ನಿನ್ನನ್ನು ಹೇಗೆ ನೋಡಿರುವೆನೋ ಹಾಗೆಯೇ ದೇವರನ್ನು ಸಹ ಕಂಡಿದ್ದೇನೆ ಎಂದು ಕೆಚ್ಚೆದೆಯ ಮಾತುಗಳನ್ನಾಡುತ್ತಾನೆ. ಅನಂತವಾದ, ಅತ್ಯಂತ ಶಾಂತತೆಯಿಂದ ಒಡಗೂಡಿದ ಸತ್ಯವೊಂದು ಅಸ್ತಿತ್ವದಲ್ಲಿದೆ, ಅದೇ ಭಗವಂತ ; ಅದರ ಬಗ್ಗೆ ವಿಶ್ವಾಸ ನಂಬುಗೆ ಇಡಿ. ನೀವು ನಿಸ್ವಾರ್ಥ ಪ್ರೇಮಿಗಳಾಗಿ, ನಿಸ್ವಾರ್ಥ ಆಸೆಗಳ ಬುನಾದಿಯೇ ಪ್ರೇಮ ವಾಗಲಿ. ಆ ಪ್ರೇಮ ಇತರ ಸೋದರ ಮಾನವರ ಆಶೋತ್ತರಗಳನ್ನು ಬಿಂಬಿಸಲಿ. ಆಗಲೇ ನೀವು ತಪ್ಪಾಗಿ ಗ್ರಹಿಸಿರುವ ಬಂಧನದಿಂದ ಹೊರಬರುತ್ತೀರಿ, ನಿಜವಾಗಿ ಸ್ವತಂತ್ರರಾಗುವಿರಿ ಎಂದು ಪ್ಲೋಟೈನಸ್ ಸೇರಿದಂತೆ ಎಲ್ಲಾ ಅನುಭಾವಿಗಳೂ ಜಗತ್ತಿನ ಉದ್ಧಾರದ ಕಡೆಯೂ ಗಮನಾರ್ಹ ಮಾತುಗಳಾಡುತ್ತಾರೆ.

ಈಗ ಅನುಭಾವದ ಗುಣ ಲಕ್ಷಣಗಳ ಬಗ್ಗೆ ಗಮನಹರಿಸಬಹುದು.

---

2 ಇ. ಅಂಡರ್‌ಹಿಲ್ : ಮಿಸ್ಟಿಸಿಸಂ–ಪೀಠಿಕೆ. ಪುಟ–10

3 ಅದೇ ಪುಟ–10

ಅನುಭಾವದ ಗುಣಲಕ್ಷಣಗಳ ಬಗ್ಗೆ ವಿವೇಚಿಸುವುದಾದರೆ—

(ಅ) ಅನಿರ್ವಚನೀಯತೆ : (Inffability) : ತನಗಿಂತ ಭಿನ್ನವಾದ[4] ಅತೀತವಾದ ಆತ್ಯಂತಿಕ ಸತ್ಯ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಯಾವುದೇ ಅನುಭಾವಿಯು, ತನ್ನ ಅನುಭವವನ್ನು ಪರಿಪೂರ್ಣವಾಗಿ ಯಾವುದೇ ರೀತಿಯಲ್ಲೂ ವ್ಯಕ್ತಪಡಿಸಲು ಅಸಾಧ್ಯ. ಮಾತು ಅಥವಾ ಭಾಷೆ ಇಲ್ಲಿ ಒಂದು ಅಸಮರ್ಥ ಉಪಕರಣವೆಂದೇ ಎಲ್ಲ ಅನುಭಾವಿಗಳೂ ಅಭಿಪ್ರಾಯ ಪಡುತ್ತಾರೆ. ಅನುಭಾವದ ಒಳ ತಿರುಳು, ನೈಜ ಅರ್ಥವಂತಿಕೆಗೆ ಸ್ವತಃ ಅನುಭವಿಸಿಯೇ ತೀರಬೇಕೆಂದು ಅವರು ಒಕ್ಕೊರಲಿನಿಂದ ತೀರ್ಮಾನಿಸುತ್ತಾರೆ. ಇಂತಹ ದಿವ್ಯಾನಂದವನ್ನು ಸಮರ್ಥವಾಗಿ ವ್ಯಕ್ತಪಡಿಸಲು ಇರುವ ಅಡಚಣೆಗಳನ್ನು ಕೆಲವು ಉದಾಹರಣೆಗಳ ಮೂಲಕ ತಿಳಿಸಬಹುದು. ಪ್ರಣಯದ ವಿಷಯ ಪ್ರಣಯಿಗೆ ತಿಳಿಯುವುದೇ ಹೊರತು, ಮುಗ್ಧ ಮಗುವಿಗೆ ಕಿಂಚಿತ್ತಾದರೂ ಅರ್ಥವಾಗಬಲ್ಲುದೆ? ಹಾಗೆಯೇ ಬಂಜೆಗೆ ಗರ್ಭಿಣಿಯ ಬೇನೆ ಹೇಗೆ ತಾನೆ ಗೊತ್ತಾಗಬಲ್ಲುದು? ಕತ್ತೆಯು ಕಸ್ತೂರಿವಾಸನೆಯ ಸವಿಯನ್ನು ಬಲ್ಲುದೆ? ಎಂದು ಶಿವಶರಣೆ ಅಕ್ಕಮಹಾದೇವಿ ಅನುಭಾವಿಯಲ್ಲದವನ ಮನಸ್ಥಿತಿಯನ್ನು ಕುರಿತು ಸೊಗಸಾಗಿ ಹೇಳುತ್ತಾಳೆ.

ಕೆಲವು ಸಲ ಅನುಭವಿಯಾದವನು ತನ್ನ ಅನುಭವದ ಪ್ರಖರತೆಯಲ್ಲಿ ವಿರೋಧಾಭಾಸದ ಮಾತುಗಳನ್ನು ಸಹ ಆಡುತ್ತಾನೆ. ಒಂದು ರೀತಿಯ ಅದಮ್ಯ ಶಕ್ತಿಯೇ ಅನುಭಾವಿಯಲ್ಲಿ ಆವಿಷ್ಕಾರಗೊಳ್ಳುತ್ತದೆ.

ಅನುಭಾವಿಯು ಎಂಥಾ ಮನಸ್ಥಿತಿಯಲ್ಲಿ ಇರುತ್ತಾನೆಂದರೆ, ತನ್ನಲ್ಲಿ ಉರಿಯುತ್ತಿರುವ 'ದೈವಿಕ ಬೆಂಕಿ' ತಾನು ತನ್ನ ಅನುಭವವನ್ನು ವ್ಯಕ್ತಪಡಿಸದಿದ್ದರೆ ತನ್ನನ್ನು ಸುಟ್ಟು ಹಾಕೀತು! ಎಂದೇ ಅನುಭಾವಿ ತಾನು ಅನುಭವಿಸುತ್ತಿರುವ ತನ್ನ ಅನುಭವವನ್ನು ಕುರಿತಾಗಿ ಹೇಳಿಕೊಳ್ಳುತ್ತಾನೆ.[5]

ತನ್ನ ಅನುಭವವನ್ನು ವ್ಯಕ್ತಪಡಿಸಲು ಆತ ಸಂಜ್ಞೆ ಮತ್ತು ಚಿಹ್ನೆಗಳನ್ನು ಒಳಗೊಂಡಿರುವ ಪದ್ಯಮಾಧ್ಯಮ ಅಥವಾ ಸಂಗೀತ ಮಾಧ್ಯಮಗಳನ್ನು ಆಶ್ರಯಿಸುತ್ತಾನೆ.[6] ಅನುಭಾವಿಯು ತನ್ನ ಅನುಭವವನ್ನು ಇತರರಿಗೆ ಅಷ್ಟೇ ಸಮರ್ಥವಾಗಿ ಪ್ರಕಟಗೊಳಿಸಲು ಅಸಾಧ್ಯ. ಅಂತಹ ಪ್ರಯತ್ನ ಕುರುಡನಾದವನಿಗೆ ಬಣ್ಣದ ಬಗ್ಗೆ ವಿವರಣೆ ಕೊಟ್ಟಂತೆಯೇ ಸರಿ! ಒಟ್ಟಿನಲ್ಲಿ ಅನುಭಾವಿಯ ತೀವ್ರತೆ, ಪ್ರಖರತೆ ಹಾಗೂ ಆಳವನ್ನು ವ್ಯಕ್ತಪಡಿಸಲು ಅನುಭಾವಿಯು ಬಳಸುವ ಭಾಷೆ ಸುಸಂಗತ, ಸಮರ್ಥ ಮಾಧ್ಯಮವಾಗ

4 ರುಡಾಲ್ಫ್ ಒಟ್ಟೋ—ದಿ ಐಡಿಯಾ ಆಫ್ ದಿ ಹೋಲಿ—ಪುಟ. 29–30.

5 ಇ. ಅಂಡರ್‌ಹಿಲ್—ಪೂರ್ವೋಕ್ತ—ಪುಟ. 25.

6 ಅದೇ—ಪುಟ 95.

ಲಾರದು. ಆದರೂ ಆತನು ಹೇಳುವ ವಿರೋಧಾಭಾಸದ ಉಕ್ತಿಗಳು ಸಂಜ್ಞೆ, ಸಂಗೀತ, ಇತ್ಯಾದಿ ಆತ ಅನುಭವಿಸಿದ ಅನುಭವವನ್ನು ಸೂಚಿಸುವ ಕೈಮರಗಳಿದ್ದಂತೆ. ಅವೇ ಆತನ ಅನುಭವದ ಆಳವಲ್ಲ.

(ಆ) ಪ್ರಜ್ಞಾ ಸ್ಥಿತಿ (Noetic Quality) : ಅನುಭಾವಿಯು ತನ್ನ ಅನುಭವವನ್ನು ಸಮರ್ಥವಾಗಿ ಭಾಷೆಯ ಮೂಲಕ ವ್ಯಕ್ತಪಡಿಸಲು ಅಸಮರ್ಥನಾಗಿದ್ದರೂ ತನಗಾದ ಅನುಭವ ಯಾವುದೇ ಭ್ರಮೆ ಎಂದು ಆತನಿಗನಿಸದು. ತನ್ನದು ಶುದ್ಧ ಅನುಭವ, ದೈವ ಕೃಪೆಯಿಂದಲೇ ಹಾಗಾಗಲು ಕಾರಣ ಎಂದೇ ಭಾವಿಸುತ್ತಾನೆ, ನಂಬಿಕೊಂಡಿರುತ್ತಾನೆ. ಸಂಶಯಕ್ಕೆ ಅವನಲ್ಲಿ ಎಡೆಯೆ ಇರದು, ಅಷ್ಟೊಂದು ವಿಶ್ವಾಸಪರುತ್ತದೆ. ಅನುಭಾವಿಯು ಅವನಿಗಿಂತ ಭಿನ್ನವಾದ ಶಕ್ತಿಯ ತೋಳ್ತೆಕ್ಕೆಯಲ್ಲಿ ಅವನನ್ನೇ ಮರೆತದ್ದೂ, ಅವನಲ್ಲಿ ಪ್ರೇಮಸಾಗರ ಉಕ್ಕಿಹರಿಸಿದ್ದು—ಇಂಥ ಒಂದೊಂದು ಅನುಭವಗಳೂ ಅವನಲ್ಲಿ ಆತ್ಮವಿಶ್ವಾಸ—ದೈವ ಭಕ್ತಿಗಳನ್ನು ಹೆಚ್ಚಿಸುತ್ತವೆ. ಜೊತೆಗೆ ಇಂತಹ ಅನುಭವಗಳ ಬಗ್ಗೆ ಗಾಢ ನಂಬಿಕೆ, ಸುಸ್ಪಷ್ಟ ಖಚಿತತೆ ಇರುತ್ತದೆ. ಅನುಭಾವಿಯ ಪ್ರತಿಯೊಂದು ಅಂಗದ ಚಲನೆಗೂ ಆ ಶಕ್ತಿಯೇ ಕಾರಣ ಎಂಬ 'ಆ ಶಕ್ತಿ'ಯ ಅಧಿಕಾರವಾಣಿಯನ್ನು ನಿರಾಕರಿಸಲಸಮರ್ಥವಾದ ಸ್ಥಿತಿಯನ್ನೇ 'ಪ್ರಜ್ಞಾಸ್ಥಿತಿ'[7] ಎಂದೇ ವಿಲಿಯಂ ಜೇಮ್ಸ್ ಹೆಸರಿಸುತ್ತಾನೆ.

(ಇ) ಕ್ಷಣಿಕತೆ (Transiency) : ಅನುಭಾವಿಯು ಅನುಭವದಲ್ಲಿ ಬಹಳ ಕಾಲ ನೆಲಸಿರಲಾರ. ಆತನ ದಿವ್ಯಾನಂದ ಅರ್ಧ ಅಥವಾ ಒಂದು ಘಂಟೆ. ಹೆಚ್ಚು ಎಂದರೆ ಎರಡು ಗಂಟೆಗಳ ಕಾಲ ಮಾತ್ರ ಇರುತ್ತದೆ. ನಂತರ ಅದು ವಿರಳವಾಗಿ ಕ್ರಮೇಣ ಮಾಯವಾಗುತ್ತದೆ. ಈ ದಿವ್ಯಾನಂದ ಹೆಚ್ಚು ಕಾಲ ಮುಂದುವರಿಯದಿರುವ ಬಗೆಯನ್ನೇ ವಿಲಿಯಂ ಜೇಮ್ಸ್ 'ಅಶಾಶ್ವತೆ ಅಥವಾ ಕ್ಷಣಿಕತೆ'[8] ಎಂದೇ ಕರೆಯುತ್ತಾನೆ. ಅನುಭಾವಿಯ ದಿವ್ಯಾನಂದ ಕ್ಷಣಿಕವಾದದ್ದಾದರೂ ಸಹ ಅದರ ಪ್ರಭಾವ ಅನುಭಾವಿಯು ಬದುಕಿರುವತನಕ ಸ್ಪಷ್ಟವಾಗಿ ಅಚ್ಚಳಿಯದೆ ಇರಬಲ್ಲುದು. ಇಂತಹ ಪ್ರಭಾವದಿಂದಲೇ ಅನುಭಾವಿಯು ತನ್ನ ಮುಂದಿನ ಭವಿಷ್ಯವನ್ನು ನಿರ್ಧರಿಸಿಕೊಳ್ಳಬಲ್ಲ. ಈ ರೀತಿಯ ಅನುಭವ ಮತ್ತೆ ಆಗಬಹುದು, ಅಥವಾ ಆಗದೆ ಇರಲೂಬಹುದು. ಆದರೆ ಒಮ್ಮೆ ಆದ ಅನುಭಾವದ ಪ್ರಭಾವದಿಂದ ಮಾತ್ರ ಆತ ದೂರವಿರಲು ಅಸಾಧ್ಯ.

(ಈ) ಅಪ್ರವರ್ತಕತೆ (Passivity) : ಅನುಭಾವಿಯ ದಿವ್ಯಾನಂದಕ್ಕೆ ಕಾರಣ ದೈವಶಕ್ತಿಯ ಕೃಪೆ. ಇಲ್ಲಿ ಅನುಭಾವಿಯ ಪ್ರಯತ್ನ ಅಮುಖ್ಯವಾಗುವಂತೆ, ಗೌಣವೂ

---

7 ವಿಲಿಯಂ ಜೇಮ್ಸ್—ದಿ ವರೈಟೀಸ್ ಆಫ್ ರಿಲಿಜಿಯಸ್ ಎಕ್ಸ್‌ಪೀರಿಯನ್ಸ್ (ದಿ ಮಾಡರ್ನ್ ಲೈಬ್ರರಿ) ಪುಟ–371

8 ವಿಲಿಯಂ ಜೇಮ್ಸ್—ಪುಟ–372

ಕೂಡ ಆಗುತ್ತದೆ. ದೈವ ಶಕ್ತಿಯ ಪ್ರೇರಣೆಯೇ ಮುಖ್ಯ. ಆ ಪ್ರೇರಣೆ ಇರದೆ ಒಂದು ಹುಲ್ಲು ಕಡ್ಡಿಯೂ ಅಲುಗಾಡದು. ಅಂತೆಯೇ ಪರಮಾನಂದವನ್ನು ಪಡೆಯು ವಲ್ಲಿ ಅನುಭಾವಿಯ ಪ್ರಯತ್ನಕ್ಕಿಂತ ದೈವೀಶಕ್ತಿಯ ಸತ್ಪ್ರೇರಣೆ ವರ್ಣಿಸಲಸಾಧ್ಯ. ಈ ಅರ್ಥದಲ್ಲಿಯೇ ಅನುಭಾವಿಯು ತನ್ನ ಪ್ರಯತ್ನಗಳೆಲ್ಲ ನಿಷ್ಕ್ರಿಯ ಎಂದೇ ಭಾವಿಸು ತ್ತಾನೆ. ಅರ್ಥಾತ್ ಅನುಭಾವಿಯು ನಿರ್ಲಕ್ಷ್ಯದಿಂದ ಇರುತ್ತಾನೆ ಎಂದರ್ಥವಲ್ಲ! ಆತ ದೈವ ಪ್ರೇರಣೆಗೆ ಬೇಕಾದ ಅಗತ್ಯಮಾರ್ಗ ಅವಲಂಬಿಸಿದ್ದರೂ ಆ ಪರಾಶಕ್ತಿಯ ದಯೆ ಇವನ ಮೇಲೆ ಬೀಳದೆ ಇರಬಹುದು ಎಂದೇ ಅರ್ಥ. ಇದನ್ನು ವಿಲಿಯಂಜೇಮ್ಸ್ 'ಜಡತ್ವ'[9] ಎಂದೇ ಕರೆಯುತ್ತಾನೆ.

(ಉ) ಐಕ್ಯಭಾವ (Oneness of all): ಅನುಭಾವದ ಇನ್ನೊಂದು ಮುಖ್ಯ ಲಕ್ಷಣವೆಂದರೆ ಐಕ್ಯಭಾವ. 'ಭಿನ್ನತೆಗೆ ಇಲ್ಲಿ ಲೇಶಮಾತ್ರವೂ ಅವಕಾಶವಿಲ್ಲ.'[10] ನಾವು ನಿತ್ಯ ವ್ಯಾವಹಾರಿಕತೆಯಲ್ಲಿ ಕಾಣುವ ಯಾವುದೇ ರೀತಿಯ ಭೇದಗಳಂತಹ 'ದ್ವೈತ' ಭಾವನೆಗಳು ಇಲ್ಲಿ ಇರವು; ಆದುದರಿಂದಲೇ ಅನುಭಾವಿಗೆ ಎಲ್ಲ ಜೀವಿಗಳೂ ಒಂದೇ ಎಂಬ ದಿವ್ಯ ಬೋಧೆಯುಂಟಾಗಿ ಅದರಂತೆ ನಡೆಯುತ್ತಾನೆ. ಆತನು ಪ್ರತಿ ಯೊಂದು ವಸ್ತುವಿನಲ್ಲಿಯೂ ಅಡಗಿರುವ ತತ್ವ ಒಂದೇ ಎಂದು ತಿಳಿಯುವುದಲ್ಲದೆ ಆ ಒಂದೇ ತತ್ವ ಎಲ್ಲ ವಸ್ತುಗಳಲ್ಲೂ ಅಡಗಿದೆ ಎಂದೇ ಭಾವಿಸುತ್ತಾನೆ. ಅದ್ವೈತ ಭಾವ ಆತನಲ್ಲಿ ದೃಢವಾಗಿ ನೆಲೆಸಿರುತ್ತದೆ.

(ಊ) ಕಾಲ ಪ್ರಜ್ಞೆ ಇಲ್ಲದಿರುವುದು: ಅನುಭಾವಿಯು ತನ್ನ ಅನುಭವದ ಸಮಯದಲ್ಲಿ ಕಾಲಪ್ರಜ್ಞೆ ಕಳೆದುಕೊಂಡಿರುತ್ತಾನೆ.[11] ವ್ಯಾವಹಾರಿಕತೆಯಲ್ಲಿ ಜನರು ಕಾಲವನ್ನು ಭೂತ, ವರ್ತಮಾನ ಮತ್ತು ಭವಿಷತ್ ಎಂದು ವಿಭಾಗಿಸಿ ತಮ್ಮ ವ್ಯವಹಾರ ಸುಗಮಗೊಳಿಸಿಕೊಳ್ಳಲು ಯತ್ನಿಸಿದರೆ, ಅನುಭಾವಿಗೆ ಕಾಲದ ವಿಭಾಗದ ಪ್ರಶ್ನೆಯೇ ಇಲ್ಲ. ಅವನಿಗೆ ಎಲ್ಲವೂ ಈಗಲೇ ಎಂಬ ಸಹಜನಂಬಿಕೆ.

(ಋ) ಅಹಂಭಾವ ನೈಜ ಆತ್ಮವೇ ಅಲ್ಲ (Ego is not the self): ವ್ಯವಹಾರ ಪ್ರಪಂಚದಲ್ಲಿ ನಾನು–ನನ್ನದು ಎಂಬ ಅಂಶವೇ ಹೆಚ್ಚು. ಅದೇ ಸ್ವಾರ್ಥಪರ ಭಾವ ಗಳು ತಾಂಡವಾಡುತ್ತಿರುತ್ತವೆ. ಈ ಅಹಂಪ್ರಜ್ಞೆ ವ್ಯವಹಾರದಲ್ಲಿ ಕಾಣಸಿಗವಂಥಾದ್ದು! ಆದರೆ ಈ ಅಹಂಪ್ರಜ್ಞೆಯೇ ಸತ್ಯವಲ್ಲ! 'ನಾನು', 'ನನ್ನದು' ಎಂಬ ಸ್ವಾರ್ಥಪರ ಭಾವಗಳನ್ನು ಮೀರಿದ ಸತ್ಯವೇ ಅಂತಿಮ ಸತ್ಯ ಎಂಬ ನಂಬಿಕೆ ಎಲ್ಲಾ ಅನುಭಾವಿ ಗಳದ್ದಾಗಿದೆ.

---

9 ವಿಲಿಯಂ ಜೇಮ್ಸ್ : ದಿ ವರೈಟೀಸ್ ಆಫ್ ರಿಲಿಜಿಯಸ್ ಎಕ್ಸ್‌ಪೀರಿಯನ್ಸ್ (ದಿ ಮಾಡರ್ನ್ ಲೈಬ್ರರಿ) ಪುಟ—371.

10 ಅದೇ — ಪುಟ 372.

11 ಅದೇ — ಪುಟ372

(ಮೂ) ಪ್ರತಿಭಾನ ಅಥವಾ ಅಂತರ್‌ಬೋಧೆ (Intuition) : ಅನುಭಾವದ ಮತ್ತೊಂದು ಮುಖ್ಯ ಅಂಶ ತರ್ಕ ಇಲ್ಲಿ ಗೌಣ.[12] ಜೀವನವು ತರ್ಕಾತೀತ, ಬುದ್ಧಿ ಅಥವಾ ರೀಸನ್ ಒಂದೇ ಜೀವನದ ಅಂತರಾಳದ ಆಳತೆ ಗೋಲಲ್ಲ.[13] ಬುದ್ಧಿಯನ್ನು ಮೀರಿ ನಿಂತ, ಬುದ್ಧಿಗೆ ಆಧಾರ ಅಥವಾ ಅಡಿಪಾಯವಾಗಿರುವ ಪ್ರತಿಭಾನ ಎನ್ನುವ ಪರಮ ಶ್ರೇಷ್ಟ ಜ್ಞಾನ ಉಂಟು. ಇಂತಹ ಪ್ರತಿಭಾನಕ್ಕೆ ಇನ್ನೊಂದು ಪ್ರಮಾಣವಿಲ್ಲ. ಪ್ರತಿಭಾನ ದೋಷರಹಿತವೂ ಆಗಿದ್ದು ಅದರ ದಿವ್ಯ ಬೋಧೆ ಸರ್ವಸಮ್ಮತವಾದದ್ದಾಗಿದೆ. ಪ್ರತಿಭಾನವನ್ನು ಪರೀಕ್ಷಿಸುವ ಕಾರ್ಯ ಬುದ್ಧಿ ಸಾಮರ್ಥ್ಯಕ್ಕೆ ಅಸಾಧ್ಯ. ವಸ್ತುತಃ ಪ್ರತಿಭಾನ ದೋಷರಹಿತವಾಗಿರುವುದರಿಂದ ಇದನ್ನು ಪರೀಕ್ಷಿಸುವುದು ಎನ್ನುವ ಕೆಲಸವೇ ಅಪ್ರಯೋಜನಕಾರಿ! ಮೂರ್ಖತನದ್ದು ! ಬುದ್ಧಿಯ ಸಾಮರ್ಥ್ಯ ಯಾವ ರೀತಿಯದು ಎಂದರೆ ವಸ್ತುಗಳನ್ನು ಪದರಪದರವಾಗಿ ವಿಭಾಗಿಸುತ್ತಾ ಅವುಗಳ ಜ್ಞಾನವನ್ನು ಕೊಡುವುದೇ ಹೊರತು ವಸ್ತುವಿನ ಅಂತರಾಳದಲ್ಲಿ ಪ್ರವೇಶಿಸುವ ಸಾಮರ್ಥ್ಯವಿಲ್ಲ! ಇಂತಹ ಸಾಮರ್ಥ್ಯ ಪ್ರತಿಭಾನಕ್ಕೆ ಸೀಮಿತವೇ ಹೊರತು ಇನ್ನಾವುದೇ ಜ್ಞಾನ ಮಾರ್ಗಕ್ಕಿಲ್ಲ. ಪ್ರತಿಭಾನದ ಶ್ರೇಷ್ಠತೆ ವ್ಯಕ್ತಪಡಿಸುವಲ್ಲಿ ಉಮರ್ ಖಯ್ಯಾಂ ಬುದ್ಧಿ ಸಂತರೆನಿಸಿಕೊಂಡವರನ್ನು ಒಂದು ದಾರಿಯಿಂದ ಬಂದು ಪುನಃ ಅದೇ ದಾರಿಯಲ್ಲಿ ಮರಳಿಬಂದ ಮೂರ್ಖರು ಎನ್ನುವಷ್ಟರಮಟ್ಟಿಗೆ ಕೋಪದಿಂದ ನುಡಿದಿದ್ದಾರೆ.

(ಎ) ಕೆಡುಕಿನ ನಿರಾಕರಣೆ : ಈ ಜಗತ್ತೆಲ್ಲ ದೈವಶಕ್ತಿಯಿಂದ ವ್ಯಾಪಿತವಾಗಿದೆ ಎಂದೇ ಅನುಭಾವಿಯ ಅಚಲ ನಂಬಿಕೆ. ಪ್ರಪಂಚದಲ್ಲಿ ಕೆಡುಕು ಅಥವಾ ಅನಿಷ್ಟವಿದೆ, ಪಾಪವಿದೆ ಎಂಬ ಅಂಶ ಅವನನ್ನು ಬಾಧಿಸದು. ಅದನ್ನು ಆತ ಹೃದಯಪೂರ್ವಕವಾಗಿ ಒಪ್ಪಿಕೊಳ್ಳುವುದಿಲ್ಲ. ಅದು ಕೇವಲ ಭ್ರಮೆ! ಅದು ಭ್ರಮೆಯಾಗಿ ಕಾಣಲು ಕಾರಣ ಕತ್ತರಿ ಶಕ್ತಿಯಿಂದ ಕೆಲಸ ಮಾಡುವ ಬುದ್ಧಿ. ಬುದ್ಧಿಯ ಈ ಛಿದ್ರ ಶಕ್ತಿಯನ್ನು ನಿಯಂತ್ರಿಸಿದಾಗ ಪ್ರಪಂಚದಲ್ಲಿ ಅನಿಷ್ಠ ಅಥವಾ ಕೆಡುಕೇ ಇಲ್ಲ ಎನ್ನುವುದು ಅಂತರ್ಬೋಧೆಗೆ ಗೋಚರವಾಗುತ್ತದೆ ಎಂದು ಅನುಭಾವಿ ಭಾವಿಸುತ್ತಾನೆ. ಈ ಪ್ರಪಂಚ ದುಷ್ಟ ಎನ್ನುವುದನ್ನು ಆತ ಒಪ್ಪಿಕೊಳ್ಳುವುದಿಲ್ಲ.[14]

---

12 ಬರ್ಟ್ರೆಂಡ್ ರಸೆಲ್ : ಮಿಸ್ಟಿಸಿಸಂ ಅಂಡ್ ಲಾಜಿಕ್ ಅಂಡ್ ಅದರ್ ಎಸ್ಸೇಸ್–ಪುಟ 10 ಮತ್ತು ರುಡಾಲ್ಫ್ ಓಟ್ಟೋ: ದಿ ಐಡಿಯಾ ಆಫ್ ದಿ ಹೋಲಿ—ಪುಟ 22.

13 ರುಡಾಲ್ಫ್ ಓಟ್ಟೋ : ದಿ ಐಡಿಯಾ ಆಫ್ ದಿ ಹೋಲಿ—ಪುಟ 22.

14 ಬರ್ಟ್ರೆಂಡ್ ರಸೆಲ್ : ಮಿಸ್ಟಿಸಿಸಂ ಅಂಡ್ ಲಾಜಿಕ್ ಅಂಡ್ ಅದರ್ ಎಸ್ಸೇಸ್—ಪುಟ 10–11.

ಅನುಭಾವವು ಒಳಗೊಂಡಿರುವ ಈ ಗುಣಲಕ್ಷಣಗಳ ಜೊತೆಗೆ ಅಂಡರ್ ಹಿಲ್ ಇನ್ನೂ ಸ್ವಲ್ಪ ಹೆಚ್ಚಿನದನ್ನು ಸೇರಿಸಿ ಜೇಮ್ಸ್ ಹೇಳುತ್ತಿರುವ ಚತುರ್ವಿಧ ಲಕ್ಷಣಗಳ ಬಗ್ಗೆ ಅಸಂತೃಪ್ತಿ ತೋರುತ್ತಾರೆ.[15]

(ಐ) ಅನುಭಾವವು ಪ್ರಮುಖವಾಗಿ ಅನುಷ್ಠಾನ ಪ್ರಧಾನ ಹಾಗೂ ಕ್ರಿಯಾತ್ಮಕ : ಜೇಮ್ಸ್ ಹೇಳಿರುವಂತೆ ನಿಷ್ಕ್ರಿಯವಾದುದಲ್ಲ. ಅನುಭಾವವು ಕೇವಲ ಬಾಯಿಮಾತಿನ ಇಂದ್ರಜಾಲವಲ್ಲ. ಅದು ಒಣಚರ್ಚೆಯಂತೂ ಖಂಡಿತ ಅಲ್ಲ. ಅನುಭಾವವು ಪರಿಪೂರ್ಣ ಜೀವನದ ಆನಂದದ ಬುಗ್ಗೆ, ಸ್ಫೂರ್ತಿಯಸೆಲೆ, ಉಗಮಸ್ಥಾನ.[16]

(ಐ) ಅನುಭಾವ ಅನುಷ್ಠಾನ ಯೋಗ್ಯ ಹಾಗೂ ಆಧ್ಯಾತ್ಮಿಕವಾದದ್ದು : ಅದು ಅಭಿಮತವಲ್ಲ, ತತ್ವಜ್ಞಾನವಲ್ಲ, ಅನುಷ್ಠಾನ ಯೋಗ್ಯವೂ ವಸ್ತುತಃ ಪ್ರಾಯೋಗಿಕವೂ ಆದದ್ದು. ಅಪರೋಕ್ಷ ಜ್ಞಾನ ಊಹೆ ಅಥವಾ ಅನುಮಾನವಲ್ಲ.

(ಒ) ಅನುಭಾವ ಅತ್ಯಾವಶ್ಯಮಾರ್ಗವೆಂದರೆ ಪ್ರೇಮ : ಅಂದರೆ ಯಾವುದೇ ವಿಧದ ಸ್ವಾರ್ಥರೀತಿಯ ಪ್ರೇಮವಲ್ಲ. ಅತ್ಯುನ್ನತ ಪ್ರೇಮದ ಕಡೆಗೆ ನಮ್ಮನ್ನು ನಡೆಸುವುದು ಹೃದಯವೇ ಹೊರತು ಬುದ್ಧಿ ಅಲ್ಲ. ಅನುಭಾವಿ ಯಾವ ಆಸೆ ಆಮಿಷಗಳನ್ನು ಮುಂದೊಡ್ಡುವುದಿಲ್ಲ. ಯಾವುದೇ ರೀತಿಯ ಭೌತಿಕ ಸುಖಸಾಧನೆಗಳು ಅವನಿಗೆ ಅನಗತ್ಯ. ದೈವೀಶಕ್ತಿ ಒಂದು ಬಗೆಯ ಅತಿಮಾನುಷ ಶಕ್ತಿ, ಕಲೆಯ ರಸಪೂರ್ಣ ಜೀವನದ ಮೂಲಶಕ್ತಿ.

ಜಗತ್ತಿನಲ್ಲಿ ಅನೇಕ ಧರ್ಮಗಳು ಆವಿಷ್ಕಾರಗೊಂಡಿವೆ. ಆಯಾಧರ್ಮದ ಜನರ ಮನೋಪ್ರವೃತ್ತಿ ಹೇಗೆ ಇರಲಿ ಅಥವಾ ಧರ್ಮದ ಕೆಲ ಮೂಢ-ಒಳ್ಳೆಯ ಕಟ್ಟು ಪಾಡುಗಳು ಅವರನ್ನು ಹೇಗಾದರೂ ನಿಯಂತ್ರಿಸಲಿ. ಆದರೆ ಒಟ್ಟಾರೆ ಎಲ್ಲಾ ಧರ್ಮಗಳ ಗುರಿಯೂ ಮಾನವಕಲ್ಯಾಣವನ್ನೇ ಸಾರುತ್ತದೆ. ಹೆಚ್ಚು ಕಡಿಮೆ 'ಸರ್ವೇಜನಂ ಸುಖಿನೋಭವಂತು' ಎನ್ನುವುದು ಪ್ರತಿಯೊಂದು ಧರ್ಮಗಳ ಉದ್ದೇಶ ವಾಗಿರುವ ಹಾಗೆಯೇ ಅಂತಿಮ ಸತ್ಯಸಾಕ್ಷಾತ್ಕಾರವನ್ನು ಪಡೆಯುವುದು ಸಹಧರ್ಮಗಳ ಉದ್ದೇಶವಾಗಿದೆ. ಹೀಗೆ ಉದಾರಗುಣಗಳನ್ನೇ ಹೆಚ್ಚು ಹೇಳುವ ಎಲ್ಲಾ ಧರ್ಮಗಳಲ್ಲಿ ಅನುಭಾವವು ನೆಲೆಗೊಂಡಿದೆ ಎಂದರೆ ತಪ್ಪಾಗಲಾರದು. ಎಲ್ಲಾ ಧರ್ಮಗಳಲ್ಲೂ ಒಂದಲ್ಲ ಒಂದು ವಿಧದಲ್ಲಿ ಅದು ಕಂಡುಬರುತ್ತದೆ. ಅನುಭಾವದ ಅಂಶ ಧರ್ಮದಲ್ಲಿ ಹೆಚ್ಚಾದಾಗ ಆ ಧರ್ಮ ಹೆಚ್ಚು ಆಧ್ಯಾತ್ಮಿಕವೆನಿಸುತ್ತದೆ. ಧ್ಯಾನ ಮತ್ತು ಆತ್ಮಾರ್ಪಣ ಗಳಿಂದ ಭಗವಂತನಲ್ಲಿ ಐಕ್ಯತೆಯನ್ನು ಹೊಂದುವ ಸಾಧಕನನ್ನು ತಾನೇ 'ಅನುಭಾವಿ'

---

15 ಅಂಡರ್ ಹಿಲ್ : ಮಿಸ್ಟಿಸಿಸಂ—ಪುಟ 95

16 ಅಂಡರ್‌ಹಿಲ್ : ಮಿಸ್ಟಿಸಿಸಂ—ಪುಟ 96

ಎಂದು ನಾವು ಕರೆಯಬಹುದು. ಶ್ರೀರಾಮಕೃಷ್ಣ ಪರಮಹಂಸರಂಥ ಅನುಭಾವಿಗಳನ್ನು ನಾವಿಲ್ಲಿ ನೆನೆಯಬಹುದು. ಬುದ್ಧಿಯನ್ನು ಮೀರಿರುವ ತತ್ವಗಳ ಆಧ್ಯಾತ್ಮಿಕ ಗ್ರಹಣ ಮಾಡುವುದೇ ಎಲ್ಲಾ ಧರ್ಮಗಳ ಉದ್ದೇಶ. ಅದನ್ನು ಪಡೆದುಕೊಳ್ಳುವವನೇ ಅನುಭಾವಿ. ಅಂದರೆ ಪ್ರತಿಯೊಂದು ಧರ್ಮದ ಅವಶ್ಯಕ ಅಂಶವಾಗಿ ಅನುಭಾವ ಕಂಡು ಬರುತ್ತದೆ. ಇದನ್ನು ಸಾಧನೆ, ಸಿದ್ಧಿಗಳ ದೃಷ್ಟಿಯಿಂದ ಆಧ್ಯಾತ್ಮಯೋಗ ಎಂದೂ ಸಹ ಕರೆಯಬಹುದು.

* * *

ಗ್ರಂಥಋಣ

1. ಇ. ಅಂಡರ್‌ಹಿಲ್ : ಮಿಸ್ಟಿಸಿಸಂ (ಮ್ಯಾಥೆನ್ ಅಂಡ್ ಕಂ. ಲಿಮಿಟೆಡ್ 1926)
2. ರುಡಾಲ್ಫ್ ಓಟ್ಟೋ : ದಿ ಐಡಿಯಾ ಆಫ್ ದಿ ಹೋಲಿ (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್—1926)
3. ವಿಲಿಯಂ ಜೇಮ್ಸ್ : ದಿ ವರೈಟೀಸ್ ಆಫ್ ರಿಲಿಜಿಯಸ್ ಎಕ್ಸ್‌ಪೀರಿಯನ್ಸ್ (ದಿ ಮಾಡರ್ನ್ ಲೈಬ್ರರಿ)
4. ಬರ್ಟ್ರೆಂಡ್ ರಸೆಲ್ : ಮಿಸ್ಟಿಸಿಸಂ ಅಂಡ್ ಲಾಜಿಕ್ ಅಂಡ್ ಅದರ್ ಎಸ್ಸೇಸ್ (ಜಾರ್ಜ್ ಅಲೆನ್ ಅಂಡ್ ಅನ್‌ವಿನ್ ಲಿಮಿಟೆಡ್)
5. ರೆನಾಲ್ಡ್ ನಿಕಲ್‌ಸನ್ : ಮಿಸ್ಟಿಕ್ಸ್ ಆಫ್ ಇಸ್ಲಾಂ
6. ಆರ್. ಸಿ. ರೆಹ್ನರ್‌ಸನ್ : ಮಿಸ್ಟಿಸಿಸಂ ಸೆಕ್ರೇಡ್ ಅಂಡ್ ಪ್ರೊಫೇನ್ (ಆಕ್ಸ್‌ಫರ್ಡ್) 1975
7. ಎನ್. ಕೆ. ಸ್ಮಿತ್ : ಇಮ್ಯಾನುಯೆಲ್ ಕ್ಯಾಂಟ್ಸ್ ಕ್ರಿಟಿಕ್ ಆಫ್ ಪ್ಯೂರ್ ರೀಸನ್ (1979)
8. ಸ್ವಾಮಿ ನಿಖಿಲಾನಂದ : ದಿ ಮಿಸ್ಟೀರಿಯಸ್ ಕುಂಡಲಿನಿ
9. ಪ್ರಣವೇಶಾನಂದಜಿ : ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ (ಅನುವಾದ)

ಮೂಲ : **ಹೆಚ್. ಜಿ. ವೇಲ್ಸ್**

ಅನು : **ಯಮುನಾಬಾಯಿ ಆರ್. ರಾವ್.**

ಪ್ರಪಂಚದ ಸಂಕ್ಷಿಪ್ತ ಇತಿಹಾಸ

(ಮುಂದುವರೆದುದು)

55. ಫ್ರೆಂಚ್ ಕ್ರಾಂತಿ ಮತ್ತು ಫ್ರಾನ್ಸಿನಲ್ಲಿ ರಾಜಪ್ರಭುತ್ವದ ಪುನಃ ಸ್ಥಾಪನೆ.

ಬ್ರಿಟನ್ ಅಮೇರಿಕೆಯಲ್ಲಿದ್ದ ತನ್ನ ಹದಿಮೂರು ವಸಾಹತುಗಳನ್ನು ಅದೇ ತಾನೆ ಕಳೆದುಕೊಂಡಿತ್ತು. ಅಷ್ಟರಲ್ಲೇ ಮಹಾನ್ ರಾಜಪ್ರಭುತ್ವ (Grand Monarchy) ದ ಮೂಲಸ್ಥಾನದಲ್ಲಿಯೇ ನಡೆದ ಮಹತ್ತರವಾದ ಸಾಮಾಜಿಕ ಮತ್ತು ರಾಜಕೀಯ ಕ್ಷೋಭೆಯೊಂದು ಪ್ರಪಂಚದ ರಾಜಕೀಯ ವ್ಯವಸ್ಥೆಗಳು ನಿಜವಾಗಿಯೂ ಅದೆಷ್ಟು ಕ್ಷಣಿಕವಾದವು ಎನ್ನುವುದನ್ನು ಇನ್ನೂ ಚೆನ್ನಾಗಿ ಯೂರೋಪಿಗೆ ನೆನಪು ಮಾಡಿಕೊಟ್ಟಿತು.

ಯೂರೋಪಿನ ವೈಯಕ್ತಿಕ ರಾಜಪ್ರಭುತ್ವಗಳಲ್ಲೆಲ್ಲಾ ಫ್ರೆಂಚ್ ರಾಜ ಪ್ರಭುತ್ವವೇ ಅತ್ಯಂತ ಯಶಸ್ವಿಯಾದುದೆಂದು ಮೊದಲೇ ತಿಳಿಸಿದೆ. ಇದಕ್ಕಿಂತ ಕೆಳ ಮಟ್ಟದಲ್ಲಿದ್ದ ಇತರ ಅನೇಕ ಪ್ರಭುತ್ವಗಳು ಇದನ್ನೇ ಮೆಚ್ಚಿಕೊಂಡು ಆದರ್ಶವನ್ನಾಗಿ ಟ್ಟುಕೊಂಡು ಅದರೊಡನೆ ಸ್ಪರ್ಧಿಸುತ್ತಿದ್ದುವು. ಆದರೆ ಫ್ರೆಂಚ್ ರಾಜಪ್ರಭುತ್ವ ಪ್ರವರ್ಧಮಾನಕ್ಕೆ ಬಂದಿದ್ದು ಅನ್ಯಾಯದ ತಳಹದಿಯಮೇಲೆ ಅದು ಬಹು ಬೇಗ ಆಶ್ಚರ್ಯಕರ ರೀತಿಯಲ್ಲಿ ಕುಸಿದು ಹೋಗಲು ಇದೇ ಕಾರಣವಾಯಿತು. ಕಸುವುಳ್ಳದ್ದಾಗಿ ಯಶಸ್ವಿಯಾಗಿದ್ದರೂ ಸಾಮಾನ್ಯ ಜನರ ಜೀವನವನ್ನು ಇದು ಹಾಳುಮಾಡಿತ್ತು. ಅಲ್ಲಿನ ಕ್ರೈಸ್ತಪಾದ್ರಿಗಳಿಗೆ ಮತ್ತು ಶ್ರೀಮಂತರಿಗೆ ತೆರಿಗೆ ವಿನಾಯಿತಿಕೊಟ್ಟು ರಾಜ್ಯದ ಆರ್ಥಿಕ ಹೊರೆಯನ್ನೆಲ್ಲಾ ಮಧ್ಯಮವರ್ಗದ ಮತ್ತು ಕೆಳವರ್ಗದವರ ಮೇಲೆ ಹೇರಿ ದ್ದರು. ರೈತರು ಈ ಕರಭಾರದ ಕೆಳಗೆ ಅಪ್ಪಚ್ಚಿಯಾಗಿ ಹೋಗಿದ್ದರು. ಮಧ್ಯಮ ವರ್ಗದವರ ಮೇಲೆ ಶ್ರೀಮಂತರು ಯಜಮಾನಿಕೆ ನಡೆಸುತ್ತಾ ಅವರನ್ನು ಅಪಮಾನಕರ ಸ್ಥಿತಿಯಲ್ಲಿಟ್ಟಿದ್ದರು.

1787ರಲ್ಲಿ ಈ ಫ್ರೆಂಚ್ ರಾಜಪ್ರಭುತ್ವ ದಿವಾಳಿಯಾಗುವ ಸ್ಥಿತಿಗೆ ಬಂದು ರಾಜ್ಯದ ಅತೃಪ್ತಿಕರವಾದ ಆದಾಯ ಮತ್ತು ಮಿತಿಮೀರಿದ ವ್ಯಯಗಳ ಸಮಸ್ಯೆಗಳನ್ನು ಕುರಿತು ಚರ್ಚಿಸುವುದಕ್ಕಾಗಿ ದೇಶದ ವಿವಿಧವರ್ಗಗಳ ಜನರ ಪ್ರತಿನಿಧಿಗಳನ್ನು ಸಭೆ ಕರೆಯಲೇಬೇಕಾಯಿತು. 1789ರಲ್ಲಿ ಶ್ರೀಮಂತರು, ಕ್ರೈಸ್ತಪಾದ್ರಿಗಳು ಮತ್ತು ಸಾಮಾನ್ಯವರ್ಗದ ಜನರನ್ನು ಒಳಗೊಂಡಿದ್ದ ಸ್ಟೇಟ್ ಜನರಲ್ ಎಂಬ ಸಭೆ ವರ್ಸೈನಲ್ಲಿ ಸೇರಿತು. ಇದು ಮೊದಲಿನ ಬ್ರಿಟಿಷ್ ಪಾರ್ಲಿಮೆಂಟನ್ನು ಸ್ಥೂಲವಾಗಿ ಹೋಲುತ್ತಿತ್ತು. 1610ರಿಂದ ಈ ಸಭೆ ಸೇರಿರಲೇ ಇಲ್ಲ. ಅಷ್ಟು ಕಾಲವೂ ಫ್ರಾನ್ಸ್ ನಿರಂಕುಶಪ್ರಭುತ್ವವಾಗಿತ್ತು. ಎಷ್ಟೋಕಾಲದಿಂದ ಕುದಿಯುತ್ತಿದ್ದ ತಮ್ಮ ಅಸಮಾಧಾನವನ್ನು ತೋರ್ಪಡಿಸಿಕೊಳ್ಳಲು ಜನರಿಗೆ ಈಗ ಒಂದು ಸಾಧನ ಸಿಕ್ಕಿತು. ತಕ್ಷಣವೇ ಮೂರನೆಯವರ್ಗಕ್ಕೆ ಸೇರಿದ ಸಾಮಾನ್ಯ ಜನರು ಈ ಸಭೆಯ ನಿಯಂತ್ರಣವನ್ನು ವಹಿಸಿಕೊಳ್ಳಲು ನಿಶ್ಚಯಿಸಿದುದರಿಂದ ಈ ಮೂರೂ ವರ್ಗಗಳಲ್ಲಿ ವಿವಾದಗಳು ಪ್ರಾರಂಭವಾದುವು. ಇವುಗಳಲ್ಲಿ ಸಾಮಾನ್ಯ ಜನರದ್ದೇ ಮೇಲುಗೈಯಾಗಿ ಈ ಸ್ಟೇಟ್ಸ್ ಜನರಲ್ ಸಭೆಯು ರಾಷ್ಟ್ರೀಯ ಸಭೆಯಾಯಿತು. ಬ್ರಿಟಿಷ್ ಪಾರ್ಲಿಮೆಂಟು ಬ್ರಿಟಿಷ್ ರಾಜನನ್ನು ಹತೋಟಿಯಲ್ಲಿಟ್ಟಂತೆ, ಫ್ರೆಂಚ್ ರಾಜನನ್ನು ಹತೋಟಿಯಲ್ಲಿಡಲು ಇದು ನಿಶ್ಚಯಿಸಿದೆಯೆಂಬುದು ಸ್ಪಷ್ಟವಾಯಿತು. ರಾಜನಾಗಿದ್ದ ಹದಿನಾರನೆಯ ಲೂಯಿ ಹೋರಾಡುವುದಕ್ಕೂ ಸಿದ್ಧನಾಗಿ ವಿವಿಧ ಪ್ರಾಂತಗಳಿಂದ ಸೈನ್ಯಗಳನ್ನು ಕರೆಸಿದನು. ಆಗ ಪ್ಯಾರಿಸ್ ಮತ್ತು ಫ್ರಾನ್ಸ್ ದಂಗೆಯೆದ್ದುವು.

ಬಹುಬೇಗ ನಿರಂಕುಶಪ್ರಭುತ್ವ ಕುಸಿದು ಹೋಯಿತು. ಭಯಂಕರವಾದ ಬಾಸ್ಟಿಲ್ ಸೆರೆಮನೆಗೆ ಪ್ಯಾರಿಸ್ಸಿನ ಜನ ನುಗ್ಗಿದರು. ಫ್ರಾನ್ಸಿನಾದ್ಯಂತ ಈ ಬಂಡಾಯ ಹರಡಿತು ಪೂರ್ವ ಮತ್ತು ವಾಯುವ್ಯದಲ್ಲಿದ್ದ ಪ್ರಾಂತ್ಯಗಳಲ್ಲಿ ಶ್ರೀಮಂತರಿಗೆ ಸೇರಿದ ಎಷ್ಟೋ ದುರ್ಗಗಳನ್ನು ರೈತರು ಸುಟ್ಟುಹಾಕಿ ಅವುಗಳಲ್ಲಿದ್ದ ಹಕ್ಕುಗಳನ್ನು ಎಚ್ಚರಿಕೆಯಿಂದ ನಾಶಮಾಡಿದರು. ದುರ್ಗಗಳ ಮಾಲೀಕರನ್ನು ಕೊಲೆಮಾಡಿದರು ಇಲ್ಲವೇ ಓಡಿಸಿದರು. ಪುರಾತನವಾದ ಜೀರ್ಣವಾಗಿಹೋಗಿದ್ದ ಈ ಶ್ರೀಮಂತ ಪ್ರಭುತ್ವ ವ್ಯವಸ್ಥೆ ಒಂದು ತಿಂಗಳಲ್ಲಿ ಬಿದ್ದು ಹೋಯಿತು. ಅನೇಕ ಪ್ರಮುಖ ಶ್ರೀಮಂತರು ಮತ್ತು ರಾಣಿಯ ಕಡೆಯ ಆಸ್ಥಾನಿಕರು ದೇಶವನ್ನು ಬಿಟ್ಟು ಓಡಿಹೋದರು ಪ್ಯಾರಿಸ್ಸಿನಲ್ಲಿಯೂ ಮತ್ತಿತರ ಅನೇಕ ದೊಡ್ಡಪಟ್ಟಣಗಳಲ್ಲಿಯೂ ತಾತ್ಕಾಲಿಕ ನಗರ ಸರ್ಕಾರಗಳು ಏರ್ಪಟ್ಟುವು. ಈ ಮುನಿಸಿಪಲ್ ಸಂಸ್ಥೆಗಳು ರಾಷ್ಟ್ರೀಯ ರಕ್ಷಾದಳವೆಂಬ ಒಂದು ಹೊಸ ಸೈನ್ಯದಳವನ್ನು ಕಟ್ಟಿದವು. ರಾಜನ ದಳಗಳಿಗೆ ವಿರುದ್ಧವಾಗಿ ನಿಲ್ಲುವುದೇ ಈ ದಳದ ಪ್ರಮುಖ ಉದ್ದೇಶವೆಂಬುದು ಸ್ಪಷ್ಟವಾಗಿತ್ತು. ನೂತನ ಯುಗವೊಂದಕ್ಕಾಗಿ ಹೊಸ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗಳನ್ನು ನಿರ್ಮಿಸುವ ಅವಶ್ಯಕತೆ ರಾಷ್ಟ್ರೀಯಸಭೆಗೆ ಬಂದೊದಗಿತು.

ಈ ಕಾರ್ಯವನ್ನು ಮಾಡಲು ಆ ಸಭೆ ತನ್ನ ಶಕ್ತಿಮೀರಿ ಪ್ರಯತ್ನಿಸಬೇಕಾಯಿತು. ನಿರಂಕುಶ ಪ್ರಭುತ್ವದ ಮುಖ್ಯ ಅನ್ಯಾಯಗಳನ್ನು ಇದು ತೊಡೆದುಹಾಕಿತು. ತೆರಿಗೆ ವಿನಾಯಿತಿಗಳು, ಜೀತಪದ್ಧತಿ, ಬಿರುದಾವಲಿಗಳು, ವಿಶೇಷಸವಲತ್ತುಗಳನ್ನು ರದ್ದುಮಾಡಿ ಸಾಂಕುಶರಾಜಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸಿತು. ವರ್ಸೈಯನ್ನು ಬಿಟ್ಟುಕೊಟ್ಟು ಪ್ಯಾರಿಸ್ಸಿನ tuilieries ನ ಅರಮನೆಯಲ್ಲಿ ರಾಜನು ಚಿಕ್ಕದಾಗಿ ಆಸ್ಥಾನವನ್ನು ನಡೆಸಿಕೊಂಡು ಬಂದನು.

ಈ ರಾಷ್ಟ್ರೀಯ ಸಭೆಯು ಹಾಗೆಯೇ ಶ್ರಮಿಸುತ್ತಾ ಪರಿಣಾಮಕಾರಿ ನವ್ಯ ಆಡಳಿತವಾಗಿ ರೂಪುಗೊಳ್ಳಬಹುದೆಂದು ಎರಡುವರ್ಷಗಳ ಕಾಲ ತೋರುತ್ತಿತ್ತು. ಇದು ನಡೆಸಿದ ಕೆಲಸಗಳಲ್ಲಿ ಒಂದಷ್ಟು ಭಾಗ ಪ್ರಾಯೋಗಿಕಮಟ್ಟದಾಗಿದ್ದು ಬಳಿಕ ಅದನ್ನು ರದ್ದುಮಾಡಬೇಕಾಗಿ ಬಂದರೂ, ಎಷ್ಟೋ ಭಾಗ ದೃಢತಳಹದಿಯಿಂದ ಕೂಡಿದ್ದು ಇನ್ನೂ ಉಳಿದುಕೊಂಡಿದೆ. ಪರಿಣಾಮಕರವಲ್ಲದ್ದೂ ಎಷ್ಟೋ ಇದ್ದಿತು. ದಂಡನೆಯ ಕಾನೂನುಗಳನ್ನು ತಿದ್ದಲಾಯಿತು. ಚಿತ್ರಹಿಂಸೆ, ನಿರಾಧಾರವಾಗಿ ಜೈಲಿಗೆ ಹಾಕುವುದು ಮತ, ಸಂಪ್ರದಾಯಗಳನ್ನು ವಿರೋಧಿಸಿದ್ದಕ್ಕಾಗಿ ಹಿಂಸಿಸುವುದು, ಇವನ್ನು ರದ್ದುಮಾಡಲಾಯಿತು. ಫ್ರಾನ್ಸ್, ಬರ್ಗಂಡಿ, ನಾರ್ಮಂಡಿ ಮುಂತಾದ ಹಿಂದಿನಿಂದ ಬಂದ ಪ್ರಾಂತಗಳ ಬದಲು ದೇಶವನ್ನು ಎಂಬತ್ತು ವಿಭಾಗಗಳನ್ನಾಗಿ ಮಾಡಲಾಯಿತು. ಎಲ್ಲಾ ದರ್ಜೆಯ ಜನರಿಗೂ ಸೈನ್ಯದ ಅತ್ಯುಚ್ಛಹುದ್ದೆಗಳಿಗೆ ಬಡತಿಯಾಗುವ ಅವಕಾಶವನ್ನು ತೆರೆದಿರಿಸಲಾಯಿತು. ಶ್ರೇಷ್ಠವಾದ ಆದರೆ ಸರಳವಾದ ನ್ಯಾಯಾಲಯವ್ಯವಸ್ಥೆಯೊಂದು ಜಾರಿಗೆ ಬಂದಿತು. ಆದರೆ ನ್ಯಾಯಾಧೀಶರನ್ನು ಅಲ್ಪಕಾಲಾವಧಿಗಾಗಿ ಜನರೇ ಚುನಾಯಿಸಿ ನೇಮಿಸುವ ವ್ಯವಸ್ಥೆಯನ್ನೂ ತಂದುದರಿಂದ ಇದರ ಬೆಲೆ ಕಡಿಮೆಯಾಗಿಹೋಯಿತು. ಜನಜಂಗುಳಿಯೇ ಕಟ್ಟಕಡೆಯ ಅಪೀಲನ್ನು ತೆಗೆದುಕೊಂಡು ಹೋಗುವ ನ್ಯಾಯಸ್ಥಾನವಾಗಿ ಹೋಗಿ ರಾಷ್ಟ್ರೀಯ ಸಭೆಯ ಸದಸ್ಯರುಗಳಂತೆ ನ್ಯಾಯಾಧೀಶರೂ ಹೇಗೋ ಮಾಡಿ ಕೆಳವರ್ಗದ ಜನರನ್ನು ಒಲಿಸಿಕೊಳ್ಳಬೇಕಾಯಿತು. ಕ್ರೈಸ್ತಸಂಘಕ್ಕೆ ಸೇರಿದ್ದ ಅಪಾರವಾದ ಆಸ್ತಿಯೆಲ್ಲವನ್ನೂ ರಾಷ್ಟ್ರವೇ ವಶಮಾಡಿಕೊಂಡು ನೋಡಿಕೊಳ್ಳಲಾರಂಭಿಸಿತು. ವಿದ್ಯಾಭ್ಯಾಸ ಅಥವಾ ದಾನಧರ್ಮಗಳನ್ನು ನಡೆಸುತ್ತಿದ್ದ ಧಾರ್ಮಿಕ ಸಂಸ್ಥೆಗಳನ್ನು ಬಿಟ್ಟು ಉಳಿದವುಗಳನ್ನು ಕೊನೆಗಾಣಿಸಿಬಿಟ್ಟರು. ಕ್ರೈಸ್ತಪಾದ್ರಿಗಳಿಗೆ ರಾಷ್ಟ್ರದಿಂದ ಸಂಬಳ ಸಲ್ಲತಕ್ಕದ್ದೆಂದಾಯಿತು. ಈ ಪಾದ್ರಿಗಳಲ್ಲಿ ಕೆಳವರ್ಗದವರಿಗೆ ಇದರಿಂದ ಒಳ್ಳೆಯದಾಯಿತು. ಏಕೆಂದರೆ ಉಚ್ಚಸ್ಥಾನದಲ್ಲಿದ್ದ ಧಾರ್ಮಿಕ ಅಧಿಕಾರಿಗಳಿಗೆ ಹೋಲಿಸಿದರೆ ಇವರಿಗೆ ಕೊಡುತ್ತಿದ್ದ ಸಂಬಳ ನಾಚಿಕೆ ತರುವಷ್ಟುಕಡಮೆ ಇರುತ್ತಿತ್ತು. ಪಾದ್ರಿಗಳು ಮತ್ತು ಬಿಷಪ್ಪುಗಳ ನೇಮಕ ಇದೇ ಸಮಯದಲ್ಲಿ ಚುನಾವಣೆಗೊಳಪಟ್ಟಿತು. ರೋಮನ್ ಕ್ರೈಸ್ತಸಂಘದ ಅಧಿಕಾರವೆಲ್ಲ ಪೋಪನಲ್ಲಿ ಮತ್ತು ಕಾರ್ಡಿನಲ್ಲುಗಳಲ್ಲಿ ಕೇಂದ್ರೀಕೃತವಾಗಿದ್ದು ಮೇಲಿನಿಂದ ಕೆಳಕ್ಕೆ ಇಳಿದು ಬರಬೇಕೆಂಬ

ಕಲ್ಪನೆಯು ಬೇರಿಗೆ ಇದರಿಂದ ಕೊಡಲಿಪೆಟ್ಟಾಯಿತು. ಫ್ರಾನ್ಸಿನ ಕ್ರೈಸ್ತಸಂಘವನ್ನು ತತ್ತ್ವದಲ್ಲಿ ಅಲ್ಲದಿದ್ದರೂ ವ್ಯವಸ್ಥೆಯಲ್ಲಿ ಯಾರಾದರೂ 'ಪ್ರಾಟೆಸ್ಟಂಟ್' ಆಗಿ ಮಾಡಲು ರಾಷ್ಟ್ರೀಯ ಸಭೆ ಒಂದೇಏಟಿನಲ್ಲಿ ಪ್ರಯತ್ನಿಸಿತು. ಎಲ್ಲೆಲ್ಲಿಯೂ ರಾಷ್ಟ್ರೀಯ ಸಭೆ ನೇಮಿಸಿದ ಸರ್ಕಾರೀ ಪಾದ್ರಿಗಳಿಗೂ ಹೊಸವ್ಯವಸ್ಥೆಗೆ ಮಣಿಯದಿದ್ದ ರೋಮಿಗೆ ವಿಧೇಯರಾಗಿದ್ದ ಪಾದ್ರಿಗಳಿಗೂ ವಿವಾದಗಳೂ ಘರ್ಷಣೆಗಳೂ ನಡೆಯುತ್ತಿದ್ದುವು.

ಫ್ರಾನ್ಸಿನ ಸಾಂಕುಶ ರಾಜಪ್ರಭುತ್ವದ ಈ ಪ್ರಯೋಗ 1791ರಲ್ಲಿ ಥಟಕ್ಕನೆ ಕೊನೆಗಂಡಿತು. ಇದಕ್ಕೆ ಅಲ್ಲಿನ ರಾಜರಾಣಿಯರು ಬೇರೆ ದೇಶಗಳಲ್ಲಿದ್ದ ತಮ್ಮ ಶ್ರೀಮಂತ, ರಾಜತ್ಯವಾದಿ ಸ್ನೇಹಿತರೊಟ್ಟಿಗೆ ನಡೆಸಿದ ಕಾರುಬಾರೇ ಕಾರಣ ವಾಯಿತು. ವಿದೇಶಿ ಸೈನ್ಯಗಳು ಪೂರ್ವದಿಕ್ಕಿನ ಎಲ್ಲೆಯಲ್ಲಿ ಒಟ್ಟುಗೂಡಿದುವು. ಜೂನ್ ತಿಂಗಳ ಒಂದು ರಾತ್ರಿ ರಾಜರಾಣಿ ಮತ್ತು ಅವರ ಮಕ್ಕಳು Tuilieries ಇಂದ ಮೆಲ್ಲಗೆ ನುಸುಳಿಕೊಂಡು ಈ ವಿದೇಶೀಯರನ್ನೂ ದೇಶಭ್ರಷ್ಟರಾಗಿದ್ದ ಶ್ರೀಮಂತರನ್ನೂ ಸೇರಲು ಓಡಿಹೋದರು. ಇವರನ್ನು Varennesನಲ್ಲಿ ಹಿಡಿದು ಪ್ಯಾರಿಸ್ಸಿಗೆ ವಾಪಸ್ ತರಲಾಯಿತು. ದೇಶಪ್ರೇಮಯುತ ಪ್ರಜಾತಂತ್ರ ಜ್ವಾಲೆ ಫ್ರಾನ್ಸಿನಾದ್ಯಂತ ಭುಗ್ಗೆಂದು ಮೇಲೆದ್ದಿತು. ಗಣತಂತ್ರ ರಾಜ್ಯಘೋಷಣೆಯಾಗಿ ಆಸ್ಟ್ರಿಯ ಪ್ರಷ್ಯಾಗಳೊಡನೆ ಬಹಿರಂಗವಾಗಿಯೇ ಯುದ್ಧ ಮೊದಲಾಯಿತು. ರಾಜ ನನ್ನು ವಿಚಾರಣೆಗೊಳಪಡಿಸಿ ಮೊದಲೇ ಇಂಗ್ಲೆಂಡಿನಲ್ಲಿ ನಡೆದಿದ್ದಂತೆ ತನ್ನ ಪ್ರಜೆಗಳಿಗೆ ದ್ರೋಹಮಾಡಿದನೆಂಬ ಅಪಾದನೆ ಮೇಲೆ ಮರಣದಂಡನೆ ವಿಧಿಸಲಾಯಿತು (ಜನವರಿ 1793).

ಫ್ರೆಂಚ್ ಜನರ ಚರಿತ್ರೆಯಲ್ಲಿ ಈಗ ಒಂದು ವಿಚಿತ್ರವಾದ ಯುಗ ಮೊದಲಾಯಿತು. ಫ್ರಾನ್ಸ್‌ದೇಶ ಮತ್ತು ಅಲ್ಲಿಯ ಗಣತಂತ್ರ ರಾಜ್ಯಕ್ಕೆ ಸಂಬಂಧಿಸಿದಂತೆ ಒಂದು ಬೃಹತ್ತಾದ ಉತ್ಸಾಹದ ಜ್ಯೋತಿ ಪ್ರಜ್ವಲಿಸಿತು. ಸ್ವದೇಶದಲ್ಲಿಯಾಗಲೀ ಪರದೇಶದಲ್ಲಿಯಾಗಲಿ ಇನ್ನು ಮುಂದೆ ಗಣತಂತ್ರಕ್ಕೆ ಭಿನ್ನವಾದ ಮಾರ್ಗದೊಡನೆ ರಾಜಿಯಾಗಲೇಕೂಡದು ಎಂದು ನಿರ್ಧಾರವಾಯಿತು. ಸ್ವದೇಶದಲ್ಲಿ ರಾಜಪ್ರಭುತ್ವ ವಾದಿಗಳನ್ನು ಸರ್ಕಾರಕ್ಕೆ ಯಾವುದೇ ರೀತಿಯಲ್ಲಿ ಅವಿಧೇಯರಾದವರನ್ನೂ ನಿರ್ನಾಮ ಮಾಡಬೇಕು, ಪರದೇಶಗಳಲ್ಲಿ ಫ್ರಾನ್ಸ್ ಎಲ್ಲ ಕ್ರಾಂತಿಕಾರಿಗಳ ರಕ್ಷಣೆ ಮತ್ತು ಸಹಾಯಗಳನ್ನು ವಹಿಸಬೇಕು ಎಂದಾಯಿತು. ಸಮಗ್ರ ಯುರೋಪ್, ಏಕೆ ಸಮಗ್ರ ಪ್ರಪಂಚವೇ ಗಣತಂತ್ರವಾದಿಯಾಗಬೇಕು ಎಂದು ಉದ್ದೇಶಿಸಲಾಯಿತು. ಫ್ರಾನ್ಸಿನ ತರುಣರು ಈ ಗಣತಂತ್ರ ರಾಷ್ಟ್ರದ ಸೈನ್ಯಕ್ಕೆ ಸೇರಲು ನೆರೆದರು. ದ್ರಾಕ್ಷಿಯ ಮದ್ಯದಂತೆ ರಕ್ತವನ್ನು ಈಗಲೂ ಬಿಸಿಗೊಳಿಸುವ ನೂತನ ಅದ್ಭುತಗೀತೆ "ಮಾರ್ಸೆಲೇಸ್" ದೇಶದಲ್ಲಿ ಹರಡಿತು. ಆ ಗೀತೆ ಮತ್ತು ಅದರೊಡನೆ ಮೇಲೆ ಮೇಲೆ ಮುನ್ನುಗ್ಗಿ ಬರುತ್ತಿದ್ದ ಫ್ರೆಂಚ್ ಬಾಯೊನೆಟ್ಟುಗಳು ಮತ್ತು ಹುರುಪಿನಿಂದ ಚಲಾಯಿಸುತ್ತಿದ್ದ ಫ್ರೆಂಚ್ ತೋಪುಗಳೆದುರು ವಿದೇಶಿ ಸೈನ್ಯಗಳು ಹಿಂದಕ್ಕೆ

ಉರುಳಿದುವು. 1792ರ ಕೊನೆಗಾಗಲೇ ಫ್ರೆಂಚ್ ಸೈನ್ಯಗಳು 14ನೆ ಲೂಯಿ ಸಾಧಿಸಿದ್ದೆಲ್ಲದಕ್ಕಿಂತ ಹೆಚ್ಚಾದುದನ್ನು ಸಾಧಿಸಿದ್ದರು. ಎಲ್ಲ ಕಡೆಗಳಲ್ಲೂ ಅವರು ವಿದೇಶೀ ಮಣ್ಣಿನ ಮೇಲೆ ಕಾಲಿಟ್ಟದ್ದರು. ಬ್ರಸೆಲ್ಸನ್ನು ಪ್ರವೇಶಿಸಿದ್ದರು, ಸಾವಾಯ್‌ಯನ್ನು ಅಧೀನಪಡಿಸಿಕೊಂಡು ಮಾಯೆನ್ಸ್‌ನಮೇಲೆ ದಾಳಿಮಾಡಿದರು. ಹಾಲೆಂಡಿನಿಂದ ಷೆಲ್ಡ್‌ಚ್‌ನ್ನು ಕಿತ್ತುಕೊಂಡರು. ಇದಾದಮೇಲೆ ಫ್ರೆಂಚ್ ಸರ್ಕಾರ ಒಂದು ಅವಿವೇಕದ ಕೆಲಸ ಮಾಡಿತು. ಲೂಯಿಯ ಶಿರಚ್ಛೇದನ ಮಾಡಿದಾಗ ಇಂಗ್ಲೆಂಡಿನಲ್ಲಿದ್ದ ಫ್ರೆಂಚ್ ನಿಯೋಗಿಗಳನ್ನು ಇಂಗ್ಲೆಂಡಿನ ಸರ್ಕಾರ ಓಡಿಸಿಬಿಟ್ಟಿತು. ಇದರಿಂದ ಫ್ರೆಂಚ್ ಸರ್ಕಾರ ಸಿಟ್ಟಿಗೆದ್ದು ಇಂಗ್ಲೆಂಡಿನ ಮೇಲೆ ಯುದ್ಧ ಘೋಷಿಸಿತು. ಇದು ದಡ್ಡತನದ ಕೆಲಸವೆಂದುದಕ್ಕೆ ಕಾರಣ ಇಷ್ಟು. ಕ್ರಾಂತಿಯ ಫಲವಾಗಿ ಫ್ರಾನ್ಸಿಗೆ ಶ್ರೀಮಂತ ಅಧಿಕಾರಿಗಳು ಮತ್ತು ಇತರ ಹಿಡಿತಗಳಿಂದ ಬಿಡುಗಡೆಯಾಗಿದ್ದ ಉತ್ಸಾಹಪೂರಿತ ಪದಾತಿದಳ ಹಾಗೂ ಚುರುಕಾದ ಫಿರಂಗಿದಳ ದೊರೆತಿದ್ದರೂ ಅದರ ನೌಕಾದಳದಲ್ಲಿ ಶಿಸ್ತು ಹಾಳಾಗಿ ಹೋಗಿತ್ತು. ಇಂಗ್ಲಿಷರು ಸಮುದ್ರದ ಮೇಲೆ ಅದ್ವಿತೀಯರಾಗಿದ್ದರು. ಫ್ರಾನ್ಸಿನ ಈ ಕೆಣಕುವಿಕೆಯಿಂದ ಇಡೀ ಇಂಗ್ಲೆಂಡ್ ಅದರ ವಿರುದ್ಧ ಒಂದಾಯಿತು. ಅದೇ ಇದಕ್ಕೆ ಮೊದಲು ಗ್ರೇಟ್ ಬ್ರಿಟನ್ನಿನ ಉದಾರ ವಾದಿಗಳ ಒಂದು ಪರಿಗಣನೀಯವಾದ ಚಳವಳಿ ಫ್ರೆಂಚ್ ಕ್ರಾಂತಿಯ ಬಗೆಗೆ ಸಹಾನುಭೂತಿ ತೋರುತ್ತಿತ್ತು.

ಮುಂದಿನ ಕೆಲವು ವರ್ಷಗಳಲ್ಲಿ ಯೂರೋಪಿಯನ್ ರಾಜ್ಯಗಳ ಒಕ್ಕೂಟವನ್ನೆ ದುರಿಸಿ ಫ್ರಾನ್ಸ್ ಹೋರಾಡಿದುದನ್ನು ಕುರಿತು ಇಲ್ಲಿ ವಿಶದವಾಗಿ ಹೇಳಲು ಸಾಧ್ಯವಿಲ್ಲ. ಆಸ್ಟ್ರಿಯನ್ನರನ್ನು ಫ್ರಾನ್ಸ್ ಬೆಲ್ಜಿಯಮ್ಮಿನಿಂದ ಓಡಿಸಿತು. ಹಾಲೆಂಡಿನಲ್ಲಿ ಗಣ ತಂತ್ರ ರಾಜ್ಯವನ್ನು ಸ್ಥಾಪಿಸಿತು. ಟೆಕ್ಸೆಲ್‌ನಲ್ಲಿ ಸಿಕ್ಕುಹಾಕಿಕೊಂಡಿದ್ದ ಡಚ್ ನೌಕಾದಳವು ಚಿಕ್ಕದೊಂದು ಕುದುರೆ ಸವಾರರ ದಳಕ್ಕೆ ಒಂದೂ ಗುಂಡನ್ನು ಹಾರಿಸ ದೆಯೇ ಶರಣಾಯಿತು. ಇಟಲಿಯ ಕಡೆ ಫ್ರಾನ್ಸಿನ ಓಟ ಕೆಲವುಕಾಲ ತಡೆ ಹಿಡಿಯಲ್ಪ ಟ್ಟಿತ್ತು. 1796ರಲ್ಲಿ ಹೊಸ ಜನರಲ್ ನೆಪೋಲಿಯನ್ ಬೋನಪಾರ್ಟೆ ಫ್ರಾನ್ಸ್ ಗಣತಂತ್ರ ರಾಜ್ಯದ ಹಸಿದಹೊಟ್ಟೆಗಳ ಹರಿದಬಟ್ಟೆಗಳ ಸೈನ್ಯವನ್ನು ಪೀಡ್‌ಮಾಂಟ್ ಮೂಲಕ ಮಾಂತುವಾ ಮತ್ತು ವೆರೋನಾಗಳಿಗೆ ವಿಜಯ ಯಾತ್ರೆಯಲ್ಲಿ ಕರೆ ದೊಯ್ದನು. ಸಿ.ಎಫ್. ಅಟ್ಕಿನ್‌ಸನ್ ಹೇಳುತ್ತಾರೆ*

"ಯೂರೋಪಿನ ಮಿತ್ರ ರಾಜ್ಯಗಳನ್ನು ಎಲ್ಲಕ್ಕಿಂತ ಹೆಚ್ಚು ಆಶ್ಚರ್ಯಗೊಳಿಸಿದು ದೆಂದರೆ ಈ ಗಣತಂತ್ರವಾದಿಗಳ ಸಂಖ್ಯೆ ಮತ್ತು ವೇಗ. ನಿಜ ಹೇಳುವುದಾದರೆ ಇದ್ದಕ್ಕಿದ್ದಂತೆ ಹೊಂದಿಸಿಕೊಂಡಿದ್ದ ಈ ಸೈನ್ಯದಲ್ಲಿ ಅದರ ಮುನ್ನಡೆಯನ್ನು ತಡಮಾಡು ವಂತಹುದು ಏನೂ ಇರಲೇ ಇಲ್ಲ. ಡೇರೆಗಳನ್ನು ಕೊಳ್ಳಲು ದುಡ್ಡಿರಲಿಲ್ಲ. ಒಂದು

---

* ಎನ್‌ಸೈಕ್ಲೋಪಿಡಿಯ ಬ್ರಿಟಾನಿಕದ "ಫ್ರೆಂಚ್ ಕ್ರಾಂತಿಯ ಯುದ್ಧಗಳು" ಎಂಬ ಲೇಖನದಿಂದ.

ವೇಳೆ ಇದ್ದಿದ್ದರೂ ಅಷ್ಟೊಂದು ಗಾಡಿಗಳಿಲ್ಲದ್ದರಿಂದ ಅವುಗಳನ್ನು ಸಾಗಿಸಲು ಆಗುತ್ತಿರಲಿಲ್ಲ. ಇವರಿಗೆ ಅವು ಬೇಕಿರಲೂ ಇಲ್ಲ. 1793-1794ರ ಈ ಯೋಧರು ಎಂತೆಂತಹ ಅನಾನುಕೂಲಗಳನ್ನೂ ಉಲ್ಲಾಸದಿಂದಲೇ ಸಹಿಸಿಕೊಂಡರು. ವೃತ್ತಿ ಸೈನ್ಯಗಳಲ್ಲಿ ಇಷ್ಟು ತೊಂದರೆಗಳಿದ್ದಿದ್ದರೆ ಸೈನ್ಯಕ್ಕೆ ಸೈನ್ಯವೇ ಯುದ್ಧವನ್ನು ಬಿಟ್ಟು ಓಡಿಹೋಗುತ್ತಿತ್ತಷ್ಟೆ. ಹಿಂದೆಂದೂ ಕೇಳಿರದಿದ್ದಷ್ಟು ದೊಡ್ಡದಾಗಿದ್ದ ಈ ಸೈನ್ಯಗಳಿಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಸುರಕ್ಷಿತವಾಗಿ ಸಾಗಿಸಿಕೊಂಡು ಹೋಗುವುದು ಸಾಧ್ಯವಿರಲಿಲ್ಲ. ಬಹುಬೇಗ ಫ್ರೆಂಚರು ಅಲ್ಲಲ್ಲೇ ತಮ್ಮ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದನ್ನು ಚೆನ್ನಾಗಿ ಕಲಿತರು. ಆಧುನಿಕ ಯುದ್ಧ ವ್ಯವಸ್ಥೆ ಹೀಗೆ 1793ರಲ್ಲಿ ಜನ್ಮತಾಳಿತು. ಶೀಘ್ರ ಚಲನೆ, ಇಡೀ ರಾಷ್ಟ್ರದ ಬಲವನ್ನು ಸಂಘಟಿಸುವುದು, ಡೇರೆ ಮುಂತಾದುವು ಇಲ್ಲದೆಯೇ ಎಲ್ಲೆಂದರಲ್ಲಿ ಬೀಡುಬಿಡುವುದು, ಬಲಾತ್ಕಾರದಿಂದ ಸೈನ್ಯಕ್ಕೆ ಬೇಕಾದ ವಸ್ತುಗಳ ಸಂಗ್ರಹ ಮತ್ತು ಹೆಚ್ಚಾದ ಬಲಪ್ರಯೋಗ ಇವುಗಳು ಜಾಗರೂಕತೆಯಿಂದ ರಣತಂತ್ರಗಳನ್ನು ನಿಯೋಜಿಸುವುದು. ಸಣ್ಣವೃತ್ತಿ ಸೈನ್ಯಗಳು, ಸೈನ್ಯಗಳಿಗೆ ಗುಡಾರಗಳು ಮತ್ತು ಪೂರ್ಣ ಪಡಿತರಗಳ ಬಟವಾಡೆ ಮತ್ತು ಕುಯುಕ್ತಿಗಳ ಸ್ಥಾನದಲ್ಲಿ ಬಳಕೆಗೆ ಬಂದುವು. ಹಳೆಯ ವಿಧಾನದಲ್ಲಿ ಆದಷ್ಟು ಕಡಿಮೆ ನಷ್ಟದಲ್ಲಿ ಸಾಧ್ಯವಾದಷ್ಟನ್ನು ಗಳಿಸಬೇಕೆಂಬ ಮನೋಭಾವವಿದ್ದರೆ ಹೊಸ ಕ್ರಮದಲ್ಲಿ ಹೇಗಾದರೂಮಾಡಿ ಒಂದು ಇತ್ಯರ್ಥಕ್ಕೆ ಬರಲೇಬೇಕೆಂಬ ಮನೋಭಾವವಿತ್ತು."

ತಾವು ಪ್ರವೇಶಿಸಿದ ದೇಶಗಳನ್ನು ಬಿಡುಗಡೆಮಾಡುತ್ತಿದ್ದರೋ ಅಥವಾ ಕೊಳ್ಳೆಹೊಡೆದು ಹಾಳುಮಾಡುತ್ತಿದ್ದರೋ ಎಂಬ ಪರಿವೆಯೇ ಇಲ್ಲದೆ ಒಡ್ಡು ಒಡ್ಡಾದ ಈ ಸೈನಿಕರು ಫ್ರಾನ್ಸಿಗಾಗಿ ಮಾರ್ಸೆಲೇಸ್‌ನ್ನು ಹಾಡುತ್ತಾ ಹೋರಾಡುತ್ತಿದ್ದಾಗಲೇ ಪ್ಯಾರಿಸ್ಸಿನಲ್ಲಿ ಅಷ್ಟೇನೂ ಶ್ಲಾಘನೀಯವಲ್ಲದ ರೀತಿಯಲ್ಲಿ ವಿನಿಯೋಗವಾಗುತ್ತಿತ್ತು. ಇಷ್ಟು ಹೊತ್ತಿಗೆ ಕ್ರಾಂತಿಯು ಆಡಳಿತ ರಾಬ್ಸ್‌ಪಿಯರ್ ಎಂಬ ಅಂಧಾಭಿಮಾನವುಳ್ಳ ವ್ಯಕ್ತಿಯ ಅಧೀನಕ್ಕೆ ಬಂದಿತ್ತು. ಈ ಮನುಷ್ಯ ಇಂತಹವನೇ ಎಂದು ಹೇಳುವುದು ಕಷ್ಟ. ಆಳುತನದಲ್ಲಿ ದುರ್ಬಲನೂ, ಸ್ವಭಾವತಃ ಅಂಜುಬುರುಕನೂ, ಸ್ವಪ್ರತಿಷ್ಠೆಯಿಂದ ತುಂಬಿದ್ದವನೂ ಆದರೂ ಇವನಿಗೆ ಅಧಿಕಾರವನ್ನು ದಕ್ಕಿಸಿಕೊಳ್ಳಲು ಅತಿಮುಖ್ಯ ಸಾಧನವಾದ ಶ್ರದ್ಧೆಯಿತ್ತು. ಪ್ರಜಾರಾಜ್ಯವನ್ನು ಕುರಿತು ತನಗೆ ಇದ್ದ ಯಾವುದೋ ಒಂದು ಕಲ್ಪನೆಯಂತೆಯೇ ಅದನ್ನು ಉಳಿಸಿಕೊಂಡು ಬರಲು ಇವನು ಸನ್ನದ್ಧನಾದನು; ತಾನಲ್ಲದೆ ಮತ್ತಾರಿಂದಲೂ ಈ ಕಾರ್ಯ ಸಾಧ್ಯವಿಲ್ಲವೆಂದು ಈತ ಭಾವಿಸಿದ್ದನು. ಆದುದರಿಂದ ಪ್ರಜಾರಾಜ್ಯ ಉಳಿಯಬೇಕಿದ್ದಲ್ಲಿ ತಾನು ಅಧಿಕಾರದಲ್ಲಿ ಉಳಿದುಕೊಳ್ಳಬೇಕಿತ್ತು. ಗಣತಂತ್ರರಾಜ್ಯದ ಜೀವಶಕ್ತಿಯೆಲ್ಲಕ್ಕೂ ರಾಜನ ಶಿರಚ್ಛೇದ ಮತ್ತು ರಾಜಪ್ರಭುತ್ವವಾದಿಗಳ ಕೊಲೆಗಳೇ ಉಗಮವೆಂಬಂತೆ ತೋರುತ್ತಿತ್ತು. ರಾಜ್ಯದಲ್ಲಿ ಬಂಡಾಯಗಳೆದ್ದುವು. ಪಶ್ಚಿಮದಿಕ್ಕಿನ ಲಾವೆಂಡಿ ಜಿಲ್ಲೆಯ ಜನರು

ಕಡ್ಡಾಯ ಸೈನ್ಯಭರತಿಯ ವಿರುದ್ಧ ಮತ್ತು ರೋಮಿಗೆ ವಿಧೇಯರಾಗಿದ್ದ ಪಾದ್ರಿಗಳನ್ನು ತೆಗೆದುಹಾಕಿದುದರ ವಿರುದ್ಧ ದಂಗೆಯೆದ್ದರು. ಶ್ರೀಮಂತರು ಮತ್ತು ಪಾದ್ರಿಗಳು ಇವರ ಮುಂದಾಳುಗಳಾಗಿದ್ದರು. ದಕ್ಷಿಣದಲ್ಲಿ ಮಾರ್ಸೇಲ್ಸ್ ಮತ್ತು ಲಯನ್ಸ್ ದಂಗೆಯೆದ್ದಿದ್ದವು. ಟೂಲಾನಿನಲ್ಲಿದ್ದ ರಾಜಪಕ್ಷದವರು ಒಂದು ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಸೈನ್ಯಪಾಳೆಯಗಳಿಗೆ ಆಸರೆ ಕೊಟ್ಟಿದ್ದರು. ರಾಜಪ್ರಭುತ್ವವಾದಿಗಳನ್ನೆಲ್ಲಾ ಕೊಲ್ಲುತ್ತಾ ಹೋಗುವುದಕ್ಕಿಂತ ಹೆಚ್ಚಿನ ಪರಿಣಾಮಕಾರಿ ಉತ್ತರ ಈ ಸವಾಲುಗಳಿಗೆ ಬೇರೇನೂ ಇಲ್ಲ ಎಂದೆನಿಸುತ್ತಿತ್ತು.

ಕ್ರಾಂತಿಕಾರರ ನ್ಯಾಯಸ್ಥಾನ ವಿಚಾರಣೆಗಳನ್ನು ನಡೆಸತೊಡಗಿತು. ಒಂದೇ ಸಮನೆ ಕಗ್ಗೊಲೆ ನಡೆಯಲಾರಂಭವಾಯಿತು. ಅಂದಿನ ಆ ಮನೋಧರ್ಮಕ್ಕೆ ಅದೇ ತಾನೇ ನಿರ್ಮಾಣವಾಗಿದ್ದ ಗಿಲೋಟಿನ್ ಹೇಳಿ ಮಾಡಿಸಿದಂತಿತ್ತು. ಗಿಲೋಟಿನ್‌ನಲ್ಲಿ ರಾಣಿಯು ಶಿರಚ್ಛೇದವಾಯಿತು. ರಾಬ್ಸ್‌ಪಿಯರನ ಪ್ರತಿವಾದಿಗಳಲ್ಲಿ ಅಧಿಕಾಂಶ ಜನರ ಶಿರಚ್ಛೇದನವಾಯಿತು. ದೇವರಿಲ್ಲ ಎಂದು ವಾದಿಸುತ್ತಿದ್ದ ನಾಸ್ತಿಕರ ತಲೆಕತ್ತರಿಸಲಾಯಿತು. ದಿನಕಳೆದಂತೆ, ವಾರಗಳುರುಳಿದಂತೆ ಪೈಶಾಚಿಕವಾದ ಈ ಯಂತ್ರ ಮತ್ತೂ ತಲೆಗಳನ್ನು ಕತ್ತರಿಸಿಹಾಕಿತು. ರಾಬ್ಸ್‌ಪಿಯರನ ಆಡಳಿತ ರಕ್ತಕುಡಿದೇ ನಡೆಯುತ್ತೇನೋ ಎನಿಸುತ್ತಿತ್ತು, ಅಫೀಮಿನ ಚಟವಿದ್ದವನಿಗೆ ದಿನಕಳೆದಂತೆ ಮತ್ತೂ ಹೆಚ್ಚು ಅಫೀಮು ಬೇಕೆನಿಸುವಂತೆ ಇದಕ್ಕೂ ಮತ್ತೂ ರಕ್ತ ಬೇಕೆನಿಸುವಂತಾಯಿತು.

ಕಡೆಗೆ 1794ರ ಬೇಸಿಗೆಯಲ್ಲಿ ರಾಬ್ಸ್‌ಪಿಯರನನ್ನೇ ಅಧಿಕಾರದಿಂದ ಉರುಳಿಸಿ ಗಿಲೋಟಿನ್‌ಗೆ ಕಳುಹಿಸಲಾಯಿತು. ಅವನ ಬಳಿಕ ಐದು ಜನರಿದ್ದ ಒಂದು ಮಂಡಲಿ ಅಧಿಕಾರಕ್ಕೆ ಬಂದು ಫ್ರಾನ್ಸಿನ ಹೊರಗೆ ದೇಶಸಂರಕ್ಷಣೆಗಾಗಿ ಯುದ್ಧ ನಡೆಸುತ್ತಾ ದೇಶದೊಳಗೂ ಒಡಕುಂಟಾಗದಂತೆ ಐದುವರ್ಷ ಕಾರ್ಯ ನಿರ್ವಹಿಸಿತು. ಹಿಂಸಾತ್ಮಕ ಕಾರ್ಯಗಳಿಂದ ತುಂಬಿದ್ದ ಅಂದಿನ ಚರಿತ್ರೆಯಲ್ಲಿ ಈ ಆಳ್ವಿಕೆ ಒಂದು ವಿಚಿತ್ರವಾದ ವಿರಾಮ ಕಾಲವೆಂಬಂತೆ ಕಾಣಿಸಿಕೊಳ್ಳುತ್ತದೆ. ಸಮಸ್ಯೆಗಳು ಕಾಣಿಸಿಕೊಂಡಂತೆಲ್ಲಾ ಅವುಗಳನ್ನು ಇವರು ಒಂದೊಂದನ್ನಾಗಿ ಎದುರಿಸುತ್ತಾ ಹೋದರು. ಕ್ರಾಂತಿಯ ಪ್ರಚಾರೋತ್ಸಾಹದಿಂದ ಕೂಡಿದ್ದ ಫ್ರೆಂಚ್ ಸೈನ್ಯಗಳು ಹಾಲೆಂಡ್, ಬೆಲ್ಜಿಯಂ, ಸ್ವಿಟ್ಜರ್‌ಲೆಂಡ್, ದಕ್ಷಿಣ ಜರ್ಮನಿ ಮತ್ತು ಉತ್ತರ ಇಟಲಿಗಳಿಗೆ ನುಗ್ಗಿದುವು. ಎಲ್ಲ ಕಡೆಯಲ್ಲೂ ದೊರೆಗಳನ್ನು ಓಡಿಸಿ ಪ್ರಜಾತಂತ್ರ ರಾಜ್ಯಗಳನ್ನು ಸ್ಥಾಪಿಸಲಾಯಿತು. ಆದರೆ ಫ್ರೆಂಚ್ ಸರ್ಕಾರದ ಹಣದ ಅಡಚಣೆಗಳನ್ನು ನೀಗಿಸುವುದಕ್ಕಾಗಿ ಈ ಬಿಡುಗಡೆಮಾಡಲ್ಪಟ್ಟ ಜನರ ಐಶ್ವರ್ಯದ ಲೂಟಿ ನಡೆಯುತ್ತಲೇ ಇದ್ದಿತು. ಸಲಹಾ ಮಂಡಲಿಯಿಂದ ಪ್ರೋತ್ಸಾಹಿತವಾದ ಪ್ರಚಾರೋತ್ಸಾಹ ಅದಕ್ಕೆ ಅಡ್ಡಿಯಾಗಲಿಲ್ಲ. ಬರಬರುತ್ತಾ ಈ ಯುದ್ಧಗಳು ಸ್ವಾತಂತ್ರ್ಯಕ್ಕಾಗಿ ನಡೆದ ಪವಿತ್ರ ಯುದ್ಧಗಳಂತಿರುವುದರ ಬದಲು ಹಿಂದಿನ ರಾಜ್ಯಗಳು ಆಕ್ರಮಣಕ್ಕಾಗಿ ನಡೆಸುತ್ತಿದ್ದ

ಯುದ್ಧಗಳಂತೆ ಆಗಿಹೋದುವು. "ಮಹಾನ್ ರಾಜಪ್ರಭುತ್ವ"ಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಫ್ರಾನ್ಸ್ ದೇಶಕ್ಕೆ ಕಡೆಯವರೆಗೂ ಬಿಟ್ಟುಕೊಡಲು ಇಷ್ಟವಿಲ್ಲದುದೆಂದರೆ ಅದರ ವಿದೇಶಾಂಗ ನೀತಿಯ ಮೇಲ್ಪಂಕ್ತಿ. ಸಲಹಾ ಮಂಡಳಿ ಆಡಳಿತ ನಡೆಸುತ್ತಿದ್ದಾಗಲೂ ಕ್ರಾಂತಿಯಾಗಿಯೇ ಇಲ್ಲ ಎನ್ನುವಂತೆ ಅದೇ ವಿದೇಶಾಂಗ ನೀತಿ ಬಿರುಸಿನಿಂದ ಆಚರಣೆಯಲ್ಲಿದ್ದುದು ಕಾಣಬರುತ್ತದೆ.

ಈ ಸಮಯದಲ್ಲಿ ಅತ್ಯಂತ ತೀವ್ರ ರೂಪದ ರಾಷ್ಟ್ರೀಯ ಸ್ವಾರ್ಥ ನೀತಿ ಮೂರ್ತಿವೆತ್ತಂತಿದ್ದ ವ್ಯಕ್ತಿಯೊಬ್ಬ ಮುಂದೆ ಬಂದನು. ಇದು ಇಡಿ ಪ್ರಪಂಚದ ಹಾಗೂ ಫ್ರಾನ್ಸಿನ ದುರದೃಷ್ಟ. ಇವನಿಂದಾಗಿ ಫ್ರಾನ್ಸ್ ಹತ್ತುವರ್ಷಕಾಲ ವೈಭವವನ್ನು ಕಂಡು ಕಡೆಗೆ ಪೂರ್ತಿ ಸೋತು ಸಂಪೂರ್ಣ ಪರಾಜಯದ ಅವಮಾನವನ್ನು ಅನುಭವಿಸಿತು. ಇವನೇ ನೆಪೋಲಿಯನ್ ಬೋನಾಪಾರ್ಟ್, ಸಲಹಾಮಂಡಲಿಯ ಸೈನ್ಯಗಳಿಗೆ ಇಟಲಿಯಲ್ಲಿ ವಿಜಯ ತಂದು ಕೊಟ್ಟವನು.

ಸಲಹಾಮಂಡಲಿ ಅಧಿಕಾರದಲ್ಲಿದ್ದ ಐದೂವರ್ಷಗಳೂ ಇವನು ತಾನೂ ಮೇಲೇರಬೇಕೆಂದು ಒಂದೇ ಸಮನೆ ಮಸಲತ್ತು ಮಾಡುತ್ತಲೇ ಇದ್ದನು. ಕ್ರಮೇಣ ಮೇಲಕ್ಕೇರಿ ಪರಮಾಧಿಕಾರವನ್ನುಗಳಿಸಿಕೊಂಡನು. ಇವನೇನೂ ಅಂತಹ ತಿಳಿವಳಿಕೆಯಿದ್ದವನಲ್ಲ. ಆದರೆ ದಯಾದಾಕ್ಷಿಣ್ಯಗಳಿಲ್ಲದ ಖಂಡಿತವಾದಿಯೂ ಮಹತ್ತಾದ ಕಾರ್ಯಶಕ್ತಿಯಿದ್ದವನೂ ಆಗಿದ್ದನು. ಇವನು ವೃತ್ತಿಜೀವನವನ್ನು ಮೊದಲು ಮಾಡಿದುದು ರಾಬ್ಸ್‌ಪಿಯರನ ಅನುಯಾಯಿಯಾಗಿ. ಅದರಿಂದಲೇ ಇವನಿಗೆ ಮೊದಲ ಬಾರಿ ಬಡತಿಸಿಕ್ಕಿತು. ಆದರೆ ಆಗ ಯುರೋಪಿನಲ್ಲಿ ಪ್ರಭಾವ ಬೀರುತ್ತಿದ್ದ ನವ್ಯ ಶಕ್ತಿಗಳ ನಿಜವಾದ ಅರಿವು ಅವನಿಗಿರಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಅವನ ಅತ್ಯುನ್ನತ ಕಲ್ಪನೆಯೆಂದರೆ ಪಶ್ಚಿಮ ಸಾಮ್ರಾಜ್ಯದ ಪುನಃ ಸ್ಥಾಪನೆ. ದಬ್ಬಾಳಿಕೆಯ ಮೇಲೆ ಇವನಿಗಿದ್ದ ಒಲವು ಕಾಲಮೀರಿಹೋಗಿದ್ದ ಈ ಪ್ರಯತ್ನಕ್ಕೆ ಕಾರಣವಾಯಿತು. ಹಳೆಯ ಪವಿತ್ರರೋಮನ್ ಸಾಮ್ರಾಜ್ಯದ ಅವಶೇಷಗಳನ್ನು ಪೂರ್ತಿಯಾಗಿ ನಾಶ ಮಾಡಲು ಇವನು ಪ್ರಯತ್ನಿಸಿದನು. ಅದರ ಸ್ಥಾನದಲ್ಲಿ ಪ್ಯಾರಿಸ್ಸೇ ಕೇಂದ್ರವಾಗಿದ್ದ ಒಂದು ಹೊಸ ಸಾಮ್ರಾಜ್ಯವನ್ನು ಸ್ಥಾಪಿಸುವ ಉದ್ದೇಶ ಇವನಿಗಿತ್ತು. ವಿಯೆನ್ನಾದ ಚಕ್ರವರ್ತಿ ಅಲ್ಲಿಂದ ಮುಂದೆ ಪವಿತ್ರ ರೋಮನ್ ಚಕ್ರವರ್ತಿ ಎಂದು ಕರೆಯಿಸಿಕೊಳ್ಳುವುದರ ಬದಲು ಬರಿ ಆಸ್ಟ್ರಿಯದ ಚಕ್ರವರ್ತಿಯಾದನು. ಆಸ್ಟ್ರಿಯದ ರಾಜಕುಮಾರಿಯೊಬ್ಬಳನ್ನು ಮದುವೆಯಾಗುವುದಕ್ಕಾಗಿ ತನ್ನ ಫ್ರೆಂಚ್ ಹೆಂಡತಿಯೊಡನೆ ವಿವಾಹವಿಚ್ಛೇದ ಮಾಡಿಕೊಂಡನು.

ಕ್ರಿ.ಶ. 1799ರಲ್ಲಿ ಮೊದಲನೆ ಕಾನ್ಸಲ್ ಆದ ನೆಪೋಲಿಯನ್ ಹೆಚ್ಚು ಕಡಿಮೆ ಫ್ರಾನ್ಸಿನ ದೊರೆಯೇ ಆಗಿ ಹೋದನು. 1804ರಲ್ಲಿ ಷಾರ್ಲಮನ್ ಮಾಡಿದಂತೆಯೇ ತನ್ನನ್ನು ತಾನೇ ಫ್ರಾನ್ಸಿನ ಸಾಮ್ರಾಟನೆಂದು ಘೋಷಿಸಿಕೊಂಡನು. ಪ್ಯಾರಿಸ್ಸಿನಲ್ಲಿ ಪೋಪನಿಂದ ಇವನಿಗೆ ಕಿರೀಟಧಾರಣೆಯಾಯಿತು. ಅಂದರೆ ಷಾರ್ಲಮನ್ ಕೊಟ್ಟಿದ್ದ

ಸಲಹೆಯ ಪ್ರಕಾರ ಪೋಪನ ಕೈಯಿಂದ ಕಿರೀಟವನ್ನು ತೆಗೆದುಕೊಂಡು ಅದನ್ನು ತನ್ನ ತಲೆಯಮೇಲೆ ತಾನೇ ಇಟ್ಟುಕೊಂಡನು. ಇವನ ಮಗನಿಗೆ ರೋಮಿನ ರಾಜನೆಂದು ಪಟ್ಟ ಕಟ್ಟಲಾಯಿತು.

ಕೆಲವು ವರ್ಷಗಳು ನೆಪೋಲಿಯನ್ನನ ಆಳ್ವಿಕೆಯೆಂದರೆ ಒಂದು ಭಾರೀ ವಿಜಯೋತ್ಸವವಾಗಿತ್ತು. ಇವನು ಇಟಲಿ ಮತ್ತು ಸ್ಪೇನುಗಳ ಅಧಿಕಭಾಗವನ್ನು ಗೆದ್ದುಕೊಂಡು ಪ್ರಷ್ಯಾ ಮತ್ತು ಆಸ್ಟ್ರಿಯಗಳನ್ನು ಸೋಲಿಸಿದನು. ರಷ್ಯಾದ ಪಶ್ಚಿಮಕ್ಕಿದ್ದ ಯೂರೋಪಿನಲ್ಲೆಲ್ಲಾ ಇವನದೇ ಮೇಲುಗೈಯಾಯಿತು. ಆದರೆ ಬ್ರಿಟಿಷರಿಂದ ಸಮುದ್ರದ ಮೇಲಿನ ಹತೋಟಿಯನ್ನು ಗೆದ್ದುಕೊಳ್ಳಲು ಇವನಿಂದ ಆಗಲಿಲ್ಲ. ಇವನ ನೌಕಾಪಡೆಗಳು ಟ್ರಫಾಲ್ಗರಿನಲ್ಲಿ ಬ್ರಿಟಿಷ್ ನೌಕಾಧಿಪತಿ ನೆಲ್ಸನ್ನನಿಂದ ನಿರ್ಣಾಯಕ ಸೋಲನ್ನನುಭವಿಸಿದುವು. 1808ರಲ್ಲಿ ಸ್ಪೇನ್ ಇವನ ಮೇಲೆ ತಿರುಗಿಬಿದ್ದಿತು. ವೆಲ್ಲಿಂಗ್ಟನ್ನನ ನೇತೃತ್ವದಲ್ಲಿದ್ದ ಬ್ರಿಟಿಷ್ ಸೈನ್ಯವು ಫ್ರೆಂಚ್ ಸೈನ್ಯಗಳನ್ನು ಮೆಲ್ಲಮೆಲ್ಲನೆ ಆ ಪರ್ಯಾಯದ್ವೀಪದಿಂದ ಉತ್ತರ ದಿಕ್ಕಿಗೆ ಹೊರತಳ್ಳಿತು. 1811ರಲ್ಲಿ ನೆಪೋಲಿಯನ್ನನಿಗೂ ಜಾರ್ ಒಂದನೆಯ ಅಲೆಕ್ಸಾಂಡರನಿಗೂ ಘರ್ಷಣೆ ಮೊದಲಾಯಿತು. 1812ರಲ್ಲಿ ಇವನು ವಿವಿಧರೀತಿ ಜನರು ಸೇರಿದ ಆರು ಲಕ್ಷ ಜನರಿದ್ದ ಒಂದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ರಷ್ಯಾದ ಮೇಲೆ ದಂಡೆತ್ತಿಹೋದನು. ಈ ಸೈನ್ಯ ರಷ್ಯನರಿಂದ, ರಷ್ಯಾದ ಚಳಿಗಾಲದಿಂದ ಸೋತುಹೋಯಿತು. ಅದರ ಅಧಿಕಭಾಗ ನಾಶವಾಯಿತು. ಜರ್ಮನಿ ಇವನ ಮೇಲೆಬಿದ್ದಿತು, ಸ್ವೀಡನ್ ತಿರುಗಿಬಿದ್ದಿತು. ಫ್ರೆಂಚ್ ಸೈನ್ಯಗಳು ಎಲ್ಲಕಡೆ ಸೋತುಕೊಂಡು ಹಿಂದೆ ಬಂದುವು. ಫಾಂಟೇನ್‌ಬ್ಲೂವಿನಲ್ಲಿ ನೆಪೋಲಿಯನ್ ಅಧಿಕಾರ ತ್ಯಾಗಮಾಡಿದನು (1814). ಇವನನ್ನು ಎಲ್ಬಾಕ್ಕೆ ಗಡಿಪಾರು ಮಾಡಲಾಯಿತು. 1815ರಲ್ಲಿ ಕೊನೆಯದಾಗಿ ಪ್ರಯತ್ನ ನಡೆಸಲು ಫ್ರಾನ್ಸಿಗೆ ಹಿಂತಿರುಗಿದಾಗ ವಾಟರ್‌ಲೂವಿನಲ್ಲಿ ಬ್ರಿಟಿಷರು, ಬೆಲ್ಜಿಯನ್ನರು, ಪ್ರಷ್ಯನ್ನರು ಸೇರಿಕೊಂಡು ಇವನನ್ನು ಸೋಲಿಸಿಬಿಟ್ಟರು. 1821ರಲ್ಲಿ ಸೆಂಟ್ ಹೆಲೆನಾ ದ್ವೀಪದಲ್ಲಿ ಇವನು ಬ್ರಿಟಿಷರ ಬಂದಿಯಾಗಿ ಪ್ರಾಣ ನೀಗಿದನು.

ಫ್ರೆಂಚ್ ಕ್ರಾಂತಿಯು ಬಿಡುಗಡೆ ಮಾಡಿದ್ದ ಶಕ್ತಿಗಳು ಹೀಗೆ ವ್ಯರ್ಥವಾಗಿ ಹೋದವು. ವಿಜಯಿಗಳಾಗಿದ್ದ ಮಿತ್ರರಾಷ್ಟ್ರಗಳ ಒಂದು ದೊಡ್ಡ ಸಮ್ಮೇಳನ ವಿಯನ್ನಾದಲ್ಲಿ ಸಭೆ ಸೇರಿತು. ಆ ಭಾರೀ ಬಿರುಗಾಳಿ ಛಿದ್ರ ಛಿದ್ರವನ್ನಾಗಿ ಮಾಡಿದ್ದನ್ನೆಲ್ಲಾ ಮತ್ತೆ ಸಾಧ್ಯವಿದ್ದಷ್ಟು ಒಟ್ಟುಗೂಡಿಸುವುದು ಈ ಸಮ್ಮೇಳನದ ಉದ್ದೇಶವಾಗಿತ್ತು. ಸಮ್ಮೇಳನದ ನಂತರ ಸುಮಾರು ನಲ್ವತ್ತು ವರ್ಷಗಳು ಒಂದು ವಿಧದ ಶಾಂತಿ—ವಿಪರೀತ ಬಳಲಿ ಬೆಂಡಾದ ಮೇಲೆ ಇರುವಂತಹ ಶಾಂತಿ—ಯೂರೋಪಿನಲ್ಲಿ ನೆಲಸಿತ್ತು.

56. ನೆಪೋಲಿಯನ್ನನ ಪತನದ ಅನಂತರ ಯುರೋಪಿನಲ್ಲಿ ನೆಲಸಿದ್ದ ಅಸ್ಥಿರವಾದ ಶಾಂತಿ.

ಆ ಕಾಲದ ಯುರೋಪಿನಲ್ಲಿ ಪರಿಪೂರ್ಣವಾದ ಸಾಮಾಜಿಕ ಮತ್ತು ಅಂತರಾಷ್ಟ್ರೀಯ ಶಾಂತಿ ನೆಲಸುವುದಕ್ಕೆ ಎರಡು ಮುಖ್ಯ ಸಂಗತಿಗಳು ಅಡ್ಡ ಬಂದು ಕ್ರಿ. ಶ. 1854 ರಿಂದ 1871 ರ ವರೆಗಿನ ಕಾಲಾವಧಿಯಲ್ಲಿ ಸಾಲಾಗಿ ನಡೆದ ಯುದ್ಧಗಳಿಗೆ ತಳಹದಿ ಹಾಕಿದುವು. ಆಗಿನ ರಾಜರು ತಮಗೆ ಮುಂಚೆ ಇದ್ದ ಅನ್ಯಾಯಕರವಾದ ವಿಶೇಷ ಸಲವತ್ತುಗಳನ್ನು ತಿರುಗಿ ಪಡೆಯಬೇಕೆಂದು ಪ್ರಯತ್ನಿಸುತ್ತಾ ಚಿಂತನೆ, ಲೇಖನ ಮತ್ತು ಶಿಕ್ಷಣಗಳು ಸ್ವತಂತ್ರವಾಗಿರಲು ಬಿಡದೆ ಅವುಗಳಲ್ಲಿ ಕೈಹಾಕುತ್ತಿದ್ದುದು ಇವುಗಳಲ್ಲಿ ಮೊದಲನೆಯದು. ವಿಯೆನ್ನಾ ರಾಜಕಾರಣಿಗಳು ವಿಚಿತ್ರವಾದ ರೀತಿಯಲ್ಲಿ ಯುರೋಪನ್ನು ಹರಿದು ಹಂಚಿದ್ದುದು ಎರಡನೆಯದು.

ಮುಂಚೆ ಇದ್ದ ಪರಿಸ್ಥಿತಿಗಳನ್ನು ಪುನಃ ತಂದುಕೊಳ್ಳುವ ಉದ್ದೇಶದಿಂದ ಹಿನ್ನಡೆಯುವ ಪ್ರವೃತ್ತಿ ಎಲ್ಲಕ್ಕಿಂತ ಮೊದಲು ವಿಶೇಷವಾಗಿ ಸ್ಪೇನಿನಲ್ಲಿ ಕಾಣಿಸಿಕೊಂಡಿತು. ಇಲ್ಲಿ ಕ್ಯಾಥೊಲಿಕ್ ಕ್ರೈಸ್ತಮತದ ಪಾಷಂಡಿ ವಿಚಾರಣಾವ್ಯವಸ್ಥೆಯನ್ನೂ (Inquisition) ಸಹ ಪುನಃ ಸ್ಥಾಪಿಸಲಾಯಿತು. ಕ್ರಿ. ಶ. 1808ರಲ್ಲಿ ನೆಪೋಲಿಯನ್ ತನ್ನ ತಮ್ಮ ಜೋಸೆಫನನ್ನು ಸ್ಪೇನಿನ ಸಿಂಹಾಸನದಲ್ಲಿ ಕುಳ್ಳಿರಿಸಿದಾಗ ಅಟ್ಲಾಂಟಿಕ್ ಸಾಗರದಾಚೆ ಇದ್ದ ಸ್ಪಾನಿಷ್ ವಸಾಹತುಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಮಾದರಿಯಾಗಿಟ್ಟುಕೊಂಡು ಯುರೋಪಿನ ಭಾರಿಯಾದ ಅಧಿಕಾರ ವ್ಯವಸ್ಥೆಯ ಮೇಲೆ ದಂಗೆಯೆದ್ದಿದ್ದುವು. ಜನರಲ್ ಬೊಲಿವರ್ ದಕ್ಷಿಣ ಅಮೆರಿಕದ ಜಾರ್ಜ್‌ವಾಷಿಂಗ್‌ಟನ್ ಆದನು. ಈ ದಂಗೆಯನ್ನು ಹತ್ತಿಕ್ಕಲು ಸ್ಪೇನಿಗೆ ಆಗಲಿಲ್ಲ. ಅಮೆರಿಕದ ಸ್ವಾತಂತ್ರ್ಯ ಸಮರದಂತೆ ಇದೂ ಎಳೆಯುತ್ತಾ ಹೋಯಿತು. ಕಡೆಗೆ ಆಸ್ಟ್ರಿಯಾದೇಶವು "ಪವಿತ್ರ ಮೈತ್ರಿ" (The Holly Alliance)ಯ ಚೇತನಕ್ಕೆ ಸರಿಹೊಂದುವ ಒಂದು ಸಲಹೆಯನ್ನು ಮುಂದೆ ಇಟ್ಟಿತು. ಅದೇನೆಂದರೆ ಯುರೋಪಿನ ದೊರೆಗಳು ಈ ಹೋರಾಟದಲ್ಲಿ ಸ್ಪೇನಿಗೆ ಸಹಾಯಮಾಡಬೇಕೆನ್ನುವುದು. ಯುರೋಪಿನಲ್ಲಿ ಬ್ರಿಟನ್ ಇದನ್ನು ವಿರೋಧಿಸಿತು. ಆದರೆ ರಾಜ ಪ್ರಭುತ್ವವನ್ನು ಪುನರುಜ್ಜೀವನಗೊಳಿಸಬೇಕೆಂಬ ಈ ಪ್ರಯತ್ನಕ್ಕೆ ಬೇರೆ ಮಾತೇ ಇಲ್ಲದಂತೆ ತಡೆಹಾಕಿದುದು ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಮನ್ರೋ ಮಾಡಿದ ಸಮಯೋಚಿತ ಘೋಷಣೆ. ಪಶ್ಚಿಮಾರ್ಧಗೋಳದಲ್ಲಿ ಯುರೋಪಿನ ವ್ಯವಸ್ಥೆಯನ್ನು ವಿಸ್ತರಿಸಲು ನಡೆಯುವ ಯಾವುದೇ ಪ್ರಯತ್ನವನ್ನೂ ಸಹ ಅಮೆರಿಕ ಸಂಯುಕ್ತ ಸಂಸ್ಥಾನ ತನಗೆ ಶತ್ರುತ್ವದ ಕ್ರಿಯೆಯೆಂದು ಪರಿಗಣಿಸುವುದಾಗಿ ಘೋಷಿಸಿತು. ಹೀಗೆ ಮನ್ರೋ ಘೋಷಣೆ ಹುಟ್ಟಿಕೊಂಡಿತು. ಇದರಿಂದಾಗಿ ಯುರೋಪಿನ ಪ್ರಬಲವಾದ ಪ್ರಭುತ್ವ ವ್ಯವಸ್ಥೆ ಅಮೆರಿಕವನ್ನು ಪ್ರವೇಶಿಸಲು ಸಾಧ್ಯವಾಗಿಲ್ಲ ಮತ್ತು ಸ್ಪ್ಯಾನಿಷ್

ಅಮೇರಿಕದ ಹೊಸರಾಜ್ಯಗಳ ತಮ್ಮ ಭವಿಷ್ಯಗಳನ್ನು ತಾನೇ ತಮಗೆ ಬೇಕಾದಂತೆ ನಿರೂಪಿಸಿಕೊಳ್ಳಲು ಸಾಧ್ಯವಾಗಿದೆ.

ಸ್ಪ್ಯಾನಿಷ್ ರಾಜ್ಯಪ್ರಭುತ್ವ ತನ್ನ ವಸಾಹತುಗಳನ್ನು ಕಳೆದುಕೊಂಡರೂ ಯೂರೋಪಿನಲ್ಲಿ ಮಾತ್ರ ಯೂರೋಪ್ ಒಕ್ಕೂಟದ ಆಶ್ರಯದಲ್ಲಿ ತನಗೆ ಏನು ಬೇಕೋ ಮಾಡಿಕೊಳ್ಳಬಹುದಾಗಿತ್ತು. ಯೂರೋಪಿನ ಸಮ್ಮೇಳನ ಕೊಟ್ಟ ಕಾರ್ಯ ನಿರ್ವಹಣಾನುಮತಿ ಮೇರೆಗೆ ಫ್ರೆಂಚ್ ವಿಯೆನ್ನಾ ಸಮ್ಮೇಳನ ಸ್ಥಾಪಿಸಿದ್ದ ಶಾಂತಿಯನ್ನು ಹೀಗೆ ರಾಜತ್ವವಾದಿಗಳು ತಮ್ಮ ಪ್ರತಿಗಾಮಿ ಧೋರಣೆಗಳಿಂದ ಉದ್ರೇಕಿಸಿ ಅಲುಗಾಡಿಸಿದರು. ವಿಯೆನ್ನಾದಲ್ಲಿ ರಾಯಭಾರಿ ವರ್ಗದವರು ಯಾವ ವ್ಯವಸ್ಥೆಗೂ ಅನುಗುಣವಲ್ಲದ ಹೇಗೆಂದರೆ ಹಾಗೆ ನಿಯೋಜಿಸಿದ ಎಲ್ಲೆಗಳಿಂದಾದ ಒತ್ತಡಗಳು ಇವುಗಳಿಗಿಂತ ನಿಧಾನವಾಗಿ ಕೂಡಿಹಾಕಿಕೊಳ್ಳುತ್ತಾ ಬಂದರೂ ಮಾನವ ವರ್ಗದ ಶಾಂತಿಗೆ ಮತ್ತೂ ಅಪಾಯಕಾರಿಯಾದುವು. ಬೇರೆ ಬೇರೆ ಭಾಷೆಗಳನ್ನಾಡುವ, ಇದೇ ಕಾರಣದಿಂದ ಬೇರೆ ಬೇರೆ ಸಾಹಿತ್ಯಗಳನ್ನೋದುವ, ಬೇರೆ ಬೇರೆ ಭಾವನೆಗಳನ್ನು ಪಡೆದಿರುವ ಜನರ ವ್ಯವಹಾರಗಳನ್ನು ಒಟ್ಟಿಗೆ ನಡೆಸುವುದು ಅತ್ಯಂತ ಇಕ್ಕಟ್ಟಿನ ಕೆಲಸ. ಈ ಭಿನ್ನಾಭಿಪ್ರಾಯಗಳಿಗೆ ಧಾರ್ಮಿಕ ವಿವಾದಗಳೂ ಸೇರಿಕೊಂಡರೆ ಮತ್ತಷ್ಟು ತೊಂದರೆಯಾಗುತ್ತದೆ. ಸ್ವಿಸ್ ಬೆಟ್ಟಗುಡ್ಡಗಳ ಪ್ರದೇಶಗಳ ಜನರು ತಮ್ಮ ರಕ್ಷಣೆಗಾಗಿ ಒಗ್ಗಟ್ಟಾಗಬೇಕಾದಂತೆ ಏನಾದರೂ ಎಲ್ಲರಿಗೂ ಸಾಮಾನ್ಯವಾದ ಒಂದು ಪ್ರಬಲ ಅವಶ್ಯಕತೆ ಇದ್ದಲ್ಲಿ ಮಾತ್ರ ಬೇರೆ ಬೇರೆ ಭಾಷೆಗಳು ಮತ್ತು ಬೇರೆ ಬೇರೆ ಧರ್ಮಗಳ ಜನರನ್ನು ಒಟ್ಟಿಗೆ ತರುವುದು ಸಮಂಜಸವೆನ್ನಬಹುದು. ಸ್ವಿಟ್ಜರ್ಲೆಂಡಿನಲ್ಲಿಯೂ ಕೂಡ ಎಲ್ಲ ಕಡೆಯೂ ಸ್ಥಳೀಯವಾಗಿ ಅತ್ಯಂತ ಹೆಚ್ಚಾದ ಸ್ವಯಮಾಧಿಕಾರವಿದೆ. ಮ್ಯಾಸಿಡೋನಿಯದಂತೆ ಬೇರೆ ಬೇರೆ ಜನರ ಗುಂಪುಗಳು ಹಳ್ಳಿಗಳು ಮತ್ತು ಜಿಲ್ಲೆಗಳಲ್ಲಿ ಒಂದರೊಡನೊಂದು ವಾಸಿಸುತ್ತಿದ್ದು ದೇಶವೆಲ್ಲ ತೇಪೆ ಕೆಲಸದ ಕವುದಿಯಂತಿದ್ದಾಗ ದೇಶವನ್ನು ಸ್ವಂತ ಅಧಿಕಾರವನ್ನುಳ್ಳ ಮಂಡಲಗಳನ್ನಾಗಿ ವಿಭಾಗಿಸುವುದು ಅನಿವಾರ್ಯವಾಗುತ್ತದೆ. ವಿಯೆನ್ನಾ ಸಮ್ಮೇಳನ ವಿಭಾಗಿಸಿರುವ ಯೂರೋಪಿನ ಭೂಪಟವನ್ನು ನೋಡಿದರೆ ಎಲ್ಲ ಸ್ಥಳಗಳಲ್ಲೂ ಎಷ್ಟು ಸಾಧ್ಯವೋ ಅಷ್ಟು ಜುಗುಪ್ಸೆಯನ್ನೂ ರೋಷವನ್ನೂ ಹುಟ್ಟಿಸುವುದಕ್ಕಾಗಿಯೇ ಆ ವಿಭಾಗಗಳನ್ನು ನಿಯೋಜಿಸಿರುವಂತೆ ತೋರುತ್ತದೆ. ಈ ಹಂಚಿಕೆಯು ನಿಷ್ಕಾರಣವಾಗಿ ಡಚ್ ಗಣತಂತ್ರ ರಾಜ್ಯವನ್ನು ನಾಶಮಾಡಿ ಪ್ರಾಟೆಸ್ಟಂಟ್ ಡಚ್ಚರನ್ನು ಫ್ರೆಂಚ್ ಮಾತನಾಡುವ ಹಳೆಯ ಸ್ಪ್ಯಾನಿಷ್ (ಆಸ್ಟ್ರಿಯನ್) ನೆದರ್‌ಲ್ಯಾಂಡ್‌ನವರೊಡನೆ ಗಂಟುಹಾಕಿ ನೆದರ್‌ಲ್ಯಾಂಡ್ಸ್ ರಾಜಪ್ರಭುತ್ವವನ್ನು ಸ್ಥಾಪಿಸಿತು. ಜರ್ಮನ್ ಮಾತನ್ನಾಡುವ ಆಸ್ಟ್ರಿಯನ್ನರಿಗೆ ಹಳೆಯ ಗಣತಂತ್ರ ರಾಜ್ಯ ವೆನಿಸನ್ನಷ್ಟೇ ಅಲ್ಲದೆ ಮಿಲಾನಿನವರೆಗಿದ್ದ ಉತ್ತರ ಇಟಲಿಯನ್ನೆಲ್ಲ ಕೊಟ್ಟುಬಿಟ್ಟಿತು. ಫ್ರೆಂಚ್ ಭಾಷೆಯನ್ನು ಆಡುತ್ತಿದ್ದ ಸಾವಾಯಿಯನ್ನು ಇಟಲಿಯ ಕೆಲವು ಭಾಗಗಳೊಡನೆ ಸೇರಿಸಿ ಸಾರ್ಡಿನಿಯ ರಾಜ ಪ್ರಭುತ್ವ,

ವನ್ನು ಪುನರುಜ್ಜೀವಿಸಿತು. ಪರಸ್ಪರ ಏನೂ ಹೊಂದಾಣಿಕೆಯಿಲ್ಲದಿದ್ದ ಜರ್ಮನ್ನರು, ಹಂಗೇರಿಯನ್ನರು, ಜೆಕೊಸ್ಲೋವಾಕರು, ಯುಗೋಸ್ಲಾವರು, ರುಮೇನಿಯನ್ನರು, ಈಗ ಇಟಾಲಿಯನ್ನರು ಇವರೆಲ್ಲರ ಮಿಶ್ರಣವಾಗಿದ್ದ ಆಸ್ಟ್ರಿಯ ಹಂಗೆರಿ ಆಗಲೇ ಆಸ್ಫೋಟಿಸುವಂತೆ ಕಾಣುತ್ತಿತ್ತು; 1772 ಮತ್ತು 1795 ರಲ್ಲಿ ಆಸ್ಟ್ರಿಯ ವಶ ಮಾಡಿಕೊಂಡಿದ್ದ ಪೋಲೆಂಡಿನ ಭಾಗಗಳ ಮೇಲಿನ ಸ್ವಾಮ್ಯವನ್ನು ಪುಷ್ಟೀಕರಿಸಿ ಅದನ್ನು ಮತ್ತೂ ಅಸ್ಥಿರವನ್ನಾಗಿಮಾಡಿತು. ಪ್ರಜಾತಂತ್ರದಲ್ಲಿ ನಂಬಿಕೆಯುಳ್ಳ ಕ್ಯಾಥೋಲಿಕರಾದ ಪೋಲಿಷ್ ಜನತೆಯ ಹೆಚ್ಚಿನ ಭಾಗವನ್ನು ಗ್ರೀಕ್ ಆರ್ಥೋಡಾಕ್ಸ್ ಆದ ಅವರಿಗಿಂತ ಹಿಂದುಳಿದಿದ್ದ ರಷ್ಯದ ಜಾರನ ವಶಕ್ಕೊಪ್ಪಿಸಲಾದರೂ ಪೋಲೆಂಡಿನ ಮುಖ್ಯವಾದ ಜಿಲ್ಲೆಗಳು ಪ್ರಾಟೆಸ್ಟಂಟ್ ಪ್ರಷ್ಯಕ್ಕೆ ಸೇರಿದುವು. ಸಂಪೂರ್ಣವಾಗಿ ಅನ್ಯರಾದ ಫಿನ್ನರಮೇಲೆ ಅಧಿಕಾರ ನಡೆಸುತ್ತಿದ್ದ ಜಾರನಿಗೆ ಈಗ ಅದಕ್ಕೆ ಒಪ್ಪಿಗೆ ಸಿಕ್ಕಿತು. ಪರಸ್ಪರ ಭಿನ್ನರಾದ ನಾರ್ವೆಯವರು ಮತ್ತು ಸ್ವೀಡನ್ನಿನವರನ್ನು ಒಬ್ಬನೇ ರಾಜನ ಕೆಳಗೆ ಒಟ್ಟು ಸೇರಿಸಲಾಯಿತು. ಜರ್ಮನಿಯಲ್ಲಂತೂ ಅತ್ಯಂತ ಕಳವಳಕಾರಿಯಾದ ತೊಡಕಿನ ಪರಿಸ್ಥಿತಿ ಏರ್ಪಟ್ಟಿತು ಎನ್ನುವುದನ್ನು ಓದುಗರು ಗಮನಿಸಬಹುದು. ಅನೇಕ ಸಣ್ಣ ಸಣ್ಣ ರಾಜ್ಯಗಳನ್ನೊಳಗೊಂಡಿದ್ದ ಜರ್ಮನ್ ಸಂಯೋಜನೆಯಲ್ಲಿ ಪ್ರಷ್ಯ ಮತ್ತು ಆಸ್ಟ್ರಿಯಗಳು ಒಳಗೂ ಅಲ್ಲ ಹೊರಗೂ ಅಲ್ಲ ಎಂಬ ಸ್ಥಿತಿಯಲ್ಲಿದ್ದುವು. ಹಾಲ್‌ಸ್ಟೈನಿನಲ್ಲಿ ಜರ್ಮನ್ ಭಾಷೆ ಬಳಕೆಯಲ್ಲಿದ್ದ ಕೆಲವು ಸ್ವಾಮ್ಯಗಳಿದ್ದುದರಿಂದ ಡೆನ್ಮಾರ್ಕಿನ ದೊರೆಯೂ ಈ ಜರ್ಮನ್ ರಾಜ್ಯದೊಳಗೆ ಸೇರಿದನು. ಲಕ್ಸೆಂಬುರ್ಗ್‌ನ ದೊರೆ ನೆದರ್‌ಲ್ಯಾಂಡಿನ ರಾಜನಾಗಿದ್ದಾಗ್ಯೂ ಅಲ್ಲಿನ ಜನರಲ್ಲನೇಕರು ಫ್ರೆಂಚ್ ಮಾತನಾಡುವವರಾಗಿದ್ದಾಗ್ಯೂ ಆ ರಾಜ್ಯವನ್ನು ಜರ್ಮನ್ ಸಂಯೋಜನೆಯಲ್ಲಿ ಸೇರಿಸಲಾಯಿತು.

ಜರ್ಮನ್ ಭಾಷೆಯನ್ನಾಡುತ್ತಾ ಆ ಭಾಷೆಯ ಸಾಹಿತ್ಯದನುಸಾರ ತಮ್ಮ ಭಾವನೆಗಳನ್ನು ರೂಪಿಸಿಕೊಳ್ಳುವ ಜನ, ಇಟ್ಯಾಲಿಯನ್ ಭಾಷೆಯನ್ನಾಡುತ್ತಾ ಆ ಭಾಷೆಯ ಸಾಹಿತ್ಯವನ್ನನುಸರಿಸಿ ತಮ್ಮ ಭಾವನೆಗಳನ್ನು ರೂಪಿಸಿಕೊಳ್ಳುವ ಜನ, ಪೋಲಿಷ್ ಭಾಷೆಯನ್ನಾಡುತ್ತಾ ಆ ಸಾಹಿತ್ಯದಂತೆ ತಮ್ಮ ಭಾವನೆಗಳನ್ನು ರೂಪಿಸಿಕೊಳ್ಳುವ ಜನ ತಮ್ಮ ತಮ್ಮ ವ್ಯವಹಾರಗಳನ್ನು ತಮ್ಮದೇ ಭಾಷೆಯ ಆವರಣದಲ್ಲಿ ತಮ್ಮದೇ ಜಾಯಮಾನಕ್ಕೆತಕ್ಕಂತೆ ನಡೆಸಿಕೊಳ್ಳುತ್ತಿದ್ದರೆ ತಾವೂ ನೆಮ್ಮದಿಯಾಗಿದ್ದು ಸಹಕಾರ ಭಾವನೆಯಿಂದ ಕೂಡಿದ್ದು ಬೇರೆಯವರಿಗೆ ಉಪದ್ರವಕೊಡದಂತೆ ಇರುತ್ತಾರೆಂಬ ಸಂಗತಿಯನ್ನು ಹೀಗೆ ಪೂರ್ತಿಯಾಗಿ ನಿರ್ಲಕ್ಷ್ಯಮಾಡಲಾಯಿತು. ಆಗ ಅತ್ಯಂತ ಜನಪ್ರಿಯವಾಗಿದ್ದ ಒಂದು ಜರ್ಮನ್ ಗೀತೆಯಲ್ಲಿ "ಜರ್ಮನ್ ಭಾಷೆಯನ್ನಾಡುವ ಸ್ಥಳಗಳೆಲ್ಲಾ ಜರ್ಮನ್ ನಾಡೇಸರಿ" ಎಂಬ ಘೋಷಣೆ ಇದ್ದಿದ್ದರಲ್ಲಿ ಆಶ್ಚರ್ಯವೇನಿದೆ?

ಫ್ರೆಂಚ್ ಭಾಷೆ ಪ್ರಚಲಿತವಿದ್ದ ಬೆಲ್ಜಿಯಂ 1830 ರಲ್ಲಿ ನಡೆದ ಫ್ರೆಂಚ್

ಕ್ರಾಂತಿಯಿಂದ ಪ್ರೇರೇಪಿತವಾಗಿ ನೆದರ್‌ಲ್ಯಾಂಡ್ ರಾಜ್ಯದಲ್ಲಿ ಅದನ್ನು ಡಚ್ಚರ ಜೊತೆ ಹಾಕಿದುದರ ವಿರುದ್ಧ ದಂಗೆಯೆದ್ದಿತು. ಇನ್ನೆಲ್ಲಿ ಅಲ್ಲಿ ಗಣತಂತ್ರ ರಾಜ್ಯ ಸ್ಥಾಪನೆಯಾಗುತ್ತದೆಯೋ ಅಥವಾ ಅದು ಫ್ರಾನ್ಸಿಗೆ ಸೇರಿಕೊಳ್ಳುತ್ತದೆಯೋ ಎಂದು ಭಯಪಟ್ಟು ತರಾತುರಿಯಿಂದ ಅಲ್ಲಿನ ಪರಿಸ್ಥಿತಿಯನ್ನು ತಣ್ಣಗೆ ಮಾಡಲು ಪ್ರಯತ್ನಿಸಿ ಬೆಲ್ಜಿಯನ್ನರಿಗೇ ಒಬ್ಬ ದೊರೆಯನ್ನು ಕೊಟ್ಟರು. ಇವನೇ ಸಾಕ್ಸೆ ಕೊಬರ್ಗ್ ಗೋಥಾವಿನ ಒಂದನೆ ಲಿಯೊಪಾಲ್ಡ್. 1830 ರಲ್ಲೇ ಇಟಲಿ ಜರ್ಮನಿಗಳಲ್ಲಿ ನಿಷ್ಫಲವಾದ ದಂಗೆಗಳಾಗಿ ಹೋದುವು. ರಷ್ಯದ ವಶದಲ್ಲಿದ್ದ ಪೋಲೆಂಡಿನಲ್ಲಿ ಇವುಗಳಿಗಿಂತ ಬಲವಾದ ದಂಗೆಯಾಯಿತು. ವಾರ್ಸಾದಲ್ಲಿ ಒಂದು ವರ್ಷಕಾಲ ಪ್ರಜಾಪ್ರಭುತ್ವವೊಂದು ಒಂದನೆ ನಿಕೊಲಾಸನ (1825 ರಲ್ಲಿ ಇವನು ಅಲೆಕ್ಸಾಂಡರನ ನಂತರ ಪಟ್ಟಕ್ಕೆ ಬಂದನು) ಎದುರು ನಿಂತಿತ್ತು. ಇದನ್ನು ಅತ್ಯಂತ ಕ್ರೌರ್ಯ ಮತ್ತು ಹಿಂಸಾಚಾರಗಳಿಂದ ತುಳಿದು ನಾಶಮಾಡಲಾಯಿತು. ಪೋಲಿಷ್ ಭಾಷೆಯನ್ನೇ ಬಹಿಷ್ಕರಿಸಿ ರೋಮನ್ ಕ್ಯಾಥೊಲಿಕ್ ಚರ್ಚಿಗೆ ಬದಲು ಗ್ರೀಕ್ ಆರ್ಥೋಡೊಕ್ಸ್ ಚರ್ಚನ್ನು ತರಲಾಯಿತು.

1821 ರಲ್ಲಿ ಗ್ರೀಕರು ತುರುಕರ ಮೇಲೆ ದಂಗೆಯೆದ್ದರು. ಆರು ವರ್ಷಕಾಲ ಇವರು ಜೀವನದ ಹಂಗುತೊರೆದು ಹೋರಾಡಿದರು. ಅಷ್ಟು ಕಾಲವೂ ಯೂರೋಪಿನ ಉಳಿದ ರಾಜ್ಯಗಳು ಇದನ್ನು ನೋಡುತ್ತ ಸುಮ್ಮನಿದ್ದುವು. ಕಡೆಗೆ ಈ ಜಡತೆಯನ್ನು ಉದಾರತಾವಾದ ಹೋಗಲಾಡಿಸಿತು. ಯೂರೋಪಿನ ಎಲ್ಲಾ ರಾಜ್ಯಗಳಿಂದಲೂ ಜನರು ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಈ ಬಂಡಾಯಗಾರರ ಜೊತೆಗೂಡಿದರು. ಕಡೆಗೆ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳು ಸಂಯುಕ್ತವಾಗಿ ಕಾರ್ಯಾಚರಣೆ ನಡೆಸಿದವು. ನವಾರಿನೊ ಕದನ (1827)ದಲ್ಲಿ ತುರ್ಕಿಯ ನೌಕಾಪಡೆಯನ್ನು ಫ್ರೆಂಚರು ಮತ್ತು ಬ್ರಿಟಿಷರು ನಾಶಮಾಡಿದರು. ಜಾರನ ಸೈನ್ಯ ತುರ್ಕಿಯ ಒಳನುಗ್ಗಿತು. ಏಡ್ರಿಯಾನೋಪಲ್ ಕೌಲಿನ (1829) ಪ್ರಕಾರ ಗ್ರೀಸ್ ಸ್ವತಂತ್ರವೆಂದು ಘೋಷಿಸಲಾಯಿತು. ಆದರೆ ಅವರ ಪ್ರಾಚೀನ ಗಣರಾಜ್ಯ ಸಂಪ್ರದಾಯವನ್ನು ತಿರುಗಿ ಜಾರಿಗೆ ತರಲು ಅನುಮತಿಕೊಡಲಿಲ್ಲ. ಗ್ರೀಸಿಗಾಗಿ ಒಬ್ಬ ಜರ್ಮನ್ ರಾಜನನ್ನು ಹುಡುಕಿದರು. ಇವನೇ ಬವೇರಿಯದ ಆಟೋ. ಡ್ಯಾನ್ಯೂಬಿನ ಪ್ರದೇಶಗಳಲ್ಲೆಲ್ಲಾ (ಈಗ ಇವು ಸೇರಿ ರುಮೇನಿಯ ಆಗಿವೆ) ಮತ್ತು ಸರ್ಬಿಯ (ಯುಗೋಸ್ಲಾವಿಯದ ಒಂದು ಭಾಗ)ದಲ್ಲಿ ಕ್ರೈಸ್ತ ರಾಜ್ಯಪಾಲರನ್ನು ನೇಮಿಸಿದರು. ಆದರೂ ತುರುಕರನ್ನು ಪೂರ್ತಿಯಾಗಿ ಈ ಪ್ರದೇಶಗಳಿಂದ ಹೊರದೂಡುವ ಮುನ್ನ ಇನ್ನೂ ಎಷ್ಟೋ ರಕ್ತ ಹರಿಯಬೇಕಾಗಿತ್ತು.

57. ವಸ್ತುಜ್ಞಾನದ ಬೆಳವಣಿಗೆ

(ಮುಂದುವರೆಯುವುದು)

ಆರ್. ಇಂದಿರಾ, ಎಂ. ಆರ್. ಪುಟ್ಟಸ್ವಾಮಿ

ಗೃಹ ಕೈಗಾರಿಕೆಗಳಲ್ಲಿ ಮಹಿಳೆಯರು— ಬೀಡಿ ಕಾರ್ಮಿಕರ ಒಂದು ಸಾಮಾಜಿಕ ಅಧ್ಯಯನ

ಭಾರತದ ಜನಸಂಖ್ಯೆಯಲ್ಲಿ ಮಹಿಳೆಯರು ಸುಮಾರು ಅರ್ಧದಷ್ಟಿದ್ದು, ಅವರು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸುತ್ತಿದ್ದಾರೆ. ಮಹಿಳೆಯರು ವಿವಿಧ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದು ದೇಶದ ಔದ್ಯೋಗಿಕ ಕ್ಷೇತ್ರದಲ್ಲೂ ಪ್ರಮುಖವಾದ ಸ್ಥಾನವನ್ನು ಪಡೆದಿದ್ದಾರೆ. ಭಾರತದ ಔದ್ಯೋಗಿಕ ಕ್ಷೇತ್ರದಲ್ಲಿರುವ ಮಹಿಳೆಯರನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸ ಬಹುದು. ಅವು ಯಾವುವೆಂದರೆ ಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವವರು ಮತ್ತು ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವವರು.

ಭಾರತದಲ್ಲಿ ಸಂಘಟಿತ ಕ್ಷೇತ್ರದಲ್ಲಿ ಕೆಲಸಮಾಡುವ ಮಹಿಳೆಯರ ಸಂಖ್ಯೆ ಶೇಖಡ 6 ಮಾತ್ರ ಇದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರ ಹಿತಾಸಕ್ತಿಗಳನ್ನು ರಕ್ಷಿಸಲು ಅನೇಕ ಕಾಯಿದೆಗಳಿದ್ದು, ಅವರ ಕೆಲಸ ಸಂಬಂಧಿ ಹಕ್ಕುಗಳು, ಸಂಬಳ, ರಜೆ ಮತ್ತಿತರ ಸೌಲಭ್ಯಗಳು ಅವರಿಗೆ ಯಾವುದೇ ಅಡಚಣೆಗಳಿಲ್ಲದೆ ದೊರೆಯುತ್ತವೆ. ಸಂಘಟಿತ ಕೆಲಸಗಾರರ ಹಕ್ಕುಗಳಿಗೆ ಧಕ್ಕೆ ಬಂದಾಗ ಅವರ ಪರವಾಗಿ ಹೋರಾಟ ವನ್ನು ನಡೆಸಲು ವ್ಯವಸ್ಥಿತ ಸಂಘಟನೆಗಳೂ ಇವೆ. ಉದಾಹರಣೆಗೆ ಬೃಹತ್ ಕೈಗಾ ರಿಕೆಗಳು, ಸರ್ಕಾರಿ ಮತ್ತು ಖಾಸಗಿ ಸೇವೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆ ಯರು ಸಂಘಟಿತ ಕ್ಷೇತ್ರಕ್ಕೆ ಸೇರಿದವರಾಗಿರುತ್ತಾರೆ.

ಆದರೆ ಈ ಸೌಲಭ್ಯಗಳಿಂದ ವಂಚಿತರಾಗಿ, ನಾನಾ ರೀತಿಯ ಅಸಮಾನತೆ ಹಾಗೂ ಶೋಷಣೆಗಳಿಗೆ ತುತ್ತಾಗಿರುವ ಮಹಿಳೆಯರೇ ನಮ್ಮ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿದ್ದಾರೆ. ಭಾರತದಲ್ಲಿನ ಶೇಖಡ 94ರಷ್ಟು ಮಹಿಳಾ ಉದ್ಯೋಗಿಗಳು ಕೆಲಸ ಮಾಡುತ್ತಿರುವುದು ಅಸಂಘಟಿತ ಕ್ಷೇತ್ರದಲ್ಲಿ. ಈ ಕ್ಷೇತ್ರದ ಉದ್ಯೋಗಿಗಳಿಗೆ ತಮ್ಮ ಕೆಲಸ, ಸಂಬಳ ಅಥವಾ ಸೌಲಭ್ಯಗಳನ್ನು ರಕ್ಷಿಸಿಕೊಳ್ಳಲು ಯಾವುದೇ ಕಾನೂನು–ಕಾಯಿದೆಗಳ ಬೆಂಬಲವಿಲ್ಲ. ಇರುವ ಹಲ–ಕೆಲವು ಸಾಧಾರಣಾ ಕ್ರಮಗಳೂ ಕೂಡಾ ಇವರ ಹಿತಾಸಕ್ತಿಗಳನ್ನು ಕಾಯುವುದರಲ್ಲಿ ವಿಫಲವಾಗಿವೆ. ಇಷ್ಟೇ ಅಲ್ಲ,

ಇವರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟವನ್ನು ನಡೆಸಲು ಬದ್ಧರಾದ ಸಂಘಟನೆಗಳು ಇಲ್ಲವಾದ್ದರಿಂದಲೂ, ಇವರು ನಾನಾಕಡೆಗಳಲ್ಲಿ ಹಂಚಿಹೋಗಿರುವುದರಿಂದಲೂ ತಮ್ಮ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಅಸಮರ್ಥರಾಗಿದ್ದಾರೆ. ಭಾರತದಲ್ಲಿ ಇಂತಹ ಅಸಂಘಟಿತ ಕೆಲಸಗಾರರ, ಅದರಲ್ಲೂ ಮಹಿಳಾ ಕೆಲಸಗಾರರ ಸಂಖ್ಯೆ ದಿನೇ-ದಿನೇ ಹೆಚ್ಚುತ್ತಿದ್ದು, ಅವರ ಸ್ಥಿತಿಗತಿಗಳು ತೀವ್ರವಾದ ಆತಂಕಕ್ಕೆ ಎಡೆಮಾಡಿಕೊಟ್ಟಿವೆ.

ಅಸಂಘಟಿತ ಕ್ಷೇತ್ರದಲ್ಲಿ ಉದ್ಯೋಗ ನಿರತರಾಗಿರುವ ಮಹಿಳೆಯರನ್ನು ಪ್ರಮುಖವಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. ಅವು ಈ ಕೆಳಕಂಡಂತೆ ಇವೆ.

1. ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಉದ್ಯೋಗ ಮಾಡುವ ಮಹಿಳೆಯರು.
2. ಗೃಹ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರು.
3. ಗೃಹೇತರ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರು.

ಪ್ರಸಕ್ತ ಲೇಖನ ಗೃಹ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ವಿಶೇಷವಾಗಿ ಸಂಬಂಧಿಸಿದ್ದಾಗಿದೆ.

1981ರ ಜನಗಣತಿಯ ವರದಿಯ ಪ್ರಕಾರ ಭಾರತದಲ್ಲಿ 8.8 ಮಿಲಿಯನ್ ಮಹಿಳೆಯರು ಗೃಹ ಕೈಗಾರಿಕೆಗಳಲ್ಲಿ ಕೆಲಸಮಾಡುತ್ತಿದ್ದಾರೆ ಎಂದು ತಿಳಿದು ಬಂದಿದೆ. ಮಹಿಳೆಯರು ತಮ್ಮ ವಾಸ ಸ್ಥಾನದಲ್ಲಿ ಅಥವಾ ತಾವು ವಾಸಿಸುವ ನೆರೆ-ಹೊರೆಯಲ್ಲಿಯೇ ಯಾವುದಾದರೂ ಉದ್ಯೋಗದಲ್ಲಿ ತೊಡಗಿದಾಗ ಅವರನ್ನು ಗೃಹ ಕೈಗಾರಿಕೆಗಳಲ್ಲಿ ಕೆಲಸಮಾಡುವ ಮಹಿಳೆಯರು ಎಂದು ಗುರುತಿಸಬಹುದು. ಬೀಡಿ ಅಥವಾ ಅಗರಬತ್ತಿ ಕಾರ್ಖಾನೆಗಳಿಗಾಗಿ ಕೆಲಸಮಾಡುವವರು, ಚಾಪೆ ಮತ್ತು ಬುಟ್ಟಿಗಳನ್ನು ಹೆಣೆಯುವವರು, ಮಡಿಕೆಗಳನ್ನು ಮಾಡುವವರು ಇವೇ ಮುಂತಾದ ಮಹಿಳಾ ಕೆಲಸಗಾರರನ್ನು ಗೃಹ ಕೈಗಾರಿಕೆಗಳಲ್ಲಿ ತೊಡಗಿರುವವರು ಎಂದು ಹೇಳಲಾಗಿದೆ. ಕಳೆದ ನಾಲ್ಕು ದಶಕಗಳಿಂದೀಚೆಗೆ ಬೃಹತ್ ಪ್ರಮಾಣದ ಕೈಗಾರಿಕೆಗಳು ಎಲ್ಲೆಲ್ಲೂ ತಲೆಯೆತ್ತಿದ್ದು, ಯಾವುದೇ ರೀತಿಯ ವಿಶೇಷ ತರಬೇತಿ ಅಥವಾ ಶಿಕ್ಷಣ ಇಲ್ಲದ ಅಸಂಖ್ಯಾತ ಮಹಿಳೆಯರು ಉದ್ಯೋಗದಿಂದ ಹೊರಹಾಕಲ್ಪಟ್ಟರು. ಆದರೆ ಆರ್ಥಿಕವಾಗಿ ತೀರಾ ಕೆಳಮಟ್ಟದಲ್ಲಿದ್ದ ಕಾರಣದಿಂದಲೂ, ಜೀವನ ನಿರ್ವಹಣೆಗಾಗಿ ಅವರು ದುಡಿಮೆಯನ್ನು ಮಾಡಲೇಬೇಕಾದ ಪರಿಸ್ಥಿತಿ ಉಂಟಾಗಿದ್ದರಿಂದಲೂ ಬಹಳಷ್ಟು ಮಹಿಳೆಯರು, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಮಹಿಳೆಯರು ನಾನಾ ಕೆಲಸಗಳನ್ನು ಹುಡುಕಿಕೊಂಡು ಹೋಗಬೇಕಾಯಿತು. ಇಂತಹ ಮಹಿಳೆಯರ ಆರ್ಥಿಕ ಅವಶ್ಯಕತೆಯನ್ನೂ, ಅಸಹಾಯಕತೆಯನ್ನೂ ಉಪಯೋಗಿಸಿಕೊಂಡು ಅನೇಕ ಉದ್ಯಮಿಗಳು ಅವರನ್ನು ಶ್ರಮಭರಿತವಾದ, ಆದರೆ ಯಾವುದೇ ರೀತಿಯ ಸೌಲಭ್ಯ-ಸುಖಗಳನ್ನು ಕೊಡದ ಕೆಲಸಗಳಲ್ಲಿ ತೊಡಗಿಸಲು ಮುಂದಾದರು. ಮಧ್ಯವರ್ತಿಗಳ

ಜಾಲದಲ್ಲಿ ಸಿಕ್ಕಿಬಿದ್ದು, ತಮ್ಮ ಶ್ರಮವನ್ನು ಬಂಡವಾಳಶಾಹಿಗಳಿಗೆ ಒತ್ತೆಯಿಟ್ಟು, ತಾವು ಮಾಡುವ ಕೆಲಸಕ್ಕೆ ಅತಿಕಡಿಮೆ ಎನಿಸಬಹುದಾದ ಸಂಬಳವನ್ನು ಪಡೆಯುತ್ತಿರುವ ಮಹಿಳೆಯರಿಗೆ ನಮ್ಮಲ್ಲೇನೂ ಕೊರತೆಯಿಲ್ಲ. ಇಂತಹ ಒಂದು ಗೃಹಕೈಗಾರಿಕೆಯಾದ ಬೀಡಿ ಹೊಸೆಯುವ ಹಾಗೂ ಕಟ್ಟುವ ಕೆಲಸದಲ್ಲಿ ತೊಡಗಿರುವ ಮಹಿಳೆಯರ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಬೀಡಿ ಉದ್ಯಮ ಭಾರತದಾದ್ಯಂತ ವ್ಯಾಪಕವಾಗಿ ಹರಡಿದ್ದು ಅನೇಕ ಮಹಿಳೆಯರು ಹಾಗೂ ಮಕ್ಕಳಿಗೆ ಉದ್ಯೋಗವನ್ನು ನೀಡಿದೆ. ಪಟ್ಟಣಗಳಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿರುವ ಈ ಕಾರ್ಖಾನೆಗಳು ಬೀಡಿಗಳನ್ನು ಹೊಸೆಯಲು ಹಾಗೂ ಕಟ್ಟುಗಳನ್ನಾಗಿ ಮಾಡಲು ಗ್ರಾಮೀಣ ಮಹಿಳೆಯರನ್ನು ಹೆಚ್ಚಾಗಿ ನಿಯಮಿಸಿಕೊಳ್ಳುತ್ತವೆ. ಇಂತಹ ಗ್ರಾಮೀಣ ಮಹಿಳೆಯರನ್ನು ಈ ಸಂಶೋಧನಾ ಅಧ್ಯಯನಕ್ಕಾಗಿ ಆಯ್ಕೆಮಾಡಿ ಅವರಿಂದ ಅವರ ಜೀವನ ಹಾಗೂ ಉದ್ಯೋಗ ಸ್ಥಿತಿ–ಗತಿಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಈ ಲೇಖನವನ್ನು ತಯಾರಿಸಲಾಗಿದೆ.

ನಮ್ಮ ಸಂಶೋಧನಾ ಮಾಹಿತಿಯನ್ನು ಇಲ್ಲಿ ಪ್ರಸ್ತುತಪಡಿಸುವ ಮೊದಲು, ಬೀಡಿ ಉತ್ಪಾದನೆಯು ಯಾವ ಯಾವ ಪ್ರಕ್ರಿಯೆಗಳ ಮೂಲಕ ಸಾಗುತ್ತದೆ ಎಂದು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಸಾಮಾನ್ಯವಾಗಿ ಬೀಡಿ ಉತ್ಪಾದನೆಯು ಮೂರು ರೀತಿಯ ಕೆಲಸಗಳನ್ನು ಒಳಗೊಂಡಿದೆ.

1. ಕಂಟ್ರಾಕ್ಟರ್‌ಗಳಿಂದ ಕೊಡಲ್ಪಟ್ಟ ಬೀಡಿ ಎಲೆಗಳನ್ನು ಬೀಡಿಗಳಿಗೆ ತಕ್ಕ ಹಾಗೆ ಕತ್ತರಿಸಲಾಗುವುದು. ಹೀಗೆ ಕತ್ತರಿಸಿದ ಎಲೆಗಳನ್ನು ನೀರಿನಲ್ಲಿ ಅದ್ದಿ, ಅರ್ಧ–ಮುಕ್ಕಾಲು ಗಂಟೆಗಳ ಕಾಲ ಬಿಸಿಲಿನಲ್ಲಿ ಒಣಗಿಸಿ ನಂತರ ಬೀಡಿಗಳನ್ನು ಸುತ್ತಲು ಉಪಯೋಗಿಸಲಾಗುವುದು.

2. ನಂತರ ಎಲೆಗಳ ಮೇಲೆ ಎಷ್ಟು ಅಗತ್ಯವೋ ಅಷ್ಟು ತಂಬಾಕನ್ನು ಹಾಕಿ ಶಂಕುಸ್ಥಂಭಾಕಾರದಲ್ಲಿ ಎಲೆಗಳನ್ನು ಸುತ್ತಿ ಅವುಗಳ ಎರಡು ತುದಿಗಳನ್ನು ಸಣ್ಣ ಮರದ ಚೂರಿನಿಂದ ಮುಚ್ಚಿ ದಾರದಿಂದ ಕಟ್ಟಲಾಗುತ್ತವೆ.

3. ಹೀಗೆ ತಯಾರಿಸಿದ ಬೀಡಿಗಳನ್ನು 25 ಬೀಡಿಗಳ ಒಂದು ಕಟ್ಟಿನಂತೆ ಜೋಡಿಸಿ ಅವುಗಳನ್ನು ಕಂಟ್ರಾಕ್ಟರ್‌ಗಳಿಗೆ ಕೊಡಲಾಗುವುದು. ಅವರು ನಿಗದಿತ ಬೀಡಿ ಸಂಸ್ಥೆಗಳಿಗೆ ಅವುಗಳನ್ನು ಕೊಡುವರು. ಆ ಕಾರ್ಖಾನೆಗಳಲ್ಲಿ ಅವುಗಳನ್ನು 'ಪ್ಯಾಕ್'ನಲ್ಲಿ ಜೋಡಿಸಿ, ನಂತರ ಸಂಸ್ಥೆಯ ಗುರುತಿನ ಚೀಟಿಯನ್ನು ಅಂಟಿಸಿ ಮಾರಾಟಕ್ಕೆ ಸಿದ್ಧಗೊಳಿಸುತ್ತಾರೆ.

ಬೀಡಿ ಕಟ್ಟುವ ಕೆಲಸವು ಸಾಮಾನ್ಯವಾಗಿ ಮನೆಯಲ್ಲಿಯೇ ಜರುಗುವುದು. ಈ ಕೆಲಸಕ್ಕೆ ಬೇಕಾಗುವ ಎಲ್ಲಾ ಕಚ್ಚಾ ಪದಾರ್ಥಗಳನ್ನು ಕಂಟ್ರಾಕ್ಟರ್ ಅಥವಾ ಮಧ್ಯವರ್ತಿಗಳು ಒದಗಿಸುತ್ತಾರೆ. ಈ ಕಚ್ಚಾಪದಾರ್ಥಗಳು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿಯೇ ಬೆಳೆಯುವಂಥವು. ಬೀಡಿ ಕೆಲಸಗಾರರಿಗೆ ಬಿಡಿ

ಕೂಲಿಯನ್ನು ಕೊಡಲಾಗುತ್ತದೆ. ಒಬ್ಬ ಮಹಿಳೆ ಒಂದು ದಿನದ ಅವಧಿಯಲ್ಲಿ 1,000 ಬೀಡಿಗಳನ್ನು ಕಟ್ಟಬಹುದು. ಇದಕ್ಕಾಗಿ ಆಕೆ ಸುಮಾರು 12 ಗಂಟೆಗಳ ಕಾಲವನ್ನು ತೆಗೆದುಕೊಳ್ಳುತ್ತಾಳೆ. ಗ್ರಾಮಗಳಲ್ಲಿ ಮಹಿಳೆಯರು ಎಷ್ಟೋಬಾರಿ ಅರ್ಧ ರಾತ್ರಿಯವರೆಗೂ ದುಡಿಯುವುದನ್ನು ನಾವು ಕಾಣಬಹುದು. ಈ ಬೀಡಿ ಕಟ್ಟುವ ಮತ್ತು ಹೊಸೆಯುವ ಕಾರ್ಯದಲ್ಲಿ ಮನೆಯಲ್ಲಿನ ಸಣ್ಣ ಮಕ್ಕಳು ಕೂಡ ಅನೇಕ ಬಾರಿ ನೆರವಾಗುತ್ತಾರೆ. ಈ ಕೆಲಸದಲ್ಲಿ ತೊಡಗಿರುವ ಮಹಿಳೆಯರಲ್ಲಿ ಶೇ. 98ರಷ್ಟು ಅನಕ್ಷರಸ್ಥರಾಗಿದ್ದು, ಅವರ ಮಕ್ಕಳೂ ಕೂಡಾ ಶಿಕ್ಷಣ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಬೀಡಿ ಕಾರ್ಮಿಕರ ಆರ್ಥಿಕ ಸ್ಥಿತಿ–ಗತಿ ತೀರಾ ಶೋಚನೀಯ ವಾಗಿದೆ. ಎಷ್ಟೋ ಕಡೆಗಳಲ್ಲಿ ಮಹಿಳೆಯರು ಹೆರಿಗೆ ದಿನದವರೆಗೂ ದುಡಿದು, ಮಗುವಿನ ಜನನದ ನಂತರ ಕೆಲವೇ ದಿನಗಳಲ್ಲಿ ಈ ಕೆಲಸಕ್ಕೆ ಹಿಂದಿರುಗುತ್ತಾರೆ. ಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರಿಗಾದರೆ ಹೆರಿಗೆ ರಜ, ಹೆರಿಗೆ ಭತ್ಯ, ವೈದ್ಯಕೀಯ ನೆರವು–ಇವೇ ಮುಂತಾದ ಸೌಲಭ್ಯಗಳು ದೊರೆಯುತ್ತವೆ. ಆದರೆ ಬೀಡಿ ಉದ್ಯಮದ ಯಶಸ್ಸಿಗೆ, ಲಾಭಗಳಿಕೆಗೆ ಅವಿರತವಾಗಿ ತಮ್ಮ ಶ್ರಮವನ್ನು ನೀಡುತ್ತಿರುವ ಮಹಿಳೆಯರು ಎಲ್ಲ ರೀತಿಯ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಕಡುಬಡತನ, ಅನೇಕ ಬಾರಿ ಆರ್ಥಿಕವಾಗಿ ಪರಾವಲಂಬಿಗಳಾಗಿರುವ ಗಂಡ ಮತ್ತು ಮಕ್ಕಳು ಮತ್ತು ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳಲು ಬೇಕಾದ ಅವಿಶ್ರಾಂತ ದುಡಿಮೆ, ಎಲ್ಲಕ್ಕಿಂತ ಹೆಚ್ಚಾಗಿ ತಾವು ಒಳಗಾಗುತ್ತಿರುವ ಶೋಷಣೆಯ ವಿರುದ್ಧ ಧ್ವನಿ ಎತ್ತಲೂ ಆಗದಿರುವಂಥ ಪರಿಸ್ಥಿತಿ- ಇವೇ ಮುಂತಾದುವು ಮಹಿಳಾ ಬೀಡಿ ಕೆಲಸಗಾರರ ದುಸ್ಥಿಗೆ ಕಾರಣವಾಗಿವೆ. 1966ನೇ ಇಸವಿಯಲ್ಲಿ 'ಬೀಡಿ ಮತ್ತು ಸಿಗಾರ್ ವರ್ಕರ್ಸ್ ಆ್ಯಕ್ಟ್'ಎಂಬ ಕಾಯಿದೆ ಬೀಡಿ ಕೆಲಸಗಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಿ ಕೊಡುವ ದೃಷ್ಟಿಯಿಂದ ಜಾರಿಗೆ ಬಂತೇನೋ ನಿಜ. ಆದರೆ ಬಹುಪಾಲು ಮಹಿಳಾ ಬೀಡಿ ಕೆಲಸಗಾರರು ಯಾವುದೇ ರೀತಿಯ ಕಾನೂನು ಸೌಲಭ್ಯಗಳಿಂದ ವಂಚಿತರಾಗಿ ದ್ದಾರೆ. ಇಂದಿಗೂ ಶೋಷಣೆಯ ಪರಿಸ್ಥಿತಿಯಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕಾರಣಗಳಿಲ್ಲದಿಲ್ಲ. ಬೀಡಿ ಕೆಲಸವು ಸಾಮಾನ್ಯವಾಗಿ ಮನೆಯಲ್ಲಿಯೇ ಮಾಡುವಂಥದ್ದು. ಇದನ್ನು ಕೈಗಾರಿಕೆಗಳಲ್ಲಿ ಮಾಡುವ ಕೆಲಸದಂತೆ ಪರಿಗಣಿಸಲು ಉದ್ಯಮಿಗಳು ತಯಾರಿಲ್ಲ. ಬೀಡಿ ಕೆಲಸಗಾರರು ನಾನಾ ಕಡೆಗಳಲ್ಲಿ ಹಂಚಿಹೋಗಿದ್ದು ಅವರು ಸಂಘಟಿತರಾಗಲು ಅವಕಾಶಗಳು ವಿರಳ. ಸಂಘಟಿತರಾಗಲು ಅವಕಾಶಗಳು ಇದ್ದಾಗ್ಯೂ ಕೂಡ ಇವರು ಮಧ್ಯವರ್ತಿಗಳ ವಿರುದ್ಧವಾಗಲೀ, ಉದ್ಯಮಿಗಳ ವಿರುದ್ಧ ವಾಗಲೀ ಪ್ರತಿಭಟಿಸಲು ತಯಾರಿಲ್ಲ. ಈ ಕೆಲಸವನ್ನೇ ನಂಬಿಕೊಂಡಿರುವ ಬೀಡಿ ಕೆಲಸ ಗಾರರಿಗೆ ಮಧ್ಯವರ್ತಿಗಳು ತಮಗೆ ಇನ್ನು ಮುಂದೆ ಕೆಲಸವನ್ನು ಕೊಡುವುದಿಲ್ಲವೆಂಬ ಭಯ. ಇಷ್ಟೇ ಅಲ್ಲ, ಎಷ್ಟೋ ಜನ ಮಧ್ಯವರ್ತಿಗಳು ಕೆಲಸವನ್ನು ಮಾಡಿಸಿಕೊಂಡ ಮೇಲೂ ಕೂಡ ಅನೇಕ ಸುಳ್ಳುನೆಪಗಳನ್ನೊಡ್ಡಿ ಮಹಿಳಾ ಕೆಲಸಗಾರರಿಗೆ ಅವರಿಗೆ

ನ್ಯಾಯವಾಗಿ ಸಲ್ಲಬೇಕಾದ ಕೂಲಿಯನ್ನು ಕೊಡಲು ತಡಮಾಡುತ್ತಾರೆ. ನಾವು ಈ ಅಧ್ಯಯನಕ್ಕಾಗಿ ಸಂದರ್ಶಿಸಿದ ಅನೇಕ ಮಹಿಳಾ ಕೆಲಸಗಾರರು ಮಧ್ಯವರ್ತಿಗಳಿಂದ ಮುಂಗಡ ಹಣವನ್ನು ಬೇರೆ ಪಡೆದಿದ್ದವರು. ಈ ಕಾರಣದಿಂದ ಅವರು ತಮ್ಮ ಯಾವುದೇರೀತಿಯ ಬೇಡಿಕೆಗಳನ್ನು ಮುಂದೊಡ್ಡಲು ತಯಾರಿಲ್ಲ. ಸಂಘಟನೆ, ಪ್ರತಿಭಟನೆ, ಸಮಾನತೆ ಮುಂತಾದ ಕಲ್ಪನೆಗಳಿಗೆ ಮಹಿಳಾ ಬೀಡಿ ಕೆಲಸಗಾರರ ಬದುಕಿನಲ್ಲಿ ಯಾವುದೇ ರೀತಿಯ ಸ್ಥಳವಿಲ್ಲ.

ಮಹಿಳಾ ಬೀಡಿ ಕೆಲಸಗಾರರು ದಿನದ ಬಹು ಭಾಗವನ್ನು ದುಡಿಮೆಯಲ್ಲಿಯೇ ಕಳೆಯುತ್ತಾರೆ. ಬೀಡಿ ಹೊಸೆಯುವ ಅಥವ ಕಟ್ಟುವ ಕೆಲಸದಿಂದ ಸ್ವಲ್ಪ ಬಿಡುವು ದೊರೆತರೆ ಆ ಸಮಯವನ್ನು ಅವರು ಮನೆಗೆಲಸಕ್ಕಾಗಿ ವಿನಿಯೋಗಿಸಬೇಕಾಗುತ್ತದೆ. ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ 'ಮನೆಗೆಲಸ ಮಹಿಳೆಯರಿಗೇ ಮೀಸಲು' ಎಂಬ ಕಲ್ಪನೆ ಹಾಸು ಹೊಕ್ಕಾಗಿಬಿಟ್ಟಿರುವುದರಿಂದ ಇಂದಿಗೂ ಮಹಿಳೆಯರೇ ಬಹುಪಾಲು ಮನೆಗೆಲಸದ ಹೊರೆಯನ್ನು ಹೊತ್ತಿದ್ದಾರೆ. ಸುಮಾರು 12 ಗಂಟೆಗಳ ಕಾಲ ಕೂತು ಬೀಡಿ ಕೆಲಸದಲ್ಲಿ ತೊಡಗುವುದರ ಜೊತೆಜೊತೆಗೆ ಮನೆಯ ಕೆಲಸ, ಅಡಿಗೆ ಮಾಡುವುದು, ಸೌದೆ ತರುವುದು, ನೀರು ಹಿಡಿದು ತರುವುದು, ಮನೆಯಲ್ಲಿ ಪಶು ಗಳಿದ್ದರೆ ಅವುಗಳ ಕೆಲಸ, ಮಕ್ಕಳ ಲಾಲನೆ–ಪಾಲನೆ ಇವೆಲ್ಲ ಕೆಲಸಗಳನ್ನು ನಮ್ಮ ಮಾಹಿತಿ ಸಂಗ್ರಹಣೆಗಾಗಿ ಆಯ್ಕೆಮಾಡಿದ ಮಹಿಳೆಯರು ಮಾಡುತ್ತಿದ್ದಾರೆ. ನಗರ ಪ್ರದೇಶಗಳಲ್ಲಿಯೂ ಕೂಡ ಬಹುಪಾಲು ದುಡಿಯುವ ಮಹಿಳೆಯರು ಮನೆಕೆಲಸನ್ನು ಮಾಡುತ್ತಿರುವುದನ್ನು ನಾವು ಕಾಣಬಹುದು. ಆದರೆ ಅವರಿಗೆ ನಾನಾ ರೀತಿಯ ಸೌಕರ್ಯಗಳು ಇರುತ್ತವೆ. ಅವರ ಬದುಕಿನಲ್ಲಿ ಆಗಾಗ್ಗೆಯಾದರೂ 'ವಿರಾಮ', 'ವಿಹಾರ' ಮುಂತಾದುವನ್ನು ಕಾಣುವುದಕ್ಕೆ ಅವಕಾಶವಿರುತ್ತದೆ. ಆದರೆ ಗ್ರಾಮೀಣ ಮಹಿಳೆಯರಿಗೆ ಅವಿಶ್ರಾಂತ ದುಡಿಮೆ, ಅಜೀವಪರ್ಯಂತ ಕುಟುಂಬದ ಜವಾಬ್ದಾರಿ ಹಾಗೂ ಬಿಡಿಸಿಕೊಳ್ಳಲಾರದ ಬಡತನದ ಭಾರ ಕಟ್ಟಿಟ್ಟ ಬುತ್ತಿಯಾಗಿದೆ.

ಬೀಡಿ ಕಟ್ಟುವ–ಹೊಸೆಯುವ ಕೆಲಸವನ್ನು ಮಾಡುತ್ತಿರುವ ಮಹಿಳೆಯರು ಅನೇಕ ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಬೀಡಿ ಕಟ್ಟಲು ಉಪಯೋಗಿಸುವ ಹೊಗೆಸೊಪ್ಪಿನ ಘಾಟುವಾಸನೆಯ ಸತತ ಸೇವನೆಯಿಂದಾಗಿ ಶ್ವಾಸಕೋಶದ ಖಾಯಿಲೆಗಳಿಗೆ ಎಷ್ಟೋ ಮಂದಿ ತುತ್ತಾಗಿದ್ದಾರೆ. ಬೀಡಿಯನ್ನು ತಯಾರಿಸುವಾಗ ಒಂದೇಸಮನೆ ಕೂತು ಕೆಲಸಮಾಡಬೇಕಾದ್ದರಿಂದ ಅವರಿಗೆ ಸತತ ವಾದ ಮೈನೋವು ಇದ್ದೇ ಇರುತ್ತದೆ. ಇದರ ಜೊತೆ ಮನೆಗಲಸದ ಭಾರವನ್ನೂ ಅವರು ಹೊರಬೇಕಾಗುತ್ತದೆ. ಬೀಡಿ ಕೆಲಸಗಾರರು ಹೆಚ್ಚು ಹೆಚ್ಚಾಗಿ ದೃಷ್ಟಿ ದೋಷಕ್ಕೂ ಬಲಿಯಾಗುತ್ತಿರುವುದನ್ನು ನಾವು ಗಮನಿಸಿದೆವು. ಇಷ್ಟೆಲ್ಲ ಗಂಭೀರ ವಾದ ಸಮಸ್ಯೆಗಳನ್ನು ಇವರು ಎದುರಿಸುತ್ತಿದ್ದರೂ ಕೂಡ, ಅವರಿಗೆ ಕೆಲಸವನ್ನು ಕೊಡುವ ಮಧ್ಯವರ್ತಿಗಳಾಗಲೀ, ಅವರ 'ದುಡಿಮೆಯ ಫಲಾನುಭವಿಗಳಾದ'

ಉದ್ದಿಮೆದಾರರಾಗಲೀ, ಬೀಡಿ ಕೆಲಸಗಾರರಿಗೆ ಅವರ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಕೂಲವಾಗುವಂಥ ಯಾವ ಸೌಕರ್ಯಗಳನ್ನೂ ಒದಗಿಸಿಕೊಟ್ಟಿಲ್ಲ. ಸಂಘಟಿತ ಕ್ಷೇತ್ರದಲ್ಲಿರುವ ಕೆಲಸಗಾರರಿಗೆ ಕಾರ್ಮಿಕ ವಿಮಾ ಆಸ್ಪತ್ರೆಗಳು, ಆರೋಗ್ಯ ನಿಧಿ, ಅನಾರೋಗ್ಯದ ಕಾರಣದಿಂದ ರಜೆಯ ಮಂಜೂರಾತಿ, ಉಚಿತ ವೈದ್ಯಕೀಯ ನೆರವು ಮುಂತಾದ ನಾನಾ ಸೌಲಭ್ಯಗಳಿವೆ. ಆಕಸ್ಮಾತ್ ನೌಕರಿಯ ಅವಧಿಯಲ್ಲೇ ಸಂಘಟಿತ ಕ್ಷೇತ್ರದಲ್ಲಿರುವ ಕೆಲಸಗಾರರು ಮೃತಪಟ್ಟರೆ ಅವರ ಕುಟುಂಬದ ಭವಿಷ್ಯಕ್ಕೆ ಆಧಾರವಾಗಿ ಭವಿಷ್ಯನಿಧಿ, ವಿಮಾಯೋಜನೆ ಮುಂತಾದ ಹತ್ತು ಹಲವಾರು ಅನುಕೂಲಗಳನ್ನು ಮಾಡಿಕೊಡಲಾಗಿದೆ. ಆದರೆ ಅಸಂಘಟಿತ ಕ್ಷೇತ್ರದ ಕೆಲಸಗಾರರಿಗೆ ಇದ್ಯಾವ ಸೌಲಭ್ಯಗಳೂ ಇಲ್ಲ. 'ಪ್ರತಿಫಲವಿಲ್ಲದ ದುಡಿಮೆಯೇ' ಅವರ ಬದುಕಿನ ವೈಶಿಷ್ಟ್ಯವಾಗಿದೆ.

ಬೀಡಿ ಕೆಲಸಗಾರರು ಇಷ್ಟೆಲ್ಲಾ ತೊಂದರೆಗಳನ್ನು ಅನುಭವಿಸುತ್ತಿದ್ದರೂ ಕೂಡ ಆ ಕೆಲಸದಲ್ಲಿಯೇ ಏತಕ್ಕಾಗಿ ಮುಂದುವರಿಯುತ್ತಿದ್ದಾರೆ ಎಂಬ ಪ್ರಶ್ನೆ ಇಲ್ಲಿ ಏಳುವುದು ಸಹಜ. ಇದಕ್ಕೆ ಅನೇಕ ಕಾರಣಗಳಿವೆ. ಮೊಟ್ಟಮೊದಲನೆಯದು ಬಡತನ ಹಾಗೂ ಅವರನ್ನು ಎಡೆಬಿಡದೆ ಕಾಡುತ್ತಿರುವ ನಿರುದ್ಯೋಗ ಸಮಸ್ಯೆ. ಸೌಲಭ್ಯಗಳು ಹಾಗೂ ಹೆಚ್ಚಿನ ಸಂಬಳವನ್ನು ತಂದುಕೊಡಬಲ್ಲಂಥ ಕೆಲಸಗಳಿಗೆ ಬೇಕಾದ ವಿದ್ಯಾರ್ಹತೆ, ವಿಶೇಷ ಪರಿಣತಿ ಅಥವಾ ತರಬೇತಿ ಇವರಿಗೆ ಇಲ್ಲ. ಆದ್ದರಿಂದ ಇವರು ಸುಲಭದಲ್ಲಿ ಶೋಷಣೆಗೆ ಬಲಿಯಾಗುತ್ತಾರೆ. ಯಾಂತ್ರಿಕವಾಗಿ ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುವಂಥ, ಯಾವುದೇ ಪ್ರಶ್ನೆಗಳನ್ನು ಕೇಳದ, ಪ್ರತಿಭಟಿಸದ ಮಹಿಳೆಯರ 'ಶ್ರಮ'ವನ್ನು ಉಪಯೋಗಿಸಿಕೊಂಡು ತಮ್ಮ ಲಾಭವನ್ನು ದ್ವಿಗುಣಗೊಳಿಸಿಕೊಳ್ಳಲು ಬೀಡಿ ಉದ್ಯಮಿಗಳು ಸದಾ ಕಾಯುತ್ತಿರುತ್ತಾರೆ. ನಮ್ಮ ಗ್ರಾಮಗಳಲ್ಲಿ ಅನೇಕ ಮಹಿಳೆಯರು ಇಡೀ ಕುಟುಂಬದ ಭಾರವನ್ನು ಸಂಪೂರ್ಣವಾಗಿ ಹೊತ್ತಿದ್ದಾರೆ. ತಾವು ದುಡಿದು, ಆ ದುಡಿಮೆಯ ಗಳಿಕೆಯಿಂದಲೇ ಇಡೀ ಕುಟುಂಬವನ್ನು ಪೋಷಿಸಬೇಕಾದ ಸ್ಥಿತಿ ಇರುವುದರಿಂದ ಅಂಥ ಅನೇಕ ಮಹಿಳೆಯರು ಈ ಬೀಡಿ ಕೆಲಸಕ್ಕೆ ಸೇರಿದ್ದಾರೆ. ತಮ್ಮ ಮನೆಯಿಂದ ದೂರ ಹೋಗದೆ, ಮಧ್ಯ-ಮಧ್ಯ ತಮ್ಮ ಮನೆಯ ಕೆಲಸವನ್ನೂ ಮಾಡಿಕೊಳ್ಳಲು ಅವಕಾಶವಿರುವ ಈ ಬೀಡಿ ಕೆಲಸವನ್ನು ಮಾಡುವುದು ಅನೇಕ ಗ್ರಾಮೀಣ ಮಹಿಳೆಯರಿಗೆ ಸುಲಭವೆನಿಸುತ್ತದೆ.

ಬೀಡಿ ಕೆಲಸದಲ್ಲಿ ತೊಡಗಿರುವ ಲಕ್ಷಾಂತರ ಮಹಿಳೆಯರ ಭವಿಷ್ಯವೇನು ಎಂಬ ಪ್ರಶ್ನೆಗೆ, ಈಗಿನ ಪರಿಸ್ಥಿತಿಯಲ್ಲಿರುವ ಏಕೈಕ ಉತ್ತರ-'ಇವರಿಗೆ ಯಾವ ಭವಿಷ್ಯವೂ ಇಲ್ಲ' ಎನ್ನುವುದೇ ಆಗಿದೆ. ಇವರ ಸ್ಥಿತಿಯಲ್ಲಿ ಸುಧಾರಣೆಯಾಗಬೇಕಾದರೆ, ಮೊಟ್ಟ ಮೊದಲಿಗೆ ಅವರ ಜೀವನದ ಮಟ್ಟದಲ್ಲಿ ಏರಿಕೆಯಾಗಬೇಕಾಗಿದೆ. ಬಡತನ, ಅನಕ್ಷರತೆ, ನಿರುದ್ಯೋಗ, ಸಾಲದ ಜಾಲಗಳಿಂದ ಮುಕ್ತಿಯನ್ನು ಪಡೆಯುವವರೆಗೂ ಬೀಡಿ ಕಾರ್ಮಿಕರಿಗೆ ಯಾವ ಭವಿಷ್ಯವೂ ಇಲ್ಲ, ಭರವಸೆಯೂ ಇಲ್ಲ. ಅವರ ಸಮಸ್ಯೆ

ಗಳು ಬಗೆಹರಿಯಬೇಕಾದಲ್ಲಿ ಶಿಕ್ಷಣ, ಬಲವಾದ ಸಂಘಟನೆ ಮತ್ತು ಸರ್ಕಾರಿ ಮತ್ತು ಸ್ವಯಂಸೇವಾ ಸಂಸ್ಥೆಗಳು ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿದೆ. ಆದರೆ ಇದು ಆಗುವುದೇ ಎನ್ನುವ ಪ್ರಶ್ನೆ ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ.

ಗ್ರಂಥಋಣ

1. India, Department of Social Welfare, Ministry of Education, *Towards Equality*, Report of the Committee on the Status of Women in India, 1974.

2. Rao. U.S. and R. Thangapandian, Beedi workers in Trichy town in *The Indian Journal of Labour Economics*, XXVII (4), Jaunary 1985, pp. 322-333.

3. Singh, Andrea Menefee and Anita kelles. Viitanen, *Invisible Hands, Women in Home-Based Production*, New Delhi: Sage Publications, 1987.

ಡಾ. ಎ. ಎಸ್. ರಾಘವಕುಮಾರಿ

ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವ

ಪೀಠಿಕೆ :

ಶಿಕ್ಷಣವು ಪ್ರತಿಯೊಬ್ಬ ವ್ಯಕ್ತಿಯ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯಕವಾಗಿದೆ. ಇದರಿಂದಾಗಿ ವ್ಯಕ್ತಿಯ ಆಂತರಿಕ ಸಾಮರ್ಥ್ಯಗಳನ್ನು ಹೊರ ತಂದು ಅವುಗಳ ಸಂಪೂರ್ಣ ಉಪಯೋಗ ವ್ಯಕ್ತಿಗೆ ಸಿಗುವಂತೆ ಮಾಡಬೇಕಾಗಿದೆ. ಇಂದು ಪ್ರಪಂಚದಲ್ಲಿ ಬಾಳಬೇಕಾಗಿರುವ ವಿದ್ಯಾರ್ಥಿಗಳಲ್ಲಿ ಉತ್ತಮವಾದ ಹೊಂದಾಣಿಕೆಯನ್ನು ಬೆಳೆಸಬೇಕಾಗಿದೆ. ಈ ದಿಸೆಯಲ್ಲಿ ವಿಜ್ಞಾನವನ್ನು ಬೋಧಿಸುವ ಉಪಾಧ್ಯಾಯರ ಕಾರ್ಯ ಮಹತ್ವದ್ದಾಗಿದೆ. ಏಕೆಂದರೆ ಇಂದು ಮಕ್ಕಳಲ್ಲಿ ವೈಜ್ಞಾನಿಕ ದೃಷ್ಟಿಕೋನ ಮತ್ತು ಮನೋಭಾವಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕಾಗಿದೆ.

ಇಂದು ಪ್ರಪಂಚದಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಬೆಳವಣಿಗೆಯ ಮಹತ್ವವನ್ನು ಎಲ್ಲರೂ ಒಪ್ಪುತ್ತಾರೆ. ಆದ್ದರಿಂದ ಇಂದಿನ ಪ್ರಪಂಚದಲ್ಲಿ ಬಾಳಲು ಪ್ರತಿಯೊಬ್ಬರೂ ವಿಜ್ಞಾನದ ಬಗ್ಗೆ ತಿಳಿದಿರಬೇಕು. ಈ ಅವಶ್ಯಕತೆಯನ್ನು ಪೂರೈಸಲು ಮೊದಲಿನಿಂದಲೇ ವಿದ್ಯಾರ್ಥಿಗಳಿಗೆ ವಿಜ್ಞಾನದ ವಿಷಯಗಳನ್ನು ತಿಳಿಸುತ್ತಾ ಬರುವುದು ಒಳ್ಳೆಯದು. ನಿತ್ಯ ಜೀವನಕ್ಕೆ ವಿಜ್ಞಾನ ಹೇಗೆ ಸಹಾಯಮಾಡುತ್ತಿದೆ ಎಂಬುದೂ ಅವರಿಗೆ ಅರಿವಾಗುತ್ತದೆ. ಇದರಿಂದ ಚಿಂತನೆಗೆ ದಾರಿಮಾಡಿಕೊಟ್ಟಂತಾಗುತ್ತದೆ.

ಪ್ರತಿಯೊಬ್ಬ ವ್ಯಕ್ತಿಯ ಜೀವನದ ಎಲ್ಲ ಮುಖಗಳಿಗೂ ಉಪಯೋಗವಾಗುವಂತಹ ಕೆಲವು ಮೂಲಭೂತ ಅಂಶಗಳಿವೆ. ಅವುಗಳಾವುವೆಂದರೆ–ಬುದ್ಧಿಶಕ್ತಿ, ಆತ್ಮವಿಶ್ವಾಸ, ಅಭಿಸಾಮರ್ಥ್ಯ, ಆಸಕ್ತಿ ಮತ್ತು ಮನೋಭಾವಗಳು. ಅಭಿಸಾಮರ್ಥ್ಯವು ಒಬ್ಬ ವ್ಯಕ್ತಿಯ ಶಕ್ತಿ, ಸಾಮರ್ಥ್ಯಗಳನ್ನು ತಿಳಿಸುತ್ತದೆ. ಹಲವಾರು ತಜ್ಞರು (ಟ್ರಾಕ್ಸ್‌ಲರ್, ವ್ಯಾರೆನ್, ಬಿಂಗ್‌ಹ್ಯಾಮ್, ಫ್ರೀಮನ್, ಸೂಪರ್ ಮುಂತಾದವರು) ಅಭಿಸಾಮರ್ಥ್ಯದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿರುವರು. ಇದು ಒಬ್ಬ

ವ್ಯಕ್ತಿ ಯಾವ ಕೆಲಸವನ್ನು ಹೇಗೆ ಮಾಡಬಲ್ಲ ಎಂಬುದರ ಬಗ್ಗೆ ತಿಳಿಸುತ್ತದೆ. ಮನೋಭಾವದ ಪ್ರಾಮುಖ್ಯತೆಯನ್ನು ಮರೆಯಲು ಸಾಧ್ಯವಿಲ್ಲ. ಏಕೆಂದರೆ ಇದು ನಮ್ಮ ಅನಿಸಿಕೆಗಳ ಬಗ್ಗೆ ಯೋಚನೆಮಾಡಲು ಒಂದು ಅವಕಾಶವನ್ನು ಕಲ್ಪಿಸಿಕೊಡುವುದು. ಇದರ ಪ್ರಾಮುಖ್ಯತೆಯ ಬಗ್ಗೆ ಹಲವಾರು ಮನಶ್ಶಾಸ್ತ್ರಜ್ಞರು ಮತ್ತು ಉಪಬೋಧಕರು (ನ್ಯೂಕೊಂಬ್, ಗಿಲ್‌ಫರ್ಡ್, ಫ್ರೀಮನ್, ಆಲ್‌ಪೋರ್ಟ್, ಗೇಜ್ ಮುಂತಾದವರು) ಹೇಳಿರುವರು. ಒಂದು ನಿರ್ದಿಷ್ಟವಾದ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿ ಏನು ಮಾಡುತ್ತಾನೆ ಅಥವಾ ಏನು ಹೇಳುತ್ತಾನೆ ಎಂದು ಇದು (ಮನೋಭಾವವು) ನಮಗೆ ತಿಳಿಸುತ್ತದೆ. ಯಾವುದೇ ವಿಷಯವನ್ನು ಒಂದು ಕ್ರಮದಲ್ಲಿ ಸರಿಯಾಗಿ ಕಲಿಯಬೇಕೆಂದರೆ ಇವುಗಳು ಅವಶ್ಯಕವಾಗಿವೆ. ಆದ್ದರಿಂದ ಅಧ್ಯಾಪಕರು ಇವುಗಳನ್ನು ಪತ್ತೆಹಚ್ಚಿ ಸೂಕ್ತಮಾರ್ಗದರ್ಶನವನ್ನು ಕೊಡಬೇಕಾಗಿದೆ.

ಈ ಕ್ಷೇತ್ರದಲ್ಲಿ ಕೆಲವೇ ಸಂಶೋಧನೆಗಳು ನಡೆದಿವೆ. ವೆಂಕಟರಮಣ (1970) ಎಂಬುವರು ಒಂದು ಅಭಿಸಾಮರ್ಥ್ಯದ ಪರೀಕ್ಷೆಯನ್ನು ರಚಿಸಿ ಮಾನಕೀಕೃತಗೊಳಿಸಿದ್ದಾರೆ. ಎಸ್. ಸಿ. ಅವಾಲಿ (1975), ಎಸ್. ಚಟರ್ಜಿ ಮತ್ತು ಇತರರು (1978), ಆನಂದಿ ಮಾರ್ಟಿಸ್ (1980) ಮುಂತಾದವರು ವೈಜ್ಞಾನಿಕ ಅಭಿಸಾಮರ್ಥ್ಯವು ಕೆಲವು ಪರಿವರ್ತ್ಯಗಳೊಡನೆ—ಶೈಕ್ಷಣಿಕ ಸಾಧನೆ, ವಿಜ್ಞಾನದ ಅಂಕಗಳು, ವೈಜ್ಞಾನಿಕ ಆಸಕ್ತಿ, ಸಾಮಾಜಿಕ ಆರ್ಥಿಕ ಸ್ಥಿತಿ—ಯಾವ ರೀತಿಯ ಸಂಬಂಧವನ್ನು ಹೊಂದಿದೆ ಎಂಬುದನ್ನು ತಿಳಿಯಲು ಅಧ್ಯಯನಗಳನ್ನು ನಡೆಸಿರುವರು. ಇವುಗಳಿಂದ ತಿಳಿದುಕೊಂಡ ವಿಷಯಗಳು ಹೀಗಿವೆ—(i) ವೈಜ್ಞಾನಿಕ ಅಭಿಸಾಮರ್ಥ್ಯ, ವೈಜ್ಞಾನಿಕ ಆಸಕ್ತಿ ಮತ್ತು ವಿಜ್ಞಾನದ ಸಫಲತೆಗಳ ನಡುವೆ ಧನಾತ್ಮಕವಾದ ಸಂಬಂಧವಿದೆ. (ii) ವೈಜ್ಞಾನಿಕ ಅಭಿಸಾಮರ್ಥ್ಯವು ವಿಜ್ಞಾನದಲ್ಲಿನ ಅಂಕಗಳಿಂದ ಸ್ವತಂತ್ರವಾಗಿದೆ. (iii) ವೈಜ್ಞಾನಿಕ ಅಭಿಸಾಮರ್ಥ್ಯವು ಸಾಮಾಜಿಕ ಆರ್ಥಿಕ ಸ್ಥಿತಿಯೊಡನೆ ನಿಕಟವಾದ ಸಂಬಂಧವನ್ನು ಹೊಂದಿದೆ.

ಪೂರ್ವಸಂಶೋಧನೆಗಳ ಪುನರಾವಲೋಕನದಿಂದ ತಿಳಿದುದೇನೆಂದರೆ ವೈಜ್ಞಾನಿಕ ಅಭಿಸಾಮರ್ಥ್ಯ, ವಿಜ್ಞಾನ ಮನೋಭಾವಗಳು ವಿಜ್ಞಾನದಲ್ಲಿ ಪಡೆದ ಅಂಕಗಳಮೇಲೆ ಯಾವರೀತಿ ಪ್ರಭಾವ ಬೀರುತ್ತವೆ ಎಂಬುದನ್ನು ತಿಳಿಯಲು ಇಲ್ಲಿಯವರೆಗೆ ಯಾರೂ ಪ್ರಯತ್ನಪಟ್ಟಿಲ್ಲ. ಆದ್ದರಿಂದ ಈ ಸಂಶೋಧನೆಯನ್ನು ಮಾಡಲಾಯಿತು.

ಪರಿವರ್ತ್ಯಗಳು :

ಸಂಶೋಧನೆಗೆ ಸಿಕ್ಕಿದ ಕಾಲಾವಕಾಶದ ಆಧಾರದಮೇಲೆ ಈ ಕೆಳಗೆ ಕೊಟ್ಟಿರುವ ಪರಿವರ್ತ್ಯಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ :

(i) ವೈಜ್ಞಾನಿಕ ಅಭಿಸಾಮರ್ಥ್ಯ (ವೈ. ಅ.)

(ii) ವಿಜ್ಞಾನ ಮನೋಭಾವ (ವಿ. ಮ.)

(iii) ವಿಜ್ಞಾನದಲ್ಲಿನ ಅಂಕಗಳು (ವಿ.ಅಂ.)
(iv) ಸಾಮಾಜಿಕ ಆರ್ಥಿಕ ಸ್ಥಿತಿ (SES) (ಸಾ.ಆ.ಸ್ಥಿ.)
(v) ಲಿಂಗ
(vi) ಆಡಳಿತ (management), ಮತ್ತು
(vii) ಸ್ಥಳೀಯತೆ (locality)

ಪ್ರಾಕ್ ಕಲ್ಪನೆಗಳು :

ಪ್ರಾ.ಕ. 1 : ಕೆಳಗಿನ ಸಮೂಹಗಳ ನಡುವೆ—

(ಅ) ಹುಡುಗರು ಮತ್ತು ಹುಡುಗಿಯರು
(ಆ) ಸರ್ಕಾರಿ ಮತ್ತು ಖಾಸಗಿ ಶಾಲೆಗಳು
(ಇ) ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳು—

ಈ ಪರಿವರ್ತ್ಯಗಳಿಗೆ ಸಂಬಂಧಿಸಿದಂತೆ—

(i) ವೈಜ್ಞಾನಿಕ ಅಭಿಸಾಮರ್ಥ್ಯ
(ii) ವಿಜ್ಞಾನ ಮನೋಭಾವ
(iii) ವಿಜ್ಞಾನದಲ್ಲಿನ ಅಂಕಗಳು—
ಮಹತ್ವಪೂರ್ಣವಾದ ವ್ಯತ್ಯಾಸಗಳಿಲ್ಲ.

ಪ್ರಾ.ಕ. 2 : ವಿದ್ಯಾರ್ಥಿಗಳ ವೈಜ್ಞಾನಿಕ ಅಭಿಸಾಮರ್ಥ್ಯವು ಈ ಪರಿವರ್ತ್ಯಗಳಿಂದ—

(i) ವಿಜ್ಞಾನದಲ್ಲಿನ ಅಂಕಗಳು
(ii) ಸಾಮಾಜಿಕ ಆರ್ಥಿಕ ಸ್ಥಿತಿ
(iii) ಲಿಂಗ
(iv) ಆಡಳಿತ ಮತ್ತು
(v) ಸ್ಥಳೀಯತೆ—ಸ್ವತಂತ್ರವಾಗಿದೆ.

ಪ್ರಾ.ಕ. 3 : ವಿದ್ಯಾರ್ಥಿಗಳ ವಿಜ್ಞಾನ ಮನೋಭಾವವು ಈ ಪರಿವರ್ತ್ಯಗಳಿಂದ—

(i) ವಿಜ್ಞಾನದಲ್ಲಿನ ಅಂಕಗಳು
(ii) ಸಾಮಾಜಿಕ ಆರ್ಥಿಕ ಸ್ಥಿತಿ
(iii) ಲಿಂಗ
(iv) ಆಡಳಿತ ಮತ್ತು
(v) ಸ್ಥಳೀಯತೆ—ಸ್ವತಂತ್ರವಾಗಿದೆ.

ಮಾದರಿ :

ಈ ಅಧ್ಯಯನಕ್ಕಾಗಿ ಆಯ್ಕೆಮಾಡಿಕೊಂಡ ಪ್ರತಿದರ್ಶ ಚಯನ (Sample)ವು 10ನೇ ತರಗತಿಯಿಂದ (—300 ಹುಡುಗರು ಮತ್ತು 300 ಹುಡುಗಿಯರು) 600 ವಿದ್ಯಾರ್ಥಿಗಳನ್ನು ಮತ್ತು 9ನೇ ತರಗತಿಯಿಂದ 400 ವಿದ್ಯಾರ್ಥಿಗಳನ್ನು (200 ಹುಡುಗರು ಮತ್ತು 200 ಹುಡುಗಿಯರು) ಒಳಗೊಂಡಿದೆ. ಈ ಮಾದರಿಯನ್ನು 18 ವಿವಿಧ ಪ್ರೌಢಶಾಲೆಗಳಿಂದ ಯಾದೃಚ್ಛಿಕವಾಗಿ ಆಯ್ಕೆಮಾಡಿಕೊಳ್ಳಲಾಯಿತು. ಶಾಲೆಗಳನ್ನು ಆರಿಸಿಕೊಳ್ಳುವಾಗ ವಿಭಾಗಿತ ಮಾದರಿಕ್ರಮವನ್ನು ಅನುಸರಿಸಲಾಯಿತು. ಹೀಗೆ ಮಾಡಿದ್ದರಿಂದ ಮೈಸೂರು ನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳನ್ನು ಪ್ರತಿನಿಧಿಸುವಂತಹ ಮಾದರಿಯನ್ನು ಪಡೆಯಲಾಯಿತು.

ಈ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ವಿದ್ಯಾರ್ಥಿಗಳ ವಿತರಣೆಗಳನ್ನು ಕೆಳಗೆ ಕೊಟ್ಟಿರುವ ತಾಲಿಕೆಗಳು ತೋರಿಸುತ್ತವೆ.

ತಾಲಿಕೆ 1

ತರಗತಿ	ಹುಡುಗರು	ಹುಡುಗಿಯರು	ಒಟ್ಟು
9	200	200	400
10	300	300	600
			ಒಟ್ಟು—1000

ತಾಲಿಕೆ 2 (ಅ)

ತರಗತಿ	ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು	ಖಾಸಗಿ ಶಾಲೆಗಳ ವಿದ್ಯಾರ್ಥಿಗಳು	ಒಟ್ಟು
9	192	208	400
10	280	320	600
ಒಟ್ಟು	472	528	1000

ತಾಲಿಕೆ 2 (ಅ)

ತರಗತಿ	ನಗರ	ಗ್ರಾಮೀಣ	ಒಟ್ಟು
9	244	156	400
10	310	290	600
ಒಟ್ಟು	554	446	1000

ವಿಧಾನ :

ಪ್ರಶ್ನಾವಳಿಗಳನ್ನು ವಿದ್ಯಾರ್ಥಿಗಳಿಗೆ ವಿತರಣೆಮಾಡಿ ಈ ಅಧ್ಯಯನಕ್ಕೆ ಅವಶ್ಯಕವಾದ ಮಾಹಿತಿಯನ್ನು ಸಂಗ್ರಹಿಸಲಾಯಿತು. ಇದಕ್ಕಾಗಿ ಕೆಳಗೆ ಕೊಟ್ಟಿರುವ ಸಾಧನಗಳನ್ನು ಉಪಯೋಗಿಸಲಾಯಿತು—

(i) ವೈಜ್ಞಾನಿಕ ಜ್ಞಾನ ಮತ್ತು ಅಭಿಸಾಮರ್ಥ್ಯದ ಪರೀಕ್ಷೆ

(ii) ವಿಜ್ಞಾನ ಮನೋಭಾವ ಮಾಪನಿ

ಅಧ್ಯಯನಕ್ಕೆ ಅವಶ್ಯಕವಾದ ಮತ್ತು ಸಂಬಂಧಿಸಿದ ಇತರ ಮಾಹಿತಿಯನ್ನು ಶಾಲೆಗಳಲ್ಲಿರುವ ದಾಖಲಾತಿಗಳಿಂದ ಸಂಗ್ರಹಿಸಲಾಯಿತು.

ಈ ರೀತಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲು 'ಟಿ' ಪರೀಕ್ಷೆ ಮತ್ತು 'ಖೈವರ್ಗದಿಂದ ಸ್ವತಂತ್ರ' ಪರೀಕ್ಷೆ ಎಂಬ ತಂತ್ರಗಳನ್ನು ಬಳಸಲಾಯಿತು.

ಮೊಟ್ಟಮೊದಲು ಅಧ್ಯಯನದಲ್ಲಿರುವ ಎಲ್ಲಾ ಪರಿವರ್ತ್ಯಗಳ ಅಂಕಗಳಿಗೂ ವಿತರಣೆಗಳನ್ನು ಹಾಕಿ ಸರಾಸರಿ ಮತ್ತು ಮಾನಕ ವಿಚಲನೆಗಳನ್ನು ಕಂಡುಹಿಡಿಯಲಾಯಿತು. ನಂತರ 'ಟಿ' ಪರೀಕ್ಷೆಯ ಸಹಾಯದಿಂದ ಮೊದಲನೆಯ ಪ್ರಾಕ್ ಕಲ್ಪನೆಯನ್ನು ಶೋಧಿಸಲಾಯಿತು.

ತಾಲಿಕೆಗಳು 3, 4 ಮತ್ತು 5 ವಿವಿಧ ಸಮೂಹಗಳಲ್ಲಿರುವ ವಿದ್ಯಾರ್ಥಿಗಳ ಸರಾಸರಿ ಮತ್ತು ಮಾನಕ ವಿಚಲನೆಗಳನ್ನು ತೋರಿಸುವುವು.

ತಾಲಿಕೆ 3

ಹುಡುಗರು ಮತ್ತು ಹುಡುಗಿಯರ ಸರಾಸರಿ ಮತ್ತು ಮಾನಕ ವಿಚಲನೆಗಳು

ಕ್ರಮ ಸಂಖ್ಯೆ	ಪರಿವರ್ತ್ಯ	ಹುಡುಗರು		ಹುಡುಗಿಯರು		ಟಿ
		ಸರಾಸರಿ	ಮಾನಕ ವಿಚಲನೆ	ಸರಾಸರಿ	ಮಾನಕ ವಿಚಲನೆ	
1	ವೈ.ಅ.	24.70	5.78	24.09	5.89	4.47**
2	ವಿ.ಮ.	47.90	7.33	46.15	7.38	3.76**
3	ವಿ.ಜ್ಞಾ.	41.09	13.72	43.86	12.24	3.36**

ಸೂಚನೆ : *ಮಹತ್ವ ಪೂರ್ಣತೆ 0.05 ಮಟ್ಟದಲ್ಲಿ ಕೋಷ್ಟಕ 'ಡಿ' ಯಿಂದ ಸಂಭವನೀಯತೆ ಟಿ = 1.96

**ಮಹತ್ವ ಪೂರ್ಣತೆ 0.01 ಮಟ್ಟದಲ್ಲಿ ಕೋಷ್ಟಕ 'ಡಿ' ಯಿಂದ ಸಂಭವನೀಯತೆ ಟಿ = 2 58

ಈ ತಾಲಿಕೆಯನ್ನು ಪರೀಕ್ಷಿಸುವುದರಿಂದ ನಮಗೆ ಕೆಲವು ವಿಷಯಗಳು ತಿಳಿದವು: (i) ಮೂರು 'ಟಿ' ಮೌಲ್ಯಗಳೂ 0.01 ಮಟ್ಟದಲ್ಲಿ ಮಹತ್ವಪೂರ್ಣತೆಯನ್ನು ಹೊಂದಿವೆ. ಅಂದರೆ, ಮೂರೂ ಪರಿವರ್ತ್ಯಗಳಿಗೆ ಸಂಬಂಧಿಸಿದಂತೆ—ವೈಜ್ಞಾನಿಕ ಅಭಿಸಾಮರ್ಥ್ಯ, ವಿಜ್ಞಾನ ಮನೋಭಾವ ಮತ್ತು ವಿಜ್ಞಾನದಲ್ಲಿನ ಅಂಕಗಳು—ಹುಡುಗರು ಮತ್ತು ಹುಡುಗಿಯರ ನಡುವೆ ಮಹತ್ವಪೂರ್ಣವಾದ ವ್ಯತ್ಯಾಸಗಳಿವೆ. (ii) ಎರಡು ಪರಿವರ್ತ್ಯಗಳಿಗೆ ಸಂಬಂಧಿಸಿದಂತೆ—ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವ—ಹುಡುಗರ ಸರಾಸರಿಗಳೇ ಹುಡುಗಿಯರ ಸರಾಸರಿಗಳಿಗಿಂತ ಹೆಚ್ಚಾಗಿವೆ. ಆದರೆ ಹುಡುಗರಿಗಿಂತ ಹುಡುಗಿಯರು ವಿಜ್ಞಾನದಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವರು. ಆದ್ದರಿಂದ ಪ್ರಾಕ್ ಕಲ್ಪನೆ 1 (ಅ) ನಲ್ಲಿ ಮಾಡಿಕೊಂಡಿದ್ದ ಮೂರು ಉಪ ಪ್ರಾಕ್ ಕಲ್ಪನೆಗಳಲ್ಲಿ ಯಾವುದನ್ನೂ ಉಳಿಸಿಕೊಳ್ಳಲಾಗಲಿಲ್ಲ.

ತಾಲಿಕೆ 4

ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸರಾಸರಿ ಮತ್ತು ಮಾನಕ ವಿಚಲನೆಗಳು

ಕ್ರಮ ಸಂಖ್ಯೆ	ಪರಿವರ್ತ್ಯ	ಸರ್ಕಾರಿ		ಖಾಸಗಿ		ಟಿ
		ಸರಾಸರಿ	ಮಾನಕ ವಿಚಲನೆ	ಸರಾಸರಿ	ಮಾನಕ ವಿಚಲನೆ	
1	ವೈ. ಅ.	25.27	5.54	24.63	5.86	1.77
2	ವಿ. ಮ.	47.14	8.07	46.90	7.57	0.48
3	ವಿ. ಅಂ.	46.44	13.01	44.64	13.55	2.54*

ಈ ತಾಲಿಕೆಯನ್ನು ಗಮನಿಸಿದ್ದರಿಂದ ನಮಗೆ ಕೆಲವು ಅಂಶಗಳು ಅರಿವಾದುವು: (i) ಮೂರು 'ಟಿ' ಮೌಲ್ಯಗಳ ಪೈಕಿ ಒಂದು 'ಟಿ' ಮೌಲ್ಯವು ಮಾತ್ರ 0.05 ಮಟ್ಟದಲ್ಲಿ ಮಹತ್ವಪೂರ್ಣತೆಯನ್ನು ಹೊಂದಿದೆ. ಅಂದರೆ, ವಿಜ್ಞಾನದಲ್ಲಿ ಪಡೆದ ಅಂಕಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ನಡುವೆ ಮಹತ್ವಪೂರ್ಣವಾದ ವ್ಯತ್ಯಾಸಗಳಿವೆ. (ii) ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿನ ವಿದ್ಯಾರ್ಥಿಗಳ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳ ಸರಾಸರಿಗಳ ನಡುವೆ ಮಹತ್ವಪೂರ್ಣವಾದ ವ್ಯತ್ಯಾಸಗಳಿಲ್ಲ. (iii) ಮೂರೂ ಪರಿವರ್ತ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸರಾಸರಿಗಳೇ ಇನ್ನೊಂದು ಸಮೂಹದವುಗಳಿಗಿಂತ ಉತ್ತಮವಾಗಿವೆ. ಆದ್ದರಿಂದ ಪ್ರಾಕ್

ಕಲ್ಪನೆ 1 (ಅ) ನಲ್ಲಿ ಮಾಡಿಕೊಂಡಿದ್ದ ಮೂರು ಉಪ ಪ್ರಾಕ್ ಕಲ್ಪನೆಗಳ ಪೈಕಿ ಒಂದು ಉಪ ಪ್ರಾಕ್ ಕಲ್ಪನೆಯನ್ನು ಮಾತ್ರ—1 ಅ (iii)—ಸಮ್ಮತಿಸಲಾಗಲಿಲ್ಲ.

ತಾಲಿಕೆ 5

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳ ವಿದ್ಯಾರ್ಥಿಗಳ ಸರಾಸರಿ ಮತ್ತು ಮಾನಕ ವಿಚಲನೆಗಳು

ಕ್ರಮ ಸಂಖ್ಯೆ	ಪರಿವರ್ತ್ಯ	ನಗರ		ಗ್ರಾಮೀಣ		ಟಿ
		ಸರಾಸರಿ	ಮಾನಕ ವಿಚಲನೆ	ಸರಾಸರಿ	ಮಾನಕ ವಿಚಲನೆ	
1	ವೈ.ಅ.	24.15	5.56	26.13	5.92	5.46 **
2	ವಿ.ಮ.	45.90	8.10	47.59	7.93	3.31 **
3	ವಿ.ಅಂ.	45.98	15.95	45.20	11.61	0 87

ಈ ತಾಲಿಕೆಯನ್ನು ಪರಿಶೀಲಿಸಿದ್ದರಿಂದ ಈ ಕೆಳಗಿನ ವಿಷಯಗಳು ತಿಳಿದು ಬಂದುವು: (i) ಎರಡು 'ಟಿ' ಮೌಲ್ಯಗಳು 0.01 ಮಟ್ಟದಲ್ಲಿ ಮಹತ್ವಪೂರ್ಣತೆಯನ್ನು ಹೊಂದಿವೆ. ಅಂದರೆ, ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳಿಗೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳ ನಡುವೆ ಮಹತ್ವಪೂರ್ಣವಾದ ವ್ಯತ್ಯಾಸಗಳಿವೆ. (ii) ವಿಜ್ಞಾನದಲ್ಲಿನ ಅಂಕಗಳಿಗೆ ಸಂಬಂಧಿಸಿದಂತೆ ಎರಡೂ ಸಮೂಹಗಳ ನಡುವೆ ಮಹತ್ವಪೂರ್ಣವಾದ ವ್ಯತ್ಯಾಸವಿಲ್ಲ. (iii) ಎರಡು ಪರಿವರ್ತ್ಯಗಳಿಗೆ—ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವ—ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಸರಾಸರಿಗಳೇ ನಗರ ಪ್ರದೇಶಗಳಲ್ಲಿರುವ ಸಮೂಹಗಳಿಗಿಂತ ಹೆಚ್ಚಾಗಿವೆ. ಆದರೆ ನಗರ ಪ್ರದೇಶದಲ್ಲಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳೇ ವಿಜ್ಞಾನದಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವರು. ಆದ್ದರಿಂದ ಪ್ರಾಕ್‌ಕಲ್ಪನೆ 1 (ಇ) ನಲ್ಲಿ ಮಾಡಿಕೊಂಡಿದ್ದ ಮೂರು ಉಪ ಪ್ರಾಕ್ ಕಲ್ಪನೆಗಳ ಪೈಕಿ ಒಂದು ಉಪಪ್ರಾಕ್ ಕಲ್ಪನೆಯನ್ನು ಮಾತ್ರ ತ್ಯಜಿಸಲಾಗಲಿಲ್ಲ —ಪ್ರಾ ಕ. 1 (ಇ) (iii).

ಉಳಿದ ಪ್ರಾಕ್ ಕಲ್ಪನೆಗಳನ್ನು ಖೈವರ್ಗದಿಂದ ಸ್ವತಂತ್ರ ಪರೀಕ್ಷೆ ಎಂಬ ತಂತ್ರದಿಂದ ಶೋಧಿಸಲಾಯಿತು. ಈಗಾಗಲೇ ಹೇಳಿರುವಂತೆ ಅಧ್ಯಯನದಲ್ಲಿ ಸೇರಿಸಿಕೊಂಡಿರುವ ಪ್ರತಿಯೊಂದು ಪರಿವರ್ತ್ಯಕ್ಕೂ ಸರಾಸರಿ ಮತ್ತು ಮಾನಕ ವಿಚಲನೆ

ಗಳನ್ನು ಕಂಡುಹಿಡಿಯಲಾಗಿದೆ. ಇದರ ಆಧಾರದಮೇಲೆ ಮಾದರಿಯನ್ನು ಗರಿಷ್ಠ (ಗ), ಮಧ್ಯಮ (ಮ), ಮತ್ತು ಕನಿಷ್ಠ (ಕ) ಎಂದು ಮೂರು ವರ್ಗಗಳಾಗಿ ವಿಂಗಡನೆ ಮಾಡಿಕೊಳ್ಳಲಾಯಿತು.

ವಿವಿಧ ಪರಿವರ್ತ್ಯಗಳು ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳೊಡನೆ ಯಾವ ರೀತಿಯ ಸಂಬಂಧವನ್ನು ಹೊಂದಿವೆ ಎಂಬುದನ್ನು ಈ ಕೆಳಗೆ ಕೊಟ್ಟಿರುವ ತಾಲಿಕೆಯಲ್ಲಿನ ಮೌಲ್ಯಗಳು ತಿಳಿಸುವುವು.

ತಾಲಿಕೆ 6

ಖೈವರ್ಗದ ಮೌಲ್ಯಗಳು

ಕ್ರ.ಸಂ.	ಪರಿವರ್ತ್ಯ	ವೈ.ಅ	ವಿ.ಮ
1	ವಿ ಅಂ.	24.03 **	4.69
2.	ಸಾ.ಆ.ಸ್ಥಿ.	14.85 **	16.69 **
3.	ಲಿಂಗ	17 03 **	7 99 *
4	ಆಡಳಿತ	4.21	6.27 *
5	ಸ್ಥಳೀಯತೆ	23.95 **	7.15

ಸ್ವಾ. ಮ. 4 { ** ಮಹತ್ವಪೂರ್ಣತೆ 0.01 ಮಟ್ಟದಲ್ಲಿ ಕೋಷ್ಟಕ 'ಇ' ಯಿಂದ ಸಂಭವನೀಯತೆ $x^2 = 13.29$
* ಮಹತ್ವಪೂರ್ಣತೆ .0.05 ಮಟ್ಟದಲ್ಲಿ ಸಂಭವನೀಯತೆ $x^2 = 9.29$

(ಕ್ರಮಸಂಖ್ಯೆ 1 ಮತ್ತು 2 ಕ್ಕೆ ಇದು ಅನ್ವಯಿಸುತ್ತದೆ.)

ಸ್ವಾ. ಮ. 2 ಆದರೆ—

** ಮಹತ್ವಪೂರ್ಣತೆ 0.01 ಮಟ್ಟದಲ್ಲಿ ಕೋಷ್ಟಕ 'ಇ' ಯಿಂದ ಸಂಭವನೀಯತೆ $x^2 = 9.21$

* ಮಹತ್ವಪೂರ್ಣತೆ 0.05 ಮಟ್ಟದಲ್ಲಿ $x^2 = 5.99$

[ಇದು ಕ್ರಮಸಂಖ್ಯೆ 3 ರಿಂದ 5 ಕ್ಕೆ ಅನ್ವಯಿಸುತ್ತದೆ]

ಈ ತಾಲಿಕೆಯನ್ನು ಗಮನವಿಟ್ಟು ನೋಡಿದ್ದರಿಂದ ಕೆಲವು ವಿಷಯಗಳು ತಿಳಿದುವು: (i) ಹತ್ತು ಚೈವರ್ಗದ ಮೌಲ್ಯಗಳ ಪೈಕಿ ಎಂಟು ಮೌಲ್ಯಗಳು ಸಂಖ್ಯಾ ಶಾಸ್ತ್ರೀಯವಾಗಿ ಮಹತ್ವಪೂರ್ಣತೆಯನ್ನು ಹೊಂದಿವೆ. (ii) ಇವುಗಳ ಪೈಕಿ 4 ಮೌಲ್ಯಗಳು 0.01 ಮಟ್ಟದಲ್ಲಿ ಮಹತ್ವಪೂರ್ಣತೆಯನ್ನು ಹೊಂದಿವೆ ಮತ್ತು ಇವು ವೈಜ್ಞಾನಿಕ ಅಭಿಸಾಮರ್ಥ್ಯಕ್ಕೆ ಸಂಬಂಧಿಸಿವೆ. ಉಳಿದ ನಾಲ್ಕು ಮೌಲ್ಯಗಳು ವಿಜ್ಞಾನ ಮನೋಭಾವಕ್ಕೆ ಸಂಬಂಧಿಸಿವೆ. ಇಲ್ಲಿ ಒಂದು ಮೌಲ್ಯವು 0.01 ಮಟ್ಟದಲ್ಲಿಯೂ ಮಿಕ್ಕವು 0.05 ಮಟ್ಟದಲ್ಲಿಯೂ ಮಹತ್ವಪೂರ್ಣತೆಯನ್ನು ಹೊಂದಿವೆ. ಅಂದರೆ ವೈಜ್ಞಾನಿಕ ಅಭಿಸಾಮರ್ಥ್ಯವು ಆಡಳಿತವರ್ಗದ ಹೊರತು ಮಿಕ್ಕ ನಾಲ್ಕೂ ಪರಿವರ್ತ್ಯ ಗಳೊಡನೆ ನಿಕಟವಾದ ಸಂಬಂಧವನ್ನು ಹೊಂದಿದೆ. ಏಕೆಂದರೆ ವೈಜ್ಞಾನಿಕ ಅಭಿ ಸಾಮರ್ಥ್ಯವು. ಈ ನಾಲ್ಕು ಪರಿವರ್ತ್ಯಗಳಮೇಲೆ—ವಿಜ್ಞಾನದಲ್ಲಿನ ಅಂಕಗಳು, ಸಾಮಾಜಿಕ ಆರ್ಥಿಕ ಸ್ಥಿತಿ, ಲಿಂಗ ಮತ್ತು ಸ್ಥಳೀಯತೆ–ಆಧಾರಗೊಂಡಿದೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ. (iii) ವಿಜ್ಞಾನ ಮನೋಭಾವವು ವಿಜ್ಞಾನದಲ್ಲಿನ ಅಂಕಗಳನ್ನು ಹೊರತು ಮಿಕ್ಕ ನಾಲ್ಕೂ ಪರಿವರ್ತ್ಯಗಳೊಡನೆ ನಿಕಟವಾದ ಸಂಬಂಧವನ್ನು ಹೊಂದಿದೆ. ಅಂದರೆ ವಿಜ್ಞಾನಮನೋಭಾವವು ಈ ನಾಲ್ಕು ಪರಿವರ್ತ್ಯಗಳ ಮೇಲೆ—ಸಾಮಾಜಿಕ ಆರ್ಥಿಕ ಸ್ಥಿತಿ, ಲಿಂಗ, ಆಡಳಿತ ಮತ್ತು ಸ್ಥಳೀಯತೆ—ಆಧಾರಗೊಂಡಿರುವುದು ಕಂಡುಬಂದಿದೆ. ಆದ್ದರಿಂದ ವಿಜ್ಞಾನ ಮನೋಭಾವವು ಈ ಪರಿವರ್ತ್ಯಗಳಿಂದ ಸ್ವತಂತ್ರವಾಗಿಲ್ಲ ಎಂದು ಹೇಳಬಹುದು. ಆದಕಾರಣ ಪ್ರಾಕ್ ಕಲ್ಪನೆ 2 ನೆಯದರಲ್ಲಿ ಮಾಡಿಕೊಂಡಿರುವ ಐದು ಉಪಪ್ರಾಕ್ ಕಲ್ಪನೆಗಳಲ್ಲಿ ಒಂದು ಉಪಪ್ರಾಕ್ ಕಲ್ಪನೆಯನ್ನು ಮಾತ್ರ—ಅಂದರೆ ಪ್ರಾಕ್ 2 (iv)—ಸಮ್ಮತಿಸಲಾಯಿತು ಹಾಗೆಯೇ ಪ್ರಾಕ್‌ಕಲ್ಪನೆ 3 ನೆಯದರಲ್ಲಿ ಮಾಡಿಕೊಂಡಿರುವ ಐದು ಉಪಪ್ರಾಕ್ ಕಲ್ಪನೆಗಳ ಪೈಕಿ ಒಂದು ಉಪಪ್ರಾಕ್ ಕಲ್ಪನೆಯನ್ನು—ಅಂದರೆ ಪ್ರಾಕ. 3 (i)—ಮಾತ್ರ ಒಪ್ಪಿಕೊಳ್ಳಬೇಕಾಯಿತು.

ಫಲಿತಾಂಶಗಳು :

(i) ವಿಜ್ಞಾನದಲ್ಲಿ ಕಡಿಮೆ ಅಂಕಗಳನ್ನು ಪಡೆದಿದ್ದರೂ ಸಹ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳಲ್ಲಿ ಹುಡುಗರು ಹುಡುಗಿಯರನ್ನು ಮೀರಿಸಿರುವರು.

(ii) ಮೂರು ಪರಿವರ್ತ್ಯಗಳಲ್ಲಿಯೂ ಸರ್ಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳೇ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ.

(iii) ಗ್ರಾಮೀಣ ಪ್ರದೇಶಗಳಲ್ಲಿನ ಶಾಲೆಗಳಲ್ಲಿರುವ ವಿದ್ಯಾರ್ಥಿಗಳು ವಿಜ್ಞಾನದಲ್ಲಿ ಹೆಚ್ಚು ಅಂಕಗಳನ್ನು ಪಡೆಯಲಾಗದಿದ್ದರೂ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳಲ್ಲಿ ಉತ್ತಮವಾಗಿರುವರು.

(iv) ವೈಜ್ಞಾನಿಕ ಅಭಿಸಾಮರ್ಥ್ಯವು ನಾಲ್ಕು ಪರಿವರ್ತ್ಯಗಳಮೇಲೆ—ವಿಜ್ಞಾನದಲ್ಲಿನ ಅಂಕಗಳು, ಸಾಮಾಜಿಕ ಆರ್ಥಿಕಸ್ಥಿತಿ, ಲಿಂಗ ಮತ್ತು ಸ್ಥಳೀಯತೆ—ಅವಲಂಬಿತವಾಗಿದೆ.

(v) ವಿಜ್ಞಾನ ಮನೋಭಾವವೂ ನಾಲ್ಕು ಪರಿವರ್ತ್ಯಗಳ ಮೇಲೆ—ಸಾಮಾಜಿಕ ಆರ್ಥಿಕಸ್ಥಿತಿ, ಲಿಂಗ, ಆಡಳಿತ ಮತ್ತು ಸ್ಥಳೀಯತೆ—ಆಧಾರಗೊಂಡಿದೆ.

ನಿಹಿತಾರ್ಥಗಳು:

ಇಂದು ವಿದ್ಯಾರ್ಥಿಗಳು ವೈಜ್ಞಾನಿಕ ಪ್ರಪಂಚದಲ್ಲಿ ಬಾಳಬೇಕಾಗಿರುವುದರಿಂದ ಅವರಲ್ಲಿ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳನ್ನು ಬೆಳೆಸಬೇಕಾಗಿದೆ. ಇದಕ್ಕೆ ಅವಶ್ಯಕವಾದ ಪರಿಸರ ಮತ್ತು ಅವಕಾಶಗಳನ್ನು ಅಧ್ಯಾಪಕರು ಒದಗಿಸಿಕೊಡಬೇಕಾಗಿದೆ ಈ ರೀತಿ ಮಾಡುವುದರಿಂದ ವಿಜ್ಞಾನ ವಿಷಯದಲ್ಲಿ ಒಳ್ಳೆಯ ಅಂಕಗಳನ್ನು ಪಡೆಯಲು ಉತ್ತೇಜನ ಕೊಟ್ಟಂತಾಗುತ್ತದೆ. ಅಧ್ಯಾಪಕರು ಸರಿಯಾದ ಸಮಯದಲ್ಲಿ ಸೂಕ್ತ ಮಾರ್ಗದರ್ಶನ ಕೊಟ್ಟಲ್ಲಿ ವಿದ್ಯಾರ್ಥಿಗಳು ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳನ್ನು ಉತ್ತಮ ಪಡಿಸಿಕೊಳ್ಳಲು ಅವಕಾಶವಾಗುತ್ತದೆ. ಮುಖ್ಯವಾಗಿ ವಿಜ್ಞಾನವನ್ನು ಬೋಧಿಸುವ ಅಧ್ಯಾಪಕರು ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗಿದೆ. —(1) ಒಟ್ಟಾರೆ ಪ್ರೌಢಶಾಲೆಗಳಲ್ಲಿರುವ ವಿದ್ಯಾರ್ಥಿಗಳು ಮತ್ತು ಮುಖ್ಯವಾಗಿ ಹುಡುಗಿಯರ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳನ್ನು ಉತ್ತಮಪಡಿಸಿಕೊಳ್ಳಲು ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಡಬೇಕು (2) ಸರ್ಕಾರಿ ಪ್ರೌಢಶಾಲೆಗಳಲ್ಲಿರುವ ಅಧ್ಯಾಪಕರುಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳನ್ನು ಸರಿಯಾದ ರೀತಿಯಲ್ಲಿ ಬೆಳೆಸಲು ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. (3) ವಿವಿಧ ಕಾರ್ಯಕ್ರಮಗಳಲ್ಲಿ ಭಾಗ ವಹಿಸಿ ಧನಾತ್ಮಕವಾದ ಮನೋಭಾವವನ್ನು (ವಿಜ್ಞಾನದ ಬಗ್ಗೆ) ಬೆಳೆಸಿಕೊಳ್ಳಲು ವಿದ್ಯಾರ್ಥಿಗಳಿಗೆ ಪ್ರೇರಣೆಕೊಡಬೇಕು. (4) ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿನ ವಿದ್ಯಾರ್ಥಿಗಳೇ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳಲ್ಲಿ ಉತ್ತಮವಾಗಿರುವರೆಂಬ ವಿಷಯವು ಈ ಅಧ್ಯಯನದಿಂದ ಸ್ಪಷ್ಟವಾಗಿದೆ. ಆದ್ದರಿಂದ ಈ ಶಾಲೆಗಳು ವಿಜ್ಞಾನವನ್ನು ಹೆಚ್ಚು ಶ್ರದ್ಧೆ ಮತ್ತು ಕ್ರಮಬದ್ಧವಾಗಿ ಬೋಧಿಸುವುದರಿಂದ ಪ್ರಸ್ತುತ ಪರಿಸ್ಥಿತಿಯನ್ನು ಉತ್ತಮಪಡಿಸಬಹುದು. (5) ನಗರ ಪ್ರದೇಶಗಳಲ್ಲಿರುವ ಶಾಲೆಗಳು ತಮಗೆ ದೊರಕಿದ ಮತ್ತು ದೊರಕುವ ಅವಕಾಶ ಮತ್ತು ಸೌಲಭ್ಯಗಳನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳಿಗಿಂತ ಉತ್ತಮವಾದ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ವಿಜ್ಞಾನ ಮನೋಭಾವಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ಸಾಧ್ಯವಾಗುತ್ತದೆ.

ಆದ್ದರಿಂದ ಅಧ್ಯಾಪಕರು ಸರಿಯಾದ ರೀತಿಯಲ್ಲಿ ಕೆಲಸಮಾಡಲು ಮತ್ತು ಅವರುಗಳು ವಿಜ್ಞಾನದ ಬಗ್ಗೆ ಧನಾತ್ಮಕವಾದ ಮನೋಭಾವವನ್ನು ಬೆಳೆಸಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಂದ ಸೂಕ್ತ ಮಾರ್ಗದರ್ಶನ, ಉತ್ತೇಜನ, ಬೆಂಬಲ ಮತ್ತು ಸಹಕಾರ ಅಗತ್ಯವಾಗಿದೆ.

ಆಧಾರಿತ ಗ್ರಂಥಗಳು

1. Aggarwal J. C. (1979) *Educational and Vocational Guidance*, Doaba House, Booksellers and Publishers, 1688 Naisarat, Delhi–110006.
2. Alcorm, Marvin Detal (1970) *Better Teaching in Secondary Schools*, Holt Rine Hart and Wingston, New York.
3. Anandi Martis (1980) *Scientific knowledge and Aptitude of X Std. Students of Mangalore*, Unpublished M.Ed. Dissertation, University of Mysore.
4. Anastasi, Anne (1968) *Psychological, Testing*, 3rd edition, The Macmillan Co.
5. Buch, M.B. (1979) *Second Survey of Res. in Edn.*, Baroda.
6. Buch, M.B. (1987) *Third Survey of Res. in Edn.*, NCERT, Delhi.
7. Chauhan S.S. (1978) *Advanced Educational Psychology*, Vikas Publishing House Pvt. Ltd., New Delhi.
8. Freeman F.S. (1960) *Theory and Practices of Psychological Testing*, New York.
9. Garrette, Henry, E. (1961) *Statistics in Psychology and Education*, Longman's Green and Co., New York.
10. Jevons F.R. (1969) *The Teaching of Science*, Aken and Uniwin, London.
11. Kochar S.K. (1970) *Guidance in Indian Education*, Sterling Publishing, New Delhi.

12. ನರಸಿಂಹಮೂರ್ತಿ, ಬಿ. ವಿ. (1981) ಮೈಸೂರು ನಗರದ ಹತ್ತನೇ ತರಗತಿ ವಿದ್ಯಾರ್ಥಿಗಳ ವೈಜ್ಞಾನಿಕ ಅಭಿಸಾಮರ್ಥ್ಯ ಮತ್ತು ಪಾಂಡಿತ್ಯದ ಗಳಿಕೆಯ ನಡುವಿನ ಸಂಬಂಧದ ಒಂದು ಅಧ್ಯಯನ, ಮುದ್ರಿತವಾಗದಿರುವ ಎಂ.ಎಡ್. dissertation, University of Mysore.

13. Sharma R. C. (1975) *Modern Science Teaching*, Dhanpet Rai and Sons, Delhi.

14. ಶಿವಶಂಕರ, ಹೆಚ್. ವಿ. ಮತ್ತು ಇತರರು (1978) ವಿಜ್ಞಾನ ಬೋಧನೆ, ಹಂಚಿ ಪ್ರಕಾಶನ, ಹೊಸಹಳ್ಳಿ.

15. Super (1985) *Appraising Vocational Fitness by means of Psychological Tests*, New York.

16. ಡಾ. ವೀರಪ್ಪ, ಎನ್. ಎಸ್. (1979) ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಎಲ್. ಟಿ. ಶರ್ಮ

ಇತ್ತೀಚೆಗೆ ನಿಧನರಾದ ಎಲ್. ಟಿ. ಶರ್ಮ ಅವರು ಪ್ರಸಿದ್ಧ ಇತಿಹಾಸ ಸಂಶೋಧಕರೂ, ಪರಿಸರವಾದಿಗಳೂ, ಸಮಾಜ ಕಾರ್ಯಕರ್ತರೂ ಆಗಿದ್ದರು.

ಲಿಂಗೇಶ ಶರ್ಮ ಅವರು 1925 ಡಿಸೆಂಬರ್ 15 ರಂದು ಹೊನ್ನಾವರ ತಾಲ್ಲೂಕಿನ ಕರ್ಕಿಯಲ್ಲಿ ಜನಿಸಿದರು. ಸಾಂಗ್ಲಿಯ ವೆಲ್ಲಿಂಗ್‌ಟನ್ ಕಾಲೇಜು ಹಾಗೂ ಪುಣೆಯ ಫರ್ಗ್ಯೂಸನ್ ಕಾಲೇಜುಗಳಲ್ಲಿ ಅಭ್ಯಾಸಮಾಡಿ ಸೂರತ್‌ನ ಕಾಲೇಜಿನಲ್ಲಿ ಇತಿಹಾಸ ಅಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿದರು. 1949 ರಿಂದ 1962 ರ ವರೆಗೆ ಕುಮುಟ ಕೆನರಾ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. 1962 ರಿಂದ 1980 ರ ವರೆಗೆ ಸಿರಸಿಯ ಎಂ.ಎಂ. ಸ್ಮಾರಕ ಕಾಲೇಜಿನ ಸಂಸ್ಥಾಪಕ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದರು. 1981 ರಿಂದ 83 ರ ವರೆಗೆ ಕರ್ನಾಟಕ ರಾಜ್ಯ ಮುಖ್ಯ ಮಂತ್ರಿಗಳಿಗೆ ಮಾಹಿತಿ ಅಧಿಕಾರಿಗಳಾಗಿದ್ದರು.

ಇತಿಹಾಸದ ಪ್ರಾಧ್ಯಾಪಕರಾಗಿದ್ದಂತೆ ಶರ್ಮರವರು ಸಾಮಾಜಿಕ ಕಾರ್ಯ ಕರ್ತರೂ ಆಗಿದ್ದರು. ಈ ದಿಸೆಯಲ್ಲಿ ಉತ್ತಮ ಸೇವೆ ಸಲ್ಲಿಸಿ ಸಿರಸಿಯಲ್ಲಿ ಪಂಚಾಯಿತಿ ರಾಜ್ಯ ತರಬೇತಿ ಕೇಂದ್ರದ ಸಂಸ್ಥಾಪಕ ಪ್ರಾಚಾರ್ಯರು ಆಗಿದ್ದರು.

ಅಸಾಧಾರಣ ಸಂಘಟನಾ ಸಾಮರ್ಥ್ಯವನ್ನು ಹೊಂದಿದ್ದ ಶರ್ಮಾರವರು ಬಹುಮುಖ ಪ್ರತಿಭೆಯುಳ್ಳವರಾಗಿದ್ದರು. ಸಹಕಾರಿಕ್ಷೇತ್ರ, ಖಾದಿ ಮತ್ತು ಗ್ರಾಮೋದ್ಯೋಗ, ಗಾಂಧಿಮಾರ್ಗದ ಅಭ್ಯಾಸ ಮೊದಲಾದ ಕ್ಷೇತ್ರಗಳಲ್ಲೂ ಇವರು ಸಕ್ರಿಯ ಪಾತ್ರವನ್ನು ವಹಿಸುತ್ತಾ ಬಂದಿದ್ದರು. ಸಾಹಿತ್ಯ, ಲಲಿತಕಲೆ, ಪತ್ರಿಕೋದ್ಯಮ ಕ್ಷೇತ್ರಗಳಲ್ಲೂ ಅವರಿಗೆ ಅಪಾರವಾದ ಆಸಕ್ತಿಯಿದ್ದಿತು. ಗ್ರಾಮಜೀವನ ಎಂಬ ಪತ್ರಿಕೆಯನ್ನು ಸುಮಾರು ಹತ್ತು ವರ್ಷಕಾಲ ಸಂಪಾದಕರಾಗಿ ಇವರು ಪ್ರಕಟಿಸಿದರು. ಸಹ್ಯಾದ್ರಿ ಪರಿಸರ ಪತ್ರದ ಸಂಪಾದಕರಾಗಿ ಅನೇಕವರ್ಷ ಶ್ರಮಿಸಿದರು. ಇವರು ಸಿರಸಿ ಎಂ.ಎಂ. ಕಾಲೇಜಿನ ಶಿಲ್ಪಿ ಎಂದು ಪ್ರಸಿದ್ಧರಾಗಿದ್ದರು. ಇದಲ್ಲದೆ ಉತ್ತರ ಕನ್ನಡದ ಹಲವು ಊರುಗಳಲ್ಲಿ ಪ್ರೌಢಶಾಲೆಗಳನ್ನು ಸ್ಥಾಪಿಸಿದರು. ತಮ್ಮ ನಿವೃತ್ತಿಯ ನಂತರ ಪತ್ರಿಕೋದ್ಯಮದೊಂದಿಗೆ ಪರಿಸರಾಂದೋಳನ ಇವರ ಪ್ರಮುಖ ಕಾರ್ಯಕ್ಷೇತ್ರವಾಗಿದ್ದಿತು. ರಾಷ್ಟ್ರೀಯ ಸೇವಾಯೋಜನೆ ಇತಿಹಾಸ ಸಂಶೋಧನೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಇವರು ಸ್ಮರಣೀಯವಾದ ಸೇವೆಯನ್ನು ಸಲ್ಲಿಸಿದರು.

ಎಲ್. ಟಿ. ಶರ್ಮ ಅವರು ಸಂಚಾರಿ ಮಾಹಿತಿಕೋಶ ಎಂದು ಹೆಸರಾಗಿದ್ದರು. ಉತ್ತರ ಕನ್ನಡ ಜಿಲ್ಲೆಯ ಇತಿಹಾಸ ಪರಿಸರಕ್ಕೆ ಸಂಬಂಧಿಸಿದ ವೈವಿಧ್ಯಮಯ ದಾಖಲೆಗಳು ಜನಜೀವನವನ್ನು ಕುರಿತ ಮಾಹಿತಿ ಅವರಲ್ಲಿ ದೊರೆಯುತ್ತಿತ್ತು.

ಸದಾ ಚಿಂತನಶೀಲರೂ, ವಿಚಾರವಾದಿಗಳೂ ಆಗಿದ್ದ ಶರ್ಮ ಅವರು ಉತ್ತಮ ಸಂಘಟಕರೂ ಆಗಿದ್ದರು. ಅವರನ್ನು ಜನರು ಸೆಮಿನಾರ್ ಶರ್ಮ ಎಂದು ಗೇಲಿ ಮಾಡುತ್ತಿದ್ದರು. ಹಲವಾರು ವಿಷಯಗಳನ್ನು ಕುರಿತು ವಿಚಾರ ಸಂಕಿರಣ, ಚರ್ಚೆ ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಿ ಅವರು ಪ್ರಧಾನ ಪಾತ್ರವನ್ನು ವಹಿಸುತ್ತಿದ್ದರು. ಎಲ್. ಟಿ. ಶರ್ಮರವರು ದಿವಂಗತ ಎಂ. ಎಸ್. ರಾಯ್ ಅವರ ವಿಚಾರಗಳಿಂದ ಪ್ರಭಾವಿತರಾಗಿದ್ದರು. "ಬನವಾಸಿಯ ಕದಂಬರು" ಇವರು ಸಂಪಾದಿಸಿದ ಒಂದು ಪ್ರಮುಖ ಗ್ರಂಥ. ಬನವಾಸಿ ಕೈಪಿಡಿಯನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪ್ರಕಟಿಸಿದ್ದರು. 1983ರಲ್ಲಿ ಕದಂಬ ಸಂಸ್ಕೃತಿ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳಾಗಿ ಶ್ಲಾಘನೀಯವಾದ ಕಾರ್ಯವನ್ನು ಮಾಡುತ್ತಾ ಬಂದಿದ್ದರು.

—ಡಾ. ಎಂ. ವಿ. ಶ್ರೀನಿವಾಸ್

ಎಂ. ಎಸ್. ಚಂದ್ರಶೇಖರಪ್ಪ

ಕ್ಷೇತ್ರಕಾರ್ಯ ಹಾಗೂ ಸಮಾಜಕಾರ್ಯ*

ಆಧುನಿಕ ಸಮಾಜಕಾರ್ಯವು ವೈಜ್ಞಾನಿಕವಾಗಿದ್ದು, ಮೂರು ಮೂಲ ವಿಧಾನಗಳಾದ ವ್ಯಕ್ತಿಗತ ಸಮಾಜಕಾರ್ಯ (Social case work), ವೃಂದಗತ ಸಮಾಜಕಾರ್ಯ (Social group work) ಹಾಗೂ ಸಮುದಾಯಕಾರ್ಯ/ಸಂಘಟನೆ (Community work/organisation) ಗಳನ್ನೊಳಗೊಂಡಿದೆ.** ಸಮಾಜಕಾರ್ಯದ ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಶಿಕ್ಷಣ ಅವಧಿಯಲ್ಲಿ ಈ ಮೇಲೆ ಕಾಣಿಸಿದ ವಿಧಾನಗಳನ್ನು ಅಧ್ಯಯನ ಮಾಡಿ ಅವುಗಳನ್ನು ಸ್ವತಂತ್ರವಾಗಿ ವಿವಿಧ ಕ್ಷೇತ್ರಕ್ಕೆ ಅಳವಡಿಸುವ ಸಾಮರ್ಥ್ಯವನ್ನು ಕ್ಷೇತ್ರಕಾರ್ಯದ ಮೂಲಕ ಪಡೆಯಬೇಕಾಗುತ್ತದೆ. ಈ ಲೇಖನದಲ್ಲಿ ಅಂಥ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಹೇಗೆ ಪಡೆದುಕೊಳ್ಳುವರು ಎಂಬುದರ ಬಗಗೆ ವಿಶ್ಲೇಷಿಸಲಾಗಿದೆ

ಅ. ವ್ಯಕ್ತಿಗತ ಸಮಾಜಕಾರ್ಯದಲ್ಲಿ ಕ್ಷೇತ್ರಕಾರ್ಯ

ವ್ಯಕ್ತಿಗತ ಸಮಾಜಕಾರ್ಯ ವಿಧಾನವು 'ವ್ಯಕ್ತಿಗತ' ಸಮಸ್ಯೆಗಳಿಗೆ ಸಂಬಂಧಿಸಿದ್ದಾಗಿದೆ ಅನೇಕ ಕಾರಣಗಳಿಂದಾಗಿ ಸಮಾಜದಲ್ಲಿ ಹಲವು ವ್ಯಕ್ತಿಗಳು ತಮ್ಮ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ಬೆಳಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅವರು ಬೇರೆಯವರೊಡನೆ ಬೆಳಸಿಕೊಳ್ಳಬಹುದಾದ ಸಹಜ ಸಂಬಂಧಗಳನ್ನು ಹೊಂದಿ, ಪೋಷಿಸಿಕೊಂಡು ಬರಲು ವಿಫಲರಾಗಿರುತ್ತಾರೆ. ಇದಕ್ಕೆ ವ್ಯಕ್ತಿಗಳಲ್ಲಿಯ ಆಂತರಿಕ ಅಥವಾ/ಮತ್ತು ಬಾಹ್ಯ ನ್ಯೂನತೆಗಳೇ ಕಾರಣ ಎಂದು ಹೇಳಬಹುದು. ಇಂತಹ ವ್ಯಕ್ತಿಗಳ ಸಮಸ್ಯೆಗಳನ್ನು ಈ ವಿಧಾನದ ತಂತ್ರಗಳು ಹಾಗೂ ಕೌಶಲ್ಯತೆಗಳನ್ನು ಬಳಸಿಕೊಂಡು ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದೇ ವ್ಯಕ್ತಿಗತ ಸಮಾಜ

* ಈ ಲೇಖನವು ಲೇಖಕ ಹತ್ತು ವರ್ಷಗಳಿಂದ ಪಡೆದ ಅನುಭವದಿಂದ ಮೂಡಿಬಂದಿದೆ.

** ಇವುಗಳಿಗೆ ಪೂರಕವಾಗಿ ಸಹಾಯಕ ವಿಧಾನಗಳಾದ, ಸಮಾಜಕಾರ್ಯ ಆಡಳಿತ ಹಾಗೂ ಸಮಾಜಕಾರ್ಯ ಸಂಶೋಧನೆ—ಇವುಗಳೂ ಇವೆ.

ಕಾರ್ಯದ ಮುಖ್ಯ ಉದ್ದೇಶ. ಅಂದಹಾಗೆ, ಸಮಸ್ಯೆ ಇರುವ ವ್ಯಕ್ತಿಯನ್ನು ವಿದ್ಯಾರ್ಥಿಯು ವೈಯಕ್ತಿಕವಾಗಿ ಸಂಪರ್ಕಿಸಿ, ಅಂಥ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿದುಕೊಳ್ಳಲು ಆತನಿಗೆ ಅನುವು ಮಾಡಿಕೊಡಬೇಕು. ಇದು ಕ್ಷೇತ್ರ ಕಾರ್ಯದಿಂದ ಮಾತ್ರ ಸಾಧ್ಯ. ಸಮಾಜಕಾರ್ಯ ಶಿಕ್ಷಣದಲ್ಲಿ ಕ್ಷೇತ್ರಕಾರ್ಯಕ್ಕೆ ಬಹಳ ಮಹತ್ವವನ್ನು ಕೊಡಲಾಗಿದೆ.

ಲೇಖಕನು ಈ ದಿಸೆಯಲ್ಲಿ 'ಕ್ಷೇತ್ರಕಾರ್ಯ–ಮಾದರಿ'*ಯನ್ನು ಮೈಸೂರು ವಿಶ್ವವಿದ್ಯಾಲಯದ ಸಮಾಜಕಾರ್ಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕಳೆದ ಒಂಬತ್ತು ವರ್ಷಗಳಿಂದಲೂ ಅನುಷ್ಠಾನಗೊಳಿಸಿ ಅದರ ಉಪಯುಕ್ತತೆಯ ಬಗ್ಗೆ ಕೂಲಂಕುಷವಾಗಿ ಅವಲೋಕನವನ್ನು ಮಾಡುತ್ತಾ ಬಂದಿದ್ದಾನೆ. 'ಕ್ಷೇತ್ರಕಾರ್ಯ–ಮಾದರಿ' ಈಗಲೂ ಬಹಳ ಉಪಯುಕ್ತವಾಗಿದ್ದು, ವಿದ್ಯಾರ್ಥಿಗಳು ಅದನ್ನು ಅವರವರ ಕ್ಷೇತ್ರ ಕಾರ್ಯದಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಇದನ್ನು ಲೇಖಕನು ಅನೇಕ ಸಮಾಜ ಕಾರ್ಯ ಅಧ್ಯಾಪಕರೊಂದಿಗೆ ಚರ್ಚಿಸಿದ್ದಾನೆ. ಅವರೆಲ್ಲರೂ ಅದರ ಉಪಯುಕ್ತತೆಯನ್ನು ಮನಗಂಡು ಅನುಮೋದಿಸಿದ್ದಾರೆ.

ಮಾದರಿಯಲ್ಲಿ ಅಡಕವಾಗಿರುವ ಹಂತಗಳ ವಿವರಣೆ :

ಮೊದಲನೇ ಹಂತದಲ್ಲಿ ವಿದ್ಯಾರ್ಥಿಯು ಅರ್ಥಿಯನ್ನು (client) ಆಯ್ಕೆ ಮಾಡಿಕೊಂಡ ನಂತರ ಮಾಡಬೇಕಾದ ಆದ್ಯ ಕೆಲಸವೆಂದರೆ 'ವೃತ್ತಿ–ಸಂಬಂಧ' (Professional-Relationship) ವನ್ನು ಬೆಳೆಸುವುದು. ಈ 'ವೃತ್ತಿ–ಸಂಬಂಧ'ವು ಬೇರೆ ರೀತಿಯ ಸಂಬಂಧಗಳಿಗಿಂತ ಭಿನ್ನವಾಗಿದ್ದು, ವಿದ್ಯಾರ್ಥಿಯು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ರೀತಿಯ ಸಂಬಂಧ 'ವಿದ್ಯಾರ್ಥಿ–ಅರ್ಥಿ'ಯ ಪ್ರಥಮ ಭೇಟಿಯ ನಂತರದ ಸಂದರ್ಶನ ಸಮಯದಲ್ಲಿ ಪ್ರಾರಂಭವಾಗಿ, ಕೊನೆಯ ಹಂತವಾದ 'ಅನುಕ್ರಿಯೆ (Follow-up) ಯ ವರೆಗೂ ಚಾಲ್ತಿಯಲ್ಲಿರುತ್ತದೆ. ಇಲ್ಲಿ ಸಂದರ್ಶನ ಅತಿ ಮುಖ್ಯವಾದುದು. ಏಕೆಂದರೆ, ವ್ಯಕ್ತಿಯ ಜೀವನದ ವಿವಿಧ ಮುಖಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲು ಇದು ಅತ್ಯಮೂಲ್ಯವಾದ ಸಾಧನ. ಸಂದರ್ಶನದಿಂದ, ಡಾ. ಇಂದಿರಾ ಅವರು ಹೇಳಿದಂತೆ, ದೊರೆಯತಕ್ಕಂತಹ ಸ್ಪಷ್ಟವೂ, ಸತ್ಯವೂ ಆದ ಫಲಿತಾಂಶಗಳು ಬೇರೆ ಯಾವ ಸಾಧನದಿಂದಲೂ ಪ್ರಾಯಶಃ ಒದಗಿಸಲಾಗದು. ಸಂದರ್ಶನದಿಂದ ಮಾನವನ ಅಂತರಂಗವನ್ನು ಒಳಹೊಕ್ಕು ನೋಡಿ ಅದರಲ್ಲಿ ಅಡಗಿರುವ ಸತ್ಯಾಂಶವನ್ನು ಬೆಳಕಿಗೆ ತರಲು ಬಹು ಉಪಯುಕ್ತವಾಗಿದೆ.

ಈ ಹಂತದಲ್ಲಿ ಅರ್ಥಿಯ 'ಗುರುತಿನ–ಮಾಹಿತಿ'ಯಾದಂಥ ಹೆಸರು, ವಿಳಾಸ, ಲಿಂಗ, ಧರ್ಮ, ವಯಸ್ಸು, ಮಾತೃಭಾಷೆ, ತಂದೆ/ತಾಯಿಯ ಹೆಸರು ಮತ್ತು

---

* ಅನುಬಂಧ–'೧'ರಲ್ಲಿ 'ಕ್ಷೇತ್ರಕಾರ್ಯ–ಮಾದರಿ'ಯನ್ನು ಕೊಡಲಾಗಿದೆ.

ಉದ್ಯೋಗ—ಮುಂತಾದ ವಿಷಯಗಳ ಬಗ್ಗೆ ಸಂಗ್ರಹಿಸಬೇಕು. ಇದಕ್ಕಿಂತ ಮೊದಲು ವಿದ್ಯಾರ್ಥಿಯು ಅರ್ಥಿಯೊಡನೆ 'ಅನುನಯ-ಸಂಬಂಧ' (Rapport) ವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗಬೇಕು. ಇಲ್ಲದಿದ್ದರೆ ಅರ್ಥಿಯಿಂದ ಸತ್ಯಾಂಶವನ್ನೊಳಗೊಂಡ ಮಾಹಿತಿಯನ್ನು ಪಡೆಯಲು ಸಾಧ್ಯವಾಗುವುದಿಲ್ಲ. 'ಗುರುತಿನ-ಮಾಹಿತಿ' ಯನ್ನು ಪಡೆದ ನಂತರ, ಅರ್ಥಿಯ ಶಾರೀರಿಕ ಬಾಹ್ಯ ಗುಣಲಕ್ಷಣ (Physical Appearance) ಗಳಾದ ಬಣ್ಣ, ಗುರುತಿನ–ಚಿಹ್ನೆಗಳು, ಎತ್ತರ, ಭಾರ, ಇತ್ಯಾದಿ ಅಂಶಗಳನ್ನೂ, 'ಸಾಮಾಜಿಕೋ-ಆರ್ಥಿಕ'ಕ್ಕೆ ಸಂಬಂಧಪಟ್ಟ ಮಾಹಿತಿಯನ್ನೂ ಹಾಗೂ ಆತನ ಕುಟುಂಬದ ವಿವರಣೆ—ಅಣ್ಣ, ಅಕ್ಕ, ತಮ್ಮ, ತಂಗಿ ಮತ್ತೂ ಅವರ ಉದ್ಯೋಗಗಳ ಬಗ್ಗೆಯೂ ಅಧ್ಯಯನ ಮಾಡಿ ದಾಖಲೆ ಮಾಡಿಕೊಂಡಿರಬೇಕು. ಮೇಲೆ ಕಾಣಿಸಿದ ಮಾಹಿತಿಯ ಜೊತೆಗೆ ಅರ್ಥಿಯ 'ಮಾನಸಿಕ ಸ್ಥಿತಿಗತಿ' ಹಾಗೂ ಆತನ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಸಹ ಸಂಗ್ರಹಿಸಬೇಕು. ಸ್ಪಷ್ಟವಾಗಿ ಹೇಳಬೇಕೆಂದರೆ, ಅರ್ಥಿಗೆ ಸಂಬಂಧಿಸಿದಂತೆ ಶಾರೀರಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಮಾನಸಿಕ ಸ್ಥಿತಿ-ಗತಿಗಳನ್ನೊಳಗೊಂಡ ಮಾಹಿತಿಯನ್ನು ಸಂಗ್ರಹಿಸಿ, ಸಮಗ್ರವಾದ ದಾಖಲೆಯನ್ನು ತಯಾರಿಸುವುದು ವಿದ್ಯಾರ್ಥಿಯ ಕರ್ತವ್ಯದಲ್ಲೊಂದಾಗಿದೆ.

ಈ ಮೇಲಿನ ಎಲ್ಲ ಮಾಹಿತಿಯನ್ನು ವಿದ್ಯಾರ್ಥಿಯು ಅರ್ಥಿಯೊಡನೆ ನಡೆಸಿದ ಸಂದರ್ಶನಗಳ ಹಾಗೂ ಸಂಸ್ಥೆಯಲ್ಲಿ ಅರ್ಥಿಯ ಬಗ್ಗೆ ದೊರೆಯುವ ದಾಖಲಾತಿಗಳ ಮೂಲಕ ಸಂಗ್ರಹಿಸಬೇಕು.

ಎರಡನೆಯ ಹಂತದಲ್ಲಿ ಅರ್ಥಿಯು ಸಂಸ್ಥೆಯ ಸಿಬ್ಬಂದಿ, ಇತರ ಅರ್ಥಿಗಳು, ಆತನ ಸಹಪಾಠಿಗಳು, ಶಾಲಾ ಅಥವಾ ಕಾಲೇಜಿನ ಅಧ್ಯಾಪಕರು (ಅರ್ಥಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದರೆ), ಸ್ನೇಹಿತರು, ಕುಟುಂಬದ ಸದಸ್ಯರು, ಇತರ ಸಂಬಂಧಿಗಳು ಹಾಗೂ ನೆರೆಹೊರೆಯವರೊಂದಿಗೆ ಯಾವ ರೀತಿಯಲ್ಲಿ ಸಂಬಂಧವನ್ನು ಹೊಂದಿದ್ದಾನೆ/ಳೆ ಎಂಬುದರ ಬಗ್ಗೆ ವಿವರವಾಗಿ ವಿಚಾರಿಸಿ ದಾಖಲೆ ಮಾಡಿಕೊಳ್ಳಬೇಕು.

ಮೇಲ್ಕಂಡ ಮಾಹಿತಿಯನ್ನು ವಿದ್ಯಾರ್ಥಿಯು ಅರ್ಥಿಯೊಂದಿಗೆ ಸಂದರ್ಶನಗಳನ್ನು ನಡೆಸುವುದರ ಮೂಲಕ ಸಂಗ್ರಹಿಸಬೇಕು.

ಮೂರನೆಯ ಹಂತದಲ್ಲಿ ವಿದ್ಯಾರ್ಥಿಯು ಅರ್ಥಿಗೆ 'ರಕ್ತ-ಸಂಬಂಧಿ'-ಯಾಗದವರನ್ನು (ಉದಾ : ಶಾಲಾ ಕಾಲೇಜುಗಳ ಅಧ್ಯಾಪಕರು, ನೆರೆಹೊರೆಯವರು) ಭೆಟ್ಟಿ ಮಾಡಿ ಅವರಿಂದ ಆತನ ನಡೆವಳಿಕೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ ನಂತರ ನಾಲ್ಕನೇ ಹಂತದಲ್ಲಿ ವಿದ್ಯಾರ್ಥಿಯು 'ಅರ್ಥಿಯ ಕುಟುಂಬ'ಕ್ಕೆ ಭೆಟ್ಟಿಕೊಡುವನು. ಅರ್ಥಿಯ ತಂದೆ–ತಾಯಿ, ಕುಟುಂಬದ ಸದಸ್ಯರು ಹಾಗೂ ಇತರ ಸಂಬಂಧಿಗಳಿಂದ

ಆತನ ಹಿನ್ನೆಲೆಯ ಬಗ್ಗೆ ವಿಚಾರಿಸಿ, ದಾಖಲೆ ಮಾಡುವುದೂ ಸಹ ವಿದ್ಯಾರ್ಥಿಯ ಕರ್ತವ್ಯ.

ಒಟ್ಟಿನಲ್ಲಿ, ಮೂರನೇ ಹಾಗೂ ನಾಲ್ಕನೆಯ ಹಂತಗಳಲ್ಲಿ ಅರ್ಥಿ ಮೊದಲು ಸಂದರ್ಶನ ಕಾಲದಲ್ಲಿ ಒದಗಿಸಿದ ಮಾಹಿತಿಯನ್ನು ವಿದ್ಯಾರ್ಥಿಯು 'ಛೇದಕ-ಪರೀಕ್ಷೆ' (Cross-Examination)ಗೆ ಗುರಿಪಡಿಸುತ್ತಾನೆ. ಇಂಥ ಪರೀಕ್ಷೆಯಿಂದ ಅರ್ಥಿಯು ಕೊಟ್ಟಿರುವ ಮಾಹಿತಿಯಲ್ಲಿ ಯಾವುದು ಸತ್ಯ ಹಾಗೂ ಅಸತ್ಯ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಅನುಕೂಲವಾಗುವುದು.

ಈ ಮೇಲೆ ಕಾಣಿಸಿದ ಹಂತಗಳು ಅರ್ಥಿಯ ಬಗೆಗೆ ಸಮಗ್ರವಾದ ಮಾಹಿತಿಯನ್ನು ಸಂಗ್ರಹಿಸಲು ನೆರವಾಗುವುದಲ್ಲದೆ, ಅರ್ಥಿಗೆ ಒದಗಿ ಬಂದಿರುವ ಸಮಸ್ಯೆಯನ್ನು ಬಹು ಸುಲಭವಾಗಿ ಕಂಡುಹಿಡಿದುಕೊಳ್ಳಬಹುದಾಗಿದೆ.

ಐದನೆಯ ಹಂತದಲ್ಲಿ ಅರ್ಥಿಯ ಸಮಸ್ಯೆಯ ಬಗ್ಗೆ ವಿದ್ಯಾರ್ಥಿಯು ಖಚಿತವಾದ ನಿರ್ಧಾರಕ್ಕೆ ಬರುವನು. ಈ ಸಂದರ್ಭದಲ್ಲಿ ಪ್ರೊ॥ ಎಚ್. ಎಂ. ಮರುಳಸಿದ್ಧಯ್ಯನವರು ಹೇಳಿದ ಹಾಗೆ ಒಂದು ಅಂಶವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಅದೇನೆಂದರೆ, ಸಮಾಜ ಕಾರ್ಯವು ಮುಖ್ಯವಾಗಿ 'ಮನೋ-ಸಾಮಾಜಿಕ' ಅಂಶಗಳನ್ನು ಒಳಗೊಂಡ, ಮಾನವ ಸಂಬಂಧಗಳ ಹಂದರವನ್ನು ಆಧರಿಸಿದ, ಸಂದರ್ಶನ-ಸಂವಾದ, ಚರ್ಚೆ-ಸಂವಹನ, ಇಂತಹ ಕ್ರಿಯೆಗಳ ಮೂಲಕ ನಡೆಯುವ ಕಾರ್ಯವಾಗಿದೆ. ಅಲ್ಲದೆ, ಹಲವು ವ್ಯಕ್ತಿಗಳ ಸಮಸ್ಯೆಗಳು 'ಸಾಮಾಜೋ-ಆರ್ಥಿಕ' ವಾಗಿದ್ದರೆ, ಇನ್ನೂ ಕೆಲವರದು ಬರೀ 'ಆರ್ಥಿಕ'ವಾಗಿರಬಹುದು. ಇದನ್ನೂ ಸಹ ವಿದ್ಯಾರ್ಥಿಯು ಗಮನದಲ್ಲಿಟ್ಟುಕೊಂಡಿರಬೇಕು ಅಂದಹಾಗೆ, ಈ ಹಂತದಲ್ಲಿ ಒಬ್ಬ ವ್ಯಕ್ತಿಯ ಸಮಸ್ಯೆ ಇಂಥ ಸ್ವರೂಪದ್ದೇ ಆಗಿದೆ ಎಂದು ಹೇಳಬಹುದು. ಇದನ್ನು ನಾವು 'ರೋಗನಿದಾನ' (Diagnosis) ಎಂದು ಕರೆಯುತ್ತೇವೆ.

ಆರನೆಯ ಹಂತದಲ್ಲಿ ವಿದ್ಯಾರ್ಥಿಯು ಅರ್ಥಿಯ ಸಮಸ್ಯೆಗಳಿಗನುಗುಣವಾಗಿ ಯಾವ 'ಚಿಕಿತ್ಸಾ-ಕ್ರಮ'ವನ್ನು*/ಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಯೋಜನೆಯನ್ನು ರೂಪಿಸುತ್ತಾನೆ. ವ್ಯಕ್ತಿಗತ ಸಮಾಜಕಾರ್ಯದಲ್ಲಿ ಮುಖ್ಯವಾಗಿ ಮೂರು 'ಉಪಚಾರ-ಕ್ರಮ'ಗಳನ್ನು ರೂಪಿಸಲಾಗಿದೆ. ಅವುಗಳೆಂದರೆ (1) ಸಾಮಾಜಿಕ ಸೇವಾನುಷ್ಠಾನ, (2) ವಾತಾವರಣ-ಬದಲಾವಣೆ, ಹಾಗೂ (3) ನೇರ ಉಪಚಾರ. ವಿದ್ಯಾರ್ಥಿಯು ಈ ಮೇಲಿನ ಯಾವುದಾದರೂ ಉಪಚಾರ ಕ್ರಮಗಳನ್ನು ಉಪಯೋಗಿಸಲು ತನ್ನ 'ಕಾರ್ಯಕ್ರಮ ಯೋಜನೆ'ಯಲ್ಲಿ ಸೂಚಿಸಬಹುದಾಗಿದೆ. ಇದು ಕಷ್ಟಕರವಾದ ಕೆಲಸವೆಂದು ಬೇರೆ ಹೇಳಬೇಕಾಗಿಲ್ಲ.

ಕೊನೆಯ ಎರಡು ಹಂತಗಳಲ್ಲಿ 'ಕಾರ್ಯಕ್ರಮ-ಯೋಜನೆ'ಯಲ್ಲಿ ಸೂಚಿಸಿರು

---

* 'ಉಪಚಾರ ಕ್ರಮ'ಗಳು ಎಂದೂ ಕರೆಯಬಹುದು.

ವಂತೆ ಉಪಚಾರ-ಕ್ರಮವನ್ನು ವಿದ್ಯಾರ್ಥಿಯು ಅನುಷ್ಠಾನಗೊಳಿಸುವನು. ಇಲ್ಲಿ ಮುಖ್ಯವಾದ ಎರಡು ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. (1) ವಿದ್ಯಾರ್ಥಿ ಅನೇಕ ಮಿತಿಗಳಿಗೆ ಒಳಪಟ್ಟಿರುವುದರಿಂದ ಎಲ್ಲ ಸಂದರ್ಭದಲ್ಲಿಯೂ ಎಲ್ಲ ಅರ್ಥಿಗಳ ಸಮಸ್ಯೆಯನ್ನು ಬಗೆಹರಿಸಲೇಬೇಕು ಎಂದು ನಿರೀಕ್ಷಿಸುವುದು ಅಸಾಧ್ಯ. ಆದರೆ ಅವನಿಗೆ ದೊರಕಿರುವ ಕಾಲಾವಕಾಶದಲ್ಲಿ ಅಂತಹ ಸಮಸ್ಯೆಗಳ ರೂಪುರೇಖೆ ಗಳು, ಅವುಗಳ ವಿಶ್ಲೇಷಣೆ, ಪರಿಣಾಮ ಹಾಗೂ ಹಲವು ಉಪಯುಕ್ತ 'ಪರಿಹಾರ-ಕ್ರಮ'ಗಳನ್ನು ಸೂಚಿಸಬಹುದಾಗಿದೆ. (2) ವಿದ್ಯಾರ್ಥಿಯು ಅರ್ಥಿಯ ಬಗ್ಗೆ ಯಾವ ಕ್ರಮವನ್ನಾದರೂ ಸೂಚಿಸಬೇಕಾದಾಗ ಹಾಗೂ ಅನುಷ್ಠಾನಕ್ಕೆ ತರುವಾಗ ಆತನ ಜೊತೆ ಕೆಲಸ ಮಾಡಬೇಕೇ ವಿನಃ ಆತನಿಗೋಸ್ಕರ ಎಂದೂ ಕೆಲಸ ಮಾಡ ಬಾರದು. ಒಂದು ವೇಳೆ ಹಾಗೇನಾದರೂ 'ಆತನಿಗೋಸ್ಕರ' ಕೆಲಸ ಮಾಡಿದ್ದಲ್ಲಿ, ವಿದ್ಯಾರ್ಥಿಯು ಸಮಾಜಕಾರ್ಯವನ್ನು ಮಾಡಿದಂತಾಗುವುದಿಲ್ಲ.

ಆ. ವೃಂದಗತ ಸಮಾಜಕಾರ್ಯದಲ್ಲಿ ಕ್ಷೇತ್ರಕಾರ್ಯ

ವ್ಯಕ್ತಿಗತ ಸಮಾಜಕಾರ್ಯದಂತೆಯೇ ವೃಂದಗತ ಸಮಾಜಕಾರ್ಯವೂ ಸಮಾಜಕಾರ್ಯದ ಒಂದು ಮೂಲ ವಿಧಾನವಾಗಿದೆ. ವ್ಯಕ್ತಿಗತ ಸಮಾಜಕಾರ್ಯವೂ ವ್ಯಕ್ತಿಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾದರೆ, ವೃಂದಗತ ಸಮಾಜಕಾರ್ಯವು ವೃಂದದ ಹಾಗೂ ಅದರ ಸದಸ್ಯರ ಬೇಕು-ಬೇಡಿಕೆ ಗಳನ್ನು ಈಡೇರಿಸಲು ಬಹು ಉಪಯುಕ್ತವಾಗಿದೆ.

ಈ ಲೇಖಕನು ವೃಂದಗತ ಸಮಾಜಕಾರ್ಯದಲ್ಲಿ ವಿದ್ಯಾರ್ಥಿಗಳು ಹೇಗೆ ತೊಡಗಿಸಿಕೊಳ್ಳಬೇಕು ಎಂಬುದರ ಬಗೆಗೆ ಹಲವು ಹಂತಗಳನ್ನು ಸೂಚಿಸಿದ್ದಾನೆ. ಅವುಗಳ ಪ್ರಕಾರ ಕ್ಷೇತ್ರ ಕಾರ್ಯ ಮಾಡಿದರೆ, ವಿದ್ಯಾರ್ಥಿಗಳು ವೃಂದಗತ ಸಮಾಜ ಕಾರ್ಯವನ್ನು ಮಾಡುವಲ್ಲಿ ಯಶಸ್ಸುಗಳಿಸಬಹುದಾಗಿದೆ.

ವೃಂದಗತ ಸಮಾಜಕಾರ್ಯದಲ್ಲಿ ವಿದ್ಯಾರ್ಥಿಯು ಮೊಟ್ಟ ಮೊದಲು ವೃಂದದ ಸದಸ್ಯರನ್ನು ಆಯ್ಕೆ ಮಾಡಬೇಕಾಗುವುದು. ಆಯ್ಕೆ ಮಾಡುವಾಗ ಸದಸ್ಯರ ವಯಸ್ಸು ಹಾಗೂ ಬೇಡಿಕೆಗಳನ್ನು ಗಣನೆಗೆ ತೆಗೆದಕೊಳ್ಳಬೇಕು. ಸದಸ್ಯರ ಆಯ್ಕೆ ಯಾದನಂತರ ವಿದ್ಯಾರ್ಥಿಯು ಅವರೊಡನೆ 'ಅನುನಯ-ಸಂಬಂಧ'ವನ್ನು ಬೆಳೆಸಿ ಪ್ರತಿಯೊಬ್ಬ ಸದಸ್ಯನ ಬಗೆಗೂ 'ಸಂಕ್ಷಿಪ್ತ-ಟಿಪ್ಪಣಿ'ಯನ್ನು ತಯಾರಿಸುವುದು ಆತನ ಕರ್ತವ್ಯ. 'ಸಂಕ್ಷಿಪ್ತ-ಟಿಪ್ಪಣಿ'ಯಲ್ಲಿ ಸದಸ್ಯರ ಹೆಸರುಗಳು, ವಯಸ್ಸು, ವಿದ್ಯಾಭ್ಯಾಸ, ಕುಟುಂಬದ ವಾತಾವರಣ, ಇತ್ಯಾದಿ; ಅಂಶಗಳನ್ನೊಳಗೊಂಡಿರತಕ್ಕದ್ದು. ವಿದ್ಯಾರ್ಥಿಯು ವೃಂದದ ನಾಯಕ ಹಾಗೂ ಉಪ-ನಾಯಕನನ್ನು ಆರಿಸಲು ಅದರ ಸದಸ್ಯರಿಗೆ ಹೇಳಬೇಕು, ಮತ್ತು ಅವರ ಆಯ್ಕೆಯನಂತರ ಎಲ್ಲ ಸದಸ್ಯರನ್ನೂ ಸಕ್ರಿಯ

ವಾಗಿ ಭಾಗವಹಿಸುವಂತೆ ಮಾಡುವುದರ ಮೂಲಕ ವೃಂದದ ಧ್ಯೇಯ-ಧೋರಣೆಗಳನ್ನು ಗೊತ್ತು ಪಡಿಸಲು ಮಾರ್ಗದರ್ಶನ ಮಾಡಬೇಕು.

ವೃಂದದ ಧ್ಯೇಯ-ಧೊರಣೆಗಳಾಧಾರದ ಮೇಲೆ ನಾಯಕರನ್ನೊಳಗೊಂಡಂತೆ ಅದರ ಸದಸ್ಯರೆಲ್ಲರೂ ಕೂಡಿ 'ಕಾರ್ಯಕ್ರಮಾಭಿವೃದ್ಧಿ'ಯನ್ನು ಸಿದ್ಧಪಡಿಸಲು ಸೂಕ್ತ ಮಾರ್ಗದರ್ಶನವನ್ನು ವಿದ್ಯಾರ್ಥಿಯು ಕೊಡಬೇಕಾಗುವುದು. ಒಮ್ಮೆ 'ಕಾರ್ಯಕ್ರಮಾಭಿವೃದ್ಧಿ'ಯನ್ನು ಸಿದ್ಧಪಡಿಸಿದ ಮೇಲೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸದಸ್ಯರನ್ನು ಉತ್ತೇಜಿಸಬೇಕು. ವೃಂದಗತ ಸಮಾಜಕಾರ್ಯದಲ್ಲಿ 'ಕಾರ್ಯಕ್ರಮಾಭಿವೃದ್ಧಿ' ಹಾಗೂ ಅದರ 'ಅನುಷ್ಠಾನ'—ಇವು ಬಹು ಮುಖ್ಯವಾದುವು. ಇದನ್ನು ವಿದ್ಯಾರ್ಥಿ ಸದಾ ಗಮನದಲ್ಲಿಟ್ಟುಕೊಳ್ಳಬೇಕು. ಕಾರ್ಯಕ್ರಮ ನಡೆಯುವಾಗ, ವಿದ್ಯಾರ್ಥಿಯು ಬಹಳ ಸೂಕ್ಷ್ಮವಾಗಿ ಪ್ರತಿಯೊಬ್ಬ ವೃಂದ ಸದಸ್ಯನ ಚಲನ-ವಲನಗಳ ಬಗ್ಗೆ ಸದಾ ನಿಗಾ ಇಟ್ಟಿರಬೇಕು. ಪ್ರತಿಯೊಬ್ಬ ವೃಂದ ಸದಸ್ಯನು ಹೇಗೆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾನೆ ಹಾಗೂ ಆತನ ಮತ್ತು ಇತರ ಸದಸ್ಯರ ನಡುವೆ ಇರುವ 'ಪಾರಸ್ಪರಿಕ ಕ್ರಿಯೆ' (Interaction) ಎಂಥದ್ದು ಎಂಬುದನ್ನು ಕೂಡ ಗಮನಿಸಿ ದಾಖಲಾತಿಯನ್ನು ಸಿದ್ಧಪಡಿಸಬೇಕು. ವೃಂದದ ಸದಸ್ಯರಲ್ಲಿ ಯಾರಾದರೂ ಸಕ್ರಿಯವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ ಎಂದು ಕಂಡು ಬಂದಾಗ, ಅಂಥವನನ್ನು ವ್ಯಕ್ತೀಕರಣಕ್ಕೊಳಪಡಿಸಿ ಸೂಕ್ತ ಪರಿಹಾರ ಕ್ರಮವನ್ನು ತೆಗೆದುಕೊಂಡು, ತಿದ್ದುವುದು ವಿದ್ಯಾರ್ಥಿಯ ಕರ್ತವ್ಯ. ಇಲ್ಲದಿದ್ದರೆ ವೃಂದದ ಧ್ಯೇಯ-ಧೋರಣೆಗಳು ಈಡೇರಲು ಸಾಧ್ಯವಾಗುವುದಿಲ್ಲ. ಯಶಸ್ವಿಯಾಗಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ನಂತರ ಅದೇ ಗುಂಪಿನ ಸದಸ್ಯರ ಬೇರೆ ಬೇಡಿಕೆಗಳ ಬಗ್ಗೆ ಗಮನಹರಿಸಬಹುದು ಇಲ್ಲದಿದ್ದರೆ ಪ್ರಕ್ರಿಯೆಯನ್ನು ಅಂತ್ಯಗೊಳಿಸಬಹುದು.

೩. ಸಮುದಾಯ ಕಾರ್ಯ/ಸಂಘಟನೆಯಲ್ಲಿ ಕ್ಷೇತ್ರಕಾರ್ಯ

ಈ ವಿಧಾನವು ಸಮುದಾಯದ ಜನರು ಅನುಭವಿಸುತ್ತಿರುವ ಸಂಕಷ್ಟಗಳನ್ನು ಪ್ರಮುಖವಾದ ದೃಷ್ಟಿಯಲ್ಲಿಟ್ಟುಕೊಂಡು ಅವುಗಳ ಪರಿಹಾರಕ್ಕೆ ಮಾರ್ಗವನ್ನು/ಗಳನ್ನು ಕಲ್ಪಿಸಿ, ಅನುಷ್ಠಾನಗೊಳಿಸುತ್ತದೆ. ವಿದ್ಯಾರ್ಥಿಯು ಎರಡು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವು ಯಾವುವೆಂದರೆ. (1) 'ಸಮುದಾಯ' ಎಂದಾಕ್ಷಣ ಬರೀ ಚಿಕ್ಕ ಗ್ರಾಮೀಣ ಪ್ರದೇಶವೆಂದು ತಿಳಿಯದೆ, ನಗರ ಹಾಗೂ ಬುಡಕಟ್ಟು ಜನಾಂಗದವರು ಇರುವ 'ಹಾಡಿ'ಗಳೂ ಸಹ ಸಮುದಾಯಗಳೆಂದು ಪರಿಗಣಿಸಬೇಕು. (2) ಅದೇ ರೀತಿ ಸಮುದಾಯದಲ್ಲಿ ಕ್ಷೇತ್ರಕಾರ್ಯ ಮಾಡುವವರು ವ್ಯಕ್ತಿಗತ ಹಾಗೂ ವೃಂದಗತ ಸಮಾಜಕಾರ್ಯ ಇವುಗಳ ಬಗೆಗೂ

ಪ್ರೌಢ ತಿಳುವಳಿಕೆ ಇರುವುದು ಸೂಕ್ತ ಹಾಗೂ ಸಮಂಜಸ. ಏಕೆಂದರೆ ಸಮುದಾಯ ವ್ಯಕ್ತಿಗಳು ಹಾಗೂ ವೃಂದಗಳನ್ನೊಳಗೊಂಡಿದೆ.

ಸಮುದಾಯ ಕಾರ್ಯದ ಕ್ಷೇತ್ರಕಾರ್ಯದಲ್ಲಿ ವಿದ್ಯಾರ್ಥಿಗಳು ತೊಡಗಲು ಅನುಕೂಲವಾಗುವಂಥ ಸುಮಾರು ಹನ್ನೆರಡು ಹಂತಗಳನ್ನು (ಅನುಬಂಧ-'1'ರಲ್ಲಿ ನೋಡಿ) ಲೇಖಕನು ತಿಳಿಸಿದ್ದಾನೆ.

ಸಮುದಾಯ ಕಾರ್ಯದ ಕ್ಷೇತ್ರಕಾರ್ಯದಲ್ಲಿ ವಿದ್ಯಾರ್ಥಿಯು ಮಾಡಬೇಕಾದ ಮೊದಲ ಕರ್ತವ್ಯವೆಂದರೆ ಆ ಸಮುದಾಯಕ್ಕೆ ಅನೇಕ ಸಲ ಭೆಟ್ಟಿಕೊಡುವುದು. ಈ ರೀತಿ ಭೆಟ್ಟಿಕೊಡುವುದರಿಂದ 'ಅನುನಯ-ಸಂಬಂಧ' (Rapport) ಸಮುದಾಯದ ಜನರ ಜೊತೆ ಬೆಳೆಸಲು ಬಹಳ ಅನುಕೂಲವಾಗುವುದು. ಭೆಟ್ಟಿಯ ಕಾಲದಲ್ಲಿ ಸಮುದಾಯದ ಧುರೀಣರನ್ನೂ (ಔಪಚಾರಿಕ ಹಾಗೂ ಅನೌಪಚಾರಿಕ) ಸಹ ಗುರುತಿಸಬೇಕು. 'ಅನುನಯ-ಸಂಬಂಧ'ವನ್ನು ವಿದ್ಯಾರ್ಥಿಯು ಸಮುದಾಯದ ಜನರೊಂದಿಗೆ ಹೊಂದಿಕೊಂಡ ನಂತರ ಸಮುದಾಯದ ಬಗ್ಗೆ ಎಲ್ಲ ವಿಧದ ಮಾಹಿತಿಯನ್ನು ಸಂಗ್ರಹಿಸಬೇಕು. ಮುಖ್ಯವಾಗಿ ಅದರ ಭೌಗೋಳಿಕ, ಸಾಮಾಜಿಕ, ಆರ್ಥಿಕ ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ, ಭೂ-ವಿಂಗಡನೆ, ಸಂವಹನ, ಸಾರಿಗೆ, ಆರೋಗ್ಯ, ಪಶುಸಂಗೋಪನೆ, ವ್ಯವಸಾಯ, ಕರಕುಶಲ, ಸಣ್ಣಪ್ರಮಾಣದ ಕೈಗಾರಿಕೆಗಳು ಹಾಗೂ ಸಾಮಾಜಿಕ ಸೇವಾಸಂಸ್ಥೆಗಳ ಬಗ್ಗೆ ಕೂಲಂಕುಷವಾಗಿ ವಿಷಯವನ್ನು ಸಂಗ್ರಹಿಸಿ ದಾಖಲುಮಾಡಬೇಕು. ನಂತರದ ಹಂತಗಳಲ್ಲಿ ವಿದ್ಯಾರ್ಥಿಯು ಸಮುದಾಯದಲ್ಲಿನ ಬೇಡಿಕೆಗಳೇನೆಂಬುದನ್ನು ಪತ್ತೆಮಾಡುವುದರ ಜೊತೆಗೆ, ಅವುಗಳನ್ನು ಆಧ್ಯತೆಯಾಧಾರದ ಮೇರೆಗೆ ವಿಂಗಡಿಸಬೇಕು ಹಾಗೂ ಅವುಗಳನ್ನು ಕ್ರಮವಾಗಿ ಸಾಧಿಸಲು ಜನರಿಗೆ ಸೂಕ್ತ ಮಾರ್ಗದರ್ಶನ ಕೊಡಬೇಕು. ಒಮ್ಮೆ ಸಮುದಾಯದ ಬೇಡಿಕೆಗಳನ್ನು ಗುರುತಿಸಿದನಂತರ, ವಿದ್ಯಾರ್ಥಿಯು ಅವುಗಳ ಸ್ವರೂಪದ ಬಗ್ಗೆ ಅಧ್ಯಯನ ಮಾಡಿ, ಅಂಥ ಬೇಡಿಕೆಗಳ ಪರಿಹಾರಕ್ಕೆ ಎಂಥ 'ಕಾರ್ಯ-ಕ್ರಮ'ವನ್ನು ಹಮ್ಮಿಕೊಳ್ಳಬೇಕು ಎಂಬುದನ್ನು ಜನರ ಜೊತೆಗೂಡಿ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳಸಿಕೊಳ್ಳಬೇಕು. ಆಮೇಲೆ ವಿದ್ಯಾರ್ಥಿಯು ಕಾರ್ಯಕ್ರಮಕ್ಕನುಗುಣವಾಗಿ ಅಗತ್ಯವಾದ ಸಂಪನ್ಮೂಲಗಳ (ಸಮುದಾಯದಲ್ಲಿ ಹಾಗೂ ಹೊರಗೆ ದೊರೆಯುವ) ಬಗ್ಗೆ ಜನರಿಗೆ ತಿಳಿಹೇಳಿ ನಂತರ ಕಾರ್ಯಪ್ರವೃತ್ತರಾಗಲು ಉತ್ತೇಜಿಸಬೇಕು.

ಮುಂದೆ ಸಮುದಾಯದ ಜನರು 'ಕಾರ್ಯಕ್ರಮ ಯೋಜನೆ'ಯನ್ನು ರೂಪಿಸಿ, ಅನುಷ್ಠಾನಗೊಳಿಸಬೇಕಾಗುತ್ತದೆ. ಇಲ್ಲಿ ವಿದ್ಯಾರ್ಥಿ ಜನರಿಗೆ ಮಾರ್ಗದರ್ಶನವನ್ನಷ್ಟೇ ಕೊಡಬೇಕು. ಕಾರ್ಯಕ್ರಮ ನಡೆಯುತ್ತಿರುವಾಗ ವಿವಿಧ ಸ್ಥರದಲ್ಲಿ ಸಮುದಾಯದ ಜನರು ಯಾವ ರೀತಿ ಭಾಗವಹಿಸುತ್ತಿದ್ದಾರೆ ಎಂಬುದನ್ನು ಅವಲೋಕಿಸಿ ದಾಖಲಿಸಿಕೊಳ್ಳಬೇಕಾಗುವುದು. ಯಾರಾದರೂ ಸಕಾರಣವಿಲ್ಲದೆ

ಭಾಗವಹಿಸುತ್ತಿಲ್ಲದಿದ್ದರೆ, ಅಂಥವರನ್ನು ವೈಯಕ್ತಿಕವಾಗಿ ಭೇಟ್ಟಿಯಾಗಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಬೇಕು. ಏಕೆಂದರೆ, ಸಮುದಾಯದಲ್ಲಿ ಮಾಡುವ ಸಮಾಜ ಕಾರ್ಯ 'ಸಮುದಾಯದ ಅಭ್ಯುದ'ಯಕ್ಕೆ ಎಂದು ಬೇರೆ ಹೇಳಬೇಕಾಗಿಲ್ಲ. ಇದೇ ರೀತಿ ವಿದ್ಯಾರ್ಥಿಯು ಒಂದು ಸಮುದಾಯದಲ್ಲಿನ ಜನರ ಬೇಡಿಕೆಗಳಿಗನುಗುಣವಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುತ್ತಾನೆ.

ಅನುಬಂಧ–'1'

ಅ : ವ್ಯಕ್ತಿಗತ ಸಮಾಜ ಕಾರ್ಯದಲ್ಲಿ ಕ್ಷೇತ್ರಕಾರ್ಯ :

ಹಂತ—'1'

(i) 'ಗುರುತಿನ—ಮಾಹಿತಿ' (ಅರ್ಥಿಗೆ ಸಂಬಂಧಿಸಿದ್ದು)ಯನ್ನು ಸಂಗ್ರಹಿಸುವುದು.

(ii) ಅರ್ಥಿಯ (a) ಶಾರೀರಿಕ, (b) ಸಾಮಾಜಿಕ (ಸಾಂಸ್ಕೃತಿಕ), (c) ಆರ್ಥಿಕ, (d) ಶೈಕ್ಷಣಿಕ ಹಾಗೂ (e) ಮಾನಸಿಕ ಸ್ಥಿತಿ-ಗತಿ-ಇವುಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.

ಈ ಮೇಲಿನ ಮಾಹಿತಿಯನ್ನು ವಿದ್ಯಾರ್ಥಿಯು ಅರ್ಥಿಯೊಡನೆ ನಡೆಸಿದ ಸಂದರ್ಶನಗಳ ಹಾಗೂ ಸಂಸ್ಥೆಯಲ್ಲಿ ಅರ್ಥಿಯ ಬಗ್ಗೆ ದೊರೆಯುವ ದಾಖಲಾತಿಗಳ ಮೂಲಕ ಸಂಗ್ರಹಿಸಬೇಕು.

ಹಂತ—'2'

a. ಸಂಸ್ಥೆಯ ಸಿಬ್ಬಂದಿ
b. ಇತರ ಅರ್ಥಿಗಳು
c. ಅವನ ಸಹಪಾಟಿಗಳು
d. ಶಾಲಾ-ಕಾಲೇಜಿನ ಅಧ್ಯಾಪಕರು (ಅರ್ಥಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದರೆ)
e. ಸ್ನೇಹಿತರು
f. ತಂದೆ-ತಾಯಿ ಹಾಗೂ ಕುಟುಂಬ ಸದಸ್ಯರು
g. ಸಂಬಂಧಿಗಳು
h. ನೆರೆಹೊರೆಯವರು—ಇವರ ಬಗ್ಗೆ ಅರ್ಥಿ ಯಾವ ರೀತಿ ಸಂಬಂಧ ಹೊಂದಿದ್ದಾನೆ ಎಂಬುದನ್ನು ತಿಳಿಯಬೇಕು.

ಮೇಲ್ಕಂಡ ಮಾಹಿತಿಯನ್ನು ವಿದ್ಯಾರ್ಥಿಯು ಅರ್ಥಿಯೊಂದಿಗೆ ಸಂದರ್ಶನಗಳನ್ನು ನಡೆಸುವುದರ ಮೂಲಕ ಸಂಗ್ರಹಿಸಬೇಕು.

ಹಂತ—'3' :

ಅರ್ಥಿಗೆ ರಕ್ತಸಂಬಂಧಿಯಾಗದವರನ್ನು ವಿದ್ಯಾರ್ಥಿಯು ಭೆಟ್ಟಿಮಾಡಿ ಅರ್ಥಿ ಕೊಟ್ಟ ಮಾಹಿತಿ ಸರಿಯೇ? ಅಥವಾ ತಪ್ಪೇ? ಎಂಬುದನ್ನು ತಿಳಿಯಬೇಕು.

ಹಂತ—'4' :

ಅರ್ಥಿಯ ಕುಟುಂಬಕ್ಕೆ ವಿದ್ಯಾರ್ಥಿಯು ಭೆಟ್ಟಿಕೊಟ್ಟು ಆತನ ತಂದೆ-ತಾಯಿ ಹಾಗೂ ಸದಸ್ಯರನ್ನು ಮತ್ತು ಇತರ ರಕ್ತಸಂಬಂಧಿಗಳನ್ನು ಕಂಡು ಅರ್ಥಿಯ ಬಗೆಗೆ ಕೂಲಂಕುಷವಾಗಿ ವಿಷಯವನ್ನು ಸಂಗ್ರಹಿಸಬೇಕು. (ಇಲ್ಲಿ ಹಂತ '1' ಮತ್ತು '2'ರಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕು).

ಹಂತ—'5' :

ಅರ್ಥಿಯ ಬಗ್ಗೆ ಸಂಗ್ರಹಿಸಲಾದ ಮಾಹಿತಿಯಾಧಾರದ ಮೇಲೆ ಆತನ/ಳ ಸಮಸ್ಯೆಗಳು ಯಾವವು ಎಂದು ಗುರುತಿಸಿವುದು.

ಹಂತ—'6' :

'ಉಪಚಾರ ಕ್ರಮ—ಯೋಜನೆ'ಯನ್ನು ರೂಪಿಸುವುದು.

ಹಂತ—'7' :

'ಉಪಚಾರಕ್ರಮ—ಯೋಜನೆ'ಯಂತೆ, ಕಾರ್ಯಕ್ರಮವನ್ನು ಜಾರಿಗೊಳಿಸುವುದು.

ಹಂತ—'8' :

ವ್ಯಕ್ತಿಗತ ಸಮಾಜಕಾರ್ಯದ ಪ್ರಕ್ರಿಯೆಯನ್ನು ಅಂತ್ಯಗೊಳಿಸುವುದು ಹಾಗೂ 'ಅನುಕ್ರಿಯೆ' (Follow-up)ಯನ್ನು ಜಾರಿಗೊಳಿಸುವುದು (ಸಾಧ್ಯವಾದರೆ).

ಆ : ವೃಂದಗತ ಸಮಾಜಕಾರ್ಯದಲ್ಲಿ ಕ್ಷೇತ್ರಕಾರ್ಯ :

ಹಂತ :

1. ವೃಂದ ಸದಸ್ಯರನ್ನು ಆಯ್ಕೆ ಮಾಡುವುದು.
2. ವೃಂದ ಸದಸ್ಯರೊಡನೆ ಅನುನಯ-ಸಂಬಂಧ (Rapport)ವನ್ನು ಬೆಳೆಸುವುದು.
3. ವೃಂದ ಸದಸ್ಯರ ಬಗ್ಗೆ 'ಸಂಕ್ಷಿಪ್ತ-ಟಿಪ್ಪಣಿ' ತಯಾರಿಸುವುದು.

4. ವೃಂದದ ನಾಯಕ ಮತ್ತು ಉಪ-ನಾಯಕ-ಇವರನ್ನು ಆಯ್ಕೆ ಮಾಡುವುದು.
5. ವೃಂದದ ಧ್ಯೇಯ-ಧೋರಣೆಗಳನ್ನು ಅಭಿವೃದ್ಧಿಪಡಿಸುವುದು.
6. 'ಕಾರ್ಯಕ್ರಮಾಭಿವೃದ್ಧಿ'ಯನ್ನು ರೂಪಿಸಿ, ಅಂಗೀಕರಿಸುವುದು.
7. ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
8. ವೃಂದ ಸದಸ್ಯರಲ್ಲಿನ 'ಪಾರಸ್ಪರಿಕ ಕ್ರಿಯೆ' ಎಂಥದ್ದು ಎಂದು ತಿಳಿಯುವುದು.
9. ಕಾರ್ಯಕ್ರಮವನ್ನು ಅಂತ್ಯಗೊಳಿಸುವುದು ಹಾಗೂ 'ಅನುಕ್ರಿಯೆ' ಯನ್ನು ಜಾರಿಗೊಳಿಸುವುದು.

ಇ ಸಮುದಾಯ ಕಾರ್ಯ/ಸಂಘಟನೆಯಲ್ಲಿ ಕ್ಷೇತ್ರಕಾರ್ಯ :

ಹಂತ :

1. ಪ್ರಾರಂಭದಲ್ಲಿ ಸಮುದಾಯಕ್ಕೆ ಅನೇಕ ಸಲ ಭೆಟ್ಟಿಕೊಡುವುದು.
2 'ಅನುನಯ ಸಂಬಂಧ'ವನ್ನು ಬೆಳಿಸುವುದು.
3 ಸಮುದಾಯದ ಧುರೀಣ (ಔಪಚಾರಿಕ ಹಾಗೂ ಅನೌಪಚಾರಿಕ)ರನ್ನು ಗುರುತಿಸುವುದು ಹಾಗೂ ಅವರೊಂದಿಗೆ 'ಕಾರ್ಯಸಂಬಂಧ (Working Relationship)ವನ್ನು ಬೆಳಿಸುವುದು.
4. ಸಮುದಾಯದ ಬಗ್ಗೆ ಎಲ್ಲ ಮಾಹಿತಿಯನ್ನು ಸಂಗ್ರಹಿಸುವುದು—ಮುಖ್ಯವಾಗಿ ಅವರ ಭೌಗೋಳಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ, ಭೂ-ವಿಂಗಡನೆ, ಸಂವಹನ, ಸಾರಿಗೆ, ಆರೋಗ್ಯ, ಪಶುಸಂಗೋಪನೆ, ವ್ಯವಸಾಯ, ಕರಕುಶಲ, ಸಣ್ಣ ಪ್ರಮಾಣದ ಕೈಗಾರಿಕೆಗಳು ಹಾಗೂ ಸಮಾಜ ಸೇವಾಸಂಘ–ಸಂಸ್ಥೆಗಳು.
5. ಸಮುದಾಯದ ಜನರ ಬೇಡಿಕೆಗಳನ್ನು ಪತ್ತೆಮಾಡುವುದು.
6. ಆದ್ಯತೆಯಾಧಾರದ ಮೇರೆಗೆ ಬೇಡಿಕೆಗಳನ್ನು ವಿಂಗಡಿಸುವುದು/ಶ್ರೇಣೀಕರಿಸುವುದು.
7. ಬೇಡಿಕೆಗಳ ನಿಜ-ಸ್ವರೂಪವನ್ನು ಕಂಡುಹಿಡಿಯುವುದು ಹಾಗೂ ಅದಕ್ಕೆ ತಕ್ಕಂತೆ ಆಂತರಿಕ ಹಾಗೂ ಬಾಹ್ಯ ಸಂಪನ್ಮೂಲಗಳನ್ನು ಗುರುತಿಸುವುದು.
8. 'ಕಾರ್ಯಕ್ರಮ–ಯೋಜನೆ'ಯನ್ನು ರೂಪಿಸುವುದು.
9. ಕಾರ್ಯಕ್ರಮವನ್ನೂ ಅನುಷ್ಠಾನಗೊಳಿಸುವುದು.

10. ಕಾರ್ಯಕ್ರಮ ನಡೆಯುತ್ತಿರುವಾಗ, ಸಮುದಾಯದ ಜನರ ಭಾಗವಹಿಸುವಿಕೆಯನ್ನು ಅವಲೋಕಿಸಿ ದಾಖಲೆ ಮಾಡಿಕೊಳ್ಳಬೇಕು.
11. ಕಾರ್ಯಕ್ರಮದ ಮೇಲ್ವಿಚಾರಣೆ, ಹಾಗೂ
12. ಕಾರ್ಯಕ್ರಮವನ್ನು ಅಂತ್ಯಗೊಳಿಸುವುದು ಹಾಗೂ 'ಅನುಕ್ರಿಯೆ'ಯನ್ನು ಜಾರಿಗೊಳಿಸುವುದು.

ಉಪಯುಕ್ತ ಗ್ರಂಥಗಳು :

1. ಡಾ. ಎಚ್. ಎಂ. ಮರುಳಸಿದ್ದಯ್ಯ 1983 : ಸಮಾಜಕಾರ್ಯ, ಅಭ್ಯುದಯ ಪ್ರಕಾಶನ, ಬೆಂಗಳೂರು
2. ಡಾ. ಎಚ್. ಎಂ. ಮರಳುಸಿದ್ದಯ್ಯ 1983 ಸಮುದಾಯ ಸಂಘಟನೆ, ವಾಗ್ದೇವಿ ಪುಸ್ತಕಗಳು, ಮೈಸೂರು
3. ಡಾ. ಆರ್. ಇಂದಿರಾ 1986 ಸಾಮಾಜಿಕ ಸಂಶೋಧನಾ ವಿಧಾನಗಳು ವಿದ್ಯಾಸಾಗರ ಪ್ರಕಾಶನಾಲಯ, ಮೈಸೂರು (ಪರಿಷ್ಕೃತ ಮುದ್ರಣ)
4. A. Dunham 1958 : *Community welfare organisation* Thomas Y. Crowell Co. New York.
5. Ross M. G. 1965 : *Community Organisation* (Theory and Practice) Harper & Bros, New York

ಲೇಖನಗಳು :

1. ಎಂ. ಎಸ್. ಚಂದ್ರಶೇಖರಪ್ಪ 1984 : ಕ್ಷೇತ್ರಕಾರ್ಯ : ಪರಿಕಲ್ಪನೆ ಹಾಗೂ ಸಮಸ್ಯೆಗಳು ಮಾನವಿಕ ಕರ್ನಾಟಕ, ಮೈಸೂರು ವಿಶ್ವವಿದ್ಯಾಲಯ ಮೈಸೂರು
2. M. S. Chandra Shekarappa 1982 : *Some Aspects of Field work in social work*, Journal of the Mysore University, Mysore

ಲೇಖಕರ ಸೂಚಿ

ಡಾ. ಅಶೋಕ ದೇ ಸಾತ್ವತೆ	...	2804, 7ನೇ ಕ್ರಾಸ್, ವಿ.ವಿ. ಪುರಂ ಮೈಸೂರು
ಡಾ. ಎಸ್. ಟಿ. ನಾಯುಡು	...	ಪ್ರವಾಚಕ, ಇತಿಹಾಸ ವಿಭಾಗ, ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ
ಬಿ. ಆರ್. ಹಿರೇಮಠ ಎಸ್. ಪಿ ಪಾಟೀಲ್ ಕೆ. ಪಿ. ವೀರಣ್ಣ	...	ಕನ್ನಡ ಅಧ್ಯಯನ ಪೀಠ, ಕರ್ಣಾಟಕ ವಿಶ್ವ ವಿದ್ಯಾನಿಲಯ, ಧಾರವಾಡ
ಲಕ್ಷ್ಮಣ ತೆಲಗಾವಿ	...	ಸಂಪಾದಕ, ಕರ್ಣಾಟಕ ಗೆಜೆಟಿಯರ್ ಬೆಂಗಳೂರು
ಟಿ. ಬಿ ಬಸವರಾಜ್	...	ಹಿರಿಯ ಸಂಶೋಧನಾ ವಿದ್ಯಾರ್ಥಿ, ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು
ದಿ. ಯಮುನಬಾಯಿ ಆರ್. ರಾವ್	...	'ಶ್ರೀ', 409, 12ನೇ ಮುಖ್ಯರಸ್ತೆ ಸರಸ್ವತಿಪುರಂ, ಮೈಸೂರು
ಆರ್. ಇಂದಿರಾ	...	ಪ್ರವಾಚಕಿ, ಸಮಾಜಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು
ಎಂ. ಆರ್. ಪುಟ್ಟಸ್ವಾಮಿ	...	ಹಿರಿಯ ಸಂಶೋಧನಾ ವಿದ್ಯಾರ್ಥಿ ಸಮಾಜಶಾಸ್ತ್ರ ವಿಭಾಗ, ಮಾನಸಗಂಗೋತ್ರಿ ಮೈಸೂರು
ಡಾ. ಎಸ್. ರಾಘವಕುಮಾರಿ	...	ಅಧ್ಯಾಪಕಿ, ಶಿಕ್ಷಣ ವಿಭಾಗ ಮಾನಸಗಂಗೋತ್ರಿ, ಮೈಸೂರು
ಡಾ. ಎಂ. ವಿ. ಶ್ರೀನಿವಾಸ್	...	ಪ್ರವಾಚಕ, ಇತಿಹಾಸ ವಿಭಾಗ ಮಾನಸಗಂಗೋತ್ರಿ, ಮೈಸೂರು
ಎಂ. ಎಸ್. ಚಂದ್ರಶೇಖರಪ್ಪ	...	ಅಧ್ಯಾಪಕ, ಸಮಾಜಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಕೆ.ಸಂ. ೨೯೫೭೧—ಎಂ.ಯು.ಪಿ.ಎಂ.—೩೨೫ ಪ್ರತಿಗಳು—೧೮—೧—೮೯